ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು

(ಗುಲಬರ್ಗಾ ಜಿಲ್ಲೆಯ ಉರ್ದುಭಾಷಿಕ ಪ್ರೌಢಶಾಲಾ ಮಕ್ಕಳನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಭೀಮಣ್ಣ ಮೇಟಿ

ಮಾರ್ಗದರ್ಶಕರು
ಡಾ. ಪಿ. ಮಹಾದೇವಯ್ಯ
ಪ್ರವಾಚಕರು

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ -೫೮೩ ೨೭೬

೨೦೦೮

ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು

(ಗುಲಬರ್ಗಾ ಜಿಲ್ಲೆಯ ಉರ್ದುಭಾಷಿಕ ಪ್ರೌಢಶಾಲಾ ಮಕ್ಕಳನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಭೀಮಣ್ಣಾ ಮೇಟಿ

ಮಾರ್ಗದರ್ಶಕರು
ಡಾ. ಪಿ. ಮಹಾದೇವಯ್ಯ
ಪ್ರವಾಚಕರು

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೦೮

ಸಂಶೋಧಕರ ಪ್ರಮಾಣಪತ್ರ

"ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು" (ಗುಲ್ಬರ್ಗಾ ಜಿಲ್ಲೆಯ ಉರ್ದು ಭಾಷಿಕರ ಪ್ರೌಢಶಾಲಾ ಮಕ್ಕಳನ್ನು ಅನುಲಕ್ಷಿಸಿ) ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಪದವಿಗಾಗಿ **ಡಾ. ಪಿ.ಮಹಾದೇವಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಭಾಷಾನಿಕಾಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು; ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ನಾನು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 26.03.2008
ಸ್ಥಳ : ವಿದ್ಯಾರಣ್ಯ

ಭೀಮಣ್ಣ ಮೇಟಿ
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩೨೭೬

ದೃಢೀಕರಣ ಪತ್ರ

ಶ್ರೀ ಭೀಮಣ್ಣ ಮೇಟಿ ಇವರು **"ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು"** (ಗುಲ್ಬರ್ಗಾ ಜಿಲ್ಲೆಯ ಉರ್ದು ಭಾಷಿಕರ ಪ್ರೌಢಶಾಲಾ ಮಕ್ಕಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ ಭಾಷಾನಿಕಾಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 26.03.2008
ಸ್ಥಳ : ವಿದ್ಯಾರಣ್ಯ

ಡಾ॥ ಪಿ. ಮಹಾದೇವಯ್ಯ
ಮಾರ್ಗದರ್ಶಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - **೫೮೩೨೭೬**

ಕೃತಜ್ಞತೆಗಳು

೨೦೦೪ ರಲ್ಲಿ ಪಿಹೆಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಸಹಕರಿಸಿದ ಅಂದಿನ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಮತ್ತು ಡಾ. ಬಿ.ಎ. ವಿವೇಕ ರೈ ರವರಿಗೆ, ಇಂದಿನ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೆ, ಕುಲಸಚಿವರಾದ ಡಾ. ಪಿ.ಟಿ. ಬೋರಲಿಂಗಯ್ಯ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಡಿ. ಪಾಂಡುರಂಗಬಾಬು ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಕರ್ನಾಟಕದಲ್ಲಿ ಅತೀ ಹೆಚ್ಚಿನ ಮುಸ್ಲಿಂ ಭಾಷಿಕರಿರುವ ಗುಲಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸೈದಾಪೂರ ಗ್ರಾಮದಲ್ಲಿ ಜನಿಸಿದ ನಾನು ಎಂ.ಎ. ತರಗತಿಯಲ್ಲಿ ಭಾಷಾಶಾಸ್ತ್ರ ಒಂದು ಐಚ್ಛಿಕ ವಿಷಯವನ್ನಾಗಿ ವ್ಯಾಸಂಗ ಮಾಡಿದ್ದೇನೆ. ಸಂಶೋಧನೆಗೆ ಸೇರಲು ಗೆಳೆಯ ರಾಜಶೇಖರರವರ ಪ್ರೇರಣೆಯೇ ಕಾರಣ. ಸದರಿ ವಿಷಯವನ್ನು ಆಯ್ಕೆಮಾಡಿಕೊಳ್ಳಲು ಪ್ರೇರಣೆ ನೀಡಿದ ಡಾ. ಕೆ.ವಿ. ನಾರಾಯಣ ಹಾಗೂ ಹೆಚ್ಚಿನ ಕುತೂಹಲ ಕೆರಳಲು ಕಾರಣರಾದ ಪ್ರೀತಿಯ ಗುರುಗಳೂ ಮಾರ್ಗದರ್ಶಕರೂ ಆದ ಡಾ. ಪಿ. ಮಹಾದೇವಯ್ಯ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು

ಅಧ್ಯಯನ ಸಂದರ್ಭದಲ್ಲಿ ಅನೇಕ ಸಲಹೆ, ಸಹಕಾರ ನೀಡಿದ ಬಿ.ಜಿ.ಹುಲಿ, ಸಿದ್ದಪ್ಪ ದಿಗ್ಗಿ, ಡಾ. ಹೆಬ್ಬಾಲೆ.ಕೆ.ನಾಗೇಶ್, ಲಿಂಗದೇವರು ಹಳೆಮನೆ, ಡಾ. ಯದುರಾಜನ್, ಭ. ಮಲ್ಲಿಕಾರ್ಜುನ ಡಾ. ಸಂಗಮೇಶ ಸವದತ್ತಿ ಮಠ, ಡಾ. ಸಿ.ಆರ್. ರಾಮಚಂದ್ರ ಡಾ. ವಿ.ಜಿ. ಪೂಜಾರ್, ಡಾ. ಕೆ. ಕೆಂಪೇಗೌಡ, ಡಾ. ರೋಲೇಕಾರ್ ನಾರಾಯಣ್, ಸೀತಾರಾಮ್ ಜಾಗೀರ್ದಾರ್. ಆರ್. ರೇವಣ್ಣಸಿದ್ಧಯ್ಯ, ಮಹ್ಮದ್ ಜಲಾಲುದ್ದೀನ್, ಹಾಗೂ ಸಂಶೋಧನೆಯನ್ನು ಬೇಗ ಮುಗಿಸಲು ಪ್ರೀತಿಯ ಒತ್ತಡವನ್ನು ಹೇರಿದ ಭಾಷ್ಯಾಧ್ಯಯನ ವಿಭಾಗದ ಗುರುಗಳಾದ ಡಾ. ಸಾಂಬಮೂರ್ತಿ, ಡಾ. ಅಶೋಕ ಕುಮಾರ ರಂಜೇರೆ ಹಾಗೂ ವೀರೇಶ್ ಮತ್ತು ಹನುಮಂತು, ಗುರುರಾಜ್ , ಶರಣಪ್ಪ, ವೀಣಾ ಸಂಧ್ಯಾ, ವಿಜಯಲಕ್ಷ್ಮಿ ಅವರಿಗೆ

ಪ್ರಾರಂಭದಿಂದಲೂ ಸಂಶೋಧನೆಗೆ ಬೆನ್ನಲುಬಾಗಿ ನಿಂತ ಜೆಡ್.ಎಂ. ತೇರದಾಳ್, ವೀಣಾಶ್ರೀ ಮರೆಮ್ಮ, ಜಯಲಕ್ಷ್ಮೀ, ಶಾಂತ, ರಾಜಶೇಖರ್ ಮಾಳಿಂಗರಾಯ, ರಾಮು, ನಿಜಗುಣ ಇವರಿಗೆ, ಮುಖ್ಯವಾಗಿ ಉರ್ದುಭಾಷೆಯ ಧ್ವನಿ ಹಾಗೂ ಕನ್ನಡ ಧ್ವನಿಗಳ ವಿಶ್ಲೇಷಣೆ ಸಂದರ್ಭದಲ್ಲಿ ಸಲಹೆ ಸಹಕಾರ ನೀಡಿದ ನಮ್ಮ ಅಧಿಕಾರಿಗಳಾದ ಬಂದನವಾಜ್ ಗೇಸುದರಾಜ್ ಅವರಿಗೆ, ಸಂಶೋಧನೆ ಬೇಗನೆ ಮುಗಿಸುವಂತೆ ಮೇಲಿಂದ ಮೇಲೆ ಪ್ರೀತಿ ಒತ್ತಾಯ ಹೇರುತ್ತಿದ್ದ ಗೆಳೆಯರಾದ ಮಲ್ಲಿಕಾರ್ಜುನ್, ಓಂಪ್ರಕಾಶ್ ನಾಯಕ್, ಆಂಜನೇಯ, ಚಂದ್ರಕಾಂತ, ವಿಜಯಕುಮಾರ್ ಪುಲಾರೆ, ಮೀನಾ ಪವಾರ್, ಜಿ.ಎಸ್. ನಿಂಗರಾಜ್ ಅರಸ್, ಶಶಿಕಾಂತ್, ಮಹ್ಮದ್ ಜಾಕೀರ್, ಎಚ್.ಕೆ. ರಾಜಣ್ಣ, ಕಲ್ಯಾಣ ಶೆಟ್ಟಿ ಅವರುಗಳಿಗೆ

ಅಧ್ಯಯನದ ಅವಧಿಯಲ್ಲಿ ಸಹಕರಿಸಿದ ಅಧ್ಯಯನಾಂಗ ಆಡಳಿತಾಂಗ ಪ್ರಸರಾಂಗದ ಎಲ್ಲಾ ಸಿಬ್ಬಂಧಿ ವರ್ಗದವರಿಗೆ, ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಹಕರಿಸಿದ ಗುಲ್ಬರ್ಗಾ ಜಿಲ್ಲೆಯ ಉಪನಿರ್ದೇಶಕರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಉರ್ದು ಪ್ರೌಢಶಾಲೆಯ ಮುಖ್ಯ ಗುರುಗಳು, ಶಿಕ್ಷಕರು ಹಾಗೂ ಸಿಬ್ಬಂಧಿ ಮತ್ತು ಮಕ್ಕಳಿಗೆ.

ಎಷ್ಟೇ ಕೌಟುಂಬಿಕ ಒತ್ತಡಗಳಿದ್ದರೂ ನನ್ನ ನಿರಂತರ ವಿದ್ಯಾಭ್ಯಾಸ ಬೆಳವಣಿಗೆಗೆ ಕಾರಣರಾದ ನನ್ನ ಚಿಕ್ಕಪ್ಪಂದಿರರು, ಸಹೋದರರು, ಸಹೋದರಿಯರು, ಹಾಗೂ ಮಾವನವರಾದ ಡಾ. ಅಮಲಪ್ಪ ಹೊಸಮನಿ ಸಿದ್ದರಾಮ ಉಮಾದೇವಿ ಘೋಡ್ಗೇರಿ, ಪತ್ನಿ ವಿದ್ಯೆ ಮಕ್ಕಳಾದ ಶಶಾಂಕ, ಶ್ರೇಯಾ ಅವರುಗಳಿಗೆ

ಒತ್ತಡದ ಪರಿಸ್ಥಿತಿಯಲ್ಲಿ ಅಚ್ಚುಕಟ್ಟಾಗಿ ಅಕ್ಷರ ಸಂಯೋಜಿಸಿದ ಸೋಮನಾಥ ಕುಡಿತಿನಿ ಅವರಿಗೆ ಪ್ರೀತಿಯ ಕೃತಜ್ಞತೆಗಳು.

ಭೀಮಣ್ಣ ಮೇಟಿ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವಿಧಾನ–ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವಿಧಾನ-ವ್ಯಾಪ್ತಿ

ಭಾಷಾ ಬೋಧನೆ ಮತ್ತು ಕಲಿಕೆ

ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾತರಾದ ಉರ್ದು ಭಾಷಿಕರ ಮಕ್ಕಳು ತಮ್ಮ ಮಾತೃಭಾಷೆಯಾದ ಉರ್ದುವಿನಲ್ಲಿ ಶಿಕ್ಷಣ ಪಡೆಯುವರು. ಆದರೆ ಕರ್ನಾಟಕ ಸರ್ಕಾರ ಭಾಷಾ ಅಲ್ಪಸಂಖ್ಯಾತರ ಮಕ್ಕಳಿಗೆ ಔಪಚಾರಿಕ ಶಿಕ್ಷಣದಲ್ಲಿ ಕನ್ನಡವನ್ನು ದ್ವಿತೀಯ/ತೃತೀಯ ಭಾಷೆಯನ್ನಾಗಿ ಅಭ್ಯಾಸ ಮಾಡಬೇಕೆಂದು ಆದೇಶಿಸಿದೆ.[೧] ಆದ್ದರಿಂದ ಉರ್ದು ಮಾತೃಭಾಷೆಯ ಜೊತೆಗೆ ದ್ವಿತೀಯ/ತೃತೀಯ ಭಾಷೆಯನ್ನಾಗಿ ಉರ್ದು ಮಾತೃಭಾಷೆಯ ಮಕ್ಕಳು ಕನ್ನಡವನ್ನು ಕಲಿಯುತ್ತಿದ್ದಾರೆ. ಉರ್ದು ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಈ ಮಕ್ಕಳು ಕನ್ನಡ ಭಾಷೆಯನ್ನು ದ್ವಿತೀಯ/ತೃತೀಯ ಭಾಷಾ ವಿಷಯವನ್ನಾಗಿ ಕಲಿಯುತ್ತಿದ್ದಾರೆ. ಈ ಸಂದರ್ಭದಲ್ಲಿ ಆ ಮಕ್ಕಳು ಓದುವಾಗ ಬರೆಯುವಾಗ ಎದುರಿಸುವ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನವನ್ನು ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಉರ್ದು ಭಾಷಿಕರ ಮಕ್ಕಳಿಗೆ ಸೀಮಿತಗೊಳಿಸಲಾಗಿದೆ. ಮುಖ್ಯವಾಗಿ ಉರ್ದುಮಾಧ್ಯಮ ಪ್ರೌಢಶಾಲೆಗಳಲ್ಲಿ ಕನ್ನಡ ಭಾಷಾ ಪಠ್ಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಭಾಷೆ ಮಾನವನಿಗೆ ಅತ್ಯಗತ್ಯವಾದ ಒಂದು ಸಂವಹನ ಮಾಧ್ಯಮ. ಜೊತೆಗೆ ಇದು ಶಕ್ತಿಶಾಲಿ ಸಂಪರ್ಕ ಮಾಧ್ಯಮವು ಹೌದು. ಇಂತಹ ಭಾಷೆ ಪರಿಣಾಮಕಾರಿ ಬೋಧನೆ ಹಾಗೂ ಪರಿಣಾಮಕಾರಿ

ಕಲಿಕೆಗೆ ಸಹಾಯಕವಾಗಿದೆ. ಆದರೆ ಕಲಿಕೆಯು ಮನುಷ್ಯನ ಜೀವನಪರ್ಯಂತ ನಡೆಯುವ ಕ್ರಿಯೆ. ಶೈಕ್ಷಣಿಕ ಕ್ಷೇತ್ರದಲ್ಲಿ ಬೋಧನೆ ಮತ್ತು ಕಲಿಕೆಗೆ ತನ್ನದೆ ಆದ ಉದ್ದೇಶವಿದೆ. ವಿವಿಧ ಶಿಕ್ಷಣ ನೀತಿಗಳ ಪ್ರಭಾವದಿಂದ ಆಧುನಿಕ ಶಿಕ್ಷಣ ಪದ್ಧತಿಗಳು ಪ್ರಾಚೀನ ಶಿಕ್ಷಣ ಪದ್ಧತಿಗಳಿಗಿಂತ ಭಿನ್ನವಾಗಿವೆ. ಹಾಗಾಗಿ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಹಲವಾರು ಬದಲಾವಣೆಗಳು ಕಂಡುಬರುತ್ತವೆ.


ಭಾಷೆಯ ಕಲಿಕೆ ಎಂದರೆ ಅದರ ಘಟಕಗಳಾದ ಧ್ವನಿ ಪದ, ಪದಮಂಜ ಮತ್ತು ವಾಕ್ಯಗಳ ಪರಿಣಾಮಕಾರಿ ಗ್ರಹಿಕೆ ಮತ್ತು ಬಳಕೆಯ ಪರಿಚಯ ಮಾಡಿಕೊಳ್ಳುವುದಾಗಿದೆ. ಇವು 'ಭಾಷೆಯ ನಾಲ್ಕು ಕೌಶಲ್ಯಗಳಾದ ಕೇಳುವಿಕೆ, ಮಾತುಗಾರಿಕೆ, ಓದುಗಾರಿಕೆ ಮತ್ತು ಬರಹಗಳ ರೂಪದಲ್ಲಿದೆ'[೨] ಇಲ್ಲಿ ನಾವು ಕನ್ನಡ ಭಾಷೆಯ ಕಲಿಕೆಯಲ್ಲಿ ಉರ್ದುಭಾಷಿಕ ಮಕ್ಕಳು ಎದುರಿಸುವ ಸಮಸ್ಯೆಗಳು ಅವುಗಳಿಂದಾಗುವ ತಪ್ಪುಗಳು ಅವುಗಳಿಗೆ ಪರಿಹಾರ ಇತ್ಯಾದಿಗಳ ದೃಷ್ಟಿಯಿಂದ ಅರಿತುಕೊಳ್ಳಲು ಪ್ರಯತ್ನಿಸುತ್ತಿರುವುದು ಸರಿ. 'ಮಗುವು ಶಾಲೆಗೆ ಬರುವ ಮುನ್ನ ಅನೌಪಚಾರಿಕವಾಗಿ ತನ್ನ ಮನೆ ಮತ್ತು ನೆರೆಹೊರೆಯ ಪರಿಸರದ ಭಾಷಾರೂಪವನ್ನು ತನ್ನದಾಗಿಸಿಕೊಳ್ಳುವುದನ್ನು ಭಾಷಾ ಕಲಿಕೆಯ ಮೊದಲನೆಯ ಘಟ್ಟವೆಂತಲೂ, ಶಾಲೆಗೆ ಹಾಜರಾಗಿ ಶಿಕ್ಷಕರು, ಸಹಪಾಠಿಗಳು, ಪಠ್ಯಪುಸ್ತಕ ಮತ್ತು ಸಮಾಜದ ಪರಿಸರದ ಮೂಲಕ ಹಾಗೂ ಔಪಚಾರಿಕವಾಗಿ ಪಡೆಯುವ ಭಾಷಾಜ್ಞಾನವನ್ನು ಎರಡನೆಯ ಘಟ್ಟವೆಂತಲೂ ವಿಭಾಗಿಸಿಕೊಳ್ಳಬಹುದು'[೩]. ಇಲ್ಲಿ ಮಗು ಮೊದಲನೆಯ ಘಟ್ಟದಲ್ಲಿ ತನ್ನ ಮಾತೃಭಾಷೆಯನ್ನು ಮಾತ್ರ ತಿಳಿದಿರುವುದು. ಆದರೆ ತನ್ನ ನೆರೆಹೊರೆಯವರು ಮತ್ತು ಇತರೆ ಭಾಷೆ ಮಾತನಾಡುವವರು ಇದ್ದರೆ ಆ ಭಾಷೆಯ ಅಲ್ಪಸ್ವಲ್ಪ ಪರಿಚಯವಿರುವುದು ಕಂಡುಬರುವುದು. ಇದು ಉರ್ದು ಭಾಷಿಕ ಮಕ್ಕಳಲ್ಲಿಯೂ ಕಂಡುಬರುವುದು. ಏಕೆಂದರೆ ಸುತ್ತಮುತ್ತಲಿನ ಕನ್ನಡ ಪರಿಸರ ಇರುವುದರಿಂದ ಕನ್ನಡ ಭಾಷೆಯ ಬಗ್ಗೆ ಸ್ವಲ್ಪ ಪರಿಚಯ ಇರುವುದು ಸಹಜ. ಇನ್ನೂ ಮುಂದುವರೆದು ನೋಡಿದಾಗ ಎರಡನೆಯ ಘಟ್ಟದಲ್ಲಿ ನಡೆಯುವುದೆ ಭಾಷಾ ಬೋಧನೆ ಮತ್ತು ಭಾಷಾ ಕಲಿಕೆ. ಇವೆರಡರ ನಡುವೆ ಸಂವಹನವಾಗಿ ಪಠ್ಯ ಪುಸ್ತಕ ಕೆಲಸ ಮಾಡುವುದು ನಮಗೆ ತಿಳಿಯುವುದು.

ಉರ್ದುಭಾಷಿಕ ಮಕ್ಕಳು ಕನ್ನಡವನ್ನು ದ್ವಿತೀಯ/ತೃತೀಯ ಭಾಷೆಯಾಗಿ ಕರ್ನಾಟಕದಲ್ಲಿ ಅಭ್ಯಾಸ ಮಾಡುವರು. 'ಈ ಉರ್ದು ಭಾಷಿಕರ ಮಕ್ಕಳಿಗೆ ಬ್ರಿಟಿಷರು ರೂಪಿಸಿದ ದ್ವಿತೀಯ ಭಾಷಾ ಬೋಧನೆಯ ಸೂತ್ರಗಳನ್ನೆ ಅನುಸರಿಸಿ ಬೋಧನೆ ಮಾಡುವುದನ್ನು ನೋಡುತ್ತೇವೆ'[೪]. ಈ ವಿಧಾನವನ್ನು ಅನುಸರಿಸಿ ಭಾಷಾ ಬೋಧನೆ ಮಾಡಿದರೆ ಭಾಷಾ ಬೋಧನೆ ಮತ್ತು ಕಲಿಕೆ ಎರಡು ಪರಿಣಾಮಕಾರಿಯಾಗುವುದಿಲ್ಲ, ಏಕೆಂದರೆ ಕರ್ನಾಟಕ ಸರ್ಕಾರ ೨೦೦೧-೦೨ನೇ ಸಾಲಿನಿಂದ ಬೋಧನೆ ಯಾವ ತೆರನಾಗಿರಬೇಕೆಂದು ನಿರ್ಣಯಿಸಿ ಚಟುವಟಿಕೆಯಾಧಾರಿತ ಬೋಧನೆ ಪರಿಣಾಮಕಾರಿ ಬೋಧನೆಯಾಗುವುದು ಎಂದು ಅರಿತು ಪ್ರಸ್ತುತ ಶಾಲೆಗಳಲ್ಲಿ ಚಟುವಟಿಕೆಯಾಧಾರಿತ ಭಾಷಾ ಬೋಧನಾ ವಿಧಾನವನ್ನು ಅಳವಡಿಸಿದೆ.

ಪ್ರಸ್ತುತ ಪಠ್ಯಪುಸ್ತಕಗಳು 'ಹೊಸಯುಗದ ಆಕಾಂಕ್ಷೆಗಳನ್ನು ಹೊತ್ತು ಇತ್ತೀಚಿನ ಶೈಕ್ಷಣಿಕ ಸಂಶೋಧನೆಗಳನ್ನು ಮೈಗೂಡಿಸಿಕೊಂಡು ಮಕ್ಕಳ ಮನೋವಿಕಾಸಕ್ಕೆ ತಕ್ಕಂತೆ ಕಲಿಕೆಯ ಪ್ರಮಾಣವನ್ನು ಗಣತೀಯ ರೀತಿಯಲ್ಲಿ ಹೆಚ್ಚಿಸುವ, ಜೀವನ ಮೌಲ್ಯಗಳನ್ನು ದಿಗ್ದರ್ಶಿಸುವಂತಿರಲಿ ಎಂಬ ಮಹತ್ವದ ಉದ್ದೇಶವಿಟ್ಟುಕೊಂಡು ಭಾಷಾ ಬೋಧನೆಯಲ್ಲಿ ಬರಹಭಾಷೆಗೆ ಒತ್ತು ನೀಡಿದೆ. ಈ ಪಠ್ಯಪುಸ್ತಕಗಳು ಕನಿಷ್ಠಕಲಿಕೆಯ ಹಂದರ ಹೊಂದಿವೆ. ಇವು ಚಟುವಟಿಕೆ ಆಧಾರಿತ ಸಂತಸ ಕಲಿಕೆ ತರುತ್ತವೆ ಎಂದು ಹೇಳಲಾಗಿದೆ. ಅಷ್ಟೇ ಅಲ್ಲದೆ ಪಠ್ಯವಸ್ತು ಮಕ್ಕಳ ಕಲಿಕೆಯಲ್ಲಿನ ಸಾಮರ್ಥ್ಯವನ್ನು ಬೆಳೆಸಲು ಸೂಕ್ತ ಕಲಿಕೆಯ ಅನುಭವಗಳನ್ನು ಚಟುವಟಿಕೆಗಳ ಮೂಲಕ ಬೋಧನೆ ಮಾಡಲು ಹೇಳಿದೆ. '೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಕೇಂದ್ರತತ್ವ ೧೦ ಮೂಲಭೂತ ಅಂಶ ಮತ್ತು ೮೪ ಮಾನವೀಯ ಮೌಲ್ಯಗಳನ್ನು ಆಧರಿಸಿ ಪಠ್ಯವಸ್ತು ತಯಾರಿಸಲಾಗಿದೆ. ಅಷ್ಟೇ ಅಲ್ಲದೆ ಪಠ್ಯವಸ್ತುವನ್ನು ಶಿಶು ಕೇಂದ್ರೀಕೃತವಾಗುವಂತೆ ರಚಿಸಲಾಗಿದೆ ಎಂದು ಹೇಳಿದೆ'[೫]. ಇಷ್ಟೆಲ್ಲ ಮಹತ್ವದ ಅಂಶಗಳು ಒಳಗೊಂಡರೂ ಕೂಡ ನಮ್ಮ ಭಾಷಾ ಪಠ್ಯಪುಸ್ತಕಗಳು ಸಂಪೂರ್ಣ ವ್ಯತ್ಯಾಸದಿಂದ ಮುಕ್ತವಾಗಿಲ್ಲ ಎಂಬ ಅಂಶ ಗಮನಾರ್ಹವಾದದ್ದು.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಬೋಧನೆ ಮತ್ತು ಪಠ್ಯವಸ್ತು ಯಾವ ತೆರನಾಗಿವೆ ಎಂಬುದನ್ನು ನಮಗೆ ಸ್ಪಷ್ಟವಾಗಿ ತಿಳಿಯುವುದು. ಆದರೆ ಇವೆರಡೂ ಅಂಶಗಳಿಗಿಂತ ಪ್ರಮುಖವಾದ ಅಂಶ ಕಲಿಕೆ ಭಾಷಾ ಬೋಧನೆ ಮತ್ತು ಕಲಿಕೆಗಳ ನಡುವೆ ಪಠ್ಯ ಸಂವಹನ ಮಾಧ್ಯಮವಾಗಿ ಕೆಲಸ ಮಾಡುವುದು. ಆದರೆ ಇಲ್ಲಿ ಪಠ್ಯದಲ್ಲಿ ಇರುವುದನ್ನೇ ಮಗುವಿಗೆ ಹೇಳಿ ಪರಿಣಾಮಕಾರಿ ಕಲಿಕೆ ಮಾಡಲಾಗುವುದಿಲ್ಲ. ಇಲ್ಲಿ ಪರಿಣಾಮಕಾರಿ ಭಾಷಾ ಬೋಧನೆ ಪರಿಣಾಮಕಾರಿ ಕಲಿಕೆಗೆ ಸಹಾಯಕವಾಗುವುದು. ಆದರೆ ಈ ಎಲ್ಲ ಮೇಲಿನ ಅಂಶಗಳನ್ನು ನೋಡಿದಾಗ ಮತ್ತು ವಿಶ್ಲೇಷಣೆ ಮಾಡಿದಾಗ ಪ್ರಸ್ತುತ ಬೋಧನೆ ಮತ್ತು ಕಲಿಕೆಗಳನ್ನು ಹತ್ತಿರದಿಂದ ನೋಡಿದಾಗ ಕಲಿಕೆ ಯಶಸ್ವಿಯಾಗದಿರುವುದನ್ನು ನೋಡುತ್ತೇವೆ. ಇದಕ್ಕೆ ಕಾರಣಗಳೇನು ಈ ಭಾಷಾ ಕಲಿಕೆಯಲ್ಲಿ ಹಿಂದುಳಿಯಲು ಪರಿಣಾಮಕಾರಿ ಬೋಧನೆ ಆಗದಿರುವುದೋ? ಅಥವಾ ಬೋಧನಾ ವಿಧಾನಗಳನ್ನು ಅನುಸರಿಸಿ ಬೋಧನೆ ಮಾಡದಿರುವುದೋ? ಅಥವಾ ಪಠ್ಯಪುಸ್ತಕಗಳ ವ್ಯತ್ಯಾಸವೋ? ಅಥವಾ ಹೊರೆಯೋ? ಇವುಗಳಲ್ಲಿ ಯಾವಾವ ಅಂಶಗಳು ಮಕ್ಕಳಿಗೆ ಅಥವಾ ಬೋಧಕರಿಗೆ ಸಮಸ್ಯೆಯಾಗಿ ಕಾಡುತ್ತದೆ ಎಂಬುದನ್ನು ನೋಡಬಹುದು.

ಬೋಧನೆ ಮತ್ತು ಕಲಿಕೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಹೇಗೆಂದರೆ ಪರಿಣಾಮಕಾರಿ ಕಲಿಕೆಯಾಗಿದೆ ಎಂದರೆ ಅದಕ್ಕೆ ಪರಿಣಾಮಕಾರಿ ಬೋಧನೆಯಾಗಿದೆ ಎಂತಲೇ ಅರ್ಥ. ಬೋಧನೆ ಪರಿಣಾಮಕಾರಿಯಾಗಿದೆ ಆದರೆ ಕಲಿಕೆ ಪರಿಣಾಮಕಾರಿಯಾಗಿಲ್ಲವೆಂದರೆ ಇಲ್ಲಿ ಏನೋ ಸಮಸ್ಯೆ ಇದೆ ಎಂದರ್ಥ. ಆದರೂ ಕೂಡ ಯಶಸ್ವಿ ಬೋಧನೆ ಯಶಸ್ವಿ ಕಲಿಕೆಗೆ ಸಹಾಯಕ.



ಈ ಮೇಲಿನ ತ್ರಿಕೋನ ಆಕೃತಿ ನೋಡಿದರೆ ಬೋಧನೆ ಪಠ್ಯವಸ್ತು ಕಲಿಕೆ – ಈ ಮೂರರ ಮಧ್ಯದಲ್ಲಿ ಇರುವುದು ಮಗು. ಇದರಿಂದ ನಮಗೆ ಸ್ಪಷ್ಟವಾಗುವುದು ಏನೆಂದರೆ ಮಗು ಕೇಂದ್ರಿತ ಶಿಕ್ಷಣ ಕ್ರಮವನ್ನು ಪ್ರಸ್ತುತ ಸಂದರ್ಭದಲ್ಲಿ ಅಳವಡಿಸಿಕೊಂಡಿದ್ದೇವೆ ಎಂಬುದು. ಅಂದರೆ ಮಗುವನ್ನು ಕೇಂದ್ರವಾಗಿಟ್ಟುಕೊಂಡು ಶಿಕ್ಷಣ ನೀಡುವುದರಿಂದ ಕಲಿಕೆ ಸುಲಭವಾಗುವುದು. ಪ್ರಸ್ತುತ ಶೈಕ್ಷಣಿಕ ಪ್ರಕ್ರಿಯೆಲ್ಲಿ ಶಿಕ್ಷಕ ಮಗು ಮತ್ತು ಪಠ್ಯ ಈ ತ್ರಿಮುಖಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡುವುದು. "ಮಗುವಿಗೆ" ಮನೋವೈಜ್ಞಾನಿಕವಾಗಿ ಮಗು ಒಂಬತ್ತನೇ ವರ್ಷಕ್ಕೆ ತನ್ನ ಮಾತೃಭಾಷೆ ಶಿಕ್ಷಣ ಪಡೆಯುವುದರ ಜೊತೆಗೆ ಇನ್ನೊಂದು ಭಾಷೆಯನ್ನು ಅಂದರೆ ಮಾತೃಭಾಷೆ ಜೊತೆಗೆ ಇನ್ನೊಂದು ಬೇರೆ ಭಾಷೆ. ಇಲ್ಲಿ ಒಂಬತ್ತನೇ ವರ್ಷಕ್ಕೆ ಮಗು ಎರಡು ಭಾಷೆಯನ್ನು ಕಲಿಯಲು ಸಮರ್ಥವಾಗಿರುತ್ತದೆ ಎಂಬ ದೃಷ್ಟಿಯಿಂದ ಕನ್ನಡ ಭಾಷೆಯನ್ನು ಕನ್ನಡ ಮಾತೃಭಾಷೆಯಲ್ಲದ ಮಕ್ಕಳಿಗೆ ಮೂರನೇ ತರಗತಿಯಿಂದ ದ್ವಿತೀಯ/ ತೃತೀಯ ಭಾಷೆಯಾಗಿ ಬೋಧನೆ ಮಾಡಲಾಗುವುದು'. ಆಧುನಿಕ ಶಿಕ್ಷಣ ಪದ್ದತಿಯಲ್ಲಿ ದ್ವಿತೀಯ/ ತೃತೀಯ ಭಾಷಾ ವಿಷಯವನ್ನು ಬೋಧನೆ ಮಾಡಬೇಕಾದರೆ ಅದಕ್ಕೆ ತನ್ನದೆ ಆದ ವಿಧಾನಗಳಿರುವುದನ್ನು ನಾವು ಕಾಣುತ್ತೇವೆ. ಪದ್ಯ, ಗದ್ಯ, ನಾಟಕ, ವ್ಯಾಕರಣ ಹಳೆಗನ್ನಡದಂತಹ ವಿಷಯಗಳನ್ನು ಬೋಧನೆ ಮಾಡುವಾಗ ಇವೆಲ್ಲವುಗಳನ್ನು ಒಂದೇ ವಿಧಾನದಿಂದ ಬೋಧನೆ ಮಾಡುವುದಾಗದೆ ಇರುವುದರಿಂದ ವಿವಿಧ ವಿಧಾನಗಳನ್ನು ಅನುಸರಿಸಿ ಕಲಿಕೆ ಯಶಸ್ವಿಯಾಗುವ ರೀತಿಯಲ್ಲಿ ಬೋಧನೆ ಮಾಡುತ್ತೇವೆ. ಈ ಮುಂಚೆ ಪ್ರಾಥಮಿಕದಿಂದ ಪ್ರೌಢಶಾಲೆಯ ಎಲ್ಲ ವಿಷಯಗಳು ಹರ್ಬರ್ಟನ ಪಂಚ ಸೋಪಾನಗಳನ್ನು ಅನುಸರಿಸಿ ಬೋಧನೆ ಮಾಡುತ್ತಿದ್ದರು. ಆದರೆ ಈಗ ಪ್ರಸ್ತುತ ಸಂದರ್ಭದಲ್ಲಿ ಚೈತನ್ಯಾಧಾರಿತ ಚಟುವಟಿಕೆಯಿಂದ ಕೂಡಿದ ಬೋಧನೆಯನ್ನು ಅನುಸರಿಸಿ ಬೋಧಿಸಲಾಗುವುದು. ಹಾಗೂ ಶಿಕ್ಷಣ ಇಲಾಖೆಯು ರೂಪಿಸಿದ ವಿವಿಧ ವಿಧಾನಗಳನ್ನು ಅನುಸರಿಸಿ ಬೋಧಿಸಲಾಗುವುದು. ಅಂದರೆ ಪ್ರತಿಯೊಂದು ಅಧ್ಯಾಯ ಅಥವಾ ವಿಷಯವನ್ನು ಬೋಧನೆ ಮಾಡಬೇಕಾದರೆ ವಿವಿಧ ಹಂತಗಳ ಮೂಲಕ

ಸಾಗಬೇಕಾಗುತ್ತದೆ. 'ಆ ಹಂತಗಳನ್ನು ಒಳಗೊಂಡಿರುವ ಚೈತನ್ಯಾಧಾರಿತ ಬೋಧನಾ ಪದ್ಧತಿ'ಯನ್ನು ಅಳವಡಿಸಿ ಮಾಡಿದ ಬೋಧನೆ ಸೃಜನಶೀಲತೆ ಚಟುವಟಿಕೆಯಿಂದ ಕೂಡಿದೆ. ದೃಶ್ಯ ಶ್ರವ್ಯ ಉಪಕರಣಗಳನ್ನು ಉಪಯೋಗಿಸಿ ಬೋಧನೆ ಮಾಡಬೇಕಾಗುವುದು. ಅಷ್ಟೇ ಅಲ್ಲದೆ ಭಾಷಾ ಬೋಧನೆಯಂತಹ ವಿಷಯಗಳನ್ನು ಬೋಧಿಸುವಾಗ ಅದರಲ್ಲೂ ಇತಿಹಾಸದಂತಹ ಪಾಠಗಳನ್ನು ಬೋಧಿಸುವಾಗ ಐತಿಹಾಸಿಕ ಬೋಧನಾ ವಿಧಾನ ಅನುಸರಿಸಬೇಕಾಗುವುದು. ಅದರ ಜೊತೆಗೆ ವ್ಯಾಕರಣದಂತಹ ವಿಷಯಗಳನ್ನು ಬೋಧಿಸುವಾಗ ವ್ಯಾಕರಣ ಬೋಧನಾ ವಿಧಾನಗಳಾದ

೧. ನಿಗಮನ ಪದ್ಧತಿ
೨. ಅನುಗಮನ ಪದ್ಧತಿ
೩. ಪರಿಪೂರ್ಣಪದ್ಧತಿ

ಎಂದು ಈ ಮೂರು ವಿಧಾನಗಳನ್ನು ಅನುಸರಿಸಿ ಬೋಧನೆ ಮಾಡುವುದುಂಟು. ಈ ಮೂರು ನಿಯಮಗಳಲ್ಲಿ ಬೋಧಕ ಮಗುವಿನ ವಯೋಮಾನ ಮತ್ತು ಮಾನಸಿಕ ಸಾಮರ್ಥ್ಯವನ್ನು ಅನುಸರಿಸಿ ಬೋಧನೆ ಮಾಡಬೇಕು ಮತ್ತು ಸರಳವಾದ ವಿಧಾನವನ್ನು ಮಗುವಿಗೆ ಮೊದಲು ತಿಳಿಸಬೇಕಾಗಿರುವುದು ಅವಶ್ಯ. ಈ ಅಂಶಗಳನ್ನು ಬೋಧಕ ಗಮನದಲ್ಲಿಟ್ಟುಕೊಂಡು ಬೋಧನೆ ಮಾಡಿದರೆ ಇದರಿಂದ ಕಲಿಕೆ ಯಶಸ್ವಿಯಾಗುವುದು.

ಪಠ್ಯಪುಸ್ತಕದಲ್ಲಿನ ಕೆಲವೊಂದು ಅಂಶಗಳು ಕೂಡ ಮಗು ಕಲಿಕೆಯಲ್ಲಿ ಹಿಂದುಳಿಯುವಿಕೆಗೆ ಕಾರಣವಾಗುವುದು. ಪಠ್ಯವಸ್ತುಗಳು ಮಗುವಿನ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತವೆ. ಪ್ರಸ್ತುತ ಸಂದರ್ಭದಲ್ಲಿ ಪಠ್ಯಪುಸ್ತಕಗಳು ಭಾಷಾ ಅಲ್ಪಸಂಖ್ಯಾತರ ಮಕ್ಕಳಿಗೆ ವಯೋಮಾನಕ್ಕೆ ತಕ್ಕಂತೆ ಮಕ್ಕಳು ವಾಸಿಸುವ ಪರಿಸರದಲ್ಲಿನ ವಿಷಯಗಳನ್ನು ಅಳವಡಿಸಿ ಪಠ್ಯಪುಸ್ತಕ ರಚನೆ ಮಾಡಬೇಕು. ಸಂಕ್ಷಿಪ್ತತೆಯನ್ನು ಪಠ್ಯವಸ್ತು ಒಳಗೊಂಡರೆ ಯಾವುದೇ ಕೆಟ್ಟ ಪರಿಣಾಮ ಮಕ್ಕಳ ಮೇಲೆ ಬೀರುವುದಿಲ್ಲ. ಆದರೆ ಪ್ರಸ್ತುತ ಸಂದರ್ಭದಲ್ಲಿ ಪಠ್ಯಪುಸ್ತಕಗಳು ಇದಕ್ಕೆ ಅಪವಾದದಂತಿರುವುದರಿಂದ ಮಕ್ಕಳು ಕಲಿಯಲು ಹಿಂದುಳಿಯಲು ಕಾರಣವಿರಬಹುದು.

'ಭಾಷಾ ಕಲಿಕೆಯಲ್ಲಿ ಹೊಸತನ ತರಬೇಕೆಂಬ ದೃಷ್ಟಿಯಿಂದ ರ, ಗ, ಸ, ದ ಮತ್ತು ಅ ಅಕ್ಷರಗಳನ್ನು ಕಲಿಕೆಯಲ್ಲಿ ಮೊದಲು ಅಳವಡಿಸಿ ಭಾಷಾ ಪಠ್ಯಪುಸ್ತಕಗಳನ್ನು ಬದಲಿಸಲಾಯಿತು.[೭] ಭಾಷಾ ಪಠ್ಯಪುಸ್ತಕ ರಚನೆಯಾದ ನಂತರ ಚೈತನ್ಯಾಧರಿತ ತರಬೇತಿ ಚಟುವಟಿಕೆ ಆಧಾರಿತ ಬೋಧನೆ ಮಾಡಬೇಕೆಂದು ಶಿಕ್ಷಕರಿಗೆ ತರಬೇತಿ ಕೊಡಲಾಯಿತು. ಇದು ಶಿಕ್ಷಕರು ಬದಲಾವಣೆಯನ್ನು ಅರ್ಥೈಸಿಕೊಂಡರೂ ಕೂಡ ಮತ್ತೆ ನಾವು ಶಾಲೆಗಳಿಗೆ ಬೇಟಿ ನೀಡಿದರೆ ಅದೆ ಸಾಂಪ್ರದಾಯಿಕ ಪದ್ಧತಿಯಿಂದ ಬೋಧನೆ ಮಾಡುವುದನ್ನು ಕಾಣುತ್ತೇವೆ'[೮].

ಒಟ್ಟಾರೆ ಪರಿಣಾಮಕಾರಿ ಬೋಧನೆಯಿಂದ ಪರಿಣಾಮಕಾರಿ ಕಲಿಕೆಯಾಗಬೇಕಾದರೆ ಇಲ್ಲಿ ಹೊಸ ಬೋಧನಾ ವಿಧಾನಗಳನ್ನು ಅನುಸರಿಸಿ ಬೋಧಿಸುವುದು ಬೋಧಕನ ಕೆಲಸವಾಗಿದೆ. ಅಷ್ಟೇ ಅಲ್ಲದೆ ಮಗುವಿನ ಮಾನಸಿಕ ಸ್ಥಿತಿ ಅವನ ಸಾಮಾಜಿಕ ಹಿನ್ನೆಲೆ ಪಠ್ಯವಸ್ತು ಇವೆಲ್ಲವೂ ಮಗುವಿನ ಕಲಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕೇವಲ ಬೋಧಕ ಕೇವಲ ಪಠ್ಯ ಪುಸ್ತಕ ಕೇವಲ ಸಾಮಾಜಿಕ ಹಿನ್ನೆಲೆ ಕಲಿಕೆಯಲ್ಲಿ ಹಿಂದುಳಿಯಲು ಕಾರಣವಲ್ಲ. ಈ ಮೇಲಿನ ಎಲ್ಲ ಅಂಶಗಳು ಸರಿಯಾಗಿಲ್ಲದಿದ್ದರೆ ಮಗುವಿನ ಕಲಿಕೆ ಯಶಸ್ವಿಯಾಗುವುದಿಲ್ಲ. ಈ ಮೇಲಿನ ಎಲ್ಲ ಅಂಶಗಳು ಸರಿಯಾಗಿದ್ದರೆ ಮಗುವಿನ ಕಲಿಕೆ ಯಶಸ್ವಿಯಾಗುವುದು.

ಎರಡನೆ ಭಾಷೆ ಕಲಿಕೆ ಎಂದರೆ ನೈಸರ್ಗಿಕ ವಾತಾವರಣದಲ್ಲಿ ನಿರ್ಧಿಷ್ಟ ಸೂಚನೆಗಳಿಲ್ಲದೆ ಕಲಿಯುವುದು. ಎರಡನೆ ಭಾಷೆ ಕಲಿಕೆಯಲ್ಲಿ ವ್ಯತ್ಯಾಸ ಮಾಡಲು ಈ ಕೆಳಗಿನ ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ.

೧. ಸಾಮಾನ್ಯೀಕರಿಸುವುದು (ಮಾತೃ ಭಾಷೆಯನ್ನು ೨ನೇ ಭಾಷೆಯ ಜೊತೆಗೆ ಸೇರಿಸಿ ಉಚ್ಚರಿಸುವುದು)

೨. ಎರಡನೆ ಭಾಷೆ ಕಲಿಕೆ ನಿಯಮಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವುದು

೩. ಅಂತರ್‌ಭಾಷೆ ಮಧ್ಯ ಪ್ರವೇಶಿಸುವುದು

೪. ಶುದ್ಧಿಕರಿಸಿದ ಭಾಷೆ ಮಧ್ಯ ಪ್ರವೇಶಿಸುವುದು

೫. ಮಾತೃ ಭಾಷೆ ಮಧ್ಯ ಪ್ರವೇಶಿಸುವುದು

೬. ಸರಳೀಕರಣಗೊಳಿಸುವಿಕೆ

೭. ಅಂತರ್ ಕಲಿಕೆ ವ್ಯತ್ಯಾಸಗಳು

೮. ಕಲಿಯದೇ ಇರುವುದು

ಕಲಿಕೆ

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಕಲಿಯುವಿಕೆ ಒಂದು ಮಹತ್ವದ ಭಾಗ. ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಸೂಕ್ತವಾದ ಕಲಿಕೆಯ ವಾತಾವರಣವನ್ನು ನಿರ್ಮಿಸಬೇಕು. ಶಿಕ್ಷಣ ರಂಗದಲ್ಲಿ ಕಲಿಯುವಿಕೆಗೆ ಒಂದು ಮಹತ್ತರವಾದ ಸ್ಥಾನವಿದೆ. ಕೇವಲ ಓದು-ಬರಹ ಕಲಿಯುವುದು ಮಾತ್ರ ಕಲಿಕೆಯಲ್ಲ. ಇದು ಕಲಿಕೆಯ ಸಂಕುಚಿತಾರ್ಥ. ಶಿಕ್ಷಣವೆಂದರೆ ಅನುಭವಗಳ ಮೂಲಕ ವರ್ತನೆಯಲ್ಲಿ ಪರಿವರ್ತನೆ, ಈ ವರ್ತನೆಯ ಪರಿವರ್ತನೆಯೇ ಕಲಿಕೆ. ಮಗುವು ಹುಟ್ಟಿನಿಂದ ಸಾಯುವರೆಗೆ ಈ ಮಾರ್ಪಾಡು ಎಲ್ಲ

ಕಾಲಗಳಲ್ಲಿಯೂ ನಡೆಯುತ್ತದೆ. ನಮ್ಮ ನರಮಂಡಲದಲ್ಲಿ ಆಗುವ ಬದಲಾವಣೆಯೇ ವರ್ತನೆಯ ಬದಲಾವಣೆ. ಆದ್ದರಿಂದ ಈ ಬದಲಾವಣೆಯು ನರಮಂಡಲಕ್ಕೂ ಸಂಬಂಧಿಸಿದುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಸಹಜ ಪ್ರವೃತ್ತಿಗಳೊಡನೆ ಹುಟ್ಟುತ್ತಾನೆ. ಈ ಪ್ರವೃತ್ತಿಗಳು ವ್ಯಕ್ತಿಯಲ್ಲಿ ಪ್ರಾಣಿಸದೃಶವಾಗಿರುತ್ತದೆ. ಅವುಗಳನ್ನು ಸುಧಾರಿಸಿ, ಸಂಪನ್ನಗೊಳಿಸುವುದೂ, ಅವುಗಳಲ್ಲಿ ಮಾರ್ಪಾಡನ್ನುಂಟು ಮಾಡುವುದೂ ಅವಶ್ಯ ಜಗತ್ತು ಇಷ್ಟೊಂದು ಪ್ರಗತಿ ಹಾಗೂ ಸುಧಾರಣೆಗಳನ್ನು ಹೊಂದಿರುವುದು ಕಲಿಯುವಿಕೆಯಿಂದಲೇ. ವ್ಯಕ್ತಿಯ ಜೀವನದಲ್ಲಿ ಕಲಿಕೆಯ ಸನ್ನಿವೇಶಗಳು ಸಾಮಾನ್ಯ ಹಾಗೂ ಸ್ವಾಭಾವಿಕ. ಕ್ಷಣಕ್ಷಣಕ್ಕೂ ವ್ಯಕ್ತಿಯು ಏನನ್ನಾದರೂ ಕಲಿಯುತ್ತಲೇ ಇರುತ್ತಾರೆ. ವ್ಯಕ್ತಿಯ ವರ್ತನೆಯ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಅನುಭವಗಳಿಂದ ಅವನ ವರ್ತನೆಯಲ್ಲಿ ಪರಿವರ್ತನೆ ಆಗುತ್ತಲೇ ಹೋಗುತ್ತದೆ. ಇದಕ್ಕೆ ಕಲಿಕೆ ಎನ್ನುತ್ತಾರೆ.

ಕಲಿಕೆಯ ವ್ಯಾಖ್ಯೆಗಳು

ಹಿಲ್‌ಗಾರ್ಡ್	'ಕಾರ್ಯ ರೀತಿಯ ಬದಲಾವಣೆಯಿಂದ ಬಂದಂತಹ ತೀರ್ಮಾನವೇ ಕಲಿಕೆ'.
ಗೇಟ್ಸ	'ತರಬೇತಿ ಮತ್ತು ಅನುಭವಗಳಿಂದಾದ ವರ್ತನೆಯ ಪರಿವರ್ತನೆಯೇ ಕಲಿಕೆ'.
ಗಾರ್ಡನರ್ ಮರ್ಫಿ	'ಸನ್ನಿವೇಶದ ಅವಶ್ಯಕತೆಗಳನ್ನು ಪೂರೈಸಲು ವರ್ತನೆಯಲ್ಲಾಗುವ ಎಲ್ಲ ರೀತಿಯ ಬದಲಾವಣೆಯೇ ಕಲಿಕೆ.'
ಪೀಲ್	'ಪರಿಸರದ ಬದಲಾವಣೆಗೆ ತಕ್ಕಂತೆ ವ್ಯಕ್ತಿಯಲ್ಲಿ ಉಂಟಾಗುವ ಪರಿವರ್ತನೆಯೇ ಕಲಿಕೆ.'
ಥಾರ್ನ್‌ಡೈಕ್	'ಪ್ರಚೋದನೆ ಹಾಗೂ ಪ್ರತಿಕ್ರಿಯೆಗಳ ಸಂಬಂಧವೇ ಕಲಿಕೆ.'
ಜಿ.ಎ. ಬೂರ್ಘ್	'ವ್ಯಕ್ತಿಯು ಸಾಮಾನ್ಯವಾಗಿ ಜೀವನದ ಅಗತ್ಯತೆಗಳಾದ ಅನೇಕ ಗುಣಗಳು, ಜ್ಞಾನ ಮತ್ತು ಒಲವುಗಳನ್ನು ಪಡೆಯುವ ಕಾರ್ಯವೇ ಕಲಿಕೆ.'
ಹೆನ್ರಿ. ಡಿ. ಸ್ಮಿತ್	'ಹೊಸ ವರ್ತನೆಗಳನ್ನು ಸಂಗ್ರಹಿಸುವುದು ಇಲ್ಲವೆ ಹಳೆಯ ವರ್ತನೆಗಳನ್ನು ಅನುಭವಕ್ಕನುಗುಣವಾಗಿ ಮಾರ್ಪಡಿಸುವಿಕೆಯೇ ಕಲಿಕೆ.'
ಕ್ರೋ ಮತ್ತು ಕ್ರೋ	'ಹವ್ಯಾಸ, ಜ್ಞಾನ ಹಾಗೂ ಅಭಿವೃತ್ತಿಗಳನ್ನು ಪಡೆದುಕೊಳ್ಳುವ ವಿಧಾನವೇ ಕಲಿಕೆ.'
ಕಿಂಗ್ಸಲೀ ಹಾಗೂ ಗ್ಯಾರಿ	'ಅಭ್ಯಾಸ ಅಥವಾ ತರಬೇತಿಯ ಮೂಲಕ ವರ್ತನೆಯು ಸುಸಂಘಟಿತಗೊಳ್ಳುವ ಅಥವಾ ಬದಲಾವಣೆ ಹೊಂದುವ ವಿಧಾನವೇ ಕಲಿಕೆ.'
ವುಡ್‌ವರ್ಥ್	'ಅನುಭವಗಳು ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆ ತರುವ ಯಾವುದೇ ಚಟುವಟಿಕೆ ಕಲಿಕೆ ಎನಿಸುವುದು.'

ಮ್ಯಾಕ್‌ಡ್ಯೂಗಲ್‌ಸ — 'ಅಭ್ಯಾಸ ನಿರ್ವಹಣೆಯಲ್ಲಿ ಆಗುವ ಬದಲಾವಣೆಯೇ ಕಲಿಕೆ.'

ಮನ್ — 'ನಮ್ಮ ಸುತ್ತಲಿನ ಜಗತ್ತಿನಲ್ಲಿ ಏನು ನಡೆಯುತ್ತಿದೆಯೋ, ನಾವು ಏನು ಮಾಡುತ್ತೇವೆಯೋ ಅಥವಾ ಏನನ್ನು ಅವಲೋಕಿಸುತ್ತೇವೆಯೋ ಅದರ ಮೂಲಕ ಉಂಟಾಗುವ ಶಾಸ್ವತವಾದ ಪರಿವರ್ತನೆಯ ಪ್ರಕ್ರಿಯೆಯೇ ಕಲಿಕೆ.'

ರೀಡ್ ಲಾಸನ್ — 'ಉದ್ದೀಪನ-ಕ್ರಿಯೆ-ಪುನರ್ಬಲನದ ಅನುಕ್ರಮಣಿಕೆಯು ಒಂದು ಅಥವಾ ಸಾಮಾನ್ಯವಾಗಿ ಹಲವಾರು ಬಾರಿ ಉಂಟಾಗುವುದರ ಪರಿಣಾಮದಿಂದಾಗಿ ಕಾಣಿಸಿಕೊಳ್ಳುವ ಬದಲಾವಣೆಯೇ ಕಲಿಕೆ.'

ಸ್ಕಿನ್ನರ್ — 'ಜ್ಞಾನಾರ್ಜನೆ ಹಾಗೂ ಧಾರಣಾ ಶಕ್ತಿಗೆ ಸಂಬಂಧಿಸಿದುದೇ ಕಲಿಕೆ.'

ಭಾಷೆ ಮತ್ತು ಶಿಕ್ಷಣ ಮಾಧ್ಯಮ

ಪ್ರಾಚೀನ ಕಾಲದಿಂದಲೂ ಕನ್ನಡ ಭಾಷೆ ತನ್ನದೆಯಾದ ವೈಶಿಷ್ಟ್ಯತೆಯಿಂದ ಬೆಳೆದು ಬಂದುದು ನಾವು ಕಾಣುತ್ತೇವೆ. ನಮ್ಮ ಕನ್ನಡ ಭಾಷೆ ಪ್ರಾಚೀನ ಕಾಲದಿಂದಲೂ ಶಿಕ್ಷಣ ಮಾಧ್ಯಮವಾಗಿದ್ದರೂ ಹಲವು ವಿದೇಶಿಯರ ಆಳ್ವಿಕೆಯ ಸಂದರ್ಭದಲ್ಲಿ ಸೋತು ಸೊರಗಿರುವದುಂಟು. ಆದರೂ ಕೂಡ ತನ್ನ ವೈಶಿಷ್ಟ್ಯತೆಯಿಂದ ಬೆಳೆದು ಬಂದಿದೆ. ಅನೇಕ ವಿದೇಶಿಯರ ಆಳ್ವಿಕೆಯಲ್ಲಿ ಮುಸ್ಲಿಂರ ಆಳ್ವಿಕೆ ಕೂಡ ಪ್ರಮುಖವಾದದು.

ಕ್ರಿ.ಶ. ೮ನೇ ಶತಮಾನದಲ್ಲಿ ಭಾರತದ ಮೇಲೆ ಮಹಮ್ಮದೀಯರ ದಾಳಿ ಆರಂಭವಾದದ್ದು ೧೩ನೇಯ ಶತಮಾನದಲ್ಲಿ ಭಾರತದಲ್ಲಿ ಶಾಶ್ವತವಾದ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. ಕುರಾನಿನಲ್ಲಿ ಶಿಕ್ಷಣವನ್ನು ಕರ್ತವ್ಯವೆಂದು ಹೇಳಿರುವುದರಿಂದ’[೯] ಮುಸ್ಲಿಂ ಅರಸರಾದ ಬುಖ್ತಿಯಾರ್ ಅಲ್ಲಾವುದ್ದೀನ ಅಕ್ಬರ ಫೀರೋಜ್‌ಶಾಹ ಮತ್ತು ಔರಂಗಜೇಬ ಮುಂತಾದ ಅರಸರು ಮುಸ್ಲಿಂ ಪದ್ಧತಿಯ ಶಿಕ್ಷಣ ನೀಡುವಂತೆ ವ್ಯವಸ್ಥೆ ಮಾಡಿದರು. ಆದುದರಿಂದ ಭಾರತೀಯ ಶಿಕ್ಷಣ ನಿಧಾನವಾಗಿ ಹೊಸ ರೂಪ ಪಡೆಯುತ್ತ ನಡೆಯಿತು. ಕರ್ನಾಟಕದಲ್ಲಿರುವ ಮುಸ್ಲಿಂರ ಭಾಷೆ ಮಹಮ್ಮದೀಯರ ದಾಳಿಗಿಂತ ಮುಂಚೆ ಕನ್ನಡವೇ ಆಗಿತ್ತು. ಆದರೆ ಇವರ ದಾಳಿಯ ನಂತರ ಉರ್ದು ಮುಸ್ಲಿಮರ ಭಾಷೆಯಾಗುವುದಷ್ಟೇ ಅಲ್ಲ; ಮುಸ್ಲಿಂ ದೊರೆಗಳು ಆಳ್ವಿಕೆ ಮಾಡುವ ಪ್ರದೇಶವೆಲ್ಲ ಉರ್ದು ಭಾಷೆಯ ಬಳಕೆ ಪ್ರಾರಂಭವಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣ ಮಾಧ್ಯಮ

ಸ್ವಾತಂತ್ರ್ಯ ಪೂರ್ವದಲ್ಲಿ ಮುಸ್ಲಿಂ ಅರಸರು ಶಾಲೆಯನ್ನು ತೆರೆಯುವುದು ಶ್ರೇಷ್ಠ ಕಾರ್ಯವೆಂದು ತಿಳಿದು,

೧. ಮಕ್ತಬ್ (ಪ್ರಾಥಮಿಕ ಶಿಕ್ಷಣ)

೨. ಉನ್ನತ ಮಕ್ತಬ್ (ಮಾಧ್ಯಮಿಕ ಶಿಕ್ಷಣ)

೩. ಮದರಸಾ (ಉನ್ನತ ಶಿಕ್ಷಣ) ಇಂತಹ ಶಿಕ್ಷಣ ಕೇಂದ್ರಗಳನ್ನು ತೆರೆದು ಶಿಕ್ಷಣ ಕೊಡಲು ಪ್ರಾರಂಭಿಸಿದರು.

'ಇಲ್ಲಿ ಅನೇಕ ಹಿಂದುಗಳು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದು ಮುಸ್ಲಿಂ ಅರಸರ ಆಸ್ಥಾನದಲ್ಲಿ ಜವಾಬ್ದಾರಿಯುತವಾದ ಹುದ್ದೆಗಳನ್ನು ಅಲಂಕರಿಸಿದ್ದರು.'[೧೦] ನಂತರದ ಕಾಲದಲ್ಲಿ ಈ 'ಅರೇಬಿಕ್ ಮತ್ತು ಪರ್ಶಿಯನ್ ಭಾಷೆಗಳ ಮಿಶ್ರಣವೇ ಉರ್ದು ಭಾಷೆಯಾಗಿ ಜನ್ಮ ತಾಳಿ ಗ್ರೀಕ್ ಸಾಹಿತ್ಯ ಕೃತಿಗಳನ್ನು ಉರ್ದುವಿಗೆ ಭಾಷಾಂತರ ಮಾಡಿ ಕಲಿಸಲಾಗುತ್ತಿತ್ತು'[೧೧]. ಈ ಸಂದರ್ಭದಲ್ಲಿ ಉರ್ದು ಭಾಷೆ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಹೊಂದಿತು. ಅಷ್ಟೇ ಅಲ್ಲದೆ ಉರ್ದು ಭಾಷೆಯ ಮೂಲಕವೇ ಶಿಕ್ಷಣ ನೀಡಲಾಗುತ್ತಿತ್ತು.

ಭಾರತದ ಶಿಕ್ಷಣದ ತಳಹದಿಯಾದ ೧೮೫೪ರ ವುಡ್‌ರವರ ವರದಿಯಲ್ಲಿ ಬೋಧನಾ ಮಾಧ್ಯಮ ಕುರಿತು 'ಇಂಗ್ಲಿಶ್ ಭಾಷೆಯನ್ನು ಮಾಧ್ಯಮವನ್ನಾಗಿ ಮಾಡಲು ಹೇಳಿದರೂ ಕೂಡ ಸ್ಥಳೀಯ ದೇಶಿಯ ಭಾಷೆಗಳನ್ನು ಕೂಡ ಶಿಕ್ಷಣದ ಮಾಧ್ಯಮದಂತೆ ಉಪಯೋಗಿಸುವುದು ಒಳ್ಳೆಯದು ಎಂದು ಹೇಳಲಾಗಿದೆ.'[೧೨] ಆದರೆ ಹೈದ್ರಾಬಾದ ಕರ್ನಾಟಕದ ಪ್ರಾಂತ್ಯದಲ್ಲಿ ನಿಜಾಮನ ಆಳ್ವಿಕೆ ಇರುವುದರಿಂದ ಇದು ಜಾರಿಗೆ ಬಾರದೆ ಉರ್ದು ಭಾಷೆಯೇ ಶಿಕ್ಷಣ ಮಾಧ್ಯಮವಾಗಿತ್ತು. ಪ್ರಥಮವಾಗಿ ವುಡ್‌ರವರು ಅರೇಬಿಕ್ ಸಂಸ್ಕೃತ ಪರ್ಶಿಯನ್ ಭಾಷೆಯನ್ನು ಅಧ್ಯಯನ ವಿಷಯಗಳನ್ನಾಗಿ ಅಭ್ಯಾಸ ಮಾಡಲು ಭಾರತೀಯರಿಗೆ ಶಿಫಾರಸ್ಸು ಮಾಡಿದರು. ಭಾರತೀಯ ಭಾಷೆ ಬೆಳೆಯಲು ಇದೇ ಮುಖ್ಯ ಕಾರಣ ಆದುದರಿಂದ ಮತ್ತೆ ಈ ವರದಿಯಲ್ಲಿ ಮುಸ್ಲಿಂ ಶಿಕ್ಷಣ ಕೇಂದ್ರಗಳನ್ನು ತೆರೆದು ಉರ್ದು ಭಾಷೆಯ ಮಾಧ್ಯಮದ ಮೂಲಕ ಶಿಕ್ಷಣ ನೀಡಲು ಅವಕಾಶ ಮಾಡಿತು. ನಂತರ ರಚನೆಯಾದ ಶಿಕ್ಷಣದ ಆಯೋಗಗಳು ಕೂಡ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಿರಬೇಕೆಂದು ಹೇಳಿದವು. ಆದರೆ 'ಮುಸ್ಲಿಂ ಅರಸರ ಆಳ್ವಿಕೆ ಇರುವ ಹೈದ್ರಾಬಾದ ಕರ್ನಾಟಕದಲ್ಲಿ ಉರ್ದು ಆಡಳಿತ ಭಾಷೆಯಾಗಿತ್ತು.'[೧೩] ಅನಿವಾರ್ಯವಾಗಿ ಈ ಪ್ರದೇಶದ ಜನರು ಉರ್ದುಭಾಷೆಯ ಮೂಲಕವೆ ಶಿಕ್ಷಣ ಪಡೆಯಬೇಕಾಗಿತ್ತು. ಇವರ ಶಿಕ್ಷಣ ಉರ್ದು ಭಾಷೆಯಲ್ಲಿಯೇ ಮುಂದುವರೆಯುತಿತ್ತು. ಆದರೆ ಪ್ರಾಂತೀಯ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂಬ 'ಭಾರತ ಸರ್ಕಾರದ ಗೊತ್ತುವಳಿ'[೧೪] ಇದ್ದರೂ ಕೂಡ ಬೀದರ ಗುಲಬರ್ಗಾ ಭಾಗದಲ್ಲಿ ಮುಸ್ಲಿಂ ದೊರೆಗಳ ಆಳ್ವಿಕೆ ಇರುವುದರಿಂದ ಕನ್ನಡ ಪ್ರಾಂತೀಯ ಭಾಷೆಯಾಗಿರದೆ ಉರ್ದು ಪ್ರಾಂತೀಯ ಭಾಷೆಯಾಗಿರುವುದು ಕಂಡುಬರುವುದು. ಭಾರತಕ್ಕೆ ಬ್ರೀಟಿಷರ ಆಗಮನದಿಂದ ಕರ್ನಾಟಕದ ಹಲವು ಕಡೆ ಇಂಗ್ಲಿಶ್ ಭಾಷೆ ಮೂಲಕ ಶಿಕ್ಷಣ ಪ್ರಾರಂಭವಾದರೂ ಬೀದರ ಮತ್ತು ಗುಲಬರ್ಗಾ ಭಾಗದಲ್ಲಿ ಉರ್ದುವಿನಲ್ಲಿಯೇ ಶಿಕ್ಷಣ ಮುಂದುವರೆದಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿ ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ತ್ರಿಭಾಷಾ ಸೂತ್ರ ಈ ಕೆಳಗಿನಂತೆ ಇರುವುದು ಕಂಡುಬರುವುದು.

೧. ಪ್ರಥಮ ಭಾಷೆ – ಉರ್ದು

೨. ದ್ವಿತೀಯ ಭಾಷೆ – ಇಂಗ್ಲಿಶ್

೩. ತೃತೀಯ ಭಾಷೆ – ಕನ್ನಡ ಆದರೆ ಉಳಿದ ಐಚ್ಛಿಕ ವಿಷಯಗಳ ಮಾಧ್ಯಮ ಉರ್ದುವಾಗಿದ್ದುದು ೧೯೫೧ ರ ವರೆಗೆ ಕಂಡುಬರುವುದು.

ಸ್ವಾತಂತ್ರ್ಯ ನಂತರದಲ್ಲಿ ಶಿಕ್ಷಣ ಮಾಧ್ಯಮ

ಅಖಂಡ ಭಾರತ ದೇಶಕ್ಕೆ ೧೯೪೭ ಆಗಸ್ಟ ೧೫ ರಂದು ಸ್ವಾತಂತ್ರ್ಯ ಸಿಕ್ಕರೂ ಕೂಡ ಈ ಹೈದ್ರಾಬಾದ ಕರ್ನಾಟಕಕ್ಕೆ ಸ್ವಾತಂತ್ರ್ಯ ಸಿಕ್ಕಿರಲಿಲ್ಲಾ ಇನ್ನೂ ನಿಜಾಮನ ಆಳ್ವಿಕೆಯಲ್ಲಿತ್ತು. ನಂತರದಲ್ಲಿ ಈ ಭಾಗಕ್ಕೆ ೧೯೪೮ ಸೆ. ೧೭ ರಂದು ಸ್ವಾತಂತ್ರ್ಯ ಲಭಿಸಿದ ನಂತರ ದೇಶದ ಈಗಿನ ಮತ್ತು ಮುಂದಿನ ಅಗತ್ಯತೆಗಳಿಗೆ ಸೂಕ್ತವಾಗಬಲ್ಲ ಸುಧಾರಣೆಗಳನ್ನು ಸೂಚಿಸಲು 'ನವೆಂಬರ್–೪ ೧೯೪೮ರಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ ಭಾರತ ಸರ್ಕಾರ ಶಿಕ್ಷಣ ಆಯೋಗ ರಚಿಸಿತು'.[೧೫] ಈ ಆಯೋಗ ತ್ರಿಭಾಷಾ ಸೂತ್ರ ಹೀಗೆ ಹೇಳಿತು.

೧. ರಾಷ್ಟ್ರೀಯ ಭಾಷೆ – ಹಿಂದಿ

೨. ಪ್ರಾದೇಶಿಕ ಭಾಷೆ – ಆ ರಾಜ್ಯಕ್ಕೆ ಸಂಬಂಧಿಸಿದ್ದು (ಕರ್ನಾಟಕಕ್ಕೆ ಕನ್ನಡ)

೩. ಅನ್ಯ ಭಾಷೆ – ಇಂಗ್ಲೀಷ್

ನಂತರದಲ್ಲಿ ೧೯೬೪–೬೬ ರಲ್ಲಿ ಕೊಠಾರಿ ಶಿಕ್ಷಣ ಆಯೋಗ ರಚನೆಯಾಗಿ ಈ ಕೆಳಕಂಡ ಭಾಷೆಗಳ ಕಲಿಕೆ ಬಗ್ಗೆ ಹೇಳಿತು.

೧. ಕಿರಿಯ ಪ್ರಾಥಮಿಕ ಹಂತ–ಒಂದು ಭಾಷೆ–ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ.

೨. ಹಿರಿಯ ಪ್ರಾಥಮಿಕ ಹಂತ

ಅ. ಎರಡು ಭಾಷೆಗಳು

೧. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ

೨. ಹಿಂದಿ ಅಥವಾ ಇಂಗ್ಲಿಶ್

೩. ಕಿರಿಯ ಮಾಧ್ಯಮಿಕ ಹಂತ

ಅ. ಮೂರು ಭಾಷೆಗಳು

೧. ಮಾತೃ ಭಾಷೆ

೨. ಇಂಗ್ಲಿಶ್

೩. ಹಿಂದಿ

ಳ. ಹಿರಿಯ ಮಾಧ್ಯಮಿಕ ಹಂತದಲ್ಲಿ ಎರಡು ಭಾಷೆಗಳು

೧. ಆಧುನಿಕ ಭಾರತೀಯ ಭಾಷೆ

೨. ವಿದೇಶಿ ಭಾಷೆ ಅಥವಾ ಶಾಸ್ತ್ರೀಯ ಭಾಷೆ.

ನಂತರದಲ್ಲಿ ಕರ್ನಾಟಕದಲ್ಲಿ ಕನ್ನಡ ಭಾಷೆ ಕುರಿತು ಸರ್ಕಾರ ೧೯೮೧ರಲ್ಲಿ ಗೋಕಾಕ್‌ರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ತನ್ನ ವರದಿಯನ್ನು ೨೭.೧.೧೯೮೧ ರಂದು ಒಪ್ಪಿಸಿದ ನಂತರ ಕರ್ನಾಟಕ ಸರ್ಕಾರ ೩೦.೪.೧೯೮೨ ರಂದು ಒಂದು ಆದೇಶವನ್ನು ಹೊರಡಿಸಿತು. ಇದರ ಅನುಸಾರ ಕನ್ನಡಿಗ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಒಂದನೇ ತರಗತಿಯಿಂದ ಕನ್ನಡ ಕಲಿಕೆಗೆ ಕಡ್ಡಾಯವಾಗದೆ ಕನ್ನಡೇತರ ವಿದ್ಯಾರ್ಥಿಗಳಿಗೆ ಅಂದರೆ ಭಾಷಾ ಅಲ್ಪಸಂಖ್ಯಾತರ ಮಕ್ಕಳಿಗೆ (ಇಲ್ಲಿ ಉರ್ದು ಭಾಷಿಕರ ಮಕ್ಕಳಿಗೂ ಅನ್ವಯಿಸುತ್ತದೆ) ಮೂರನೆ ತರಗತಿಯಿಂದ ಕನ್ನಡ ಕಲಿಕೆಗೆ ಕಡ್ಡಾಯವಾಗಿತ್ತು. ಹಾಗೂ ಪ್ರೌಢ ಶಾಲಾ ಹಂತದಲ್ಲಿ ಮಾತೃಭಾಷೆ ಅಥವಾ ಕನ್ನಡ ಪ್ರಥಮ ಭಾಷೆಯಾಗಿದ್ದರೆ ಮಾತೃಭಾಷೆ ಕನ್ನಡವಲ್ಲದವರು ಕನ್ನಡ ಎರಡನೇ ಭಾಷೆಯಾಗಿ ಕಲಿಯಬಹುದಾಗಿತ್ತು.

ಭಾಷಾ ನೀತಿಯಿಂದ ಕನ್ನಡೇತರರು ಕನ್ನಡ ಕಲಿಯಲು ಸೂಕ್ತ ಅವಕಾಶ ಇಲ್ಲವೆಂಬ ಟೀಕೆಯಿಂದಾಗಿ ವಿಷಯವನ್ನು ರಾಜ್ಯದ ಶಾಸನ ಸಭೆಯ ಮುಂದೆ ತಂದಾಗ, ಪ್ರಾಥಮಿಕ ಶಾಲೆಯಲ್ಲಿ ೧೯೮೨–೮೩ ರಿಂದ ಒಂದನೇ ತರಗತಿಯಿಂದಲೇ ಕನ್ನಡವನ್ನು ಕಲಿಸತಕ್ಕದ್ದು ಮತ್ತು ಪ್ರೌಢಶಾಲೆಯಲ್ಲಿ ಕನ್ನಡ ಏಕೈಕ ಪ್ರಥಮ ಭಾಷೆಯಾಗಿರತಕ್ಕದೆಂದು ಠರಾವು ಮಾಡಿತು. ಆ ಪ್ರಕಾರ ಸರ್ಕಾರ ಪುನಃ ಒಂದು ಆದೇಶವನ್ನು ಹೊರಡಿಸಿತು. ಇದರ ಪ್ರಕಾರ ಕನ್ನಡಿಗ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಒಂದನೇ ತರಗತಿಯಿಂದ ಕನ್ನಡ ಕಲಿಕೆ ಕಡ್ಡಾಯವಾದರೆ ಕನ್ನಡೇತರ ವಿದ್ಯಾರ್ಥಿಗಳಿಗೆ ಅಂದರೆ ಉರ್ದು ಭಾಷಿಕ (ಭಾಷಾ ಅಲ್ಪಸಂಖ್ಯಾತರ) ಮಕ್ಕಳಿಗೆ ೩ನೇ ತರಗತಿಯಿಂದ ಕನ್ನಡ ಕಲಿಕೆ ಕಡ್ಡಾಯವಾಗಿತ್ತು. ಹಾಗೂ ಪ್ರೌಢಶಾಲಾ ಹಂತದಲ್ಲಿ ಮಾತೃಭಾಷೆ ಅಥವಾ ಕನ್ನಡ ಪ್ರಥಮ ಭಾಷೆಯಾಗಿದ್ದರೆ, ಮಾತೃಭಾಷೆ ಕನ್ನಡವಲ್ಲದವರು ಉರ್ದುಭಾಷಿಕ ಮಕ್ಕಳು ಕನ್ನಡ ಎರಡನೇಯ ಭಾಷೆಯಾಗಿ ಕಲಿಯಬಹುದಾಗಿತ್ತು. ೧೯೮೬ ರಲ್ಲಿ ಹೊಸರಾಷ್ಟ್ರೀಯ ಶಿಕ್ಷಣ ನೀತಿ ಬಂದನಂತರ 'ಸರ್ವೋಚ್ಚ ನ್ಯಾಯಾಲಯವು ದಿನಾಂಕ ೮.೧೨.೧೯೯೩ರ ತನ್ನ ತೀರ್ಪಿನಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿಯಿತು'[೧೬] ಮತ್ತು ಕೆಳಕಂಡ ಅಂಶಗಳಿಗೆ ಒಪ್ಪಿಗೆ ನೀಡಿತು.

೧. ಪ್ರಾಥಮಿಕ ಹಂತ ೧ ರಿಂದ ೪ನೆ ತರಗತಿವರೆಗೆ ಮಾತೃಭಾಷೆ ಶಿಕ್ಷಣದ ಮಾಧ್ಯಮವಾಗಿರಬೇಕು.

೨. ೩ನೇ ತರಗತಿಯಿಂದ ಕನ್ನಡೇತರರಿಗೆ ಕನ್ನಡ ಭಾಷಾಕಲಿಕೆ ಐಚ್ಛಿಕವಾಗಿರಬೇಕು.

೩. ೫ನೇ ತರಗತಿಯಿಂದ ಎರಡನೇಯ ಭಾಷೆ ಕಡ್ಡಾಯ ಕನ್ನಡೇತರರಿಗೆ ಕನ್ನಡ ಕಲಿಕೆ ಕಡ್ಡಾಯ ೩ನೇ ಭಾಷೆ ಐಚ್ಛಿಕ.

೪. ಪ್ರೌಢಶಾಲೆಯಲ್ಲಿ ಮೂರು ಭಾಷೆಗಳಲ್ಲಿ ಒಂದಾಗಿ ಕನ್ನಡ ಕಲಿಕೆ ಕಡ್ಡಾಯ ಎಂದು ಉಚ್ಛ ನ್ಯಾಯಾಲಯ ತಿಳಿಸಿದೆ.

ದಿನಾಂಕ ೮. ೧೨. ೧೯೯೩ರ ಈ ತೀರ್ಪಿನ ಅನ್ವಯ ಕರ್ನಾಟಕ ಸರ್ಕಾರ ಒಂದು ಆದೇಶ ಹೊರಡಿಸಿತು.[೧೬] ಅದರ ಪ್ರಕಾರ:

೧. ೧೯೯೪-೯೫ ರಿಂದ ಭಾಷಾ ನೀತಿ ಜಾರಿಗೆ ಬರುತ್ತದೆ.

೨. ಪ್ರಾಥಮಿಕ ೧ ರಿಂದ ೪ ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಕನ್ನಡ ಕಡ್ಡಾಯ ಭಾಷೆಯಾಗಿರುತ್ತದೆ.

೩. ೩ನೇ ತರಗತಿಯಿಂದ ಕನ್ನಡೇತರರಿಗೆ ಕನ್ನಡ ಐಚ್ಛಿಕ ವಿಷಯವಾಗಿರುತ್ತದೆ.

೪. ೫ನೇ ತರಗತಿಯಿಂದ ದ್ವಿತೀಯ ಭಾಷೆ ಕಡ್ಡಾಯ ಕನ್ನಡ ದ್ವಿತೀಯ ಭಾಷೆಯಾಗಿ ಕನ್ನಡೇತರರಿಗೆ ಕಡ್ಡಾಯ

೫. ೫ನೇ ತರಗತಿಯಿಂದ ತೃತೀಯ ಭಾಷೆ ಐಚ್ಛಿಕ

೬. ಪ್ರೌಢ ಶಾಲೆಯಲ್ಲಿ ತ್ರಿಭಾಷೆಗಳಲ್ಲಿ ಒಂದಾಗಿ ಕನ್ನಡ ಕಡ್ಡಾಯ.

ದಿನಾಂಕ: ೪.೪.೨೦೦೨ (೨೦೦೧-೦೨) ಸಾಲಿನಿಂದ ಹೊಸ ಪಠ್ಯವಸ್ತುವನ್ನು ಜಾರಿಗೊಳಿಸುವಾಗ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಹಂತದ ಪಠ್ಯವಸ್ತುವನ್ನು ೧೯೮೯-೯೦ ನೇ ಶೈಕ್ಷಣಿಕ ವರ್ಷದಿಂದ ಹಂತ ಹಂತವಾಗಿ ೧ ರಿಂದ ೧೦ನೇ ತರಗತಿವರೆಗೆ ಪಠ್ಯಪುಸ್ತಕಗಳನ್ನು ರಚಿಸಿ ೧೯೯೪-೯೫ ರವರೆಗೂ ಜಾರಿಗೊಳಿಸಲಾಯಿತು. ಅದರಲ್ಲಿ ಭಾಷಾನೀತಿಯನ್ನು ಈ ಕೆಳಕಂಡಂತೆ ಹೇಳಲಾಗಿದೆ.[೧೮]

೧. ಹಿರಿಯ ಪ್ರಾಥಮಿಕ ಅಂದರೆ ಐದನೇ ತರಗತಿಯಿಂದ ತ್ರಿಭಾಷಾ ಸೂತ್ರವನ್ನು ಜಾರಿಗೊಳಿಸಲಾಗಿದೆ.

೨. ಕನ್ನಡ ಭಾಷೆ ಮಾತೃಭಾಷೆಯಲ್ಲದ ಅಥವಾ ಪ್ರಥಮ ಭಾಷೆಯಲ್ಲದ ಮಕ್ಕಳಿಗೆ ಕನ್ನಡವನ್ನು ಮೂರು ಮತ್ತು ನಾಲ್ಕನೇ ತರಗತಿಗಳಲ್ಲಿ ಐಚ್ಛಿಕ ಭಾಷೆಯಾಗಿ ನಿಗದಿಪಡಿಸಲಾಗಿದೆ. ಅಲ್ಲದೆ ಐದನೇ ತರಗತಿಯಿಂದ ಕನ್ನಡವನ್ನು ಕಡ್ಡಾಯವಾಗಿ ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡಬೇಕು.

೩. ಐದರಿಂದ ಏಳನೇ ತರಗತಿಯವರೆಗೆ ಕನ್ನಡವನ್ನು ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆಯಾಗಿ (ಅಥವಾ ತೃತೀಯ ಭಾಷೆಯಾಗಿ) ಕಲಿಸುವುದು ಕಡ್ಡಾಯ.

೪. ಮಾತೃಭಾಷೆಯಾಗಿ ಕಲಿಯುವ ಎಲ್ಲ ಭಾಷೆಗಳಿಗೂ ಸಮಾನ ಸ್ಥಾನಮಾನ ಕಲ್ಪಿಸಲಾಗಿದೆ.

೫. ಒಂದು ಮತ್ತು ಎರಡನೇ ತರಗತಿಯಲ್ಲಿ ಕನ್ನಡವನ್ನು ಕಲಿಯದ ಮಕ್ಕಳಿಗೆ ಕನ್ನಡ ಭಾಷೆಯನ್ನು ಪರಿಚಯಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

೬. ಐದನೇ ತರಗತಿಯಿಂದ ಕನ್ನಡ, ಇಂಗ್ಲಿಶ್, ಉರ್ದು, ಮರಾಠಿ, ತಮಿಳು, ಹಿಂದಿ ಸಂಸ್ಕೃತ ಮತ್ತು ಅರಾಬಿಕ್ ಭಾಷೆಗಳನ್ನು ತೃತೀಯ ಭಾಷೆಯಾಗಿ, ಅಧ್ಯಯನ ಮಾಡುವ ಸೌಲಭ್ಯ ಕಲ್ಪಿಸಲಾಗಿದೆ.

೨೦೦೨ ರಲ್ಲಿ ಹೊರಡಿಸಿದ ಕರ್ನಾಟಕ ಸರ್ಕಾರದ ಆದೇಶದಲ್ಲಿ ಭಾಷಾ ಅಧ್ಯಯನ ಯೋಜನೆ ಹೀಗಿದೆ.

೧. ಒಂದರಿಂದ ಎರಡನೇ ತರಗತಿಗೆ

ಒಂದು ಮತ್ತು ಎರಡನೇ ತರಗತಿಯಲ್ಲಿ ಕಲಿಯಬಹುದಾದ ಭಾಷೆಗಳು

೧. ಕನ್ನಡ
೨. ತಮಿಳು
೩. ತೆಲುಗು
೪. ಹಿಂದಿ
೫. ಮರಾಠಿ
೬. ಉರ್ದು
೭. ಇಂಗ್ಲಿಶ್ (ಇವುಗಳಲ್ಲಿ ಯಾವುದಾದರೂ ಒಂದು ಭಾಷೆ)

೨. ಮೂರರಿಂದ ನಾಲ್ಕನೇ ತರಗತಿಗೆ

ಮೂರು ಮತ್ತು ನಾಲ್ಕನೇ ತರಗತಿಯಲ್ಲಿ ಕಲಿಯಬಹುದಾದ ಭಾಷೆಗಳು

೧. ಕನ್ನಡ
೨. ತಮಿಳು
೩. ತೆಲುಗು
೪. ಹಿಂದಿ
೫. ಮರಾಠಿ
೬. ಉರ್ದು
೭. ಇಂಗ್ಲಿಶ್ (ಇವುಗಳಲ್ಲಿ ಯಾವುದಾದರೂ ಒಂದು ಭಾಷೆ)

ಒಂದು ಮತ್ತು ಎರಡನೇ ತರಗತಿಯಲ್ಲಿ ಕನ್ನಡ ಭಾಷೆಯನ್ನು ಕಲಿಯುವ ಮಕ್ಕಳು ಮೂರನೇ ತರಗತಿಯಿಂದ ಕನ್ನಡ ಭಾಷೆಯನ್ನು ಕಲಿಯಬಹುದು.

೩. ಐದು, ಆರು ಮತ್ತು ಏಳನೇ ತರಗತಿಗೆ

೧. ಪ್ರಥಮ ಭಾಷೆ

ಈ ಭಾಷೆಗಳಲ್ಲಿ ಯಾವುದಾದರೂ ಒಂದು ಭಾಷೆ.

೧. ಕನ್ನಡ
೨. ತಮಿಳು
೩. ತೆಲುಗು
೪. ಹಿಂದಿ
೫. ಮರಾಠಿ
೬. ಉರ್ದು
೭. ಇಂಗ್ಲಿಶ್ (ಇವುಗಳಲ್ಲಿ ಯಾವುದಾದರೂ ಒಂದು ಭಾಷೆ)

೨. ದ್ವಿತೀಯ ಭಾಷೆ (ಪ್ರಥಮ ಭಾಷೆಯನ್ನಾಗಿ ಆರಿಸಿದ್ದನ್ನು ಬಿಟ್ಟು)

೧. ಕನ್ನಡ
೨. ಇಂಗ್ಲಿಶ್

೩. ತೃತೀಯ ಭಾಷೆ (ಮೇಲೆ ಆರಿಸಿದ ಎರಡು ಭಾಷೆಗಳನ್ನು ಬಿಟ್ಟು)

೧. ಕನ್ನಡ
೨. ತಮಿಳು
೩. ತೆಲುಗು
೪. ಸಂಸ್ಕೃತ
೫. ಹಿಂದಿ
೬. ಮರಾಠಿ
೭. ಉರ್ದು
೮. ಇಂಗ್ಲಿಶ್
೯. ಅರೇಬಿಕ್

ಪ್ರಸ್ತುತ ಸಂದರ್ಭದಲ್ಲಿ (೨೦೦೪-೦೫ನೇ ಸಾಲಿನ) ಉರ್ದು ಭಾಷಿಕ ಮಕ್ಕಳ ಭಾಷಾ ಅಧ್ಯಯನ ಯೋಜನೆ ಈ ಕೆಳಕಂಡಂತಿದೆ.

೧	೧ ರಿಂದ ೨ನೇ ತರಗತಿವರೆಗೆ	ಉರ್ದು ಒಂದು ಭಾಷೆ
೨	೩ ರಿಂದ ೪ನೇ ತರಗತಿವರೆಗೆ	ಉರ್ದು ಪ್ರಥಮ ಭಾಷೆ ಕನ್ನಡ ದ್ವಿತೀಯ ಭಾಷೆ
೩	೫ ರಿಂದ ೭ನೇ ತರಗತಿಯವರೆಗೆ	ಉರ್ದು ಪ್ರಥಮ ಭಾಷೆ ಇಂಗ್ಲಿಶ್ ದ್ವಿತೀಯ ಭಾಷೆ ಕನ್ನಡ ತೃತೀಯ ಭಾಷೆ
೪	೮ ರಿಂದ ೧೦ನೇ ತರಗತಿ	ಉರ್ದು ಪ್ರಥಮ ಭಾಷೆ ಇಂಗ್ಲಿಶ್ ದ್ವಿತೀಯ ಭಾಷೆ ಕನ್ನಡ ತೃತೀಯ ಭಾಷೆ.

ಈ ಮೇಲಿನಂತೆ ಕರ್ನಾಟಕದಲ್ಲಿ ಉರ್ದು ಮಾತೃಭಾಷಿಕ ಮಕ್ಕಳು ಕನ್ನಡ ವಿಷಯವನ್ನು ದ್ವಿತೀಯ/ತೃತೀಯ ಭಾಷೆಯನ್ನಾಗಿ ಅಭ್ಯಾಸ ಮಾಡುವರು.

ಕನ್ನಡ ಭಾಷೆ

ಕನ್ನಡ ಭಾಷೆಯು ಮೂಲತಃ ದ್ರಾವಿಡ ಭಾಷಾ ಕುಟುಂಬದಿಂದ ಬಂದಿದ್ದು 'ಅದು ದಕ್ಷಿಣ ದ್ರಾವಿಡ ಭಾಷಾಗುಂಪಿನ ಮಹತ್ವದ ಭಾಷೆ. ಮೂಲ ದಕ್ಷಿಣ ದ್ರಾವಿಡ ಭಾಷಾಶಾಖೆಯಿಂದ ಕನ್ನಡ ಭಾಷೆ ಕ್ರಿ.ಶ. ಪೂ. ೫ ರಿಂದ ೪ನೇ ಶತಮಾನದ ವೇಳೆಗೆ ಸ್ವತಂತ್ರವಾಯಿತೆಂದು ದ್ರಾವಿಡ ಭಾಷಾವಿಜ್ಞಾನಿಗಳ ಅಭಿಪ್ರಾಯ. ಅನಂತರ ಮಹಾಭಾರತದ ಬೀಷ್ಮಪರ್ವ ಸಂಸ್ಕೃತದ ಮೃಚ್ಛಕಟಕ ನಾಟಕ ತಮಿಳಿನ ಶಿಲಪ್ಪದಿಗಾರಂ ಇತ್ಯಾದಿಗಳಲ್ಲಿ ಕನ್ನಡ ಕರ್ನಾಟಕದ ಉಲ್ಲೇಖಗಳನ್ನು ಕಾಣುತ್ತೇವೆ. ಕ್ರಿ.ಶ. ಎರಡನೆಯ ಶತಮಾನದ ಬಕ್ಸಿ ರಿಂಕೆಸ ಪೇಪಿರಸ್‌ನ ಗ್ರಿಕ್ ಪ್ರಹಸನದಲ್ಲಿ ಕನ್ನಡ ಪದಗಳು ಕಂಡುಬರುವುದು'.[೧೯] ಇಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕ ಇವು ಮೂರು ಒಂದಕ್ಕೊಂದು ಸಾಮ್ಯತೆಗಳು ಮತ್ತು ಸಂಬಂಧಗಳಿರುವ ಪದಗಳು. ಇವು ಭಾಷೆ ಸೂಚಕವಾಗಿ, ಜನಾಂಗವಾಗಿ ಮತ್ತು ಪ್ರದೇಶ ಸೂಚಕವಾಗಿ ಬಳಕೆಯಲ್ಲಿವೆ. ಕನ್ನಡ ಭಾಷೆಯ ಲಿಪಿ. ಅಶೋಕ ಚಕ್ರವರ್ತಿಯ ಕಾಲದ ಬ್ರಾಹ್ಮಿಲಿಪಿ. ಕನ್ನಡ ಭಾಷೆಯನ್ನು ಮಾತನಾಡುವವರು ಕರ್ನಾಟಕದಲ್ಲಿ ಮಾತ್ರವಲ್ಲದೆ ತಮಿಳುನಾಡು, ಮುಂಬೈ, ಆಂದ್ರಪ್ರದೇಶ, ದೆಹಲಿ ಮತ್ತು ಹೊರದೇಶಗಳಲ್ಲಿ ಹಾಗೂ ಇದನ್ನು ಮುಂತಾದ ಪ್ರದೇಶದಲ್ಲಿ ಈ ಭಾಷೆ ಮಾತನಾಡುವ

ಜನರಿದ್ದಾರೆ. ಅದರಂತೆಯೇ ಕರ್ನಾಟಕದಲ್ಲಿಯು ಕೂಡ ೨೦೦೧ ರ ಜನಗಣತಿ ಪ್ರಕಾರ ವಿವಿಧ ಭಾಷೆ ಮಾತನಾಡುವ ಜನರು ಇದ್ದಾರೆ. ಉರ್ದು ಭಾಷೆಯನ್ನು ಮಾತನಾಡುವವರ ವಿವರ. .

ಪಟ್ಟಿ ೧

ಕ್ರಸಂ.	ತಾಲೂಕು	ಗಂಡಸರು	ಹೆಂಗಸರು	ಒಟ್ಟು	ಶೇ.
೦೧	ಅಫಜಲ್‌ಪುರ	೧೨,೧೮೦	೧೧,೭೪೯	೨೩,೯೨೯	೧೩.೨೮
೦೨	ಆಳಂದ	೨೦,೦೦೬	೧೯,೧೩೦	೩೯,೧೩೬	೧೩.೧೭
೦೩	ಚಿಂಚೋಳಿ	೧೭,೪೭೩	೧೭,೦೮೬	೩೪,೫೫೯	೧೫.೪೫
೦೪	ಚಿತ್ತಾಪೂರ	೩೮,೩೮೭	೩೬,೭೫೮	೭೫,೧೪೫	೨೦.೪೮
೦೫	ಗುಲಬರ್ಗಾ	೯೭,೮೨೦	೯೦,೧೬೮	೧,೮೭,೯೮೮	೨೭.೮೨
೦೬	ಜೇವರ್ಗಿ	೧೮,೭೯೨	೧೮,೨೪೧	೩೭,೦೩೩	೧೫.೭೪
೦೭	ಸೇಡಂ	೧೩,೨೮೦	೧೩,೩೩೯	೨೬,೬೧೯	೧೩.೫೯
೦೮	ಶಹಾಪೂರ	೨೨,೨೫೧	೨೧,೯೩೭	೪೪,೧೮೮	೧೫.೦೫
೦೯	ಸುರಪುರ	೧೯,೬೫೫	೧೯,೪೭೮	೩೯,೧೩೩	೧೧.೬೨
೧೦	ಯಾದಗಿರ	೨೧,೭೭೮	೨೧,೬೦೦	೪೩,೩೭೮	೧೩.೩೧
ಒಟ್ಟು	೨೮೧೬೨೨	೨,೬೯,೪೮೬	೫,೫೧,೧೦೮	0.00	

ಉರ್ದು ಭಾಷೆ

'ಉರ್ದು ಭಾಷೆಯು ಮೂಲತಃ ಇಂಡೋ ಆರ್ಯನ್ ಕುಟುಂಬದಿಂದ ಬಂದಿದ್ದು; ಮಹ್ಮದೀಯ ಅರಸರು ಉರ್ದು ಎನ್ನುವ ಪದವನ್ನು ಸೈನ್ಯಕ್ಕೆ ಬಳಸುತ್ತಿದ್ದರು'.[೨೦] ಇದರ ಲಿಪಿ ಪರ್ಶಿಯನ್. ಈ ಉರ್ದು ಭಾಷೆಯನ್ನು ಮಾತನಾಡುವವರು ಕರ್ನಾಟಕದಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಅಷ್ಟೇ ಅಲ್ಲದೆ ಇತರೆ ಜಿಲ್ಲೆಗಳಲ್ಲಿಯೂ ಉರ್ದು ಮಾತನಾಡುವ ಜನರಿದ್ದಾರೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಬೀದರ, ಗುಲಬರ್ಗಾ, ರಾಯಚೂರು, ಬಳ್ಳಾರಿ, ಮೈಸೂರು, ಈ ಜಿಲ್ಲೆಗಳಲ್ಲಿ ಈ ಉರ್ದು ಮಾತೃ ಭಾಷೆಯುಳ್ಳ ಜನ ಇರುವುದು ಕಂಡುಬರುವುದು. ಕರ್ನಾಟಕದ ವಿವಿಧ ಜಿಲ್ಲೆಯಲ್ಲಿ ಉರ್ದು ಭಾಷೆ ಮಾತನಾಡುವ ಜನರ ಪಟ್ಟಿಯನ್ನು ನೋಡಬಹುದು.

ಪಟ್ಟಿ ೨

ಕ್ರ.ಸಂ.	ಜಿಲ್ಲೆಯ ಹೆಸರು	ಉರ್ದು ಭಾಷೆ ಮಾತನಾಡುವವರ ಜನ ಸಂಖ್ಯೆ
೧	ಬೀದರ	೪,೪೦,೯೫೧
೨	ಗುಲಬರ್ಗಾ	೫,೫೧,೧೭೧
೩	ರಾಯಚೂರು	೨,೨೮,೬೫೨
೪	ಬಳ್ಳಾರಿ	೨೫,೭೮೦೬
೫	ಕೊಪ್ಪಳ	೧,೩೭,೧೭೪
೬	ಬೆಳಗಾಂವ	೪,೪೦,೮೩೬
೭	ಧಾರವಾಡ	೩,೧೫,೧೭೭
೮	ಗದಗ	೧,೨೬,೨೩೨
೯	ದಾವಣಗೇರಿ	೨,೨೬,೭೦೮
೧೦	ಹಾವೇರಿ	೨,೫೩,೯೨೭
೧೧	ಉತ್ತರ ಕನ್ನಡ	೧,೬೧,೫೭೪
೧೨	ದಕ್ಷಿಣ ಕನ್ನಡ	೪,೧೮,೯೦೪
೧೩	ಕೊಡಗು	೭೮,೪೬೬
೧೪	ಮೈಸೂರು	೨,೩೪,೩೦೨
೧೫	ಚಿಕ್ಕಮಗಳೂರು	೯೪,೪೨೯
೧೬	ಹಾಸನ	೧,೦೪,೭೩೦
೧೭	ಚಿತ್ರದುರ್ಗ	೧,೦೯,೪೧೨
೧೮	ಬೆಂಗಳೂರು	೮,೭೪,೬೦೦
೧೯	ಬೆಂಗಳೂರು ಗ್ರಾಮಾಂತರ	೧,೭೦,೫೭೦
೨೦	ವಿಜಾಪೂರ	೨,೯೪,೪೯೧
೨೧	ಬಾಗಲಕೋಟ	೧,೮೪,೦೧೩
೨೨	ಉಡುಪಿ	೮೩,೦೫೯
೨೩	ಮಂಡ್ಯ	೬೯,೮೯೦
೨೪	ಕೋಲಾರ	೨,೯೮,೭೦೭
೨೫	ತುಮಕೂರು	೨,೧೧,೭೩೨
೨೬	ಶಿವಮೊಗ್ಗ	೨,೦೦,೯೭೯
೨೭	ಚಾಮರಾಜ ನಗರ	೩೯,೭೬೪

ಉರ್ದು ಭಾಷೆಯ ಐತಿಹಾಸಿಕ ಹಿನ್ನೆಲೆ

ಉರ್ದು ಭಾಷೆ ಬೇರೆ ದೇಶದಿಂದ ಬಂದ ಭಾಷೆಯಲ್ಲ. ಇದು ಅಪ್ಪಟ ಭಾರತೀಯ ಭಾಷೆ. 'ಉರ್ದು ಭಾಷೆಯ ತವರು ಮನೆ ದಕ್ಷಿಣ ಭಾರತ'[೨೧]. ಅದರಲ್ಲಿ 'ವಿಶೇಷವಾಗಿ ಉರ್ದು ಭಾಷೆ ಕರ್ನಾಟಕದಲ್ಲಿಯೇ ಜನ್ಮತಾಳಿತು ಎಂದರೆ ಬಹುಶಃ ಅನೇಕರಿಗೆ ಆಶ್ಚರ್ಯವಾದೀತು!'[೨೨]. ಆದರೆ 'ದಿಲ್ಲಿಯ ಖಡಿಬೋಲಿ ಎಂಬ ಉಪಭಾಷೆಯನ್ನು ಆಧರಿಸಿ ಕ್ರಿ.ಶ.ಸು. ೧೨ನೇಯ ಶತಮಾನದ ಉತ್ತರಾರ್ದದಲ್ಲಿ ದಿಲ್ಲಿ ಪ್ರದೇಶದ ಮುಸ್ಲಿಂ ಜನಾಂಗದವರು ಪೇಟೆಯ "ಉಪಭಾಷಾ" ಸ್ವರೂಪದಲ್ಲಿ ಮೊದಲು ಉರ್ದುವಿನ ಜನನಕ್ಕೆ ಕಾರಣರಾದರು.'[೨೩]. ಈ ಉರ್ದು ಭಾಷೆ ಘಿಜ್ನಿ ಸೈನ್ಯದಲ್ಲಿ ೧೦೨೭ರಲ್ಲಿ ಮೊಟ್ಟ ಮೊದಲು ಬಳಕೆಯಾಯಿತು. 'ಲಾಹೋರದಲ್ಲಿ ನೆಲೆಸಿದಾಗ ಈ ಭಾಷೆಯು ಅಸ್ತಿಭಾರವಾಯಿತು.'[೨೪] 'ಖಿಲ್ಜಿ ದಾಳಿಗಳ (೧೨೯೪-೧೩೧೧) ಮೂಲಕ ಈ ಹೊಸ ಭಾಷೆ ಗುಜರಾತಿನ ದಕ್ಷಿಣ ಭಾರತಕ್ಕೆ ಬಂತು'[೨೫] ಎಂಬ ಅಭಿಪ್ರಾಯಗಳು ಇವೆ. ಫಾರಸಿ ಮತ್ತು ಅರೆಬಿಕ್ ಇವು ಮುಸ್ಲಿಂರ ಮೂಲ ಭಾಷೆಗಳು. 'ಈ ಭಾಷೆಗಳೊಂದಿಗೆ ಖಡಿಬೋಲಿ ಸಮ್ಮಿಶ್ರಣ ಹೊಂದಿದಾಗ ಉಂಟಾದ ವಿಶಿಷ್ಟ ಭಾಷೆಯೇ ಉರ್ದು ಎನ್ನುತ್ತಾರೆ.'[೨೬] ಉರ್ದುವಿನ ಮೂಲಭೂತ ನುಡಿ ರೇಖ್ತಾ. 'ಫಾರ್ಸಿ ಮತ್ತು ಅರಬ್ಬಿ ಪದಗಳು ದಕ್ಷಿಣದ ಕನ್ನಡ ಮರಾಠಿ ಪದಗಳೊಡನೆ ಸಂಪರ್ಕ ಹೊಂದಿ ಇವೆಲ್ಲವುಗಳ ಸಮ್ಮಿಶ್ರಣದ ವಿಶಿಷ್ಟ ರೇಖ್ತಾ ಎಂಬ ಮೂಲ ಉರ್ದು ಭಾಷೆ ಯಾವ ಲಿಪಿಯನ್ನು ಬಳಸಿಕೊಳ್ಳದೆ; ಸುಮಾರು ಎರಡು ಶತಮಾನಗಳವರೆಗೂ ಕರ್ನಾಟಕದ ಬಹುಭಾಗಗಳ ಜನರ ವ್ಯವಹಾರ ಭಾಷೆಯಾಗಿತ್ತು.'[೨೭] .

ಕನ್ನಡದ ವಿಶಾಲ ಶಬ್ದ ಸಂಪತ್ತಿನಲ್ಲಿ "ರೆಖ್ತಾ" ಪದಗಳ ಬಳಕೆ ಅವಶ್ಯಕವೆನಿಸಿದ ಆ ಕಾಲದಲ್ಲಿ ಅರಬ್ಬಿ ಮತ್ತು ಪಾರ್ಸಿ ಶಬ್ದಗಳನ್ನು ಕೇಳಿದಾಗ ಅರೇಬಿಯಾ ಮತ್ತು ಇರಾನಿನ ತುಣುಕುಗಳನ್ನು ಎತ್ತಿ ತಂದು ಕರ್ನಾಟಕದಲ್ಲಿ ಇದ್ದ ಮುಸ್ಲಿಮರಿಗೆ ಉರ್ದು ಮಾತೃ ಭಾಷೆವಾಗಿರಬೇಕು. ಕರ್ನಾಟಕದಲ್ಲಿ "ರೇಖ್ತಾ" ಬೆಳೆದು ಬಂದ ರೀತಿ ನಿಜಕ್ಕೂ ಸ್ವಾರಸ್ಯವಾಗಿದೆ'[೨೮] .

ಬಹಮನಿ ಹಾಗೂ ಆದಿಲ್‌ಶಾಹಿ ಅರಸರ ಸೈನಿಕರು ಪ್ಯಾಲೆಸ್ಟೈನ್ ಅರೇಬಿಯಾ ಇರಾಕ್ ಹಾಗೂ ಇರಾಣ ದೇಶಗಳಿಂದ ಬಂದವರಾಗಿದ್ದರಿಂದ ಅವರು ದಕ್ಷಿಣದ ಜನರೊಡನೆ ವ್ಯವಹರಿಸುವುದರಿಂದ "ರೇಖ್ತಾ" ಉದಯಿಸಿತು. "ರೇಖ್ತಾ" ದಕ್ಷಿಣ ಭಾರತದ ಮುಸಲ್ಮಾನರ ಭಾಷೆಯಾಗಿ ಪಾರ್ಸಿ ಭಾಷೆಯ ಖರೋಷ್ಠಿ ಲಿಪಿಯನ್ನು ಬಳಸತೊಡಗಿದಾಗ "ದಖ್ಖನಿ ಎಂದಿದನ್ನು ಕರೆಯಲಾಯಿತು. 'ದಖ್ಖನಿ' ಭಾಷೆಯು ಅಕಬರ ಹಾಗೂ ಷಹಾಜಹಾನರ ಕಾಲದಲ್ಲಿ ಉತ್ತರ ಭಾರತದಲ್ಲಿ ಶುದ್ಧ ಉರ್ದುವೆನಿಸಿಕೊಂಡಿತ್ತು.'[೨೯] ಅಂತೆಯೇ ರೇಖ್ತಾ > ದಖ್ಖನಿ > ಉರ್ದು ಎಂಬುದಾಗಿ ಉರ್ದುವಿನ ಬೆಳವಣಿಗೆಯನ್ನು ನಾವು ಕಾಣುತ್ತೇವೆ.

ಕರ್ನಾಟಕದಲ್ಲಿ ಮುಸ್ಲಿಂ ಅರಸರ ಆಳ್ವಿಕೆಗೆ ಮುಂಚೆ ಕರ್ನಾಟಕದ ಮುಸಲ್ಮಾನರೆಲ್ಲ ಮೂಲತಃ ಕನ್ನಡ ಮಾತೃಭಾಷೆಯುಳ್ಳವರೇ. ಆದರೆ ಮುಸಲ್ಮಾನ ಅರಸರ ಆಳ್ವಿಕೆಯಲ್ಲಿ ಉರ್ದು ಭಾಷೆಯಿಂದ ಅವರು ಪ್ರತ್ಯೇಕ ಅಸ್ತಿತ್ವವನ್ನು ಕಂಡುಕೊಳ್ಳತೊಡಗಿದರು. ಇಲ್ಲಿ ಆಳ್ವಿಕೆ ಮಾಡಿದ ಅರಸರು ಇಲ್ಲಿಯ ಮುಸಲ್ಮಾನರ ಭಾಷೆ, ಸಂಸ್ಕೃತಿ ಎಲ್ಲದರಲ್ಲೂ ಅನೇಕ ಸುಧಾರಣೆಗಳನ್ನುಂಟು ಮಾಡಲು ಸತತವಾಗಿ ಯಶಸ್ವೀ ಪ್ರಯತ್ನವನ್ನು ನಡೆಸಿದರು. "ಕರ್ನಾಟಕದ ಮುಸ್ಲಿಮರ ಮೇಲೆ ಉರ್ದುವಿಗಿರುವ ಹಿಡಿತ ನಿಜಕ್ಕೂ ವಿಧಿಯ ಅಣಕ !.

'ಮಲ್ಲಿಕ್‌ಕಾಫೂರನ ದಂಡಯಾತ್ರೆಯ ಮೂರು ಶತಮಾನಗಳ ಮುಂಚೆಯೇ ಕರ್ನಾಟಕದಲ್ಲಿ ಮುಸ್ಲಿಂರಿದ್ದರೆಂಬುವುದು ಸರ್ವವಿದಿತ. ಆಗ ಅರಬ್ಬೀ ಮತ್ತು ಇನ್ನಿತರ ಮತ ಪ್ರಚಾರಕರು ಈ ವೇಳೆಗೆ ಕರ್ನಾಟಕದ ಅನೇಕ ಭಾಗಗಳಲ್ಲಿ ಇಸ್ಲಾಂ ಮತದ ಪ್ರಸಾರ ಮಾಡಿದ್ದರು. ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಕಲಿತು ಕನ್ನಡದಲ್ಲಿಯೇ ಇಸ್ಲಾಂ ದರ್ಮದ ದೀಕ್ಷೆಯನ್ನಿತ ಆ ಮಹಾಪುರುಷರ ವಿಚಾರಮಂಥನ ಪರಿಶ್ರಮ ಹಾಗೂ ವಾಣೀವಿಲಾಸ ವೈಭವದಿಂದ ಕರ್ನಾಟಕದಲ್ಲಿ ಅನೇಕ ಜನರು ಇಸ್ಲಾಂ ಮತವಲಂಬಿಗಳಾದರು. ಆಗ ಈ ಉರ್ದು ಭಾಷೆ ಇನ್ನೂ ಹುಟ್ಟಿರಲಿಲ್ಲ ಕನ್ನಡವೇ ಅವರ ಮಾತೃ ಭಾಷೆಯಾಗಿತ್ತು' [೩೦]. 'ಆದರೆ ಅನಂತರ ಉತ್ತರ ಕರ್ನಾಟಕದಲ್ಲಿ ಸ್ಥಾಪಿತವಾದ ಬಹಮನಿ ಹಾಗೂ ಆದಿಲ್‌ಶಾಹಿ ರಾಜ್ಯದ ಆಳರಸರ ರಾಜಕಾರಣದ ಬಿರುಗಾಳಿಯಲ್ಲಿ ಸಿಲುಕಿದ ಸ್ಥಳೀಯ ಮುಸಲ್ಮಾನರು ತಮ್ಮ ವೈಶಿಷ್ಟ್ಯವನ್ನು ಕಳೆದುಕೊಂಡರು.'[೩೧] 'ಬಹಮನಿ ರಾಜ್ಯ ಸ್ಥಾಪಿತ ವಾಗುವುದಕ್ಕೆ ಮುಂಚೆ ಕನ್ನಡವೇ ಸ್ಥಳೀಯ ಮುಸಲ್ಮಾನರ ಭಾಷೆಯಾಗಿತ್ತು.'[೩೨] ೧೫–೧೬ ನೇಯ ಶತಮಾನದ ವೇಳೆಗೆ ಮೊದಲ ಬಾರಿಗೆ ಉರ್ದು ಭಾಷೆ ದಕ್ಷಿಣದಲ್ಲಿಯೇ ಸಾಹಿತ್ಯಿಕ ಭಾಷೆಯ ಸ್ಥಾನಮಾನವನ್ನು ಗಳಿಸಿತ್ತು.

ಇದೇ ವೇಳೆ ಕರ್ನಾಟಕದಲ್ಲಿ ಬೆಳವಣಿಗೆಯಾದ ದಖ್ಖನಿ ಭಾಷಾ ಕುಸುಮ ಇದುವರೆಗೂ ಕನ್ನಡವೇ ಮಾತೃ ಭಾಷೆಯಾಗಿ ಹೊಂದಿದ್ದ ಕರ್ನಾಟಕದ ಮುಸಲ್ಮಾನರಲ್ಲಿ ಭಾಷಾ ವಿಪರ್ಯಾಸವಾಗುವುದಕ್ಕೆ ಕಾರಣವಾಯಿತು. ಸ್ಥಳೀಯ ಮುಸಲ್ಮಾನರು ಈಗ ದಖ್ಖನಿ ಭಾಷೆಯಲ್ಲಿ ಮಾತನಾಡತೊಡಗಿದರು. ಇನ್ನೂ ಅನೇಕ ಕಾರಣಗಳು ಅವರಲ್ಲಿ ಭಾಷೆಯ ಬದಲಾವಣೆಯಾಗುವುದಕ್ಕೆ ನೆರವು ನೀಡಿದವು. ರಾಜ್ಯಾಡಳಿತ ನಿಯಂತ್ರಣ ಮುಸ್ಲಿಂ ಅರಸರ ಹಾಗೂ ಮುಸ್ಲಿಂ ಅಧಿಕಾರಿಗಳ ಕೈಯಲ್ಲಿದ್ದುದರಿಂದ ಅವರ ಪ್ರೀತಿಯನ್ನು ಗಳಿಸಲು ಕರ್ನಾಟಕದ ಮುಸಲ್ಮಾನರು ದಖ್ಖನೀ ಉರ್ದುವಿನ ಮೊರೆಹೊಕ್ಕರು. ಹೊಸದಾಗಿ ಜಾರಿಗೆ ಬಂದ 'ದಖ್ಖನೀ ಭಾಷೆಯನ್ನು ಬಳಸುವ ಉತ್ಕಟಾಕಾಂಕ್ಷೆಯಲ್ಲಿ ಅವರು ತಮ್ಮ ಮಾತೃಭಾಷೆಯಾದ ಕನ್ನಡಕ್ಕೆ ತಿಲಾಂಜಲಿ ಇತ್ತರು' [೩೩]

ಈಗ ಉರ್ದು ಭಾಷೆ ಭಾರತದಲ್ಲಿ ಜಮ್ಮುಕಾಶ್ಮೀರ ರಾಜ್ಯದ ರಾಜ ಭಾಷೆಯಾಗಿ ಸಂವಿಧಾನದಿಂದ ಪರಿಗಣಿಸಲ್ಪಟ್ಟಿದೆ. ಇನ್ನೀತರ ರಾಜ್ಯಗಳಲ್ಲಿಯೂ ಸೇರಿ ಒಟ್ಟು ಸುಮಾರು ಎರಡು ಕೋಟಿ ಜನರಿಂದ

ಭಾರತದಲ್ಲಿ ಉರ್ದು ಬಳಕೆಯಾಗುತ್ತಿದೆ. ಜಗತ್ತಿನಲ್ಲಿಯೇ ಪ್ರಪ್ರಥಮವಾಗಿ ಕ್ರಿ.ಶ. ೧೯೧೫ರಲ್ಲಿ ದಕ್ಷಿಣ ಭಾರತದ ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯವು ಉರ್ದು ಭಾಷೆಯನ್ನು ಪ್ರಾಥಮಿಕ ಮಟ್ಟದಿಂದ ವಿಶ್ವವಿದ್ಯಾಲಯದವರೆಗಿನ ಎಲ್ಲ ಹಂತಗಳಲ್ಲಿಯೂ ಶಿಕ್ಷಣ ಮಾಧ್ಯಮವನ್ನಾಗಿ ಮಾಡಿದ್ದು, ಉರ್ದು ಭಾಷೆಯ ಅಧ್ಯಯನ ಸುವರ್ಣಯುಗವನ್ನು ಕಾಣುವಂತಾಯಿತು. ಕ್ರಿ.ಶ. ೧೯೧೬ರ ವೇಳೆಗೆ ಪಾರಿಭಾಷಿಕ ಪದಗಳನ್ನು ಸಿದ್ಧಪಡಿಸುವ ಹಾಗೂ ಉಪಯುಕ್ತ ಪುಸ್ತಕಗಳನ್ನು ಉರ್ದುವಿಗೆ ಭಾಷಾಂತರಿಸುವ ಕಾರ್ಯ ಆರಂಭವಾಯಿತು. ಹೀಗಾಗಿ ಲಕ್ಷಾಂತರ ಹೊಸ ಶಬ್ದಗಳು ಉರ್ದುವಿನ ಉಡಿಯನ್ನು ತುಂಬಿದವು. ಅಷ್ಟೇ ಅಲ್ಲದೆ ೨೦೦೨ ರಲ್ಲಿ ಕನ್ನಡ ದೂರದರ್ಶನದಲ್ಲಿ ಉರ್ದು ಭಾಷೆಯ ವಾರ್ತೆಗಳು ಪ್ರಸಾರ ಮಾಡಬೇಕೆಂಬ ಬೇಡಿಕೆಯನ್ನು ಉರ್ದು ಮಾತೃಭಾಷೆಯುಳ್ಳವರು ಕರ್ನಾಟಕ ಸರ್ಕಾರದ ಮುಂದಿಟ್ಟಿದ್ದರು. ಆದರೆ ಇದು ಕೆಲವು ತಾಂತ್ರಿಕ ಕಾರಣಗಳಿಂದ ನೆರವೇರಲಿಲ್ಲ.

'ಉರ್ದು ಬೆಳವಣಿಗೆ ಕ್ರಿ.ಶ. ೧೮೦೦ ರಿಂದ ಹಿಂದಿ ಭಾಷೆಯ ಜೊತೆ ಜೊತೆಗೆ ಮುಂದುವರಿದುದು ಸ್ಪಷ್ಟವಾಗಿದೆ. ಹಿಂದಿ ಹಾಗೂ ಉರ್ದು ಎರಡೂ ಖಡಿಬೋಲಿಯಿಂದಲೇ ಬೆಳವಣಿಗೆ ಹೊಂದಲಾರಂಭಿಸಿದ್ದರಿಂದ ಉರ್ದುವಿನಲ್ಲಿಯ ಫಾರಸಿ ಅರೇಬಿಕರ ಮುಂತಾದ ಭಾಷೆಗಳ ಪ್ರಭಾವದಿಂದ ವ್ಯಾಕರಣಾಂಶಗಳನ್ನು ಬದಿಗೆ ಸರಿಸಿದರೆ ಹಿಂದಿ ಭಾಷೆಯ ಉಪಭಾಷೆಯೇ ಉರ್ದು ಎನ್ನುವಂತಾಗುತ್ತದೆ.'[೪೪] ದಕ್ಷಿಣದೊಡನೆ ಹುಟ್ಟಿ ಬೆಳೆದ ಉರ್ದು ಭಾಷೆಯ ಸಂಪರ್ಕ ಸಹಜವಾಗಿ ಕನ್ನಡದೊಡನೆ ಉಂಟಾಯಿತು. ಅದರಲ್ಲಿ ಉತ್ತರ ಕರ್ನಾಟಕದಲ್ಲಿ ಇದು ಇನ್ನೂ ದಟ್ಟವಾಗಿದೆ. ಉರ್ದುಭಾಷೆ ಸ್ವತಃ ಕಲಬೆರಕೆಯ ಭಾಷೆ ಇದರೊಡನೆಯೆ ಮರಾಠಿ ಹಿಂದಿ ಭಾಷೆಗಳ ಪ್ರಭಾವವೂ ಕನ್ನಡದ ಮೇಲಾಯಿತು. ಭಿನ್ನವರ್ಗಕ್ಕೆ ಸೇರಿದ ಈ ಭಾಷೆಗಳ ಪ್ರಭಾವ ಕನ್ನಡದ ಮೇಲೆ ಗಮನಾರ್ಹವಾಗಿ ಆಗಿದೆಯೆಂದರೂ ಕನ್ನಡದ ರಚನೆಯ ಒಳಪದರಗಳ ಮೇಲಾದ ಪ್ರಭಾವ ತೀರ ಕಡಿಮೆ.

ಕನ್ನಡ ಮತ್ತು ಉರ್ದು ಭಾಷೆಗಳ ಭಾಷಾ ಕುಟುಂಬಗಳು ಬೇರೆ ಬೇರೆ ಹಾಗೂ ಈ ಎರಡು ಭಾಷೆಗಳ ಲಿಪಿ ಕೂಡ ಬೇರೆ ಬೇರೆ ಮತ್ತು ಕನ್ನಡ ಭಾಷೆ ಬರವಣಿಗೆ ಮತ್ತು ಓದುಗಾರಿಕೆಯಲ್ಲಿ ಎಡಗಡೆಯಿಂದ ಬಲಗಡೆಗೆ ಮಾಡುತ್ತೇವೆ. ಆದರೆ ಉರ್ದು ಭಾಷೆಯು ಬರವಣಿಗೆ ಮತ್ತು ಓದುಗಾರಿಕೆ ಬಲಗಡೆಯಿಂದ ಪ್ರಾರಂಭ ಮಾಡಿ ಎಡಗಡೆಗೆ ಮುಕ್ತಾಯಗೊಳಿಸುವುದು ಕಾಣುತ್ತೇವೆ.

ಕರ್ನಾಟಕದಲ್ಲಿ ಆಡಳಿತ ಭಾಷೆಯಾಗಿ ಉರ್ದು

ಮೂಲದಲ್ಲಿ ವಂಶಸಂಬಂಧವನ್ನು ಹೊಂದಿರದ ಎರಡು ಪರಸ್ಪರ ಭಾಷೆಗಳು ರಾಜಕೀಯ ಕಾರಣದಿಂದಲೋ ಅಥವಾ ಮತ್ತಾವುದೋ ಕಾರಣದಿಂದಲೋ ಸಂಪರ್ಕ ಹೊಂದಿ ನಿರ್ದಿಷ್ಟ ಪ್ರದೇಶದಲ್ಲಿ ಪರಸ್ಪರ ಪ್ರಭಾವ ಬೀರಲು ಆರಂಭಿಸುತ್ತದೆ. ಹೊರನಾಡಿನಿಂದ ಬಂದ ಭಾಷೆ ಆಳರಸರ ಆಡಳಿತ ಭಾಷೆಯಾಗಿದ್ದರಂತೂ ಸ್ಥಳೀಯ ಭಾಷೆಯ ಮೇಲೆ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ.

ಮೊದ ಮೊದಲು ತೆಳುವಾಗಿದ್ದು, ಬರಬರುತ್ತ ಆಡಳಿತ ಭಾಷೆಯ ಪದಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬಳಕೆಗೊಳ್ಳುತ್ತ ಹೋದಂತೆ ದಟ್ಟವಾದ ಪ್ರಭಾವ ಒಡೆದು ಕಾಣಲಾರಂಭಿಸುತ್ತದೆ. ಧ್ವನ್ಯಾತ್ಮಕ, ಪದಾತ್ಮಕ, ಅರ್ಥಾತ್ಮಕ ಮುಂತಾದ ಬೇರೆ ಬೇರೆ ಘಟ್ಟಗಳಲ್ಲಿ ಕೊಡುಕೊಳುವಿಕೆ ಬಲವಾಗುತ್ತ ನಡೆಯುತ್ತದೆ. ಈ ಸಂದರ್ಭದಲ್ಲಿ ಹೆಚ್ಚಾಗಿ ಸ್ಥಳೀಯ ಭಾಷೆಯು ಅರ್ಥ ಪರಿಭಾಷೆಯು ಶಬ್ದರೂಪ ಹೊಂದಿಕೊಳ್ಳಲಾರಂಭಿಸುತ್ತವೆ. ಕೆಲವು ಸಲ ಪರಿಭಾಷೆಯ ಶಬ್ದರೂಪ ಹಾಗೂ ಅರ್ಥ ಎರಡೂ ಇದಕ್ಕಿದ್ದಂತೆ ಸ್ಥಳೀಯ ಭಾಷೆಗೆ ನುಸುಳುತ್ತವೆ. ಸ್ಥಳೀಯ ಭಾಷೆಯ ರಚನೆಗೆ ಅನುಗುಣವಾಗಿ ಧ್ವನ್ಯಾತ್ಮಕ ಬದಲಾವಣೆಗಳು ಅವಶ್ಯಸ್ಥಾನ ಪಡೆಯುತ್ತವೆ. ಆಡಳಿತ ಭಾಷೆಯ ಪ್ರಭಾವ ಸ್ಥಳೀಯ ಭಾಷೆಯ ಮೇಲಾಗಲು ಈ ಕೆಳಗಿನ ಪ್ರಮುಖ ಅಂಶಗಳು ಕಾರಣಗಳಿರುತ್ತವೆ.

೧. ಆಡಳಿತ ಭಾಷೆ : ಅನಿವಾರ್ಯ ಮಾಧ್ಯಮವಾಗುವುದರಿಂದ

೨. ಆಳುವವರ ಹಾಗೂ ಪ್ರಜೆಗಳ ಪ್ರತಿಷ್ಠೆಯನ್ನು ಹೆಚ್ಚಿಸುತ್ತವೆ ಎಂಬ ಭಾವನೆಯಿರುವುದರಿಂದ.

೩. ಆಡಳಿತಗಾರರು ತಮ್ಮ ಅನುಕೂಲತೆಗಾಗಿ ತಮ್ಮ ಭಾಷೆಯನ್ನು ಒತ್ತುವರಿಯಿಂದ ಸ್ಥಳೀಯರ ಮೇಲೆ ಹೇರುವುದು ಹಾಗೂ ಪ್ರೋತ್ಸಾಹಿಸುವುದರಿಂದ

ಆಡಳಿತ ಭಾಷೆ ಹಾಗೂ ಸ್ಥಳೀಯ ಭಾಷೆಯ ಸಂಪರ್ಕ ಹೆಚ್ಚಿದಂತೆ ಆ ಭಾಷೆಗಳಲ್ಲಿ "ಸಾಮಾನ್ಯ ತಿರಳು" ಬೆಳೆದು ಅವರೆಡೂ ಸವನ್ವಯಗೊಂಡು ಸಿದ್ಧವಾದ ಒಂದು ವಿಶಿಷ್ಟ ಉಪಬಾಷೆ ಜನಿಸುತ್ತದೆ. ಕಾಲಗತಿಸಿದಂತೆ ಹೊಸ ಬದಲಾವಣೆಗಳು ಸ್ವತಂತ್ರ ಬೆಳವಣಿಗೆಯ ವಿಶಿಷ್ಟ ಲಕ್ಷಣಗಳನ್ನು ತೋರಿಸುತ್ತ ಹೊಸ ಹೂಡಿಕೆಗೆ ಸಿದ್ದವಾಗಿ ನಿಲ್ಲುತ್ತದೆ. ಪರಭಾಷಾ ಅರಸರ ಆಳ್ವಿಕೆ ಬೇಗ ಕೊನೆಗೊಂಡರೆ ಸ್ಥಳೀಯ ಭಾಷೆಯ ಮೇಲಾಗುವ ಪ್ರಭಾವ ಅಲ್ಪ ಪ್ರಮಾಣದ್ದಾಗಿರುತ್ತದೆ. ಆಡಳಿತ ಸುಧೀರ್ಘ ಕಾಲದವರೆಗೆ ಮುಂದುವರೆದರೆ ಪ್ರಭಾವ ಭಾಷೆಯ ಅನೇಕ ಹಂತಗಳನ್ನು ದಟ್ಟವಾಗುತ್ತ ನಡೆಯುತ್ತದೆ. ಆದರೆ ಅನಂತರವೂ ಸ್ಥಳೀಯರ ಕೈಗೆ ಅಧಿಕಾರ ಸೂತ್ರ ಸೇರಿದರೆ ಕ್ರಮೇಣ ಪ್ರಭಾವಿತಗೊಂಡ ಸ್ಥಳೀಯ ಭಾಷೆ ತನ್ನ ಮೂಲ ಸ್ವರೂಪದೆಡೆಗೆ ಹೊರಳತೊಡಗುತ್ತದೆ. ಕಾಲಕ್ಕೆ ತಕ್ಕಂತೆ ಬದಲಾವಣೆಹೊಂದುತ್ತ ಹೋದರೂ ಸಂಪೂರ್ಣವಾಗಿ ತನ್ನ ಮೂಲ ಶುದ್ಧ ಸ್ವರೂಪವನ್ನು ಮಾತ್ರ ಸ್ಥಳೀಯ ಭಾಷೆಯಾಗಲೂ ಕಾಯ್ದುಕೊಳ್ಳುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಪಟ್ಟಣ ಪ್ರದೇಶದಲ್ಲೂ ಅದರಲ್ಲೂ ಬರಹದ ಭಾಷೆಯನ್ನಾಡುವ ವಿದ್ಯಾವಂತರೇ ಆಡಳಿತ ಭಾಷೆ ಹಾಗೂ ಸ್ಥಳೀಯ ಭಾಷೆಯ ಮೇಲೆ ಪ್ರಭಾವ ಬೀರಲು ಹೆಚ್ಚು ಸಹಕಾರಿಯಾಗಿ ನಿಲ್ಲುತ್ತಾರೆ. ಹಳ್ಳಿಗಳಲ್ಲಿ ವಾಸಿಸುವ ಅವಿದ್ಯಾವಂತರ ಹಾಗೂ ಅಲ್ಪಸಂಖ್ಯಾತರ ಮೇಲೆ ಪ್ರಭಾವ ದಟ್ಟವಾದರೂ ತೀರ ಸಾವಧಾನನವಾಗಿಯೂ ಹೆಚ್ಚು ಕಾಲ ಉಳಿಯುವಂತಾಗಿಯೂ ಇರುತ್ತದೆ. ಈ ಹಿನ್ನೆಲೆಯಲ್ಲಿ ಉರ್ದು ಪ್ರಭಾವ ಉತ್ತರ ಕರ್ನಾಟಕದ ಪ್ರದೇಶದಲ್ಲಿ ಅಂದರೆ ಮುಸಲ್ಮಾನ ಅರಸರ ಆಳ್ವಿಕೆಗೆ ಸಿಲುಕಿದ ಕನ್ನಡ ಪ್ರದೇಶದಲ್ಲಿ ಹೇಗಾಗಿದೆ ಎಂಬುದನ್ನು ವಿವೇಚಿಸಬಹುದು.

ಉತ್ತರ ಕರ್ನಾಟಕದ ಬೀದರ ಕಲಬುರ್ಗಿ ಹಾಗೂ ರಾಯಚೂರು ಪ್ರದೇಶಗಳು ಸುಮಾರು ೬೦೦ ವರ್ಷಗಳ ಸುದೀರ್ಘ ಅವಧಿಯಲ್ಲಿ ಮಹಮ್ಮದೀಯರ ಆಡಳಿತಕ್ಕೆ ಒಳಪಟ್ಟಿದ್ದವು. ಇಷ್ಟು ಧೀರ್ಘಾವಧಿಯವರೆಗೆ (ಕ್ರಿ.ಶ. ೧೩೪೭-೧೯೪೮) ಇನ್ನೊಂದು ಪ್ರದೇಶವು ಅವಿಚ್ಛಿನ್ನವಾಗಿ ಅನ್ಯರ ಶಾಸನದ ಅಡಿಯಲ್ಲಿ ಬದುಕನ್ನು ಮುಂದುವರೆಸಿದ ಉದಾಹರಣೆ ಸಿಕ್ಕಲಾರದು. ಈ ಪ್ರದೇಶದಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ ಹಸನ್‌ಗಂಗೂ ಬಹಮನಿಯಿಂದ ರೂಸಿಯನಾದ ನಿಜಾಮನ ಕಾಲದವರೆಗೆ ಆಡಳಿತದ ಭಾಷೆ ಉರ್ದುವಾಗಿದ್ದರಿಂದ ಹಾಗೂ ಆಳರಸರು ಅಧಿಕಾರಿಗಳು ಅಸಾಧ್ಯ ಉರ್ದು ಪ್ರೇಮಿಗಳಾಗಿದ್ದರಿಂದ ಇಲ್ಲಿಯ ಕನ್ನಡಿಗರ ಮೇಲೆ ಸಹಜವಾಗಿ ಉರ್ದು ಪ್ರಭಾವ ವಿಸ್ತರಿಸತೊಡಗಿದರು.

ಒಂದು ಕಾಲಕ್ಕೆ ರಾಷ್ಟ್ರಕೂಟ, ಚಾಲುಕ್ಯ, ವಿಜಯನಗರ ಅರಸರ ಅಚ್ಚಕನ್ನಡ ಪ್ರಭುಗಳ ನೆಲೆಬೀಡಾಗಿದ್ದ ಈ ಪ್ರದೇಶ ಪರಕೀಯ ಉರ್ದು ಭಾಷೆಯ ನೆರಳಿನಲ್ಲಿ ಉಸಿರಾಡಿರುವ ಸಂದರ್ಭವೊದಗಿತು. ಬಹಮನಿರಾಜ್ಯ ಒಡೆದು ೧೫ನೇಯ ಶತಮಾನದ ವೇಳೆಗೆ ವಿಜಾಪೂರ ಅಹ್ಮದನಗರ ಗೋಲ್ಕೊಂಡ ಬೀದರ ಮತ್ತು ಬೀರಾರ ರಾಜಧಾನಿಗಳಲ್ಲಿ ಷಾರಿ ಸುಲ್ತಾನರ ಹಿಡಿತ ಕೇಂದ್ರಿಕರಣವಾಗಿ ಬಿಗಿಗೊಂಡಿತು. ಈ ರಾಜ್ಯದ ಉದಯ ವಿಜಯನಗರ ಸಾಮಾನ್ಯ ಹಾಗೂ ಕನ್ನಡಿಗರ ನೆಲ-ಕುಲಗಳನ್ನು ಶತಮಾನಗಳವರೆಗೆ ಹೇಳ ಹೆಸರಿಲ್ಲದಂತಾಯಿತು. ಹಾಗೆಯೇ ಕನ್ನಡ ನುಡಿಯ ಅಭಿವೃದ್ಧಿಯ ಇವರ ಕಾಲದಲ್ಲಿ ಕುಂಠಿತಗೊಂಡು ಎಲ್ಲೆಲ್ಲೂ ಉರ್ದು ತನ್ನ ನೆರೆಗಳನ್ನು ಚಾಚಿತು. ಕನ್ನಡನುಡಿ ರೂಪುಗೆಡತೊಡಗಿತು. ಕಲಬುರ್ಗಿ ಬೀದರ ಜಿಲ್ಲೆಗಳ ಬಹುಭಾಗ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದರೂ ವಾಯುವ್ಯ ಹಾಗೂ ಉತ್ತರದ ಕೆಲವು ಪ್ರದೇಶ ಮರಾಠರ ವಶದಲ್ಲಿರುವುದರಿಂದ ಈ ಭಾಗದಲ್ಲಿ ಮರಾಠಿ ಭಾಷೆಯ ಪ್ರಭಾವವೂ ಆಯಿತು. ಬೀದರ ಕಲಬುರ್ಗಿ ಪ್ರದೇಶಕ್ಕಿಂತ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಉರ್ದು ಪ್ರಭಾವ ಕಡಿಮೆ ಪ್ರಮಾಣದ್ದಾಗಿದೆ. ಈ ಭಾಗಗಳಲ್ಲಿ ಮರಾಠಿಯ ಬದಲಾಗಿ ತೆಲುಗಿನ ಸಂಪರ್ಕ ಉಂಟಾಗಿದ್ದರಿಂದ ತೆಲುಗು ದ್ರಾವಿಡ ಭಾಷೆಯೇ ಆಗಿದ್ದರಿಂದ ಹೆಚ್ಚಿನ ಬದಲಾವಣೆಯೇನು ಕಂಡು ಬರುವುದಿಲ್ಲ. ಸ್ಥೂಲವಾಗಿ ಉರ್ದು ಪ್ರಭಾವದ ಪ್ರದೇಶ ಬಳ್ಳಾರಿಗಿಂತ ಬೀದರ ಹಾಗೂ ಕಲಬುರ್ಗಿ ಜಿಲ್ಲೆಗಳಲ್ಲಿ ಬಹಳ ಹೆಚ್ಚು ಹಾಗೂ ರಾಯಚೂರು ಜಿಲ್ಲೆಯ ಉತ್ತರ ಹಾಗೂ ಪೂರ್ವದ ಕೆಲವು ಭಾಗಗಳು ಸಾಧಾರಣವಾಗಿ ಕಂಡುಬರುತ್ತದೆ.

ಉರ್ದು ಭಾಷೆಯ ಸಮಾಜೋಭಾಷಿಕ ಹಿನ್ನೆಲೆ

ಮುಸ್ಲಿಮರು ಕರ್ನಾಟಕದಲ್ಲಿ ಒಂದು ಅಲ್ಪ ಸಂಖ್ಯಾಯತ ಸಮುದಾಯ. ಇವರು ತಮ್ಮ ದಿನ ನಿತ್ಯ ವ್ಯವಹಾರವನ್ನು ಕನ್ನಡ ಭಾಷೆಯ ಮೂಲಕ ವ್ಯಹರಿಸಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಕನ್ನಡ ಭಾಷೆಯನ್ನು ಕಲಿಯಲೇಬೇಕಾದ ಒತ್ತಡ ಇವರಿಗಿದೆ. ಹಾಗೆ ಕನ್ನಡ ಭಾಷೆ ಬಳಕೆ ಮಾಡುವಾಗ ಅವರ ಭಾಷೆಯ ಅನನ್ಯತೆ ಉರ್ದು ಭಾಷಿಕರ ಕನ್ನಡ ಎಂಬ ಒಂದು ಸಾಮಾಜಿಕ ಚಹರೆಯಾಗಿ

ಈಗ ನಿರ್ಮಾಣವಾಗಿದೆ. ಕರ್ನಾಟಕದಲ್ಲಿರುವ ಉರ್ದು ಭಾಷಿಕರು ನಂಬಿಕೆ ಆಚರಣೆ ಮತ್ತು ಸಂಪ್ರದಾಯ ಮತ್ತು ಸಾಂಸ್ಕೃತಿಕ ವಿಚಾರಣೆಗಳ ಮೇಲೆ ಕನ್ನಡಿಗರ ಪ್ರಭಾವ ಆಗದೆ ಕೇವಲ ಭಾಷೆಯ ಬಳಕೆಯಲ್ಲಿ ಮಾತ್ರ ಪ್ರಭಾವ ಇರುವುದನ್ನು ನೋಡಬಹುದಾಗಿದೆ. ಉರ್ಸು ಆಚರಣೆಯಲ್ಲಿ ಮಾತ್ರ ಕೂಡುಕೊಳ್ಳುವಿಕೆ ಪ್ರಕ್ರಿಯೆ ಇರುವುದನ್ನು ಕಾಣಬಹುದು. ಉರ್ದು ಭಾಷಿಕರ ಮಕ್ಕಳು ಮನೆಯ ಆವರಣದಲ್ಲಿ ಉರ್ದುವನ್ನು ಸಾರ್ವಜನಿಕ ಆವರಣದಲ್ಲಿ ಕನ್ನಡವನ್ನು ಬಳಕೆ ಮಾಡುವರು. ಉರ್ದುಭಾಷಿಕರ ಮಕ್ಕಳು ಕನ್ನಡ ಕಲಿಕೆಯನ್ನು ಮೂರನೆಯ ತರಗತಿಯವರೆಗೆ 'ಏಕ ಭಾಷಿಕ ಪರಿಸರದಲ್ಲಿ ಕಲಿತರೆ ಮೂರನೆ ತರಗತಿಯಿಂದ ತ್ರಿ ಭಾಷಿಕ ಪರಿಸರದಲ್ಲಿ ಕಲಿಯುತ್ತಾರೆ. ಇಂತಹ ಸಂದರ್ಭದಲ್ಲಿ ತಮ್ಮ ಮನೆಯ ಮಾತು ಕಲಿಯುವ ಮಾತಿನ ಮೇಲೆ ಪ್ರಭಾವ ಬೀರುವುದು ಸಹಜ. ಮುಸ್ಲಿಂ ಸಮುದಾಯವು ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಬಳಕೆ ನೆಲೆಯಲ್ಲಿ ಮಾತ್ರ ಸ್ವೀಕರಿಸಿದ್ದಾರೆ. ಅವರ ಮಕ್ಕಳು ಮಾತ್ರ ಶೈಕ್ಷಣಿಕವಾಗಿ ಕರ್ನಾಟಕದಲ್ಲಿ ಕನ್ನಡ ಕಡ್ಡಾಯವಾಗಿರುವುದರಿಂದ ಕಲಿಯುವಂತಹ ಪರಿಸ್ಥಿತಿ ಇದ್ದಂತಿದೆ. ಕನ್ನಡ ಮತ್ತು ಉರ್ದು ಲಿಪಿ ಸಹಿತ ಭಾಷೆಗಳು ಈ ಎರಡು ಭಾಷೆಗಳು ಬೇರೆ ಬೇರೆ ಭಾಷಾ ವರ್ಗಕ್ಕೆ ಸೇರಿದ್ದು ಕನ್ನಡ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದರೆ; ಉರ್ದು ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದೆ. ಈ ಹಿನ್ನೆಲೆಯಿಂದ ಈ ಎರಡು ಭಾಷೆಗಳು ರಾಚನಿಕವಾಗಿ ಬೇರೆ ಬೇರೆಯಾಗಿವೆ. ಮತ್ತು ಈ ಭಾಷೆಗಳ ರಚನೆಗಳನ್ನು ಕುರಿತು ಸಾಕಷ್ಟು ಅಧ್ಯಯನಗಳಾಗಿವೆ.

ಅಧ್ಯಯನದ ಉದ್ದೇಶ ಮತ್ತು ಪ್ರಾಮುಖ್ಯತೆ

ಅಲ್ಪಸಂಖ್ಯಾತ ಭಾಷಿಕ ಪ್ರಯೋಗಿಕರ ಮೇಲೆ ಬಹುಸಂಖ್ಯಾತ ಜನರ ಭಾಷೆಯು ಪ್ರಭಾವ ಬೀರುವುದು ಸಹಜ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿರುವ ಮುಸ್ಲಿಂ ಜನಾಂಗ ದ್ವಿಭಾಷಿಕ ಸಮುದಾಯವಾಗಿ ಅತ್ಯಂತ ಪರಿಣಾಮಕಾರಿಯಾಗಿ ವರ್ತಿಸುತ್ತಿದೆ. ಈ ಅಲ್ಪಸಂಖ್ಯಾತ ಭಾಷಿಕ ಸಮುದಾಯ ಗುಲಬರ್ಗಾ ನಗರದಲ್ಲಿ ಶೈಕ್ಷಣಿಕ ವಲಯದಲ್ಲಿ ಎಷ್ಟರಮಟ್ಟಿಗೆ ಭಾಷಾ ಬಳಕೆ ಮಾಡುತ್ತಿದೆ ಎಂಬುದು ಕುತೂಹಲ ವಿಷಯವಾಗಿದೆ. ಶೈಕ್ಷಣಿಕ ವಲಯದ ಭಾಷಾ ಬಳಕೆಯಿಂದಾಗುವ ಪರಿಣಾಮ ಮತ್ತು ಅದರ ಪ್ರಯೋಜನವನ್ನು ವಿಶ್ಲೇಷಿಸುವುದೇ ಪ್ರಸ್ತುತ ಅಧ್ಯಯನದ ಉದ್ದೇಶ.

ಭಾಷೆ ಸಂವಹನ ಮಾಧ್ಯಮ ಇದು ಚಲನಶೀಲಗುಣವನ್ನು ಹೊಂದಿದೆ. ನಾವು ಪ್ರಾಚೀನ ಕಾಲದಿಂದ ನೋಡಿದಾಗ ಭಾಷೆ ಬದಲಾವಣೆಯ ರೀತಿ ಗಮನಿಸಿದರೆ ಇದು ಕಾಲದಿಂದ ಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ ಬದಲಾವಣೆಯ ರೀತಿಯನ್ನು ನಾವು ಕಾಣುತ್ತೇವೆ. ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷಾ ಪಠ್ಯ ರಚನೆಯಲ್ಲಿಯೂ ಕೂಡ ಅನೇಕ ಬದಲಾವಣೆಯ ಅಂಶಗಳನ್ನು ನಾವು ಕಾಣುತ್ತೇವೆ. ಕಾರಣ ಭಾಷಾ ಬದಲಾವಣೆ ಮತ್ತು ಸರಳೀಕರಣ ಇವೆರಡನ್ನು ದೃಷ್ಟಿಯಲ್ಲಿಟ್ಟುಕೊಂಡು ಕನ್ನಡ ಭಾಷಾ ಪಠ್ಯ ರಚನೆಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ದ್ವಿತೀಯ/

ತೃತೀಯ ಭಾಷಾ ಪಠ್ಯರಚನೆಗಳು ಕೂಡ ಹಲವಾರು ಬದಲಾವಣೆ ಗುಣಗಳನ್ನು ಹೊಂದಿ ರಚನೆಯಾದರು ಪ್ರಸ್ತುತ ಬೋಧನೆ ಮತ್ತು ಕಲಿಕೆಗಳು ನೋಡಿದರೆ ಇವುಗಳಲ್ಲಿ ಎಲ್ಲೋ ಒಂದು ಕಡೆ ಸಮಸ್ಯೆ ಇದೆ ಎನ್ನುವುದು ನಮಗೆ ತಿಳಿಯುವುದು.

ಕಲಬುರ್ಗಿ ಕನ್ನಡವನ್ನು ಕುರಿತು ಆರ್. ಮಹಾದೇವ, ಯು.ಪಿ. ಉಪಾಧ್ಯಾಯ, ಭ.ಮಲ್ಲಿಕಾರ್ಜುನ, ಸಂಗಮೇಶ ಸವದತ್ತಿಮಠ, ಡಿ.ಕೆ. ಭೀಮಸೇನರಾವರವರು, ಪಿ. ಮಹಾದೇವಯ್ಯ ಅವರು ಸಾಮಾಜಿಕ ಉಪಭಾಷೆಯೆಂದು ಉರ್ದುಭಾಷಾ ಪ್ರಭಾವಿತಪ್ರಬೇಧವೆಂಬ ನಿಟ್ಟಿನಿಂದ ನೋಡಿ ಸಂಶೋಧನಾತ್ಮಕ ಕೃತಿ ಮತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. ಸಂಗಮೇಶ ಸವದತ್ತಿ ಮಠರು "ಕಲಬುರ್ಗಿ ಮುಸಲ್ಮಾನರ ಕನ್ನಡ" ಎಂಬ ಲೇಖನವನ್ನು ಕಲಬುರ್ಗಿ ನಗರದ ಮುಸ್ಲಿಂರು ಮಾತನಾಡುವ ಕನ್ನಡವನ್ನು ಕುರಿತು ವರ್ಣಿಸಿದ್ದಾರೆ. ಕನ್ನಡ ಭಾಷೆಯ ಮೇಲೆ ಉರ್ದುವಿನ ಪ್ರಭಾವ ಎಂಬ ಲೇಖನವನ್ನು ಶ್ರೀ ಎಂ. ಪಜ್ಲುಲ್ ಹಸನ್ ಬರೆದಿದ್ದಾರೆ. ಹೀಗೆ ಹೈದ್ರಾಬಾದ ಕರ್ನಾಟಕದ ಮುಸ್ಲಿಂ ಜನಾಂಗದ ಭಾಷೆ ದಖ್ಖನಿ ಉರ್ದು ಈ ದಖ್ಖನಿ ಉರ್ದುವಿನ ಪ್ರಭಾವವನ್ನು ಕುರಿತು ಈಗಾಗಲೇ ಬಂದಿರುವ ಲೇಖನಗಳು ಪರಿಚಯ ಮಾಡಿಕೊಡುತ್ತವೆ ವಿನಹ ಈ ಮಾದರಿಯ ಅಧ್ಯಯನಗಳು ಆಗಿಲ್ಲ.

ಈ ವಿಷಯವನ್ನು ಕುರಿತು ಪ್ರತ್ಯೇಕವಾದಂತಹ ಅಧ್ಯಯನ ನಡೆದಿಲ್ಲ. ಈ ಕುರಿತು ಕೇವಲ ಕೆಲವೊಂದು ಲೇಖನಗಳನ್ನು ಮಾತ್ರ ಪ್ರಕಟವಾಗಿವೆ. ಪ್ರಸ್ತುತ ಅಧ್ಯಯನವನ್ನು ಈ ಎಲ್ಲ ನೆಲೆಯಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ. ಉರ್ದು ಭಾಷಿಕರ ಮಕ್ಕಳ ಕನ್ನಡ ಭಾಷೆಯ ಕಲಿಕೆಯಲ್ಲಿ ಎದುರಿಸುವ ಸಮಸ್ಯೆಗಳು ಹಾಗೂ ಅವರು ಕಲಿಯುವ ಪಠ್ಯಪುಸ್ತಕಗಳು ಅದರಲ್ಲೂ ವಿಶೇಷವಾಗಿ ಶೈಕ್ಷಣಿಕ ಕ್ಷೇತ್ರದಲ್ಲಂತು ಈ ಉರ್ದು ಭಾಷೆಯ ಮಕ್ಕಳ ಕನ್ನಡ ಕಲಿಕೆ, ಶಿಕ್ಷಕರ ಬೋಧನೆ ಮತ್ತು ಪಠ್ಯವಸ್ತು ಇವುಗಳಲ್ಲಿ ಏನೂ ಕೆಲಸ ನಡೆದಿರುವುದಿಲ್ಲ. ಗುಲಬರ್ಗಾ ಜಿಲ್ಲೆ ಉರ್ದು ಭಾಷೆಯ ಸಂಪೂರ್ಣ ಪ್ರಭಾವಿತ ಪ್ರದೇಶವಾಗಿರುವುದರಿಂದ ಸ್ವಾತಂತ್ರ್ಯ ಸಿಕ್ಕೂ ೫೮ ವರ್ಷಗಳಾದರೂ ಕೂಡ ಇಲ್ಲಿಯ ಮಕ್ಕಳು ಅಂದರೆ ಉರ್ದು ಭಾಷಿಕರ ಮಕ್ಕಳು ಕನ್ನಡ ಕಲಿಕೆಯಲ್ಲಿ ಕೆಲವೊಂದು ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕಾಣುತ್ತೇವೆ. ಈ ದೃಷ್ಟಿಯನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಅಧ್ಯಯನದ ಮಿತಿ

೨೦೦೫-೦೬ನೇ ಸಾಲಿನಲ್ಲಿ ಗುಲಬರ್ಗಾ ಜಿಲ್ಲೆ ಉರ್ದು ಭಾಷೆಯ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಮಾತ್ರ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿರುವ ಉರ್ದು ಮಾಧ್ಯಮದ ಪ್ರೌಢಶಾಲೆ ಮಕ್ಕಳಿಗೆ ಅಧ್ಯಯನವನ್ನು ಮಿತಿಗೊಳಿಸಿಕೊಂಡಿದೆ.

ಕಲಬುರ್ಗಿ (ಗುಲಬರ್ಗಾ) ಹೆಸರಿನ ಮೂಲ

ಹೈದ್ರಾಬಾದ ಕರ್ನಾಟಕ ಪ್ರದೇಶದ ಐದು ಜಿಲ್ಲೆಗಳಾದ ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ, ಮತ್ತು ಕಲಬುರ್ಗಿ, ಈಗ ಗುಲಬರ್ಗಾ, ಜಿಲ್ಲೆಯೂ ಹೌದು ಮತ್ತು ವಿಭಾಗ ಕೇಂದ್ರ ಸ್ಥಳವೂ ಕೂಡ ಆಗಿದೆ. ಈ ಗುಲಬರ್ಗಾ ಜಿಲ್ಲೆಯೂ ನಿಜಾಂ ಸಂಸ್ಥಾನದ ಮುಖ್ಯ ಮಂತ್ರಿಯಾಗಿದ್ದ ಸಾಲಾರಜಂಗರೂ ಕೈಗೊಂಡ ಆಡಳಿತ ಸುಧಾರಣೆಗಳಲ್ಲಿ ಜಿಲ್ಲಾ ಬಂದಿಯಾಗಿತ್ತು. ಅದರಂತೆ ಸಂಸ್ಥಾನದಲ್ಲಿ ಹಲವಾರು ಜಿಲ್ಲೆಗಳು ಅಸ್ತಿತ್ವಕ್ಕೆ ಬಂದವು. ಆ ಸಂದರ್ಭದಲ್ಲಿ ಗುಲಬರ್ಗಾ ಸುರುಪೂರ ಜಿಲ್ಲೆಯ ಒಂದು ಭಾಗವಾಗಿತ್ತು. ಆದರೆ ೧೮೭೩ರಲ್ಲಿ ಗುಲಬರ್ಗಾ ಒಂದು ಪ್ರತ್ಯೇಕವಾದ ಜಿಲ್ಲೆಯಾಗಿ ಪರಿವರ್ತನೆಯಾಯಿತು.'[೩೫] ಕಲಬುರಗಿ ಹೆಸರಿನ ಮೂಲ ಬಹಳ ಪುರಾತನವಾದದು ಮತ್ತು ಕಲಬುರ್ಗಿಗೆ ಗುಲಬರ್ಗಾ ಎಂದು ಹೆಸರು ಬಂದದ್ದು ಬಹಳ ಸ್ವಾರಸ್ಯಕರವಾಗಿದೆ. ಇದಕ್ಕೆ ಪೂರಕವಾದ ಮೂಲಾಧಾರಗಳು ಸಿಗುತ್ತವೆ. ಗುಲಬರ್ಗಾವನ್ನು ಕಲಬುರ್ಗಿ, ಗುಲಬರ್ಗಾ ಎಂಬ ಪರ್ಯಾಯ ಹೆಸರುಗಳಿಂದ ಕರೆಯಲಾಗುತ್ತದೆ. ಇದು ಐತಿಹಾಸಿಕವಾಗಿ ಸುಮಾರು 'ಕ್ರಿ.ಶ. ಸು. ೧೨-೧೩ ನೇ ಶತಮಾನದ ಚಿನಮುಳ್ಳ ಶಿಲಾಶಾಸನದಲ್ಲಿ "ಕಲಂಬರಿಗಿ" ಎಂದು ಉಲ್ಲೇಖಿತಗೊಂಡಿದೆ'[೩೬]. ಇದೇ ಹೆಸರು ತರುವಾಯ ಬೀದರ ಜಿಲ್ಲೆಯ ಒಂದು ಶಾಸನದಲ್ಲಿ ಕಾಣಿಸಿಕೊಂಡಿದೆ. 'ಕಲ್ಲುಂ+ಪರಿಗೆ ಎಂಬುದು ಇದರ ವಿಗ್ರಹರೂಪ'[೩೭]. ಈ ವಿಷಯದಲ್ಲಿ ಡಾ. ವಿ. ಶಿವಾನಂದ ಅವರು ತಮ್ಮ "ಕಲುಬುರಗಿ ಜಿಲ್ಲೆಯ ಶಿಲಾಶಾಸನಗಳು" ಎಂಬ ಕಿರು ಹೊತ್ತಿಗೆಯಲ್ಲಿ ಬಹಳಷ್ಟು ವಿವೇಚಿಸಿದ್ದಾರೆ. 'ಹುಣಸಿ ಹಡಗಲಿ ಶಾಸನದಲ್ಲಿ ಇದರ ಹೆಸರು ಕಲಬುರಗಿ ಎಂದು ಇದ್ದದ್ದು ಕಂಡುಬರುವುದು'[೩೮]

"ವಾಯುವ್ಯದ ವೇಂದಲ್ಕಲುಂ ಪರಗೆಯ್ನುಡಿದಂತೆ ಗಣ್ಣನ
ಗಡಿಂಬ ಕಾಲುಬೆಟ್ಟ ಕಲಿಯುನೆಲ ಮತ್ತರು ಹನ್ನೆರಡು ಕಾಲಡಿ"

ಕಲ್ಲು + ಪರಗೆ ಅಂದರೆ ಕಲ್ಪಡೆಯ ನಾಡು (Stoney Land) ಕಲ್ಪರಗೆಗಳಿಂದ ಕೂಡಿರುವುದು (Stone roofing) ಅಲ್ಲದೆ ಕಲ್ಲುಗಳ ರಾಶಿ (A heap of stones) ಯುಳ್ಳ ನೆಲ ಎಂಬ ಅರ್ಥ ಇದೆ. 'ಈಗ ಕಲಬುರಗಿ ನಾಡಿನಲ್ಲಿರುವ ಶಹಾಬಾದ, ವಾಡಿ, ಸೇಡಂ, ಚಿತ್ತಾಪೂರ, ಮಳಖೇಡ ಮರತೂರ ಶಹಾಪೂರಗಳಲ್ಲಿ ಈ ಕಲ್ಲುಗಳಿದ್ದ ಸಲುವಾಗಿ ಸಿಮೆಂಟು ಕಾರ್ಖಾನೆಗಳಿರುವುದೇ ಸಾಕ್ಷಿ'[೩೯] ಇವು ಗುಲಬರ್ಗಾದ ಪ್ರಾಚೀನ ರೂಪಗಳಾಗಿವೆ. ಕ್ರಿ.ಶ. ೧೩೬೭ರ ಬೆಲೂರು (ಹಾಸನ) ಹಾಗೂ ಕ್ರಿ.ಶ. ೧೪೫೯ರ ಶಿರವಾಳದ ಒಂದು ಶಾಸನದಲ್ಲಿ 'ಶಿಮತು ಕಲಬುರಿಗಿ ನಾಡೊಳಗೆ ಎಂಬ ನಿರ್ದೇಶನವಿದೆ.'[೪೦] 'ವಿಜಯನಗರ ಕೃಷ್ಣದೇವರಾಯನ ಬಿರುದಗಳನ್ನು ವರ್ಣಿಸುತ್ತ ಅವನ ಆಸ್ಥಾನದ ತೆಲುಗು ಕವಿ ಅಲ್ಲಸಾನಿ ಪೆದ್ದನನು ತನ್ನ ಮನು ಚರಿತ್ರೆಯಲ್ಲಿ ಕಲುಬುರಗಿ ಕಟಕ ಶಿರಿವಾಲಗ (೩-೧೪೨) ಎಂದು ಹೇಳಿದ್ದಾನೆ.'[೪೧] 'ಕ್ರಿ.ಶ. ೧೫೪೦ ರಲ್ಲಿದ್ದ ವಿರುಪಾಕ್ಷ ಪಂಡಿತ ಕವಿ ಚೆನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲಿ (ನಂ. ೬) ಕಲಬುರಿಗೆ ಎಂದೇ ಕರೆದಿದ್ದಾರೆ.'[೪೨] ವಿಜಯನಗರಕ್ಕೆ ಬಂದಿದ್ದ ಪರ್ಷಿಯನ್

ರಾಯಬಾರಿ ರಘುನಾಥನು ಇದನ್ನು 'ಕಲಬುರ್ಗ್' ಎಂದೇ ಹೇಳಿದ್ದಾರೆ. "ಕಲಬುರಗಿ" ಎಂಬ ಸ್ಥಳನಾಮದ ಹಿನ್ನೆಲೆ ಹೇಳುವುದಾದರೆ 'ಕಲ್ಲಿನ ಖಣಿಯ ಪ್ರದೇಶ ಕಲ್ಲಿನಿಂದ ಕಟ್ಟಿದ ಮನೆಗಳಿಂದ ಕೂಡಿದ ಕಲ್ಲಿನ ದಿಬ್ಬ ಎಂದಾಗುತ್ತದೆ. ಒಟ್ಟಾರೆ ಕಲಬುರ್ಗಿ ಎಂಬುದಕ್ಕೆ ಕಲಂಬುರಿಗಿ ಕಲಬರ್ಗ ಕಲಬುರಗಿ, ಕಲಬುರ್ಗಿ ಎಂಬ ಪರ್ಯಾಯ ನಾಮಗಳಿದ್ದು ಮೊದಲು ಸಬಿಂದುಕದಿಂದ ಕೂಡಿ ನಂತರ ಅಬಿಂದುಕವಾಗಿ ಬದಲಾವಣೆ ಹೊಂದಿ ಸಧ್ಯದಲ್ಲಿ ಕಲಬುರಗಿ, ಕಲ್ಬುರ್ಗಿ ಎಂದು ಬಳಕೆಯಲ್ಲಿದೆ. ಕಲಬುರಗಿ ಎಂಬ ಅಚ್ಚಗನ್ನಡ ಪದವೇ ಮಹಮ್ಮದೀಯರಿಂದ ಬಂದುದು. ಕಲಬರ್ಗ ಆಗಿ ಮುಂದೆ ಗುಲಬರ್ಗಾ ಆಗಿದೆ. ಗುಲಬರ್ಗಾ ಜಿಲ್ಲೆಯ ಗೆಜೆಟೀಯರಿನಲ್ಲಿ ಹೀಗೆ ಹೇಳಲಾಗಿದೆ. 'It is also said that kalburgi known later as kalburgh came to be pronounced as gulabarga when it was under the muslim rule.'[೪೩]

ಗುಲಬರ್ಗಾ ಎಂಬ ನಾಮಪದದ ನಿಷ್ಪತ್ತಿಗೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಗುಲಬರ್ಗಾ ಗೆಜೆಟಿಯರ್‌ನಲ್ಲಿ 'ಗುಲಬರ್ಗಾ ಎಂಬುದು ಹೆಚ್ಚು ಕಡಿಮೆ ಕಲಬುರಗಿ ಪದದ ಪಾರಸೀಕರಣವಾಗಿದ್ದು; ಪಾರಸೀಯಲ್ಲಿ 'ಗುಲ್' ಎಂದರೆ ಹೂವು 'ಬರ್ಗ' ಎಂದರೆ ಎಲೆ ಎಂಬ ಅರ್ಥವಿದೆ.'[೪೪] ಇಲ್ಲಿ ಸ್ಥಳನಾಮದ ಶಬ್ದಶಹ ಅರ್ಥಕ್ಕೂ ವಾಸ್ತವತೆಗೂ ಯಾವ ಸಂಬಂಧವೇ ಇಲ್ಲ. ಇಲ್ಲಿ ಹೂ, ಎಲೆ ಹೂ ದೋಟಗಳೆಂದರೆ ಅಪರೂಪವೇ ಸರಿ ಎಂದು ಹೇಳಬಹುದು. 'ಬಹಮನಿ ಅರಸನಾದ ಅಲ್ಲಾವುದ್ದೀನನು (೧೩೪೭–೫೮) ಕಲಬುರ್ಗಿಯನ್ನು ಹಸನಾಬಾದ ಎಂದು ಹೆಸರಿಸಿದನು.'[೪೫] ಹಸನ ಎಂಬುದು ಅಲ್ಲಾವುದ್ದೀನನನ ಮೂಲ ಹೆಸರಾಗಿತ್ತು. After his ocecssion ALA-UD-DIN-HASAL selected GULABARGA as his capital and gave it the name of AHSANA BAD ಹಸನಾಬಾದ ಎಂದರೆ ಸುಂದರವಾದ ಪ್ರದೇಶ ನಾಡು ಎಂದೆಲ್ಲಾ ಅರ್ಥ ಸ್ಪುರಿಸುವುದುಂಟು. ಈ ಹೆಸರು ಮೊದಲು ಇದ್ದು ನಂತರ ಮಾಯವಾದಂತಿದೆ. ಆದ್ದರಿಂದಲೇ ಈ ಹೆಸರು ಕಲಬುರ್ಗಿಯವರಿಗೆ ಅಪರಿಚಿತವಾಗಿದೆ. 'ಕಲಬುರ್ಗಿ ಎಂಬುದು ಹಳ್ಳಿಗರು ಬಳಸುವ ಹೆಸರಾದರೆ; 'ಗುಲಬರ್ಗಾ' ಸುಶಿಕ್ಷಿತರು ನಗರದವರು ಬಳಸುವ ಸ್ಥಳನಾಮವಾಗಿದೆ. 'ಹಸನಾಬಾದ' ಎಂಬುದು ಬಳಕೆಯಲ್ಲಿಲ್ಲ.

ಒಟ್ಟಿನಲ್ಲಿ ಕಲಬುರ್ಗಿ ಗುಲಬರ್ಗಾ ನಾಮಗಳು ಜನತೆಯ ರೂಡಿಯಲ್ಲಿದೆ. ಕಲಬುರ್ಗಿಯಲ್ಲಿ ಜನರು ಕ್ರಿಪೂ. ಆದಿ ಶಿಲಾಯುಗಗಳಿಂದಲೂ ಜನರು ಬಾಳಿ ಬದುಕಿದ್ದು ವಿವಿಧ ಸಂಸ್ಕೃತಿ ಪರಂಪರೆಗಳ ಸ್ಥಳವಾಗಿತ್ತೆಂದು ಚರಿತ್ರೆಯಿಂದ ತಿಳಿದುಬರುತ್ತದೆ. 'ಗುಲಬರ್ಗಾ ಜಿಲ್ಲೆಯ ಸುರುಪೂರ ತಾಲೂಕಿನ ಬಳಿ ಆದಿ ಶಿಲಾಯುಗದ ನೆಲವೊಂದು ದೊರಕಿದೆ. ಇದೇ ತಾಲೂಕಿನ ಹೆಬ್ಬಾಳ ಎಂಬಲ್ಲಿ ಮತ್ತೊಂದು ಆದಿ ಶಿಲಾಯುಗದ ನೆಲೆಯನ್ನು ಶೋಧಿಸಲಾಗಿದೆ.'[೪೬] ಇದೆ ತಾಲೂಕಿನಲ್ಲಿಯೇ ಮಧ್ಯಶಿಲಾಯುಗದ ಅನೇಕ ನೆಲೆಗಳು ಕೊಲ್ಲೂರು ಹುಣಸಗಿ 'ಹಗರಟಿ ಹುಸಹಟ್ಟಿ ಅಫಜಲಪೂರ ತಾಲ್ಲೂಕಿನ ಉಡಚಣ ಮತ್ತು ಸೇಡಂ ತಾಲೂಕಿನ ಮಳಖೇಡದಲ್ಲಿ 'ಸೂಕ್ಷ್ಮಶಿಲಾಯುಗದ ನೆಲೆಗಳು ಸುರಪೂರ ತಾಲೂಕಿನ

ಹುಣಸಿಹೊಳಿ ಆಳಂದ ತಾಲೂಕಿನ ಜಾವಳಿ ಕಾಚಾಪೂರದ ಬಳಿ ಇಕ್ಕಳ್ಳಿ ನವಶಿಲಾಯುಗದ ಸಂಸ್ಕೃತಿ ಸುರುಪೂರ ತಾಲೂಕಿನ ಕೊಡೆಕಲ್ಲಿನಲ್ಲಿ ಕ್ರಿಪೂ. ೨೫೦೦ರ ಸುಮಾರಿನಲ್ಲಿ ಪ್ರಚಲಿತವಾಗಿತ್ತೆಂದು ತಿಳಿದುಬಂದಿದೆ.'[೪೭] ಆದಿ ಶಿಲಾಯುಗ ಮತ್ತು ಮಧ್ಯ ಶಿಲಾಯುಗದಲ್ಲಿ ಬಳಸುತ್ತಿದ್ದ ಕೈಗೊಡಲಿಗಳು ಬರ್ಚಿ ಬರೆಯಾದ ಸಾಧನ ಸುಣ್ಣದ ಕಲ್ಲಿನಿಂದ ತಯ್ಯಾರಿಸಿದ್ದ ಆಯುಧಗಳು ಸಿಗುತ್ತವೆ. ನವಶಿಲಾಯುಗದಲ್ಲಿದ್ದ ಭಸ್ಮರಾಸಿಗಳು ಬೀಕ್ಕೂರು ಕನ್ನೆ ಕೊಳೂರು ಬೂದನಾಳ ಕೊಡೆಕಲ್‌ನಲ್ಲಿ ಬೆಳಕಿಗೆ ಬಂದಿದೆ. ಈ ಯುಗದಲ್ಲಿದ್ದ ತಾಮ್ರದ ಉಪಯೋಗ ವಿದ್ದ ಸಂಸ್ಕೃತಿ ಕಬ್ಬಿಣಯುಗದ ಬೃಹತ್ ಶಿಲಾ ಸಮಾದಿಗಳು ಪ್ರಸಿದ್ದವಾದವುಗಳು. 'ಸನ್ನತಿಯ ಪ್ರಾಕೃತ ಶಾಸನಗಳು ಈ ಜಿಲ್ಲೆಯ ಇದುವರೆಗೆ ದೊರಕಿರುವ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದವುಗಳು ಅವನ್ನು ಕ್ರಿಶ. ೨–೩ ನೇ ಶತಮಾನದೆಂದು ಹೇಳಬಹುದು.'[೪೮] ಕಲಬುರ್ಗಿ ಜಿಲ್ಲೆಯು ಕಾಗೀಣಾ ತೀರಹ ಮಳಖೇಡ ಬೌದ್ಧ ಅವಶೇಷಗಳಿರುವ ಸನ್ನತಿ ವಿಶ್ವವಿದ್ಯಾಲಯ ಕೇಂದ್ರವಾಗಿದ್ದ ನಾಗಾಯಿ ಇತಿಹಾಸ ಪ್ರಸಿದ್ಧ ಸುರುಪೂರ ಒಳಗೊಂಡಿದೆ. ಕಲಬುರ್ಗಿ ಜಿಲ್ಲೆಯ ಪ್ರಾಚೀನತೆಯು ಕ್ರಿಸ್ತ ಪೂರ್ವಕ್ಕೆ ಹೋಗುತ್ತದೆ. ಆದಿ ಮಧ್ಯ ಮತ್ತು ನವಶಿಲಾಯುಗದೊಂದಿಗೆ ಸ್ಪಂದಿಸುತ್ತದೆ. ತಾಮ್ರಯುಗದ ನೆಲೆ ಕಲಬುರ್ಗಿಯಲ್ಲಿದೆ ಕಲಬುರ್ಗಿ ಜಿಲ್ಲೆಗೆ ತನ್ನದೇ ಆದ ಸಂಸ್ಕೃತಿ ಪರಂಪರೆ ಇತಿಹಾಸವಿದೆ. ಅನೇಕ ಜನಾಂಗ ಸಂಸ್ಕೃತಿಯನ್ನು ತನ್ನ ಮಡಿಲಿನಲ್ಲಿಟ್ಟುಕೊಂಡು ಸಾಗುತ್ತದೆ.

ಕಲ್ಬುರ್ಗಿ ಜಿಲ್ಲೆಯು ಹೈದ್ರಾಬಾದ ಕರ್ನಾಟಕದ ಪ್ರದೇಶಗಳಲ್ಲೊಂದು. ಇಲ್ಲಿಯ ಆಡಳಿತ ಶಿಕ್ಷಣ ಭಾಷೆ ಉರ್ದುವಿನಲ್ಲೇ ನಡೆಯುತ್ತಿತ್ತು. ಕನ್ನಡ ಮಾಧ್ಯಮ ಶಾಲೆಗಳು ಅಂದು ಇರಲಿಲ್ಲ. ಕನ್ನಡ ಭಾಷೆ ಕೇವಲ ಇಲ್ಲಿನ ಜನರ ಮನೆ ಮಾತಾಗಿತ್ತಷ್ಟೇ. ಮುಸ್ಲಿಂ ಅರಸರ ಪತನದ ನಂತರ ಬ್ರಿಟಿಷ ಸರಕಾರದ ಶಿಕ್ಷಣ ಪದ್ದತಿಯಲ್ಲಿ ಇಲ್ಲಿಯವರು ಇಂಗ್ಲಿಶ್ ಉರ್ದು ಅಲ್ಲದೆ ಇಲ್ಲಿ ಲಂಬಾಣಿ, ಮಾರವಾಡಿ, ಗುಜರಾತಿ, ಖತ್ರಿ, ತಮಿಳು, ವಡ್ಡ ಮುಂತಾದ ಭಾಷೆಯನ್ನು ಬಲ್ಲವರು ಇದ್ದಾರೆ.

ಕಲಬುರ್ಗಿ ಭಾಗವು ಕಾಲದಿಂದ ಕಾಲಕ್ಕೆ ಬೇರೆ ಬೇರೆ ರಾಜರ ರಾಜ ಭಾಷೆಯ ತುಳಿತಕ್ಕೆ ಒಳಗಾಗಿ ಇಲ್ಲಿಯ ಕನ್ನಡ ಭಾಷೆಯು ತನ್ನದೆ ರೂಪ ಸೃಷ್ಟಿಸಿಕೊಂಡಿತು. 'ಕ್ರಿಶ. ೬ನೇಯ ಶತಮಾನದಲ್ಲಿ ಚಾಲುಕ್ಯರು ಬಾದಾಮಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ಅವಧಿಯಲ್ಲಿ ಗುಲಬರ್ಗಾ ಪ್ರಾಂತವು ಬಾದಾಮಿಯ ಆಡಳಿತಕ್ಕೆ ಒಳಪಟ್ಟಿತ್ತು. ನಂತರ ಬಂದ ರಾಷ್ಟ್ರಕೂಟರು ಬಾದಾಮಿಯ ಚಾಲುಕ್ಯರನ್ನು ಸದೆಬಡೆದು ಮೊದಲು ಲಾತೂರು, ಆ ಮೇಲೆ ಮಾನ್ಯಖೇಟ ಈಗಿನ ಮಳಖೇಡವನ್ನು ರಾಜದಾನಿಯನ್ನಾಗಿ ಮಾಡಿಕೊಂಡು ಆಮೇಲೆ ಈ ಭಾಗವೆಲ್ಲವೂ ರಾಷ್ಟ್ರಕೂಟರ ಅಧಿಪತ್ಯಕ್ಕೆ ಒಳಗಾಯಿತು.'[೪೯] ಈ ಅವಧಿಯಲ್ಲಿ ನೃಪತುಂಗನಿಂದ ಕವಿರಾಜಮಾರ್ಗ ಎನ್ನುವ ಅಲಂಕಾರ ಗ್ರಂಥ ಸೃಷ್ಟಿಯಾಯಿತು. ಇಲ್ಲಿಯ ಭಾಷೆ ಅಂದಿನ ಕನ್ನಡ ಭಾಷೆಯ ಸ್ವರೂಪದ ಪರಿಚಯ ಮಾಡಿಕೊಡುತ್ತದೆ. ತದನಂತರ ಅಧಿಕಾರ ಪಲ್ಲಟವಾಯಿತು. ರಾಷ್ಟ್ರಕೂಟರ ಆಳ್ವಿಕೆ ಕೊನೆಗೊಂಡು

ಮಳಖೇಡವು ವೈರಿಗಳ ಕೋಪಾಗ್ನಿಗೂ ಅಗ್ನಿಗೂ ಆಹುತಿಯಾಯಿತು. 'ಕಲ್ಯಾಣದ ಚಾಲುಕ್ಯರು ಹತ್ತನೆಯ ಶತಮಾನಗಳ ಅಂತ್ಯ ಭಾಗದಿಂದ ಆಳತೊಡಗಿದಾಗ ಅವರು ತಮ್ಮ ರಾಜಧಾನಿಯನ್ನು ಬಿದರೆ (ಬೀದರ) ಜಿಲ್ಲೆಯ ಕಲ್ಯಾಣಕ್ಕೆ ಬದಲಾಯಿಸಿಕೊಂಡರು.'[೫೦] ಈ ವಂಶದ ಅರಸರುಗಳಾದ 'ಜಗದೇಕ ಮಲ್ಲ, ತ್ರಿಭುವನ ಮಲ್ಲ ಸೋಮೇಶ್ವರ ಇತಿಹಾಸ ಪ್ರಸಿದ್ಧರಾದ ರಾಜರುಗಳ ಶಾಸನಗಳು ರಾಯಚೂರು ಗುಲಬರ್ಗಾ ಪ್ರಾಂತ ಭಾಗದಲ್ಲಿ ಹಳ್ಳಿಹಳ್ಳಿಗೂ ಸಿಗುತ್ತವೆಂದರೆ ಅತೀಶಯೋಕ್ತಿಯಾಗಲಾರದು. ಆ ಶಾಸನಗಳ ಭಾಷೆಯನ್ನು ನೋಡಿದರೆ ಆ ಪ್ರದೇಶದ ಆಗಿನ ಕಾಲದ ಭಾಷೆಯ ಸ್ವರೂಪ ತಿಳಿದು ಬರುತ್ತದೆ.'[೫೧] ಕಲ್ಯಾಣ ಚಾಲುಕ್ಯರ ನಂತರ ರಾಜ್ಯದಲ್ಲಿ ಕ್ರಾಂತಿ ಯುಂಟಾಗಿ ಕಲಚೂರಿಗಳು ಕರ್ನಾಟಕದ ಅದಿಪತ್ಯವನ್ನು ತೆಗೆದುಕೊಳ್ಳುತ್ತಾರೆ. ಆ ಸಮಯದಲ್ಲಿ ಬಂದ ವಚನಕಾರರು ಆಡುಮಾತನ್ನೆ ತಮ್ಮ ವಚನ ಭಾಷೆಯನ್ನಾಗಿಸಿಕೊಂಡರು.

'ಕಲ್ಯಾಣ ಚಾಲುಕ್ಯರ ನಂತರ ಈ ಪ್ರದೇಶವು ಅನೇಕ ವಿಪತ್ತನ್ನು ಎದುರಿಸಬೇಕಾಯಿತು. ಓರಂಗಲ್ಲಿನ ಕಾಕತೀಯರು ದೇವಗಿರಿಯ ಯಾದವರು ದ್ವಾರ ಸಮುದ್ರದ ಹೊಯ್ಸಳರು ಅಂತಃಕಲಹದಲ್ಲಿ ತೊಡಗಿದರು ಚಾಲುಕ್ಯರ ಸಾಮ್ರಾಜ್ಯವೆಲ್ಲ ಈ ಮೂರು ರಾಜವಂಶದವರಲ್ಲಿ ಹಂಚಿ ಹೋಯಿತು.'[೫೨] ಕಲಬುರ್ಗಿ ಪ್ರದೇಶವು ದಾಳಿಯಿಂದ ಒಮ್ಮೆ ಇತ್ತ ಒಮ್ಮೆ ಅತ್ತ ಹೊಡೆತಗಳಿಗೆ ಮೈಯೊಡ್ಡಬೇಕಾಯಿತು. '೧೩ ನೇಯ ಶತಮಾನದ ಕೊನೆಯ ಭಾಗ ೧೪ ನೆಯ ಶತಮಾನದ ಆರಂಭದಲ್ಲಿ ನಡೆದ ಕಾಕತೀಯ ಯಾದವ ಹೊಯ್ಸಳರ ಒಳಜಗಳ ಪರಕೀಯರನ್ನು ಅಹ್ವಾನಿಸಿತು. ಅಲ್ಲಾವುದ್ದೀನ್ ಮತ್ತು ಮಲ್ಲಿಕ್ ಕಾಪೂರ ಅಪಾರವಾದ ದಂಡನೆತ್ತಿ ದಾಳಿಯಿಟ್ಟರು ಕ್ರಮವಾಗಿ ಮೂರು ರಾಜ್ಯಗಳು ನಾಶ ಹೊಂದಿದವು.'[೫೩] ಈ ಸನ್ನಿವೇಶದಲ್ಲಿ ಕಲಬುರ್ಗಿ ಭಾಗಗಳಲ್ಲಿ ಅರಾಜಕತೆ ಸೃಷ್ಟಿಯಾಗಿ ತಾಂಡವವಾಡುತಿತ್ತು. ಯಾರು ರಕ್ಷಕರಿರಲಿಲ್ಲ ಅಶಾಂತಿ ನಿರ್ಮಾಣವಾಯಿತು. 'ಅಲ್ಲಾವುದ್ದೀನ ಹಸನಗಂಗು ಬಹುಮನ್‌ಶಹ ೧೩೪೭ ರಲ್ಲಿ ಬಹುಮನಿ ರಾಜ್ಯವನ್ನು ಸ್ಥಾಪಿಸಿದಾಗ ಗುಲಬರ್ಗಾ ಅವನ ರಾಜದಾನಿಯಾಯಿತು. ೧೪೨೪ರ ವರೆಗೂ ರಾಜದಾನಿಯಾಗಿ ಇದು ಮರೆಯಿತು. ಬಹಮನಿ ರಾಜ್ಯ ಐದು ಭಾಗಗಳಾಗಿ ಒಡೆದಾಗ ಇದು ಸ್ವಲ್ಪ ಕಾಲ ಬಿದರೆಯ (ಬೀದರ) ಆದಿಲ್ ಶಹ ಸುಲ್ತಾನರ ಆಳ್ವಿಕೆಯಲ್ಲೂ ಸ್ವಲ್ಪ ಕಾಲ ಬಿಜಾಪೂರದ ಆದಿಲ್ ಶಾಹಿ ಸುಲ್ತಾನರ ಅಧೀನದಲ್ಲೂ ಇತ್ತು.'[೫೪] ಇವರ ರಾಜಭಾಷೆಯಾದ ಉರ್ದು, ದಖ್ಖನಿ ಭಾಷೆಗಳು ಬಳಕೆಗೆ ಬಂದವು. ಇವುಗಳ ಮಡಿಲಿನಲ್ಲಿ ಬೆಳೆದ ಕನ್ನಡ ಭಾಷೆ ಗಾಢವಾಗಿ ಉರ್ದು ಪ್ರಭಾವಕ್ಕೆ ಒಳಗಾಯಿತು.

'ಮೊಗಲ ಸಾಮ್ರಾಜ್ಯದ ಔರಂಗಜೇಬ ಚಕ್ರವರ್ತಿ ದಕ್ಷಿಣದ ದಂಡಯಾತ್ರೆ ಕೈಗೊಂಡಾಗ ಗುಲಬರ್ಗಾ ಅವನ ಕೈವಶವಾಯಿತು. ಔರಂಗಜೇಬನ ಮರಣಾ ನಂತರ ಮೊಗಲ ಸಾಮ್ರಾಜ್ಯದಲಿ ಅಂತಃ ಕಲಹಗಳು ಸಂಭವಿಸಿದಾಗ ಅಲ್ಲಿಯ ರಾಜಕೀಯದಲ್ಲಿ ಬೇಸತ್ತ ಸುಬೇದಾರ ಅಸಫಝಾ ದಕ್ಷಿಣದ ಪ್ರಾಂತ್ಯಾಧಿಪತಿಯಾಗಿ ಬಂದು ಇಲ್ಲಿ ಸ್ವತಂತ್ರನಾದ ಇದು ಹೈದರಾಬಾದಿನ ನಿಜಾಂವಂಶದ ನಾಂದಿಯಾಯಿತು.'[೫೫] ಕಲಬುರ್ಗಿ

ಕನ್ನಡವು ೧೪ನೇಯ ಶತಮಾನದ ತರುವಾಯ ೧೯ ನೇಯ ಶತಮಾನದಲ್ಲಿಯೂ ಪುನಃ ಅಂಧಕಾರದಲ್ಲಿ ಮುಳುಗಿತು. ಮರಾಠಿ, ಪಾರಸಿ, ಉರ್ದು ಪ್ರಭಾವ ಬೆಳೆದು ಕನ್ನಡ ಕಲಿಕೆ ನಿಂತು ಹೋಯಿತು ಎನ್ನುವಷ್ಟರ ಮಟ್ಟಿಗೆ ಪರಿಸ್ಥಿತಿಯುಂಟಾಯಿತು. ಕಲಬುರ್ಗಿ ಪ್ರದೇಶವು ಮೊದಲು ಆರುನೂರು ವರ್ಷಗಳ ಕಾಲ ಕನ್ನಡ ಬೆಳಗುವ ಕಾಲವಾದರೆ ನಂತರವಿರುವ ಏಳುನೂರು ವರ್ಷಗಳ ಕಾಲ ಇಕ್ಕಟ್ಟಿನಲ್ಲಿ ಸಿಕ್ಕು ಕೆಲವು ಭಾಷೆಯ ಪ್ರಭಾವಕ್ಕೆ ಸಿಕ್ಕುವಂತಾಯಿತು.

ಕಲಬುರ್ಗಿ ಜಿಲ್ಲೆಯು ಕರ್ನಾಟಕದ ಉತ್ತರ ಭಾಗದಲ್ಲಿದೆ. ಉತ್ತರ ಕರ್ನಾಟಕದ ಜಿಲ್ಲೆಗಳ ಉಪಭಾಷೆಗಳೊಂದಿಗೆ ಸ್ಪಂದಿಸುತ್ತ ಹಲವು ಪ್ರಕ್ರಿಯೆಗಳ ಜೊತೆ ಜೊತೆಯಾಗಿ ಹೋಗುತ್ತ ತನ್ನದೆಯಾದ ಭಾಷಾ ವಿಶೇಷತೆಯನ್ನು ಸ್ಥಾಪಿಸಿದೆ.

ಭೌಗೋಳಿಕ ಸ್ವರೂಪ

'ಗುಲಬರ್ಗಾ ಜಿಲ್ಲೆಯು ಕರ್ನಾಟಕದ ಉತ್ತರ ಭಾಗದಲ್ಲಿದ್ದು, ೧೯೫೬ರಲ್ಲಿ ರಾಜ್ಯ ಪುನರ್ವಿಂಗಡನೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಕ್ಕೆ ಸೇರಿದ ಮೂರು ಜಿಲ್ಲೆಗಳಲ್ಲಿ ಒಂದಾಗಿದೆ (ಉಳಿದೆರಡು ಜಿಲ್ಲೆಗಳು ಬೀದರ್ ಮತ್ತು ರಾಯಚೂರು). ಜಿಲ್ಲೆಯ ವಿಶಾಲ ಸಮತಟ್ಟಾದ ಪ್ರದೇಶವು ೭೬೦ ೦೪' ಮತ್ತು ೭೭೦ ೪೨' ಪೂರ್ವರೇಖಾಂಶ ಹಾಗೂ ೧೬೦ ೧೨' ಮತ್ತು ೧೭೦ ೪೬' ಉತ್ತರ ಅಕ್ಷಾಂಶ ಇವುಗಳ ನಡುವೆ ಹರಡಿಕೊಂಡಿದೆ.'[೫೬] ಜಿಲ್ಲೆಯು ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪೂರ ಮತ್ತು ಉಸ್ಮಾನಾಬಾದ್ ಜಿಲ್ಲೆಗಳ ಎಲ್ಲೆಯನ್ನು ಮತ್ತು ಪೂರ್ವ ಭಾಗದಲ್ಲಿ ಆಂದ್ರ ಪ್ರದೇಶದ ಮೆಡಕ್ ಮತ್ತು ಮೆಹಬೂಬ್ ನಗರ ಜಿಲ್ಲೆಗಳ ಗಡಿಯನ್ನು ಪಡೆದಿದೆ. ಇನ್ನುಳಿದ ಗಡಿ ಪ್ರದೇಶವು ಎತ್ತರದಲ್ಲಿ ಬೀದರ್ ಜಿಲ್ಲೆಯಿಂದ ದಕ್ಷಿಣದಲ್ಲಿ ರಾಯಚೂರು ಜಿಲ್ಲೆಯಿಂದ ಮತ್ತು ಪಶ್ಚಿಮದಲ್ಲಿ ವಿಜಾಪುರ ಜಿಲ್ಲೆಯಿಂದ ಸುತ್ತುವರಿಯಲ್ಪಟ್ಟಿದೆ. ದಕ್ಷಿಣ ಭಾಗದಲ್ಲಿ ಕೃಷ್ಣಾ ನದಿಯು ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಎಲ್ಲೆಯಾಗಿ ಪ್ರವಹಿಸುತ್ತದೆ. ಪಶ್ಚಿಮ ಭಾಗದಲ್ಲಿ ಭೀಮಾನದಿಯು ಸ್ವಲ್ಪದೂರ ಪ್ರವಹಿಸುತ್ತದೆ. ಪಶ್ಚಿಮ ಭಾಗದಲ್ಲಿ ಭೀಮಾನದಿಯು ಸ್ವಲ್ಪದೂರ ಗುಲಬರ್ಗಾ ಹಾಗೂ ವಿಜಾಪೂರ ಜಿಲ್ಲೆಗಳ ನೈಸರ್ಗಿಕ ಎಲ್ಲೆಯಾಗಿ ಹರಿಯುತ್ತದೆ. 'ಗುಲಬರ್ಗಾ ಜಿಲ್ಲೆಯ ವಿಸ್ತೀರ್ಣ ೧೬,೨೪೨.೪ ಚ. ಕಿ. ಮಿ' ಇದೆ. ಕರ್ನಾಟಕ ರಾಜ್ಯದಲ್ಲಿ ವಿಸ್ತಿರ್ಣದ ದೃಷ್ಟಿಯಿಂದ ಗುಲಬರ್ಗಾ ಎರಡನೇಯ ಸ್ಥಾನವನ್ನು ಪಡೆದಿದೆ.

ಕಲಬುರ್ಗಿ ಜಿಲ್ಲೆಯು ಕಲಬುರ್ಗಿ, ಚಿತ್ತಾಪೂರ ಆಳಂದ, ಸೇಡಂ, ಅಫಜಲಪೂರ, ಯಾದಗಿರಿ, ಶಹಾಪೂರ, ಜೇವರಗಿ, ಚಿಂಚೋಳಿ, ಸುರಪೂರ ಎಂಬ ತಾಲ್ಲೂಕಗಳನ್ನು ಹೊಂದಿದೆ ಹಾಗೂ ಮಹಾಗಾಂವ ಕಮಲಾಪೂರ ಶಹಾಬಾದ ಮುದೋಳ, ಆತನೂರ, ಗುರುಮಿಠಕಲ್ ಗೋಗಿ ನೇಲೋಗಿ

ಸೈದಾಪೂರ, ಸುಲೇಪೇಠ ಹುಣಸಗಿ ಕೆಂಬಾವಿ ಎಂಬ ಪ್ರಮುಖ ಹೋಬಳಿಗಳನ್ನು ಹೊಂದಿದೆ. ಸುಮಾರು ೧೨೫೦ ಹಳ್ಳಿಗಳು ಈ ಜಿಲ್ಲೆಯಲ್ಲಿವೆ. ಈ ಜಿಲ್ಲೆಯಲ್ಲಿ ೨೦೦೧ ರ ಜನಗಣತೀಯ ಪ್ರಕಾರ ಹೆಣ್ಣು ಮಕ್ಕಳು ೧೫೩೮೧೩೩ ಗಂಡು ಮಕ್ಕಳು ೧೫೯೨೭೮೯ ಒಟ್ಟು ಜನ ಸಂಖ್ಯೆ ೩೧೩೦೯೨೨ ಇದ್ದಾರೆ.[೫೭]

ಗುಲಬರ್ಗಾ ಜಿಲ್ಲೆಯ ತಾಲೂಕುವಾರು ಜನ ಸಂಖ್ಯೆ ಈ ಕೆಳಗಿನಂತಿದೆ.[೫೮]

ಕ್ರಸಂ	ತಾಲೂಕಿನ ಹೆಸರು	ಗಂಡು	ಹೆಣ್ಣು	ಒಟ್ಟು	ಗ್ರಾಮೀಣ	ನಗರ
೧	ಅಫಜಲಪೂರ	೯೨೫೩೮	೮೭೫೩೩	೧೮೦೦೭೧	೧೬೦೭೩೬	೧೯೩೩೫
೨	ಆಳಂದ	೧೫೨೨೩೩	೧೪೪೯೦೩	೨೯೭೧೩೬	೨೬೧೮೯೧	೩೫೨೪೫
೩	ಚಿಂಚೋಳಿ	೧೧೩೩೦೯	೧೧೦೩೩೭	೨೨೩೬೪೬	೨೦೬೫೦೨	೧೭೧೪೪
೪	ಚಿತ್ತಾಪೂರ	೧೮೬೩೯೦	೧೮೦೪೧೨	೩೬೬೮೦೨	೨೩೮೫೩೨	೧೨೮೨೭೦
೫	ಗುಲಬರ್ಗಾ	೩೪೮೬೬೫	೩೨೭೦೧೪	೬೭೫೬೭೯	೨೪೫೪೧೪	೪೩೦೨೬೫
೬	ಜೇವರ್ಗಿ	೧೧೯೫೯೮	೧೧೫೬೫೬	೨೩೫೨೫೪	೨೧೬೦೭೫	೧೯೧೭೯
೭	ಸೇಡಂ	೯೭೭೦೯	೯೮೪೪೫	೧೯೬೧೫೪	೧೫೬೦೨೬	೪೦೧೨೮
೮	ಶಹಾಪೂರ	೧೪೮೩೧೯	೧೪೫೧೯೯	೨೯೩೫೧೮	೨೪೯೮೧೯	೪೩೬೯೯
೯	ಸುರಪೂರ	೧೭೦೦೯೨	೧೬೬೬೬೩	೩೩೬೭೫೫	೨೯೩೧೩೩	೪೩೬೨೨
೧೦	ಯಾದಗಿರ	೧೬೩೯೩೬	೧೬೧೯೭೧	೩೨೫೯೦೭	೨೫೦೧೭೩	೭೫೭೩೪

೨೦೦೫-೦೬ನೇ ಸಾಲಿನಲ್ಲಿ ಗುಲಬರ್ಗಾ ಜಿಲ್ಲೆಯ ಪ್ರೌಢಶಾಲೆಗಳಲ್ಲಿ ಉರ್ದು ಭಾಷೆಯನ್ನು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ

ಕ್ರಸಂ.	ತಾಲೂಕಿನ ಹೆಸರು	ಗಂಡು	ಹೆಣ್ಣು	ಒಟ್ಟು
೧	ಅಫಜಲಪೂರ	೮೩೫	೧೨೦೭	೨೦೪೨
೨	ಆಳಂದ	೧೦೭೭	೧೬೨೨	೨೬೯೯
೩	ಚಿಂಚೋಳಿ	೮೮೨	೧೫೭೦	೨೪೫೨
೪	ಚಿತ್ತಾಪೂರ	೧೭೧೬	೨೬೬೮	೪೩೮೪
೫	ಗುಲಬರ್ಗಾ	೩೭೧೮	೪೬೪೧	೮೩೫೯
೬	ಜೇವರ್ಗಿ	೧೦೫೮	೧೫೪೯	೨೬೦೭
೭	ಸೇಡಂ	೧೨೭೧	೧೭೮೮	೩೦೫೯
೮	ಶಹಾಪೂರ	೧೮೯೬	೨೩೨೮	೪೨೨೪
೯	ಸುರಪೂರ	೮೧೭	೧೧೯೬	೨೦೧೩
೧೦	ಯಾದಗಿರ	೧೭೪೯	೨೧೬೧	೩೯೧೦

ಕರ್ನಾಟಕದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಉರ್ದು ಭಾಷಿಕರ ವಿವರ

(ಲಭ್ಯ ಜಿಲ್ಲೆಗಳ ಮಾಹಿತಿಯನ್ನು ಮಾತ್ರ ದಾಖಲಿಸಿದೆ)

ಜಿಲ್ಲೆಗಳು	ಒಟ್ಟು ಜನಸಂಖ್ಯೆ (ಲಕ್ಷಗಳಲ್ಲಿ)	ಉರ್ದು ಭಾಷೆ ಮಾತನಾಡುವ ಜನ ಸಂಖ್ಯೆ	ಗಂಡು	ಹೆಣ್ಣು	ಗ್ರಾಮೀಣ	ನಗರ
೧	೨	೩	೪	೫	೬	೭
ಬೆಂಗಳೂರು	೪೮.೪	೬.೧	೩.೨	೨.೯	೦.೩	೫.೮
ಬೆಂಗಳೂರು ಗ್ರಾಮಾಂತರ	೧೬.೭	೧.೪	೦.೭	೦.೭	೦.೬	೦.೮
ಬೆಳಗಾಂವ	೩೫.೮	೩.೧	೧.೬	೧.೫	೧.೫	೧.೬
ಬಳ್ಳಾರಿ	೧೮.೯	೨.೦	೧.೦	೧.೦	೦.೭	೧.೩
ಬೀದರ	೧೨.೬	೨.೪	೧.೨	೧.೧	೧.೪	೧.೦
ಬಿಜಾಪೂರ	೨೯.೩	೩.೪	೧.೭	೧.೭	೧.೭	೧.೭
ಚಿಕ್ಕಮಗಳೂರು	೧೦.೨	೦.೭	೦.೩	೦.೩	೦.೪	೦.೩
ಚಿತ್ರದುರ್ಗ	೨೧.೮	೨.೦	೧.೦	೧.೦	೧.೦	೧.೪
ದಕ್ಷಿಣ ಕನ್ನಡ	೨೬೯	೦.೭	೦.೩	೦.೩	೦.೪	೦.೩
ಧಾರವಾಡ	೩೫.೦	೪.೮	೨.೫	೨.೪	೧.೯	೨.೯
ಗುಲಬರ್ಗಾ	೨೫.೮	೪.೪	೨.೨	೨.೧	೨.೩	೨.೧
ಹಾಸನ	೧೫.೭	೦.೮	೦.೪	೦.೪	೦.೩	೦.೫
ಕೊಡಗು	೪.೯	೦.೧	೦.೧	೦.೦೭	೦.೦೫	೦.೧
ಕೋಲಾರ	೨೨.೨	೨.೫	೧.೩	೧.೨	೧.೨	೧.೩
ಮಂಡ್ಯ	೧೬೪	೦.೬	೦.೩	೦.೩	೦.೨	೦.೪
ಮೈಸೂರು	೩೧.೭	೨.೨	೧.೧	೧.೧	೦.೬	೧.೬
ರಾಯಚೂರು	೨೩.೧	೨.೪	೧.೨	೧.೨	೧.೧	೧.೩
ಶಿವಮೊಗ್ಗ	೧೯.೧	೨.೦	೧.೦	೧.೦	೧.೧	೦.೯
ತುಮಕೂರು	೨೩.೧	೧.೭	೦.೯	೦.೮	೦.೮	೦.೯
ಉತ್ತರ ಕನ್ನಡ	೧೨.೨	೧.೩	೦.೬	೦.೬	೦.೬	೦.೬

ಕರ್ನಾಟಕದಲ್ಲಿ ಉರ್ದು ಭಾಷಿಕರು ಮಾತನಾಡುವ ಇತರೆ ಭಾಷೆಗಳ ವಿವರ

	ಒಟ್ಟು	%	ಗಂಡು	%	ಹೆಣ್ಣು	%	ಗ್ರಾಮೀಣ	ನಗರ
ಉರ್ದು ಭಾಷೆಯಾಡುವ ಜನಸಂಖ್ಯೆ ೧	೪೪.೮	(೯.೯) ೧೦.೩	೨೯.೯	೫೧.೧	೨೧.೯	೪೮.೮	೧೭೮ ೩೯.೮%)	೨೭.೦ (೬೦.೨%)
ಮಾತೃಭಾಷೆ ಆಡುವವರು	೧೯.೦೦	೪೨.೪	೮.೯	೪೭.೦	೧೦.೧	೫೨.೯		
ದ್ವಿಭಾಷೆ ಮಾತು ಆಡುವವರು	೨೫.೦	೫೭.೫	೧೪.೦	೫೪.೨	೧೧.೮	೪೫.೭		

ಕ್ರಮ ಸಂ.	ಭಾಷೆಗಳು	ಮಾತನಾಡುವವರ ಸಂಖ್ಯೆ	%	ಗಂಡು	%	ಹೆಣ್ಣು	%
೧	ಅರೇಬಿಕ	೦.೯	೧.೯	೦.೫	೫೧.೧	೦.೪	೪೮.೮
೨	ಇಂಗ್ಲಿಷ್	೨.೦	೪.೫	೧.೧	೫೬.೭	೦.೯	೪೩.೨
೩	ಹಿಂದಿ	೧.೬	೩.೫	೦.೯	೫೭.೩	೦.೭	೪೧.೬
೪	ಕನ್ನಡ	೧೯.೫	೪೩.೫	೧೦.೫	೫೪.೦	೯.೦	೪೫.೯
೫	ಮರಾಠಿ	೦.೪	೦.೯	೦.೨	೫೧.೧	೦.೨	೪೮.೮
೬	ತಮಿಳು	೦.೪	೦.೯	೦.೨	೫೧.೧	೦.೨	೪೮.೮
೭	ತೆಲುಗು	೦.೯	೧.೯	೦.೫	೫೧.೧	೦.೪	೪೮.೮

ಕರ್ನಾಟಕದ ಉರ್ದು ಭಾಷಿಕರ ಸಾಕ್ಷರತ ಪ್ರಮಾಣ

(ಲಭ್ಯ ಜಿಲ್ಲೆಗಳ ಮಾಹಿತಿಯನ್ನು ಮಾತ್ರ ದಾಖಲಿಸಿದೆ)

ಕ್ರಮ ಸಂಖ್ಯೆ	ಜಿಲ್ಲೆಗಳು	ಒಟ್ಟು ಜನ ಸಂಖ್ಯೆ (ಲಕ್ಷಗಳಲ್ಲಿ)	ಒಟ್ಟು ಅಕ್ಷರಸ್ಥರ ಪ್ರಮಾಣ (ಲಕ್ಷಗಳಲ್ಲಿ)	ಗಂಡು (ಲಕ್ಷಗಳಲ್ಲಿ)	ಹೆಣ್ಣು (ಲಕ್ಷಗಳಲ್ಲಿ)	ಗ್ರಾಮೀಣ (ಲಕ್ಷಗಳಲ್ಲಿ)	ನಗರ (ಲಕ್ಷಗಳಲ್ಲಿ)
೧	ಬೆಂಗಳೂರು	೪೮.೪	೩೧.೬ (೬೫.೩%)	೧೮.೧ (೫೭.೩%)	೧೩.೫ (೪೨.೬%)	೩.೨ ೧೦.೦%)	೨೮.೪ (೮೯.೯%)
೨	ಬಳ್ಳಾರಿ	೧೮.೯	೪.೯ (೨೬.೧%)	೪.೫ (೯೨.೦%)	೨.೪ (೪೮.೪%)	೨.೧ (೪೨.೦%)	೨.೯ (೫೭.೯%)
೩	ಬೀದರ	೧೨.೬	೪.೫ (೩೫.೯%)	೩.೦ (೬೭.೦%)	೧.೫ (೩೨.೯%)	೩.೨ ೭೦.೦%)	೧.೭ (೨೯.೯%)
೪	ಬಿಜಾಪೂರ	೨೯.೩	೧೩.೧ (೪೪೬%)	೮.೪ (೬೪.೩%)	೪.೭ (೩೫.೭%)	೯.೨ (೭೦.೦%)	೩.೯ (೨೯.೯%)

೫	ಧಾರವಾಡ	೩೫.೦	೧೭೦ (೪೮.೫%)	೧೦.೬ (೬೨.೬%)	೬೩ (೩೭.೩%)	೯.೮ (೫೭.೫%)	೭.೨ (೪೨.೪%)
೬	ಗುಲಬರ್ಗಾ	೨೫.೮	೭೯ (೩೦.೬%)	೫.೪ (೬೮.೮%)	೨.೫ (೩೧.೧%)	೪.೭ (೫೯.೭%)	೩.೨ (೪೦.೨%)
೭	ಕೋಲಾರ	೨೨.೨	೯.೪ (೪೨.೩%)	೫.೯ (೬೩.೨%)	೩.೪ (೩೬.೭%)	೬.೧ (೬೫.೩%)	೩.೩ (೩೪.೬%)
೮	ರಾಯಚೂರು	೨೩.೧	೬.೬ (೨೮.೫%)	೪.೬ (೬೯.೪%)	೨.೦ (೩೦.೫%)	೪.೪ (೬೬.೫%)	೨.೨ (೩೩.೪%)
೯	ಶಿವಮೊಗ್ಗ	೧೯.೧	೯.೯ (೫೨.೦%)	೫.೯ (೫೯.೦%)	೪.೧ (೪೦.೯%)	೬.೬ (೬೫.೯%)	೩.೪ (೩೪.೦%)
೧೦	ಉತ್ತರ ಕನ್ನಡ	೧೨.೨	೬.೯ (೫೬.೪%)	೪.೦ (೫೮.೧%)	೨.೯ (೪೧.೮%)	೪.೮ (೭೦.೩%)	೨.೦ (೨೯.೬%)

ಕರ್ನಾಟಕದಲ್ಲಿ ಉರ್ದು ಭಾಷಿಕರು ಪಡೆಯುತ್ತಿರುವ ಪ್ರಾಥಮಿಕ, ಮಾಧ್ಯಮಿಕ ಮತ್ತು ಇತರೆ ಶಿಕ್ಷಣದ ವಿವರ (ಲಕ್ಷಗಳಲ್ಲಿ) : ಆವರಣದಲ್ಲಿರುವುದು ಶೇಕಡಾವಾರು ಸೂಚಿಸುತ್ತದೆ.

ಕ್ರಮ	ಜಿಲ್ಲೆಗಳು	ಒಟ್ಟು ಅಕ್ಷರಸ್ಥರ ಪ್ರಮಾಣ	ಔಪಚಾರಿಕ ಶಿಕ್ಷಣ ಪಡೆದು ಸಾಕ್ಷರತೆ ಆದವರ ಪ್ರಮಾಣ	ಪ್ರಾಥಮಿಕ	ಮಾಧ್ಯಮಿಕ	ಎಸ್.ಎಸ್. ಎಲ್.ಸಿ.	೧೦ + ೨	ತಾಂತ್ರಿಕೇತರ ಡಿಪ್ಲೊಮಾ	ತಾಂತ್ರಿಕ ಡಿಪ್ಲೊಮಾ	ಸ್ನಾತಕೋತ್ತರ ಮತ್ತು ಉನ್ನತ ವ್ಯಾಸಂಗ
೧	೨	೩	೪	೫	೬	೭	೮	೯	೧೦	೧೧
೧	ಬೆಂಗಳೂರು	೩೧.೬	೦.೦೬ (೦.೧)	೧೦.೮ (೩೪.೩)	೭.೨ (೨೨.೬)	೬.೮ (೨೧.೫)	೨.೩ (೭.೨)	೦.೧೯ (೦.೬)	೦.೬೨ (೧.೯)	೩.೬ (೧೧.೪)
೨	ಬಳ್ಳಾರಿ	೪.೯	೦.೦೩ (೦.೬)	೪.೧ (೮೨.೯)	೧.೩ (೨೫.೫೮)	೦.೯ (೧೭.೨)	೦.೩ (೬.೦)	೦.೦೬ (೧.೧)	೦.೦೪ (೦.೮)	೦.೩ (೬.೧)
೩	ಬೀದರ	೪.೫	೦.೦೨ (೦.೪)	೨.೬ (೫೮.೭)	೦.೭ (೧೫.೬)	೦.೭ (೧೪.೭)	೦.೩ (೫.೬)	೦.೦೨ (೦.೫)	೦.೦೨ (೦.೪)	೦.೨ (೩.೮)
೪	ಬಿಜಾಪೂರ	೧೩.೧	೦.೪೯ (೩.೭)	೭.೬ (೫೮.೧)	೨.೨ (೧೭.೦)	೧.೫ (೧೧.೮)	೦.೬ (೪.೪)	೦.೧೦ (೦.೭)	೦.೦೫ (೦.೪)	೦.೫ (೩.೬)
೫	ಧಾರವಾಡ	೧೭.೦	೦.೦೩ (೦.೧)	೧೦.೭ (೬೨.೮)	೨.೨ (೧೩.೨)	೨.೩ (೧೩.೨)	೦.೮ (೪.೬)	೦.೧೨ (೦.೭)	೦.೧೧ (೦.೬)	೦.೮ (೪.೫)

೬	ಗುಲಬರ್ಗಾ	೭೯	೦.೦೪	೪.೧	೧.೭	೧.೨	೦.೪	೦.೦೫	೦.೦೫	೦.೪
			(೦.೫)	(೫೧.೪)	(೨೧.೨)	(೧೫.೬)	(೫.೪)	(೦.೬)	(೦.೫)	(೪.೫)
೭	ಕೋಲಾರ	೯.೪	೦.೦೩	೪.೮	೨.೪	೧.೩	೦.೩	೦.೦೯	೦.೦೮	೦.೩
			(೦.೩)	(೫೦.೭%)	(೨೫.೯%)	(೧೪.೩%)	(೩.೬%)	(೦.೯%)	(೦.೮%)	(೩.೧%)
೮	ರಾಯಚೂರ	೬.೬	೦.೦೮	೪.೧	೦.೯	೦.೮	೦.೩	೦.೦೩	೦.೦೩	೦.೩
			(೧.೨%)	(೬೬%)	(೧೪.೩%)	(೧೨.೫%)	(೪.೩%)	(೦.೫%)	(೦.೪%)	(೩.೮%)
೯	ಶಿವಮೊಗ್ಗ	೯.೯	೦.೦೨	೫.೨	೨.೨	೧.೩	೦.೪	೦.೦೮	೦.೦೬	೦.೪
			(೦.೧%)	(೫೨.೨%)	(೨೨.೨%)	(೧೩.೩%)	(೪.೪%)	(೦.೮%)	(೦.೫%)	(೪.೧%)
೧೦	ಉತ್ತರ ಕನ್ನಡ	೭೯	.೦೪	೪.೦	೧.೩	೧.೦	೦.೨	೦.೨	೦.೦೨	೦.೩
			(೦.೫%)	(೫೮.೧%)	(೧೮.೫%)	(೧೩.೮%)	(೩.೪%)	(೩.೪%)	(೦.೩%)	(೪.೩%)

ಸಂಶೋಧನೆಯ ವಿಧಾನ

೧. ಸಂಶೋಧನೆಯ ಅಧ್ಯಯನಕ್ಕೆ ಸ್ಥಳದ ಆಯ್ಕೆ

ಪ್ರಸ್ತುತ ಈ ಅಧ್ಯಯನವು ಗುಲಬರ್ಗಾ ಜಿಲ್ಲೆಯ ಹತ್ತು ತಾಲ್ಲೂಕುಗಳನ್ನು ಆಯ್ಕೆಮಾಡಿಕೊಂಡಿದ್ದು; ಈ ಆಯ್ದುಕೊಂಡ ತಾಲೂಕಿನಲ್ಲಿ ಪ್ರತಿಯೊಂದು ತಾಲ್ಲೂಕಿಗೆ ನಾಲ್ಕು ಉರ್ದು ಮಾಧ್ಯಮದ ಪ್ರೌಢಶಾಲೆಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಪ್ರೌಢಶಾಲೆಗಳು ಕರ್ನಾಟಕ ಸರ್ಕಾರದಿಂದ ಅನುಮತಿ ಪಡೆದವುಗಳಾಗಿವೆ. ಅಂದರೆ ಇಲ್ಲಿ ಸರಕಾರಿ ಪ್ರೌಢಶಾಲೆಗಳು ಅನುದಾನ ರಹಿತ/ಸಹಿತ ಮತ್ತು ಖಾಸಗಿ ಪ್ರೌಢಶಾಲೆಗಳಿವೆ. ಆದರೆ ಇವುಗಳಲ್ಲಿ ಕರ್ನಾಟಕ ಸರ್ಕಾರದ ಪಠ್ಯಕ್ರಮಕ್ಕನುಸಾರವಾಗಿ ಇಲ್ಲಿ ಶಿಕ್ಷಣ ನೀಡಲಾಗುತ್ತದೆ. ಈ ಶಾಲೆಗಳಲ್ಲಿ ೮ನೇ ತರಗತಿಯಿಂದ ೧೦ ನೇ ತರಗತಿಯವರೆಗಿನ ಮಕ್ಕಳನ್ನು ಮಾತ್ರ ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಗುಲ್ಬರ್ಗ ಜಿಲ್ಲೆಯಲ್ಲಿ ತಾಲೂಕುಗಳು





ತಾಲ್ಲೂಕುಗಳು

೦೧. ಫ಼ಜಲಪೂರ

೦೨. ಆಳಂದ

೦೩. ಚಿಂಚೋಳಿ

೦೪. ಚಿತ್ತಾಪೂರ

೦೫. ಗುಲಬರ್ಗಾ

೦೬. ಜೇವರ್ಗಿ

೦೭. ಸೇಡಂ

೦೮. ಶಹಾಪೂರ

೦೯. ಸುರಪೂರ

೧೦. ಯಾದಗಿರ


ಕ್ಷೇತ್ರಕಾರ್ಯ ಕೈಗೊಂಡ ಸ್ಥಳಗಳು

ಗುಲಬರ್ಗಾ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಂಡ ಉರ್ದು ಪ್ರೌಢಶಾಲೆಗಳು

ಕ್ರಸಂ.	ತಾಲೂಕಿನ ಹೆಸರು	ಶಾಲೆಯ ಹೆಸರು	
೧	ಅಫಜಲಪೂರ	೧.	ಸರಕಾರಿ ಉರ್ದು ಪ್ರೌಢಶಾಲೆ, (ಹೆಣ್ಣು) ಅತನೂರ
		೨.	ಸರಕಾರಿ ಉರ್ದು ಪ್ರೌಢಶಾಲೆ, (ಗಂಡು) ಅತನೂರ
		೩.	ಸರಕಾರಿ ಉರ್ದು ಪ್ರೌಢಶಾಲೆ, ಕರಜಗಿ
		೪.	ಸರಕಾರಿ ಉರ್ದು ಪ್ರೌಢಶಾಲೆ, ಅಫಜಲಪೂರ
೨	ಆಳಂದ	೫.	ಸರಕಾರಿ ಉರ್ದು ಪ್ರೌಢಶಾಲೆ, ಆಳಂದ
		೬.	ಸರಕಾರಿ ಉರ್ದು ಪ್ರೌಢಶಾಲೆ, ಆಳಂಗ
		೭.	ಸರಕಾರಿ ಉರ್ದು ಪ್ರೌಢಶಾಲೆ, ತಡೊಳ
		೮.	ಸರಕಾರಿ ಉರ್ದು ಪ್ರೌಢಶಾಲೆ, ಅನ್ಸಾರಿ ಮೊಹಲ್ಲಾ
೩	ಚಿಂಚೋಳಿ	೯.	ಸರಕಾರಿ ಪ.ಪೂ. ಕಾಲೇಜು, (ಗಂಡು) ಚಿಂಚೋಳಿ
		೧೦.	ಸರಕಾರಿ ಪ.ಪೂ. ಕಾಲೇಜು, (ಹೆಣ್ಣು) ಚಿಂಚೋಳಿ
		೧೧.	ಸರಕಾರಿ ಪ್ರೌಢಶಾಲೆ (ಗಂಡು) ಸುಲೇಪೆಟ
		೧೨.	ಸರಕಾರಿ ಪ್ರೌಢಶಾಲೆ (ಹೆಣ್ಣು) ಸುಲೇಪೆಟ

೪	ಚಿತ್ತಾಪೂರ	೧೩.	ಸರಕಾರಿ ಉರ್ದು ಪ್ರೌಢಶಾಲೆ ಶಹಾಬಾದ
		೧೪.	ಸರಕಾರಿ ಪದವಿ ಪೂರ್ವ (ಹೆಣ್ಣು) ಕಾಲೇಜು, ಚಿತ್ತಾಪೂರ
		೧೫.	ಸರಕಾರಿ ಪದವಿ ಪೂರ್ವ (ಗಂಡು) ಕಾಲೇಜು, ಚಿತ್ತಾಪೂರ
		೧೬.	ಸರಕಾರಿ ಪ್ರೌಢಶಾಲೆ ದಂಡೋತಿ
೫	ಗುಲಬರ್ಗಾ	೧೭.	ಸರಕಾರಿ ಪ್ರೌಢಶಾಲೆ ಎಸ್.ಟಿ.ಬಿ.ಟಿ., ಗುಲಬರ್ಗಾ
		೧೮.	ಸರಕಾರಿ ಪ್ರೌಢಶಾಲೆ ರೋಜಾ (ಬಿ–೧)
		೧೯.	ಸರಕಾರಿ ಪ್ರೌಢಶಾಲೆ ಶೇಖರೋಜಾ
		೨೦.	ಸರಕಾರಿ ಪ್ರೌಢಶಾಲೆ ಲಾಲಗೇರಿ
೬	ಜೇವರ್ಗಿ	೨೧.	ಸರಕಾರಿ ಉರ್ದು ಪ್ರೌಢಶಾಲೆ ಯಡ್ರಾಮಿ
		೨೨.	ಸರಕಾರಿ ಉರ್ದು ಪ್ರೌಢಶಾಲೆ ಇಜೇರಿ
		೨೩.	ಸರಕಾರಿ ಪದವಿ ಪೂರ್ವ ಕಾಲೇಜ ಜೇವರ್ಗಿ
		೨೪.	ಅಲುದ ಉರ್ದು ಪ್ರೌಢಶಾಲೆ ಜೇವರ್ಗಿ
೭	ಸೇಡಂ	೨೫.	ಸರಕಾರಿ (ಗಂಡು) ಪ್ರೌಢಶಾಲೆ ಮುದೋಳ
		೨೬.	ಸರಕಾರಿ (ಹೆಣ್ಣು) ಪ್ರೌಢಶಾಲೆ ಮುದೋಳ
		೨೭.	ಸರಕಾರಿ ಪದವಿ ಪೂರ್ವ (ಹೆಣ್ಣು) ಕಾ. ಸೇಡಂ
		೨೮.	ಸರಕಾರಿ ಪದವಿ ಪೂರ್ವ (ಗಂಡು) ಕಾ. ಸೇಡಂ
೮	ಶಹಾಪೂರ	೨೯.	ಸರಕಾರಿ ಉರ್ದು ಪ್ರೌಢಶಾಲೆ ಗೋಗಿ
		೩೦.	ಸರಕಾರಿ ಉರ್ದು ಪ್ರೌಢಶಾಲೆ ಸಗರ
		೩೧.	ಸರಕಾರಿ ಪದವಿ ಪೂರ್ವ (ಹೆಣ್ಣು) ಕಾ. ಶಹಾಪೂರ
		೩೨.	ಸರಕಾರಿ ಪದವಿ ಪೂರ್ವ (ಗಂಡು) ಕಾ. ಶಹಾಪೂರ
೯	ಸುರಪೂರ	೩೩.	ಸರಕಾರಿ ಉರ್ದು ಪ್ರೌಢಶಾಲೆ ಕೆಂಭಾವಿ
		೩೪.	ಸರಕಾರಿ ಪದವಿ ಪೂರ್ವ ಕಾ. ಸುರಪೂರ
		೩೫.	ಸರಕಾರಿ ಪದವಿ ಪೂರ್ವ (ಹೆಣ್ಣು) ಕಾ. ರಂಗಂಪೇಟ್
		೩೬.	ಸರಕಾರಿ ಪದವಿ ಪೂರ್ವ (ಗಂಡು) ಕಾ. ರಂಗಂಪೇಟ್
೧೦	ಯಾದಗಿರ	೩೭.	ಸರಕಾರಿ ಉರ್ದು ಪ್ರೌಢಶಾಲೆ ಸ್ಟೇಷನ್ ಬಂಜಾರ, ಯಾದಗಿರ
		೩೮.	ಸರಕಾರಿ ಉರ್ದು (ಹೆಣ್ಣು) ಪ್ರೌಢ ಶಾಲೆ ಗುರುಮಿಠಕಲ್
		೩೯.	ಸರಕಾರಿ ಪದವಿ ಪೂರ್ವ ಕಾಲೇಜು, ಯಾದಗಿರ
		೪೦.	ಜವಾಹರ ಉರ್ದು ಪ್ರೌಢಶಾಲೆ, ಯಾದಗಿರ

ಗುಲ್ಬರ್ಗ ಜಿಲ್ಲೆಯಲ್ಲಿ ಕ್ಷೇತ್ರ ಕಾರ್ಯಕೈಗೊಂಡ ಸ್ಥಳಗಳ ವಿವರಗಳು



ಮಾಹಿತಿ ಒದಗಿಸಿದ ವಿದ್ಯಾರ್ಥಿಗಳ ಆಯ್ಕೆ ವಿಧಾನ

ಗುಲಬರ್ಗಾ ಜಿಲ್ಲೆಯಲ್ಲಿ ಉರ್ದು ಮಾಧ್ಯಮದ ಶಾಲೆಗಳಲ್ಲಿ ಮುಸ್ಲಿಂ ಜನಾಂಗದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆ ಜನಾಂಗದವರು ಉರ್ದು ಮಾಧ್ಯಮವನ್ನು ಅಭ್ಯಾಸ ಮಾಡುವುದಿಲ್ಲ. ಈ ಉರ್ದುಶಾಲೆಗಳಲ್ಲಿ ತಮ್ಮ ಮಾತೃಭಾಷೆಯಾದ ಉರ್ದು ಮಾಧ್ಯಮದಲ್ಲಿ ಶಿಕ್ಷಣ ಪಡೆಯುತ್ತಿರುವುದರಿಂದ ಇವರು ತಮ್ಮ ಸುತ್ತಮುತ್ತಲಿನ ಪರಿಸರದಿಂದ ಕೆಲವೊಂದು ವಿದ್ಯಾರ್ಥಿಗಳು ಕನ್ನಡ ಅಲ್ಪಸ್ವಲ್ಪ ಬಲ್ಲವರಾಗಿದ್ದಾರೆ. ಕನ್ನಡ ಭಾಷೆಯು ದ್ವಿತೀಯ/ತೃತೀಯ ಭಾಷೆಯಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಮಾತ್ರ ಕನ್ನಡ ಭಾಷೆ ಉಪಯೋಗಿಸುವರು. ಇಂತಹ ಮಕ್ಕಳನ್ನು ಸಂಶೋಧನೆಗೆ ಮಾಹಿತಿ ಸಂಗ್ರಹಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ. ಸಂಶೋಧನೆಗೆ ೮ನೇ ತರಗತಿಯಿಂದ ೧೦ ನೇ ತರಗತಿಯವರೆಗಿನ ಮಕ್ಕಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ೨೦೦೪-೦೫ ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳನ್ನು ಮಾಹಿತಿದಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಪ್ರತಿಯೊಂದು ತರಗತಿಯಲ್ಲಿ ಅಂದರೆ ೮ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಪ್ರತಿಯೊಂದು ತರಗತಿಯಲ್ಲಿ ೧೦ ವಿದ್ಯಾರ್ಥಿಗಳು ಅಂದರೆ ೫ ವಿದ್ಯಾರ್ಥಿಗಳು ಗಂಡು ೫ ಹೆಣ್ಣು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಒಟ್ಟು ಪ್ರತಿಯೊಂದು ಶಾಲೆಯಿಂದ ೩೦ ವಿದ್ಯಾರ್ಥಿಗಳಿಂದ ಸಂಶೋಧನೆಗೆ ಮಾಹಿತಿ ಸಂಗ್ರಹಿಸಲಾಗಿದೆ.

	೮ನೇ ತರಗತಿ			೯ನೇ ತರಗತಿ			೧೦ ನೇ ತರಗತಿ			ಒಟ್ಟು
ಉರ್ದು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	
ಮಾತೃಭಾಷೆ ಮಕ್ಕಳು	೫	೫	೧೦	೫	೫	೧೦	೫	೫	೧೦	೩೦

ಈ ಮೇಲೆ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ವಿವಿಧ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಿನ್ನೆಲೆಯುಳ್ಳವರಾಗಿದ್ದು ಈ ಆಯ್ಕೆಮಾಡಿಕೊಂಡ ವಿದ್ಯಾರ್ಥಿಗಳಲ್ಲಿ ಪೂರ್ಣ ಉರ್ದು ಮಾತೃ ಭಾಷೆಯುಳ್ಳವರು. ಆದರೆ ಇದರಲ್ಲಿ ಕೆಲವೊಂದು ವಿದ್ಯಾರ್ಥಿಗಳಿಗೆ ತಮ್ಮ ಸುತ್ತಮುತ್ತಲಿನ ಪರಿಸರದಿಂದ ಕನ್ನಡ ಭಾಷೆ ಬಗ್ಗೆ ತಿಳುವಳಿಕೆ ಇದೆ. ಅಂದರೆ ಕನ್ನಡ ಭಾಷೆಯನ್ನು ಸ್ವಲ್ಪ ಸ್ವಲ್ಪ ಮಾತನಾಡುವರು.

ಮಾಹಿತಿ ಸಂಗ್ರಹಿಸುವ ವಿಧಾನ

ಉರ್ದುಭಾಷಿಕ ಮಕ್ಕಳು ಕನ್ನಡ ಭಾಷೆ ಓದುವಾಗಿನ ಸಮಸ್ಯೆಗಳನ್ನು ಗುರುತಿಸಲಿಕ್ಕೆ ಎರಡು ವಿಧಾನಗಳನ್ನು ಅನುಸರಿಸಲಾಯ್ತು. ೮ನೇ ತರಗತಿಯಿಂದ ೧೦ ನೇ ತರಗತಿಯವರೆಗೆ ಅವರು ಅಭ್ಯಾಸ ಮಾಡುತ್ತಿರುವ ಕನ್ನಡ ಭಾಷೆಯ ಪಠ್ಯ ಪುಸ್ತಕಗಳಿಂದ ಹಾಗೂ ಕನ್ನಡ ಶಬ್ದಕೋಶದಿಂದ ಪದಗಳನ್ನು

ಸಂಗ್ರಹಿಸಿ ಪಟ್ಟಿಯನ್ನು ಸಿದ್ದಪಡಿಸಿ, ವಿದ್ಯಾರ್ಥಿಗಳಿಗೆ ಪದಗಳ ಪಟ್ಟಿಯನ್ನು ನೀಡಿ ಪ್ರತಿಯೊಂದು ಮಗುವಿಗೆ ಪ್ರತ್ಯೇಕವಾಗಿ ಓದಲು ಕೇಳಲಾಯಿತು. ಮಕ್ಕಳು ಓದಿದ್ದನ್ನು ಧ್ವನಿ ಮುದ್ರಿತ ಪೆಟ್ಟಿಗೆಯಲ್ಲಿ ಧ್ವನಿ ಮುದ್ರಿಸಿಕೊಳ್ಳಲಾಯಿತು.

ಈ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಎಲ್ಲ ಶಾಲೆಯ ಮಕ್ಕಳಿಗೆ ಇದೆ ಪಟ್ಟಿಯನ್ನು ಓದಿಸಿ ಧ್ವನಿ ಮುದ್ರಿಸಿಕೊಳ್ಳಲಾಯ್ತು. ಈ ರೀತಿ ಪದಗಳ ಪಟ್ಟಿ ಮಾಡಿ ಮಕ್ಕಳಿಗೆ ಓದಿಸುವ ಉದ್ದೇಶವೇನೆಂದರೆ ಯಾವ ತೆರನಾಗಿ ಉರ್ದು ಭಾಷಿಕ ಮಕ್ಕಳು ಕನ್ನಡವನ್ನು ಓದುತ್ತಾರೆ. ಮತ್ತು ಓದುವಾಗ ನಮ್ಮ ನಿರ್ದಿಷ್ಟ ಉದ್ದೇಶವಾದ ಸ್ವರಗಳು, ಅರ್ಧ ಸ್ವರಗಳು, ವ್ಯಂಜನಗಳು ಮತ್ತು ಗುಣಿತಾಕ್ಷರಗಳ ಉಚ್ಚಾರಣೆ ರೀತಿಯನ್ನು ತಿಳಿಯಬಹುದು. ಈ ಉಚ್ಚರಣಾ ರೀತಿಯನ್ನು ತಿಳಿಯುವಂತಹ ಸಂದರ್ಭದಲ್ಲಿ ಕೇವಲ ಕೆಲವೇ ವಿದ್ಯಾರ್ಥಿಗಳ ಓದುಗಾರಿಕೆಯನ್ನು ಕೇಂದ್ರವಾಗಿರಿಸಿಕೊಳ್ಳದೆ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಎಲ್ಲ ವಿದ್ಯಾರ್ಥಿಗಳ ಓದುಗಾರಿಕೆಯನ್ನು ನೋಡಿ ಅವರು ಸ್ವರಗಳು ಅರ್ಧ ಸ್ವರಗಳು ಮತ್ತು ವ್ಯಂಜನಗಳು ಹಾಗೂ ಗುಣಿತಾಕ್ಷರಗಳನ್ನು ಓದುವಾಗ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಎಲ್ಲೆಲ್ಲಿ ಸಮಸ್ಯೆಗಳನ್ನು ಎದುರಿಸುತ್ತಾರೆ ಎನ್ನುವದನ್ನು ಪತ್ತೆ ಹಚ್ಚಲಾಯಿತು.

ಉರ್ದು ಭಾಷಿಕ ಮಕ್ಕಳಿಗೆ ತಾವು ಅಭ್ಯಾಸ ಮಾಡುತ್ತಿರುವ ಕನ್ನಡ ಭಾಷೆಯ ಪಠ್ಯ ಪುಸ್ತಕವನ್ನು ಓದಲು ಹೇಳಲಾಯ್ತು. ೮, ೯ ಮತ್ತು ೧೦ನೆ ತರಗತಿ ಮಕ್ಕಳಿಗೆ ಆಯಾ ತರಗತಿಯ ಕನ್ನಡ ಭಾಷಾ ಪಠ್ಯಗಳನ್ನು ನೀಡಿ ಓದಿಸಲಾಯಿತು. ಆ ಸಂದರ್ಭದಲ್ಲಿ ಮಾಡುವಂತಹ ವ್ಯತ್ಯಾಸಗಳನ್ನು ಗುರುತಿಸಿ ವಿಶ್ಲೇಷಣೆ ಮಾಡಲಾಯಿತು. ಹೀಗೆ ಉರ್ದು ಭಾಷಿಕ ಮಕ್ಕಳು ಕನ್ನಡವನ್ನು ಓದುವಾಗ ಎದುರಿಸುವ ಸಮಸ್ಯೆಗಳನ್ನು ತಿಳಿಯಲು ಈ ಎರಡು ವಿಧಾನವನ್ನು ಅನುಸರಿಸಿ ಸಮಸ್ಯೆಗಳ ಪಟ್ಟಿಯನ್ನು ಸಂಗ್ರಹಿಸಲಾಯಿತು.

ಬರವಣಿಗೆ ಸಮಸ್ಯೆಗಳ ಮಾಹಿತಿ ತಿಳಿಯಲು ಉರ್ದು ಭಾಷಿಕ ಮಕ್ಕಳಿಗೆ ತಾವು ಅಧ್ಯಯನ ಮಾಡುತ್ತಿದ್ದ (೮ನೇ ತರಗತಿಯಿಂದ ೧೦ ತರಗತಿಯವರೆಗೆ) ಹಾಗೂ ಕನ್ನಡ ಭಾಷೆಯ ಪಠ್ಯಪುಸ್ತಕದಲ್ಲಿ ಅಕಾರಾದಿಯಾಗಿ ಪದಗಳ ಪಟ್ಟಿಯನ್ನು ಸಿದ್ಧಪಡಿಸಲಾಯ್ತು. ಈ ಪದಗಳ ಪಟ್ಟಿಯನ್ನು ಓದುಗಾರಿಕೆ ಪರೀಕ್ಷೆ ಮಾಡುವಾಗ ಹಾಜರಾದ ವಿದ್ಯಾರ್ಥಿಗಳಿಗೆ ಮಾತ್ರ ನಾವೇ ಓದಿ ಹೇಳಿ ಮಕ್ಕಳ ಕಡೆಯಿಂದ ಬರೆಸಲಾಯ್ತು. ನಾವು ಹೇಳಿದಂತೆ ವಿದ್ಯಾರ್ಥಿಗಳು ಕೇಳಿಕೊಂಡು ಒಂದರ ನಂತರ ಒಂದು ಪದಗಳನ್ನು ಬರೆದರು ಅವರು ಬರೆದ ಪದಗಳ ಪಟ್ಟಿಯ ಉತ್ತರ ಪತ್ರಿಕೆಯನ್ನು ತೆಗೆದುಕೊಳ್ಳಲಾಯಿತು. ಜೊತೆಗೆ ಅವರಿಗೆ ಇಟ್ಟಿರುವ ೮, ೯ ಮತ್ತು ೧೦ನೆ ತರಗತಿ ಕನ್ನಡ ಪಠ್ಯಗಳನ್ನು ಓದಿಸಿ ಪರೀಕ್ಷಿಸಿ ಮಾಹಿತಿಯನ್ನು ದಾಖಲಿಸಿಕೊಳ್ಳಲಾಯಿತು.

೮ನೇ ತರಗತಿಯಿಂದ ೧೦ನೇ ತರಗತಿಯವರೆಗಿನ ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾದ ವಿದ್ಯಾರ್ಥಿಗಳಿಗೆ ಅವರವರ ಭಾಷಾ ಪಠ್ಯಪುಸ್ತಕದಲ್ಲಿನ ಗದ್ಯ ಪಾಠಗಳನ್ನು ನಾವೇ ಓದಿ ಹೇಳಿ ಮಕ್ಕಳ ಕಡೆಯಿಂದ ಬರೆಸಲಾಯ್ತು. ನಾವು ಹೇಳಿದಂತೆ ವಿದ್ಯಾರ್ಥಿಗಳು ಕೇಳಿಸಿಕೊಂಡು ಗದ್ಯ ಪಾಠಗಳನ್ನು ಬರೆದರು. ಅವರು ಬರೆದ ಗದ್ಯ ಪಾಠಗಳ ಉತ್ತರ ಪತ್ರಿಕೆಯನ್ನು ತೆಗೆದುಕೊಳ್ಳಲಾಯಿತು. ನಂತರ ನಾವು ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಬರೆದ ತ್ರೈಮಾಸಿಕ, ಅರ್ಧವಾರ್ಷಿಕ, ವಾರ್ಷಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಲಾಯಿತು. ಇದರಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಬರೆಯುವಾಗ ಯಾವ ತೆರನಾಗಿ ಸಮಸ್ಯೆಗಳನ್ನು ಎದುರಿಸುತ್ತಾರೆ ಎನ್ನುವುದನ್ನು ಗುರುತಿಸಿ ಸಂಗ್ರಹಿಸಲಾಯಿತು.

ವ್ಯಾಕರಣಾಂಶಗಳ ಬಗ್ಗೆ ತಿಳಿಯಲು ಅವರು ಆಚರಿಸುತ್ತಿರುವ ಹಬ್ಬಗಳು ಮತ್ತು ಕಥೆ ಕಾದಂಬರಿಗಳು, ನಾಟಕಗಳು, ಸಿನೆಮಾ ಕಥೆಗಳು ಇವುಗಳನ್ನು ಕುರಿತು ತಮ್ಮದೆ ಶೈಲಿಯಲ್ಲಿ ಅವರನ್ನೆ ಬರೆಯಲು ಹೇಳಲಾಯಿತು. ತಮಗೆ ತಿಳಿದ ವಿಷಯದ ಬಗ್ಗೆ ಬರೆದು ಉತ್ತರ ಪತ್ರಿಕೆ ಕೊಟ್ಟರು. ಅಂದರೆ ತಮಗೆ ತಿಳಿದಿರುವ ವಿಚಾರಗಳನ್ನು ಕನ್ನಡದಲ್ಲಿ ಬರೆಯುವಂತೆ ಸೂಚಿಸಲಾಯಿತು. ಅಂತಹ ವಿಚಾರಗಳ್ನು ಸಂಗ್ರಹಿಸಲಾಯಿತು.

ಪ್ರಸ್ತುತ ಅಧ್ಯಯನದ ರೂಪುರೇಷೆ

ಪ್ರಸ್ತುತ ಅಧ್ಯಯನವನ್ನು ಈ ಕೆಳಕಂಡಂತೆ ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ಪ್ರಸ್ತಾವನೆ
೨. ಓದಿನ ಸಮಸ್ಯೆಗಳು
೩. ಬರವಣಿಗೆ ಸಮಸ್ಯೆಗಳು
೪. ಗುಣಿತಕ್ಷರ ಮತ್ತು ಒತ್ತಕ್ಷರಗಳು
೫. ವ್ಯಾಕರಣಾಂಶಗಳು
೬. ಪರಿಹಾರಗಳು
೭. ಉಪಸಂಹಾರ

ಪ್ರಸ್ತಾವನೆ ಭಾಗದಲ್ಲಿ ಪ್ರಸ್ತುತ ಈ ಅಧ್ಯಯನದ ಸಂಶೋಧನೆ ಕುರಿತು ಸಂಕ್ಷಿಪ್ತವಾಗ ಪ್ರಸ್ತಾಪಿಸಲಾಗಿದೆ. ಮತ್ತು ಭಾಷೆ ಮತ್ತು ಮಾಧ್ಯಮ, ಉರ್ದು ಮತ್ತು ಕನ್ನಡ ಭಾಷೆಗಳ ಐತಿಹಾಸಿಕ ಹಿನ್ನೆಲೆ ಅದರ ಜೊತೆಗೆ ಉರ್ದು ಭಾಷೆಯ ಸಾಮಾಜೋಭಾಷಿಕ ಅಧ್ಯಯನದ ಹಿನ್ನೆಲೆ, ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ಪ್ರಾಮುಖ್ಯತೆ ಹಾಗೂ ಪ್ರಸ್ತುತ ಅಧ್ಯಯನದ ಮಿತಿ ಮತ್ತು ಸ್ವರೂಪವನ್ನು ಕುರಿತು ದೀರ್ಘವಾಗಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಉರ್ದುಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಎದುರಿಸುವ ಸಮಸ್ಯೆಗಳನ್ನು ಈ ಕೆಳಗಿನ ಐದು ವಿಭಾಗಗಳಲ್ಲಿ ವಿಶ್ಲೇಷಿಸಿದೆ.

೧. ಸ್ವರಗಳನ್ನು ಓದುವಾಗ ಸಮಸ್ಯೆಗಳು
೨. ಅರ್ಧ ಸ್ವರಗಳನ್ನು ಓದುವಾಗ ಸಮಸ್ಯೆಗಳು
೩. ವ್ಯಂಜನಗಳನ್ನು ಓದುವಾಗ ಸಮಸ್ಯೆಗಳು
೪. ಗುಣಿತಾಕ್ಷರಗಳನ್ನು ಓದುವಾಗ ಸಮಸ್ಯೆಗಳು
೫. ಸಂಯುಕ್ತಾಕ್ಷರಗಳನ್ನು ಓದುವಾಗ ಸಮಸ್ಯೆಗಳು

ಮೂರನೆಯ ಅಧ್ಯಾಯದಲ್ಲಿ ಉರ್ದು ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಎದುರಿಸುವ ಸಮಸ್ಯೆಗಳನ್ನು ಈ ಕೆಳಗಿನ ವಿಭಾಗಗಳಲ್ಲಿ ವಿಶ್ಲೇಷಿಸಿದೆ.

೧. ಸ್ವರಗಳನ್ನು ಬರೆಯುವಾಗ ಸಮಸ್ಯೆಗಳು
೨. ಅರ್ಧ ಸ್ವರಗಳನ್ನು ಬರೆಯುವಾಗ ಸಮಸ್ಯೆಗಳು
೩. ವ್ಯಂಜನಗಳನ್ನು ಬರೆಯುವಾಗ ಸಮಸ್ಯೆಗಳು
೪. ಗುಣಿತಾಕ್ಷರಗಳನ್ನು ಬರೆಯುವಾಗ ಸಮಸ್ಯೆಗಳು
೫. ಸಂಯುಕ್ತಾಕ್ಷರಗಳನ್ನು ಬರೆಯುವಾಗ ಸಮಸ್ಯೆಗಳು

ನಾಲ್ಕನೆಯ ಅಧ್ಯಾಯದಲ್ಲಿ ವ್ಯಾಕರಣಾಂಶಗಳನ್ನು ಕುರಿತು ವಿಶ್ಲೇಷಿಸಿದೆ. ಕನ್ನಡ ಮತ್ತು ಉರ್ದು ವ್ಯಾಕರಣಾಂಶಗಳ ಭಿನ್ನತೆಯನ್ನು ಕುರಿತು ಮತ್ತು ವಾಕ್ಯ ರಚನೆಯ ವಿಧಾನಗಳನ್ನು ಈ ಅಧ್ಯಾಯದಲ್ಲಿ ಹೇಳಿದೆ. ೮, ೯ ಮತ್ತು ೧೦ನೆ ತರಗತಿಯಲ್ಲಿ ಅಳವಡಿಸಿರುವ ವ್ಯಾಕರಣಾಂಶಗಳನ್ನು ಮಾತ್ರ ಪರೀಕ್ಷಿಸಿ ದಾಖಲಿಸಲಾಗಿದೆ. ಸಾಧ್ಯವಾದ ಕಡೆಗಳಲ್ಲಿ ಉರ್ದು ಮತ್ತು ಕನ್ನಡ ವ್ಯಾಕರಣಗಳ ಭಿನ್ನತೆಗೆ ಕಾರಣ ಸಹಿತ ವಿವರಿಸಲಾಗಿದೆ. ಉಳಿದ ಕಡೆಗಳಲ್ಲಿ ವ್ಯತ್ಯಾಸಗಳನ್ನು ಮಾತ್ರ ದಾಖಲಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ವ್ಯಾಕರಣಾಂಶಗಳನ್ನು ಕುರಿತು ವಿಶ್ಲೇಷಿಸಿದೆ. ಕನ್ನಡ ಮತ್ತು ಉರ್ದು ವ್ಯಾಕರಣಾಂಶಗಳಲ್ಲಿ ಇರುವ ಭಿನ್ನತೆಯನ್ನು ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ಉರ್ದು ಭಾಷಿಕರ ಮಕ್ಕಳು ಓದುವಿಕೆ ಮತ್ತು ಬರವಣಿಗೆಯಲ್ಲಿ ಏನೆಲ್ಲ ವ್ಯಾಕರಣಾಂಶಗಳ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಗುರುತಿಸಿ ಅಂತಹ ಮಾದರಿಗಳನ್ನು ಮಾತ್ರ ಚರ್ಚಿಸಲಾಗಿದೆ. ಇದಕ್ಕೆ ಆಕಾರ ಪಠ್ಯಪುಸ್ತಕಗಳಲ್ಲಿ ಬಳಕೆಯಾಗಿರುವ ವ್ಯಾಕರಣಾಂಶಗಳನ್ನು ಮಾತ್ರ ಪರೀಕ್ಷಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಉರ್ದುಭಾಷಿಕರ ಮಕ್ಕಳು ಓದುವಿಕೆ ಮತ್ತು ಬರೆವಣಿಗೆಯಲ್ಲಿ ಮಾಡುವ ಸಮಸ್ಯೆಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಅಂತಹ ಸಮಸ್ಯೆಗಳಿಗೆ ಪರಿಹಾರಗಳನ್ನು ಪಠ್ಯ, ಬೋಧನೆ, ಬೋಧಕ, ಪೋಷಕ ಮತ್ತು ಶಾಲೆಯ ಪರಿಸರವು ಹೇಗೆ ಅವಲಂಬಿತವಾಗಿದೆ ಎಂಬುದನ್ನು ಗುರುತಿಸಲಾಗಿದೆ.

ಏಳನೆ ಅಧ್ಯಾಯ ಉಪಸಂಹಾರ ಭಾಗದಲ್ಲಿ ಅಧ್ಯಯನದ ಸಮಗ್ರ ಸ್ವರೂಪ ದಾಖಲಿಸಲಾಗಿದೆ.

ಅಡಿ ಟಿಪ್ಪಣಿಗಳು

೧. ೮-೧೨-೧೯೯೩ರ ಕರ್ನಾಟಕ ಸರ್ಕಾರದ ಆದೇಶ
೨. ಭಾಷಾ ಕಲಿಕೆ, ಭ. ಮಲ್ಲಿಕಾರ್ಜುನ, ಪುಟ ೧
೩. ಭಾಷಾ ಕಲಿಕೆ ಭ. ಮಲ್ಲಿಕಾರ್ಜುನ, ಪುಟ ೧
೪. ನಮ್ಮ ಕನ್ನಡ. ೬೦ ನೇ ಸಂಚಿಕೆ, (ಸಂ) ಕೆ.ವಿ. ನಾರಾಯಣ, ಪುಟ ೯
೫. ೨೦೦೧-೦೨ರ ಪಠ್ಯ ಪುಸ್ತಕ ರಚನಾ ನಿರ್ದೇಶನಾಲಯದ ಆದೇಶ
೬. ಪ್ರಾಥಮಿಕ ಶಿಕ್ಷಣದ ಒಂದು ಚರ್ಚೆ, ಟಿ.ಎಂ. ಕುಮಾರ, ಪುಟ ೨೫
೭. ಪ್ರಾಥಮಿಕ ಶಿಕ್ಷಣದ ಒಂದು ಚರ್ಚೆ, ಟಿ.ಎಂ. ಕುಮಾರ, ಪುಟ ೨೫
೮. ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ಎಸ್. ಬಿ. ಯಾದಮಡ, ಪುಟ ೨೦೪
೯. ಪ್ರಾಥಮಿಕ ಶಿಕ್ಷಣದ ಒಂದು ಚರ್ಚೆ, ಟಿ.ಎಂ. ಕುಮಾರ, ಪುಟ ೨೫
೧೦. ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ಎಸ್. ಬಿ. ಯಾದವಾಡ, ಪುಟ ೨೦೪
೧೧. ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ಎಸ್. ಬಿ. ಯಾದವಾಡ, ಪುಟ ೨೧೫
೧೨. ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ಎಸ್. ಬಿ. ಯಾದವಾಡ, ಪುಟ ೨೧೫
೧೩. ಮುಸ್ಲಿಂ ಕನ್ನಡ, ಸಂಗಮೇಶ ಸವದತ್ತಿಮಠ
೧೪. ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ಎಸ್. ಬಿ. ಯಾದವಾಡ, ಪುಟ ೨೧೫
೧೫. ಮಧ್ಯಕಾಲಿನ ಭಾರತ, ಬಿ. ಪಿ. ಹೂಗಾರ ಮಹಾಬಲೇಶ್ವರಪ್ಪ
೧೬. ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ಎಸ್. ಬಿ. ಯಾದವಾಡ, ಪುಟ ೨೧೫
೧೭. ಸಂಯುಕ್ತ ಕರ್ನಾಟಕ, ಹೇಮಲತ ಮಹಿಷಿ
೧೮. ೨೦೦೧-೦೨ ನೇ ಸಾಲಿನ ಸರ್ಕಾರಿ ಸುತ್ತೋಲೆ
೧೯. ಭಾಷಾಲೇಖ, ಡಾ. ಸಂಗಮೇಶ ಸವದತ್ತಿಮಠ
೨೦. ಎಂ. ಪ್ರಫುಲ್ಲ್ ಹಸನ್-ಕನ್ನಡ ಭಾಷೆಯ ಮೇಲೆ ಉರ್ದುವಿನ ಪ್ರಭಾವ
೨೧. - ಅದೇ -
೨೨. - ಅದೇ -
೨೩. - ಅದೇ -
೨೪. - ಅದೇ -
೨೫. - ಅದೇ -
೨೬. - ಅದೇ -
೨೭. - ಅದೇ -
೨೮. - ಅದೇ -
೨೯. - ಅದೇ -
೩೦. ಗುಲಬರ್ಗಾ ಜಿಲ್ಲೆಯ ವರ್ಣನಾತ್ಮಕ ವ್ಯಾಕರಣ ಒಂದು ಅಧ್ಯಯನ, ಪುಟ ೧ ಅಪ್ರಕಟಿತ ಸಂಶೋಧನಾ ಕೃತಿ
೩೧. ಗುಲಬರ್ಗಾ ವಿಶ್ವ ವಿದ್ಯಾಲಯ ಗುಲಬರ್ಗಾನಾಯಕ ಹಾ. ಮಾ. (ಪ್ರಥಮ ಸಂಚಿಕೆ) ಸಂಪುಟ ೬. ಕನ್ನಡ ವಿಶ್ವಕೋಶ ಪುಟ ೪೧೨

೩೨. ಗುಲಬರ್ಗಾ ಜಿಲ್ಲಾ ಗೆಜೆಟಿಯರ್

೩೩. ಎಂ. ಪ್ರಜ್ಞುಲ್ ಹಸನ್-ಕನ್ನಡ ಭಾಷೆಯ ಮೇಲೆ ಉರ್ದುವಿನ ಪ್ರಭಾವ

೩೪. – ಅದೇ –

೩೫. ಶಿವಾನಂದ ವಿ. ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು ಪುಟ ಸಂ: ೭

೩೬. ಶಿವಾನಂದ ವಿ. ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು ಪುಟ ಸಂ: ೭

೩೭. ಚೆನ್ನಣ್ಣಾ ವಾಲೀಕಾರ

೩೮. ಚೆನ್ನಣ್ಣಾ ವಾಲೀಕಾರ

೩೯. ಚೆನ್ನಣ್ಣಾ ವಾಲೀಕಾರ

೪೦. ಚೆನ್ನಣ್ಣಾ ವಾಲೀಕಾರ

೪೧. ಚೆನ್ನಣ್ಣಾ ವಾಲೀಕಾರ Sril Sathyan B. N. Gulabarga District Gezetter page-1

೪೨. ಚೆನ್ನಣ್ಣಾ ವಾಲೀಕಾರ Sril Sathyan B. N. Gulabarga District Gezetter page-1

೪೩. ಗುಲಬರ್ಗಾ ಜಿಲ್ಲಾ ಗೆಜೆಟಿಯರ್

೪೪. ಹೂಗಾರ ಬಿ.ಪಿ. ಮಧ್ಯ ಕಾಲಿನ ಭಾರತದ ಇತಿಹಾಸ ಪುಟ ೧೯೩

೪೫. ನಾಯಕ ಹಾ. ಮಾ. ಕನ್ನಡ ವಿಶ್ವಕೋಶ, ಸಂಪುಟ ೬ ಪುಟ ೪೧೨

೪೬. ನಾಯಕ ಹಾ. ಮಾ. ಕನ್ನಡ ವಿಶ್ವಕೋಶ, ಸಂಪುಟ ೬ ಪುಟ ೪೧೨, ೪೧೩

೪೭. ನಾಯಕ ಹಾ. ಮಾ. ಕನ್ನಡ ವಿಶ್ವಕೋಶ, ಸಂಪುಟ ೬ ಪುಟ ೪೧೪

೪೮. ಭೀಮಶೇನರಾವ್ ಡಿ.ಕೆ. ಗುಲಬರ್ಗಾ ರಾಯಚೂರು ಕನ್ನಡ ಪುಟ ೨೯೫

೪೯. ನಾಯಕ ಹಾ. ಮಾ. ಕನ್ನಡ ವಿಶ್ವಕೋಶ ಸಂಪುಟ ೬ ಪುಟ ೪೧೨

೫೦. ಭೀಮಶೇನರಾವ್ ಡಿ.ಕೆ. ಗುಲಬರ್ಗಾ ರಾಯಚೂರು ಕನ್ನಡ ಪುಟ ೨೯೬

೫೧. ಭೀಮಶೇನರಾವ್ ಡಿ.ಕೆ. ಗುಲಬರ್ಗಾ ರಾಯಚೂರು ಕನ್ನಡ ಪುಟ ೨೯೭

೫೨. ಭೀಮಶೇನರಾವ್ ಡಿ.ಕೆ. ಗುಲಬರ್ಗಾ ರಾಯಚೂರು ಕನ್ನಡ ಪುಟ ೨೯೮

೫೩. ನಾಯಕ ಹಾ. ಮಾ. ಕನ್ನಡ ವಿಶ್ವಕೋಶ ಸಂಪುಟ ೬ ಪುಟ ೪೧೨

೫೪. ನಾಯಕ ಹಾ. ಮಾ. ಕನ್ನಡ ವಿಶ್ವಕೋಶ ಸಂಪುಟ ೬ ಪುಟ ೪೧೨

೫೫. Gulabarga District Gezetter

೫೬. ನಾಯಕ ಹಾ. ಮಾ. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ ಪುಟ ಸಂಖ್ಯೆ: ೯೩೧

೫೭. Census of India -2001

೫೮. series -II India - Paper 1 of 2001

****

ಅಧ್ಯಾಯ ೨

ಓದಿನ ಸಮಸ್ಯೆಗಳು

ಅಧ್ಯಾಯ ೨

ಓದಿನ ಸಮಸ್ಯೆಗಳು

ಪ್ರಸ್ತುತ ಅಧ್ಯಾಯದಲ್ಲಿ ಉರ್ದುಭಾಷಿಕರ ಮಕ್ಕಳು ಕನ್ನಡ ಓದುವಾಗ ಪದಾದಿ, ಪದಮಧ್ಯ, ಪದಾಂತ್ಯ ಪರಿಸರದಲ್ಲಿ ಯಾವ ತರಹದ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುವುದನ್ನು ಕುರಿತು ವಿಶ್ಲೇಷಿಸಲಾಗಿದೆ. ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆ ಓದುವಾಗ ಮಾಡುವ ವ್ಯತ್ಯಾಸಗಳಿಗೆ ಕಾರಣಗಳು ಮತ್ತು ಸರಿಪಡಿಸುವ ಕುರಿತು ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಚರ್ಚಿಸಲಾಗಿದೆ. ಉರ್ದು ಭಾಷಿಕರ ಮಕ್ಕಳು ಓದುವಾಗ ಯಾವ ತರಹದ ಸಮಸ್ಯೆಗಳನ್ನು ಎದುರಿಸುತ್ತಾರೆ ಅಥವಾ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಶೋಧಿಸಲು ಅಕಾರಾದಿಯಾಗಿ ಪದಗಳ ಪಟ್ಟಿ ಮತ್ತು ಅವರಿಗೆ ಇಟ್ಟಿರುವ ಕನ್ನಡ ಪಠ್ಯಪುಸ್ತಕಗಳನ್ನು ನೀಡಿ ಓದಿಸಲಾಗಿದೆ.

ಓದನ್ನು ಕುರಿತ ವ್ಯಾಖ್ಯೆಗಳು

ಭಾಷಾ ಕೌಶಲ್ಯಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಮತ್ತು ಬರವಣಿಗೆ ಇವುಗಳಲ್ಲಿ ಓದುಗಾರಿಕೆ, ಆಲುಸುವಿಕೆ ಮತ್ತು ಮಾತುಗಾರಿಕೆ ಪ್ರಕ್ರಿಯೆಯ ನಂತರವೇ ಬರವಣಿಗೆ ಜರುಗುವುದು. ಆದ್ದರಿಂದ ಇದಕ್ಕೆ ಮೂರನೇ ಸ್ಥಾನ. ಭಾಷೆಯು ಮೂಲತಃ ಧ್ವನಿಮಯವಾಗಿದೆ. ಭಾಷೆಯ ಮೂಲಧ್ವನಿಗೆ ವರ್ಣ ಎನ್ನುತ್ತೇವೆ. ಪ್ರತ್ಯೇಕ ವರ್ಣಕ್ಕೆ ರೇಖಾಂಕಿತ ಸಂಕೇತವಿದ್ದು ಅದನ್ನೆ ಲಿಪಿ ಎಂದು ಕರೆಯುತ್ತೇವೆ.

ಲಿಪಿಗಳು ಯಾಂತ್ರಿಕವಾಗಿ ಕಣ್ಣುಗಳ ಮೂಲಕ ಪ್ರವೇಶಿಸಿ ಬಾಯಿಯ ಮುಖಾಂತರ ಧ್ವನಿಯಾಗಿ ಅಭಿವ್ಯಕ್ತ ಹೊಂದುವುದೇ ಮಾತುಗಾರಿಕೆ. ಲಿಪಿಯು ಧ್ವನಿಯಾಗಿ ಪರಿವರ್ತನೆ ಹೊಂದುವುದೇ ಓದುಗಾರಿಕೆ.

ಓದುಗಾರಿಕೆ ಎಂದರೆ ಕೇವಲ ಅಕ್ಷರಗಳ ಪರಿಚಯವಲ್ಲ. ಅಕ್ಷರಗಳು ಒಂದಕ್ಕೊಂದು ಕೂಡಿ ಶಬ್ದವಾದಾಗ ಮಾತ್ರ ಅವುಗಳಿಗೆ ಅರ್ಥ ಬರುತ್ತದೆ. ಒಂದು ಪೂರ್ಣ ಅರ್ಥಕೊಡುವ ಶಬ್ದಗಳ ಸಮೂಹವೇ ವಾಕ್ಯ. ವಾಕ್ಯದಲ್ಲಿಯ ಶಬ್ದಗಳಲ್ಲಿ ಆಕಾಂಕ್ಷೆ, ಯೋಗ್ಯತ್ಯ, ಸನ್ನಿದಿ ಇದ್ದರೆ ಮಾತ್ರ ಅದರಿಂದ ಪೂರ್ಣಅರ್ಥವಾಗುತ್ತದೆ. ಆದ್ದರಿಂದ ಓದುಗಾರಿಕೆ ಯಾಂತ್ರಿಕವಾಗಿರದೇ, ಅರ್ಥ ಗ್ರಹಣ ಪೂರ್ವಕವಿರಬೇಕು. ಅಂದರೆ ಮಕ್ಕಳು ತಿಳಿದುಕೊಂಡು ಓದಬೇಕು. ಒಟ್ಟಾರೆ ಓದುವುದು ಅಂದರೆ ಭಾಷೆ ಕಲಿಕೆ ಮಾಡಿಕೊಳ್ಳುವುದು ಹಾಗೂ ಲಿಖಿತ ರೂಪದಲ್ಲಿ ಇರುವಂತಹ ಭಾಷೆಯನ್ನು ಗ್ರಹಿಕೆ ಮಾಡಿಕೊಳುವುದಾಗಿದೆ.

ಅಧ್ಯಯನದ ವಿಶ್ಲೇಷಣೆ

ಈಗಾಗಲೇ ಪ್ರಸ್ತಾವನೆಯಲ್ಲಿ ಹೇಳಿದಂತೆ ಉರ್ದು ಭಾಷಿಕರ ಮಕ್ಕಳು ಕನ್ನಡ ಓದುವಾಗ ಮಾಡುವ ವ್ಯತ್ಯಾಸಗಳನ್ನು ಮತ್ತು ಎದುರಿಸುವ ಸಮಸ್ಯೆಗಳನ್ನು ಪತ್ತೆ ಹಚ್ಚಲು ಎರಡು ವಿಧಾನಗಳನ್ನು ಅನುಸರಿಸಲಾಗಿದೆ. ಮೊದಲನೆಯದಾಗಿ ೮,೯, ೧೦ ನೇ ತರಗತಿ ಕನ್ನಡ ಪಠ್ಯ ಪುಸ್ತಕಗಳಲ್ಲಿನ ಅಕಾರಾದಿಯಾಗಿ ಪದಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದೆ. ಪದಗಳ ಪಟ್ಟಿಯನ್ನು ಗಮನದಲ್ಲಿರಿಸಿಕೊಂಡು ಪದಪಟ್ಟಿಯನ್ನು ಒದಗಿಸಲಾಗಿದೆ.

ಎರಡನೆಯದಾಗಿ ಅವರ ತರಗತಿಗೆ ನಿಗಧಿಪಡಿಸಿದ ಕನ್ನಡ ಭಾಷಾ ಪಠ್ಯಪುಸ್ತಕವನ್ನು ಓದಿಸಿದಾಗ ಅವರು ಎದುರಿಸುವ ಸಮಸ್ಯೆಗಳನ್ನು ಹಾಗೂ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಉರ್ದು ಭಾಷಿಕರ ಮಕ್ಕಳು ಮಾಡುವ ವ್ಯತ್ಯಾಸಗಳನ್ನು ಬರಹದ ಕನ್ನಡ ಜೊತೆ ತುಲನೆ ಮಾಡಿ ವಿವರಿಸಲಾಗಿದೆ.

ಕನ್ನಡ ಭಾಷೆಯ ಪದಗಳ ಓದುಗಾರಿಕೆಯಲ್ಲಿ ಉರ್ದು ಭಾಷಿಕರ ಮಕ್ಕಳು ಮಾಡುವ ವ್ಯತ್ಯಾಸಗಳನ್ನು ಪತ್ತೆ ಹಚ್ಚಲು ಕನ್ನಡ ಮತ್ತು ಉರ್ದು ಭಾಷೆಯ ವರ್ಣಮಾಲೆಯ ಪಟ್ಟಿಗಳನ್ನು ನೀಡಲಾಗಿದೆ. ಇದರಿಂದ ಎರಡು ಭಾಷೆಯಲ್ಲಿರುವ ವರ್ಣಗಳ ಸಾದೃಶ್ಯತೆ ವೈದೃಶ್ಯತೆಗಳನ್ನು ತಿಳಿಯಬಹುದಾಗಿದೆ.

ಓದಿನ ಸಮಸ್ಯೆಗಳು

ಉರ್ದು ಭಾಷಿಕರ ಮಕ್ಕಳು ಕನ್ನಡ ಪದಗಳ ಪಟ್ಟಿ ಮತ್ತು ಪಠ್ಯ ಪುಸ್ತಕಗಳಲ್ಲಿನ ಪಾಠಗಳನ್ನು ಓದುವಾಗ ಮಾಡುವ ವ್ಯತ್ಯಾಸಗಳ ಬಗ್ಗೆ ಈ ಕೆಳಗಿನ ವಿಧಾನಗಳನ್ನುನುಸರಿಸಿ ಅವರು ಎದುರಿಸುವ ಸಮಸ್ಯೆಗಳನ್ನು ಕಂಡುಹಿಡಿಯುವುದು.

೧. ಸ್ವರಗಳನ್ನು ಓದುವಾಗ ಸಮಸ್ಯೆಗಳು

೨. ಅರ್ಧ ಸ್ವರಗಳನ್ನು ಓದುವಾಗ ಸಮಸ್ಯೆಗಳು

೩. ವ್ಯಂಜನಗಳನ್ನು ಓದುವಾಗ ಸಮಸ್ಯೆಗಳು

೪. ಗುಣಿತಾಕ್ಷರಗಳನ್ನು ಓದುವಾಗ ಸಮಸ್ಯೆಗಳು

೫. ಸಂಯುಕ್ತಾಕ್ಷರಗಳನ್ನು ಓದುವಾಗ ಸಮಸ್ಯೆಗಳು

ಉರ್ದು ಭಾಷಿಕರ ೮ರಿಂದ ೧೦ನೇ ತರಗತಿಯ ಮಕ್ಕಳು ಸಾಮಾನ್ಯ ತತ್ವಗಳನ್ನು ಅಳವಡಿಸಿಕೊಂಡು ಕನ್ನಡ ಭಾಷೆಯನ್ನು ಓದುವಾಗ ಮಾಡುವಂತಹ ತಪ್ಪುಗಳನ್ನು ಕುರಿತು ಯಾರು ಇಲ್ಲಿಯವರೆಗೆ ಅಧ್ಯಯನ ಮಾಡುವ ಪ್ರಯತ್ನ ಮಾಡಿರುವುದಿಲ್ಲ. ಮುಂದುವರೆದು ಪ್ರಸ್ತುತ ಅಧ್ಯಯನದಲ್ಲಿ ಉರ್ದು ಭಾಷಿಕರ ಮಕ್ಕಳು (೮, ೯, ೧೦ನೇ ತರಗತಿ ಮಕ್ಕಳು) ಎರಡನೇ ಭಾಷೆಯಾದ ಕನ್ನಡ ಭಾಷೆಯಲ್ಲಿ ಏನೇನು ವ್ಯತ್ಯಾಸಗಳನ್ನು ಮಾಡುತ್ತಾರೆ ಎನ್ನುವುದರ ಬಗ್ಗೆ ಅಧ್ಯಯನ ಮಾಡಲಾಗಿದ್ದು ಹೆಚ್ಚಾಗಿ ಎಲ್ಲ ತರಗತಿ ಮಕ್ಕಳು ಒಂದೇ ತೆರನಾದ ವ್ಯತ್ಯಾಸಗಳನ್ನು ಮಾಡುವುದನ್ನು ಕಾಣುತ್ತೇವೆ. (ಪಟ್ಟಿ ೧ ಕನ್ನಡ ಧ್ವನಿಗಳನ್ನು ಮತ್ತು ಪಟ್ಟಿ ೨, ಉರ್ದು ಭಾಷೆಯ ಧ್ವನಿಗಳನ್ನು ಸೂಚಿಸುತ್ತದೆ)

ಪಟ್ಟಿ ೧

ಕನ್ನಡ ಭಾಷೆಯ ಧ್ವನಿಗಳ ಪಟ್ಟಿ

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ ಕ್ಷ ಜ್ಞ

ಪಟ್ಟಿ ೨

ಉರ್ದು ಭಾಷೆಯ ಧ್ವನಿಗಳು

ಕ್ರ. ಸಂ.	ಕನ್ನಡ ಭಾಷೆಯ ಧ್ವನಿಗಳು	ಕನ್ನಡ ಭಾಷೆಯ ಧ್ವನಿಗಳ ಉಚ್ಚಾರಣ ರೀತಿ	ಉರ್ದು ಭಾಷೆಯ ಧ್ವನಿಗಳು	ಉರ್ದು ಭಾಷೆಯ ಧ್ವನಿಗಳ ಉಚ್ಚಾರಣ ರೀತಿ
೧.	ಅ	ಅ	ا	ಅಲೀಫ್
೨.	ಆ	ಆ	ب	ಬೇ
೩.	ಇ	ಇ	پ	ಪೇ
೪.	ಈ	ಈ	ت	ತೇ
೫.	ಉ	ಉ	ٹ	ಟೇ
೬.	ಊ	ಊ	ث	ಸೇ
೭.	ಋ	ಋ	ج	ಜೀಂ
೮.	ಎ	ಎ	چ	ಚೇಂ
೯.	ಏ	ಏ	ح	ಹೈ
೧೦.	ಐ	ಐ	خ	ಖೈ
೧೧.	ಒ	ಒ	د	ದಾಲ್
೧೨.	ಓ	ಓ	ڈ	ಡಾಲ್
೧೩.	ಔ	ಔ	ذ	ಝಾಲ್
೧೪.	ಅಂ	ಅಂ	ر	ರೇ
೧೫.	ಅಃ	ಅಃ	ڑ	ಡೇ
೧೬.	ಕ	ಕ	ز	ಜೇ
೧೭.	ಖ	ಖ	ژ	ಸೇ
೧೮.	ಗ	ಗ	س	ಸೀನ್
೧೯.	ಘ	ಘ	ش	ಷೀನ್
೨೦.	ಙ	ಙ	ص	ಸ್ವಾದ್
೨೧.	ಚ	ಚ	ض	ಜ್ವಾದ್
೨೨.	ಛ	ಛ	ط	ತ್ವೆ
೨೩.	ಆ	ಜ	ظ	ಜ್ವೆಯ್
೨೪.	ಝ	ಝ	ع	ಐನ್

೨೫.	ಏ	ಞ	غ	ಗೈನ್
೨೬.	ಐ	ಟ	ف	ಫೇ
೨೭.	ಠ	ಠ	ق	ಖಾಫ್
೨೮.	ಡ	ಡ	ک	ಕಾಫ್
೨೯.	ಢ	ಢ	گ	ಗಾಫ್
೩೦.	ಖಿ	ಣ	ل	ಲಾಂ
೩೧.	ತ	ತ	م	ಮೀಂ
೩೨.	ಥ	ಥ	ن	ನೂನ್
೩೩.	ದ	ದ	و	ವಾವ್
೩೪.	ಧ	ಧ	ہ	ಹೇ
೩೫.	ನ	ನ	ء	ಹಂಜ಼ಾ
೩೬.	ಪ	ಪ	ی	ಯಾ
೩೭.	ಫ	ಫ	ے	ಎ
೩೮.	ಬ	ಬ		
೩೯.	ಭ	ಭ		
೪೦.	ಮ	ಮ		
೪೧.	ಯ	ಯ		
೪೨.	ರ	ರ		
೪೩.	ಲ	ಲ		
೪೪.	ವ	ವ		
೪೫.	ಶ	ಶ		
೪೬.	ಷ	ಷ		
೪೭.	ಸ	ಸ		
೪೮.	ಹ	ಹ		
೪೯.	ಳ	ಳ		
೫೦.	ಕ್ಷ	ಕ್ಷ		
೫೧.	ಜ್ಞ	ಜ್ಞ		

ಪಟ್ಟಿ ೩

ಉರ್ದು ಭಾಷೆಯಲ್ಲಿ ಕನ್ನಡಕ್ಕೆ ಸಮನಾಂತರವಾಗಿ ಬಳಸುವ ಧ್ವನಿಗಳು

ಸ್ವರಗಳು

ಅ ಇ ಏ

ವ್ಯಂಜನಗಳು

ಖ ಘ ಛ ಝ ಠ ಢ ಥ ಧ ನ

ಫ ಭ ಮ

ಯ ರ ಲ ವ ಹ

ಔಪಚಾರಿಕ ಶಿಕ್ಷಣದಲ್ಲಿ ಓದುವ ಸಮಸ್ಯೆಗಳು

೧. ಸ್ವರಗಳನ್ನು ಓದುವಾಗ ಎದುರಿಸುವ ಸಮಸ್ಯೆಗಳು

ಉರ್ದುಭಾಷಿಕರ ಮಕ್ಕಳು ಶಾಲಾ ಕೋಣೆಗಳಲ್ಲಿ ಕನ್ನಡ ಸ್ವರಗಳನ್ನು ಓದುವಾಗ ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಯಾವ ತೆರನಾಗಿ ಉಚ್ಚಾರಣೆ ಮಾಡಿ ಓದುತ್ತಾರೆ ಎನ್ನುವುದನ್ನು ಈ ಮುಂದಿನಂತೆ ಗಮನಿಸಬಹುದು.

ಸ್ವರಗಳ ಓದು

೧. ೧ ಆ > ಅ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ನಿಮ್ನ ಕೇಂದ್ರ ಮಧ್ಯ ಅಗೋಳ ದೀರ್ಘಸ್ವರ 'ಆ' ಧ್ವನಿ ಬದಲು ನಿಮ್ನ ಕೇಂದ್ರ ಮಧ್ಯ ಅಗೋಳ ಹ್ರಸ್ವ ಸ್ವರ 'ಅ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಆಲದ ಮರ	ಅಲದ ಮರ	ಒಂದು ಬಗೆಯ ಮರ
ಆಚಾರ	ಅಚಾರ	ಕಟ್ಟು ಪಾಡು
ಆಪತ್ತು	ಅಪತ್ತು	ಸಂಕಷ್ಟ
ಆಗಮನ	ಅಗಮನ	ಬರುವುದು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಭಗವಾನ	ಭಗವನ	ದೇವರು
ಪುರಾಣ	ಪುರನ	ಪುರಾಣ
ಸಹಪಾಠಿ	ಸಪಟಿ	ಜೊತೆಯಲ್ಲಿ ಓದುವವ
ಅಕಾಲ	ಅಕಲ	ಅನಿರೀಕ್ಷಿತ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಆಟಕಾ	ಜಟಕ	ಕುದುರೆ ಗಾಡಿ
ಅಪರಾ	ಅಪರ	ವಿಪುಲ
ತಫರಾ	ತಪರ	ನಾಶ ಮಾಡು
ಆಯಾ	ಆಯ	ದಾದಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೇ ಇಲ್ಲ. ಉರ್ದು ಭಾಷೆಯಲ್ಲಿ ನಿಮ್ನ ಕೇಂದ್ರಮಧ್ಯ ದೀರ್ಘ ಸ್ವರ ಧ್ವನಿಯಾದ "ಆ" ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ನಿಮ್ನ ಕೇಂದ್ರ ಮಧ್ಯ ಅಗೋಳ ಹ್ರಸ್ವ ಸ್ವರ 'ಅ' ಧ್ವನಿ ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸಗಳನ್ನು ಉರ್ದುಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಈ ರೀತಿ ಓದುತ್ತಿರುವುದು.

೧.೨. ಅ > ಆ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ನಿಮ್ನ ಕೇಂದ್ರ ಮಧ್ಯ ಅಗೋಳ ಹ್ರಸ್ವ ಸ್ವರ 'ಅ' ಧ್ವನಿ ಬದಲು ಕೇಂದ್ರ ಮಧ್ಯ ಅಗೋಳ ದೀರ್ಘ ಸ್ವರ 'ಆ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಅವಮಾನ	ಆವಮಾನ	ಅಗೌರವ
ಅವಕಾಶ	ಆವಕಾಶ	ಅನುಕೂಲ
ಅವಧಿ	ಆವ್ಧಿ	ಸಮಯ
ಅರಳು	ಆರಲು	ವಿಕಾಸವಾಗು
ಅಡುಗೆ	ಆಡುಗೆ	ಊಟ/ಅಡುಗೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ನಿಗಮ	ನಿಗಾಮಾ	ವೇದ
ನಿಗ್ಗರ	ನಿಗಾರಾ	ಚೆಲುವ
ಜನಕ	ಜನಾಕಾ	ಜನ್ಮದಾತ
ಕಾಮಗಾರಿ	ಕಾಮಾಗಾರಿ	ಕಾರ್ಮಿಕರ ಕೆಲಸ
ಗಾಯನ	ಗಾಯಾನಾ	ಹಾಡುಗಾರಿಕೆ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಸ	ಕಸಾ	ಕೊಳೆ
ಜಗಲ	ಜಗಲಾ	ಕಪಟಿ
ಜರ	ಜರಾ	ಸಾಲು
ನಟ	ನಟಾ	ನರ್ತಕ
ಪರಿವಾದ	ಪರಿವಾದಾ	ನಿಂದೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ನಿಮ್ನ ಕೇಂದ್ರ ಅಗೋಳ ಹ್ರಸ್ವಸ್ವರ 'ಅ' ಮತ್ತು ಕೇಂದ್ರಮಧ್ಯ ಅಗೋಳ ದೀರ್ಘಸ್ವರ 'ಆ' ಈ ಎರಡು ಧ್ವನಿಗಳಲ್ಲಿ ಅಲ್ಪ ಧ್ವನಿ ಸಾಮ್ಯತೆ ಇರುವುದರಿಂದ ಮತ್ತು ಗೊಂದಲದಿಂದ ಈ ತೆರನಾಗಿ ಈ ಧ್ವನಿಯನ್ನು ಓದುವುದು ಕಂಡುಬರುತ್ತದೆ.

೧.೩. ಅ > ಹ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನ ಕೇಂದ್ರ ಅಗೋಳ ಹ್ರಸ್ವ ಸ್ವರ 'ಅ' ಧ್ವನಿ ಬದಲು ಕಾಕಲ್ಯ ಘೋಷ ಸಂಘರ್ಷ ವ್ಯಂಜನ 'ಹ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಅಕ್ಕಸಾಲೆ	ಹಕಸಾಲೆ	ಚಿನ್ನ ಬೆಳ್ಳಿ ಕೆಲಸ ಮಾಡುವವನು
ಅಗಿನಿ	ಹಗಿನಿ	ಬೆಂಕಿ
ಅಗಸೆ	ಹಗಸೆ	ಒಂದು ಬಗೆಯ ಧಾನ್ಯ

೧.೪. ಆ > ಹಾ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನ ಕೇಂದ್ರ ಮಧ್ಯ ಅಗೋಳ ದೀರ್ಘ ಸ್ವರ 'ಆ' ಧ್ವನಿ ಬದಲು ಕಾಕಲ್ಯ ಘೋಷ ಸಂಘರ್ಷ ವ್ಯಂಜನ ಧ್ವನಿ 'ಹಾ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಆವರಿಕೆ	ಹಾವರಿಕೆ	ತಂಗಡಿ ಗಿಡ
ಆವರಿಸು	ಹಾವರಿಸು	ಹರಡು
ಆವಲಿ	ಹಾವಲಿ	ಸಾಲು
ಆವಾಗ	ಹಾವಾಗ	ಯಾವ ಸಮಯದಲ್ಲಿ
ಆವಿಲ	ಹಾವಿಲ	ಕದಡಿದ

೧.೫. ಇ > ಹಿ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವ ಸ್ವರ 'ಇ' ಧ್ವನಿ ಬದಲು ಕಾಕಲ್ಯ ಘೋಷ ಸಂಘರ್ಷ ವ್ಯಂಜನ 'ಹಿ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಇಮರು	ಹಿಮರು	ಹಲ್ಲಿನ ವಸಡು
ಇಡು	ಹಿಡು	ಮಡಗು
ಇಡುಗು	ಹಿಡುಗು	ವ್ಯಾಪಿಸು
ಇಳೆ	ಹಿಳೆ	ಭೂಮಿ

೧.೬. ಇ > ಈ

ಪದಾದಿ ಮತ್ತು ಪದಮಧ್ಯ ಪದಾಂತ್ಯ ಪರಿಸರದಲ್ಲಿ ನಿಮ್ನೋನ್ನತ ಅಗೋಳ ಹ್ರಸ್ವಸ್ವರ 'ಇ' ಧ್ವನಿ ಬದಲು ಅಗ್ರ ಅಗೋಳ ದೀರ್ಘಸ್ವರ 'ಈ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಇಡು	ಈಡು	ಇಳಿಸು
ಇತರ	ಈತರ	ಬಗೆಯ
ಇಲಿ	ಈಲಿ	ಮೂಷಕ
ಇಲಾಖೆ	ಈಲಾಖೆ	ಆಡಳಿತ ಶಾಖೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಪಿಪಾಸೆ	ಪೀಪಾಸೆ	ಬಾಯಾರಿಕೆ
ತೆನೆ	ತೀನೆ	ದಾನ್ಯದ ವಡೆ
ದಿವ	ದೀವ	ಸ್ವರ್ಗ
ಗಿರಿ	ಗೀರಿ	ಪರ್ವತ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಾಲಿ	ಕಾಲೀ	ದುರ್ಗಿ
ಜಡಿ	ಜಡೀ	ಬೆದರಿಸು
ಗಡಿ	ಗಡೀ	ಮೇರೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ಒಂದು ವ್ಯತ್ಯಾಸಕ್ಕೆ ಕಾರಣ ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವ ಸ್ವರ 'ಇ' ಧ್ವನಿ ಬದಲಾಗಿ ಅಗ್ರ ಅಗೋಳ ಧೀರ್ಘಸ್ವರ 'ಈ' ಧ್ವನಿ ಬಳಕೆ ಮಾಡಲು ಕಾರಣ ಈ ಎರಡು ಧ್ವನಿಗಳ ನಡುವೆ ಧ್ವನಿ ಸಾಮ್ಯತೆ ಹೊಂದಿರುವುದರಿಂದ ಮತ್ತು ಗೊಂದಲದಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಈ ತರಹದ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುವುದು.

೧.೭ ಈ > ಇ

ಪದಾದಿ ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಅಗ್ರ ಅಗೋಳ ಧೀರ್ಘ ಸ್ವರದ 'ಈ' ಧ್ವನಿ ಬದಲು ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವ ಸ್ವರ 'ಇ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಈದಮಿಲಾದ	ಇದಮಿಲಾದ	ಪ್ರವಾದಿ ಪೈಗಂಬರನ ಜನ್ಮ ದಿನ
ಈಚಲು	ಇಚಲು	ಈಚಲು
ಈಡೇರು	ಇಡೆರು	ನೆರವೇರು
ಈಚೆ	ಇಚೆ	ಈ ಕಡೆಯ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಿರೀಟ	ಕಿರಿಟ	ಶಿರೋಭೂಷಣ
ಜೀತ	ಜಿತ	ಕೂಲಿ
ಬೀಡಾರ	ಬಿಡಾರಿ	ತಂಗುವ ಸ್ಥಳ
ಬೇರು	ಬೆರು	ಬೇರು

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕರೀ	ಕರಿ	ಆನೆ
ಇಡೀ	ಇಡೆ	ಒಟ್ಟು
ಫೀ	ಫಿ	ಶುಲ್ಕ
ನೀ	ನಿ	ನೀನು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದುಭಾಷೆಯಲ್ಲಿ ಅಗ್ರ ಅಗೋಳ ದೀರ್ಘ ಸ್ವರ ಧ್ವನಿಯಾದ 'ಈ' ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವ ಸ್ವರ 'ಇ' ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣವಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಮಾಡುತ್ತಿರುವುದು ಗಮನಾರ್ಹ ವಿಷಯ.

೧.೮. ಈ > ಹಿ

ಪದಾದಿ ಪರಿಸರದಲ್ಲಿ ನಿಮ್ನೋನ್ನತ ಅಗ್ರ ಅಗೋಳ ದೀರ್ಘಸ್ವರ 'ಈ' ಧ್ವನಿ ಬದಲಾಗಿ ಕಾಕಲ್ಯ ಘೋಷ ಸಂಘರ್ಷ ವ್ಯಂಜನ ಧ್ವನಿ 'ಹಿ' ಎಂದು ಓದುತ್ತಾರೆ. ಈವೊಂದು ವ್ಯತ್ಯಾಸವನ್ನು ಎಂಟನೇ ತರಗತಿಯ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಈಜು	ಹಿಜು	ಹಿಂಜು
ಈಗೇ	ಹಿಗೆ	ಈ ರೀತಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ತೆರನಾಗಿ ವಿಶ್ಲೇಷಿಸಬಹುದು. ಪದಾದಿ ಪರಿಸರದಲ್ಲಿ ನಿಮ್ನೋನ್ನತ ಅಗ್ರ ಅಗೋಳ ದೀರ್ಘಸ್ವರ 'ಈ' ಧ್ವನಿ ಬದಲಾಗಿ ಕಾಕಲ್ಯ ಘೋಷ ಸಂಘರ್ಷ ವ್ಯಂಜನ 'ಹಿ' ಎಂದು ಓದಲು ಕಾರಣ. ಈ ಎರಡು ಧ್ವನಿಗಳ ನಡುವೆ ಉಚ್ಚಾರಣೆ ಸಾಮ್ಯತೆ ಇರುವುದರಿಂದ ಉರ್ದು ಭಾಷಿಕ ಮಕ್ಕಳು ಈ ತೆರನಾದ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೧.೯. ಉ > ಊ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವಸ್ವರದ 'ಉ' ಧ್ವನಿ ಬದಲು ಉನ್ನತ ಪಶ್ಚಗೋಳ ದೀರ್ಘಸ್ವರ 'ಊ' ಧ್ವನಿ ಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಂಟನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಉಡುಗೆ	ಊಡುಗೆ	ಬಟ್ಟೆ ಹಾಕಿಕೊಳ್ಳುವುದು
ಉದಯ	ಊದಯ	ಹುಟ್ಟು
ಉಸುಕು	ಊಸುಕು	ಮರಳು
ಉಗಮ	ಊಗಮ	ಹುಟ್ಟು
ಉಚಿತ	ಊಚಿತ	ಪುಕ್ಕಟ್ಟೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ತುರುಸು	ತೂರುಸು	ಬಿರುಸು
ಉಂಡೆ	ಊಂಡೆ	ಲಡ್ಡು
ಗುಲಾಮ	ಗೂಲಾಮ್	ಸೇವಕ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ತೆರನಾದ ವ್ಯತ್ಯಾಸಕ್ಕೆ ಕಾರಣ ಉರ್ದು ಭಾಷೆಯಲ್ಲಿ ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವ ಸ್ವರದ 'ಉ' ಬದಲು ಉನ್ನತ ಪಶ್ಚಗೋಳ ದೀರ್ಘಸ್ವರ 'ಊ' ಧ್ವನಿಯನ್ನು ಓದಲು ಕಾರಣ ಈ ಎರಡು ಧ್ವನಿಗಳ ನಡುವೆ ಧ್ವನಿಸಾಮ್ಯತೆ ಇರುವುದರಿಂದ ಉರ್ದು ಭಾಷಿಕರ ಮಕ್ಕಳು ಈ ತೆರನಾಗಿ ವ್ಯತ್ಯಾಸದಿಂದ ಓದುತ್ತಾರೆ.

೧.೧೦. ಊ > ಉ

ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಉನ್ನತ ಪಶ್ಚಗೋಳ ದೀರ್ಘಸ್ವರ 'ಊ' ಧ್ವನಿಯ ಬದಲು ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವ ಸ್ವರ "ಉ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಊರುಗೋಲು	ಉರುಗೋಲು	ಆಸರೆ ಕೋಲು
ಊಟ	ಉಟ	ಊಟ
ಊರು	ಉರು	ಊರು
ಊನ	ಉನ	ಕುಂದು
ಊರಗ	ಉರಗ	ಅಗಸೆ ಬಾಗಿಲು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕೂಡು	ಕುಡು	ಕುಳಿತುಕೊಳ್ಳು
ಕೂಳು	ಕುಳು	ಊಟ
ಕೂಸು	ಕುಸು	ಮಗು
ಮೂರು	ಮುರು	ಮೂರು

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಮಗೂ	ಮಗು	ಮಗೂ
ಹೂ	ಹು	ಹೂ
ಜಂಬೂ	ಜಂಬು	ಭಾರತ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ತೆರನಾದ ವ್ಯತ್ಯಾಸ ಮಾಡಲಿಕ್ಕೆ ಕಾರಣವನ್ನು ಈ ತೆರನಾಗಿ ವಿಶ್ಲೇಷಿಸಬಹುದು. ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಉನ್ನತ ಪಶ್ಚಗೋಳ ದೀರ್ಘಸ್ವರ 'ಊ' ಬದಲು ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವ ಸ್ವರ 'ಉ' ಧ್ವನಿಯನ್ನು ಉಪಯೋಗಿಸಲು ಕಾರಣ ಉರ್ದು ಭಾಷೆಯಲ್ಲಿ ಈ ಎರಡು ಧ್ವನಿಗಳಿಲ್ಲ. ಈ ಧ್ವನಿಯ ಕೆಲಸವನ್ನು ಉರ್ದು ಭಾಷೆಯಲ್ಲಿ ಬೇರೆ ಧ್ವನಿ ಕೆಲಸ ಮಾಡುವುದರಿಂದ ಕನ್ನಡ ಭಾಷೆ ಕಲಿಯುವ ಸಂದರ್ಭದಲ್ಲಿ ಗೊಂದಲದಿಂದ ಈ ತೆರನಾಗಿ ಓದುತ್ತಾರೆ.

೧.೧೧. ಋ > ರು

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಸ್ವರ ಧ್ವನಿ 'ಋ' ದ ಬದಲು ವರ್ತ್ಸ್ಯಕಂಪಿತ ವ್ಯಂಜನ 'ರು' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಋತು	ರುತು	ಕಾಲ
ಋಷಿ	ರುಸಿ	ಮುನಿ/ಸಾದು
ಋಜು	ರುಜು	ಸಾಬೀತು
ಋಣ	ರುಣ	ಋಣ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ವಿಕೃತ	ವಿಕ್ರುತ	ವಿಕಾರ
ವೃತ್ತಿ	ವ್ರುತ್ತಿ	ಕೆಲಸ
ವೃತ್ತ	ವ್ರುತ್ತ	ಗೋಳ
ಕೃತಕ	ಕ್ರುತಕ	ಅಸಹಜ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆಯಿಲ್ಲ. ಸ್ವರ ಧ್ವನಿ 'ಋ' ಮತ್ತು ವರ್ತ್ಸ್ಯಕಂಪಿತ ವ್ಯಂಜನ ಧ್ವನಿ 'ರು' ಎರಡು ಧ್ವನಿಗಳು ಉಚ್ಚಾರಣ ಧ್ವನಿ ಸಾಮ್ಯತೆಯನ್ನು ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಓದುವಾಗ ಈ ತೆರನಾದ ವ್ಯತ್ಯಾಸಗಳನ್ನು ಮಾಡುತ್ತಿರುವುದು ಗಮನಾರ್ಹ.

೧.೧೨.   ಏ > ಎ

ಪದಾದಿ ಮತ್ತು ಪದ ಮಧ್ಯ ಪರಿಸರದಲ್ಲಿ ಉನ್ನತ ಮಧ್ಯ ಅಗ್ರ ಅಗೋಳ ಧೀರ್ಘ ಸ್ವರ 'ಏ' ಬದಲು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ 'ಎ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಂಟನೇ ಮತ್ತು ಒಂಬತ್ತನೆಯ ತರಗತಿಯ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಏಕೆ	ಎಕೆ	ಏಕೆ
ಏಡಿ	ಎಡಿ	ಏಡಿ
ಏತ	ಎತ	ನೀರು ಎತ್ತುವ ಸಾಧನ
ಏಣಿ	ಎನಿ	ನಿಚ್ಚಣಿಕೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಗೇಟು	ಗೆಟು	ತಡೆಗೋಡೆ, ಬಾಗಿಲು
ಗೇರು	ಗೆರು	ವಾಹನ ಚಲಿಸುವಾಗ ಬಳಸುವ ಯಂತ್ರ
ಚೇಳು	ಚೆಲು	ಕಶೇರುಕ ಪ್ರಾಣಿ
ಪೀಪಿ	ಪಿಪಿ	ನಾಗಸ್ವರ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಉನ್ನತ ಮಧ್ಯ ಅಗ್ರ ಅಗೋಳ ದೀರ್ಘಸ್ವರ 'ಏ' ಬದಲು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ 'ಎ' ಧ್ವನಿ ಯನ್ನು ಓದಲು ಕಾರಣ ಇಲ್ಲಿ ಈ ಎರಡು ಧ್ವನಿಗಳ ನಡುವೆ ಅಲ್ಪ ಧ್ವನಿಸಾಮ್ಯತೆ ಇರುವುದರಿಂದ ಈ ತೆರನಾಗಿ ಉರ್ದು ಭಾಷಿಕರ ಮಕ್ಕಳು ವ್ಯತ್ಯಾಸದಿಂದ ಓದಲು ಕಾರಣವೆಂದು ಹೇಳಬಹುದು.

೧.೧೩. ಎ > ಏ

ಪದಾದಿ ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವಸ್ವರ 'ಎ' ಧ್ವನಿ ಬದಲು ಉನ್ನತ ಮಧ್ಯ ಅಗ್ರ ಅಗೋಳ ದೀರ್ಘ ಸ್ವರ 'ಏ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಎಸು	ಏಸು	ಬಾಣ ಪ್ರಯೋಗ
ಎರಲೆ	ಏರಲೆ	ಜಿಂಕೆ
ಎಲವ	ಏಲವ	ಬೂರಗದ ಮರ
ಎಲೆ	ಏಲೆ	ವೀಳ್ಯೆದೆಲೆ
ಎಸಡು	ಏಸಡು	ಏಡಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕೆಡು	ಕೇಡು	ಅಳಾಗು
ಬೆಳೆ	ಬೇಳೆ	ಬೆಳವಣಿಗೆ
ಕೆರೆ	ಕೇರೆ	ನೀರು ನಿಲ್ಲಿಸಿದ ಸ್ಥಳ
ತೊರೆ	ತೋರೆ	ಅಲೆ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಸಟೆ	ಸಟೇ	ಸುಳ್ಳು
ಮರೆ	ಮರೇ	ಮರೆಯುವುದು
ಗರೆ	ಗಾರೇ	ಸುಣ್ಣ ಮತ್ತು ಮರಳುಗಳ ಮಿಶ್ರಣ
ತೆರೆ	ತೆರೇ	ತೆರೆಯುವಿಕೆ
ಮರೆ	ಮರೇ	ಮುಚ್ಚು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣವನ್ನು ಈ ರೀತಿ ವಿಶ್ಲೇಷಿಸಬಹುದು. ಉರ್ದು ಭಾಷೆಯಲ್ಲಿ ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ ಧ್ವನಿಯಾದ 'ಎ' ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ಉನ್ನತ ಮಧ್ಯ ಅಗ್ರ ಅಗೋಳ ದೀರ್ಘ ಸ್ವರ 'ಏ' ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣವಲ್ಲ, ಅವರ ಮಾತೃಭಾಷೆಯಾದ

ಉರ್ದು. ಹಾಗಾಗಿ ಈ ಮಾದರಿಯ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಮಾಡುತ್ತಿರುವುದು ಕಂಡುಬರುತ್ತದೆ.

೧.೧೪. ಒ > ಓ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಉನ್ನತ ಮಧ್ಯ ಪಶ್ಚ ಅಗೋಳ ಹ್ರಸ್ವ ಸ್ವರ 'ಒ' ಧ್ವನಿ ಬದಲು ನಿಮ್ನತರ ಮಧ್ಯ ಪಶ್ಚಗೋಳ ದೀರ್ಘಸ್ವರ 'ಓ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಒಡೆ	ಓಡೆ	ಸೀಳು
ಒಣ	ಓನ	ಹಾರಿದ
ಒರಗು	ಓರಗು	ನಿದ್ದೆಹೋಗು
ಒದರು	ಓದರು	ಕಿರುಚು
ಒಳಗೆ	ಓಳಗೆ	ಒಳಗಡೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಹೊರಡು	ಹೋರಡು	ಹೋಗು, ತೆರಳು
ಹೊಗು	ಹೋಗು	ತೆರಳು
ಕೊಳ	ಕೋಲ	ಸರೋವರ
ಕೊಡೆ	ಕೋಡೆ	ಛತ್ರಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ ಈ ಎರಡು ಧ್ವನಿಗಳಿಲ್ಲ.. ಆದ್ದರಿಂದ ಉನ್ನತ ಮಧ್ಯ ಪಶ್ಚ ಅಗೋಳ ಹ್ರಸ್ವ ಸ್ವರದ 'ಒ' ಬದಲು ನಿಮ್ನತರ ಮಧ್ಯ ಪಶ್ಚಗೋಳ 'ಓ' ಧ್ವನಿಯನ್ನು ಓದುತ್ತಾರೆ. ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿ ಓದುವಾಗ ಹೆಚ್ಚು ದೀರ್ಘಸ್ವರ ಧ್ವನಿಯನ್ನು ಓದುತ್ತಾರೆ. ಇದು ವಿದ್ಯಾರ್ಥಿಗಳಿಗೆ ಈ ಎರಡು ಧ್ವನಿಗಳ ರಚನೆಯಲ್ಲಿ ಕಂಡು ಬರುವ ಸಾಮ್ಯತೆಯ ಗೊಂದಲದಿಂದ ಈ ತೆರನಾಗಿ ವ್ಯತ್ಯಾಸದಿಂದ ಓದಲು ಕಾರಣವೆಂದು ಹೇಳಬಹುದು. ಉರ್ದು ಭಾಷೆಯಲ್ಲಿ 'ಒ' ಧ್ವನಿ ಇಲ್ಲ.

೧.೧೫. ಓ > ಒ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನತರ ಮಧ್ಯ ಪಶ್ಚಗೋಳ ದೀರ್ಘಸ್ವರದ 'ಓ' ಬದಲು ಉನ್ನತಮಧ್ಯ ಪಶ್ಚಗೋಳ ಹ್ರಸ್ವ ಸ್ವರ 'ಒ' ಧ್ವನಿಯನ್ನು ಓದುತ್ತಾರೆ ಈ ಒಂದು ವ್ಯತ್ಯಾಸವನ್ನು ಎಂಟನೇ ತರಗತಿಯ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಓಡು	ಒಡು	ಮಡಕೆ
ಓಟ	ಒಟ	ಓಡುವಿಕೆ
ಓಣಿ	ಒನಿ	ಓಣಿ
ಓರೆ	ಒರೆ	ಇಳಿಜಾರು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಗೋಲಿ	ಗೊಲಿ	ಬಂದೂಕಿನ ಗುಂಡು
ಗೋರಿ	ಗೊರಿ	ಸೆಳೆತ
ತೋಟಿ	ತೊಟಿ	ಸೇವಕ
ತೋಡು	ತೊಡು	ಕಾಲುವೆ
ಕೋಡು	ಕೊಡು	ತಣಗಾಗು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ನಿಮ್ನತರ ಮಧ್ಯ ಪಶ್ಚಗೋಳ ದೀರ್ಘಸ್ವರದ 'ಓ' ಬದಲು ಉನ್ನತ ಮಧ್ಯ ಪಶ್ಚ ಅಗೋಳ ಹ್ರಸ್ವಸ್ವರ 'ಒ' ಧ್ವನಿಯನ್ನು ಓದುತ್ತಾರೆ. ಉರ್ದು ಭಾಷಿಕ ಮಕ್ಕಳು ಈ ಎರಡು ಧ್ವನಿಗಳಲ್ಲಿ ಅಲ್ಪಧ್ವನಿ ಸಾಮ್ಯತೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೧.೧೬."ಂ" ಅನುಸ್ವಾರ ಲೋಪ ಮಾಡಿ ಓದುವುದು

ಪದಮಧ್ಯ ಪರಿಸರದಲ್ಲಿ "ಂ" ಅನುಸ್ವಾರವನ್ನು ಲೋಪಮಾಡಿ ೮, ೯, ೧೦ನೇ ತರಗತಿಯ ಎಲ್ಲ ಮಕ್ಕಳು ವ್ಯತ್ಯಾಸದಿಂದ ಓದುತ್ತಾರೆ. ಉದಾ:

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಂಗು	ಕಗು	ಅಡಕೆಯ ಮರ
ಖಚಿಡ	ಖಡ	ತುಂಡು
ಬಂದರು	ಬದರು	ಹಡಗು ನಿಲ್ಲುವ ಸ್ಥಳ
ಮುಂದೆ	ಮುದೆ	ಮುಂದು
ಪಂಚಮಿ	ಪಚಮಿ	ಪಕ್ಷದ ಐದನೆಯ ದಿನ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ "ಂ" ಅನುಸ್ವಾರ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ಉರ್ದು ಭಾಷೆಯಲ್ಲಿ "ನ" ದಂತ್ಯ ಅನುನಾಸಿಕ ವ್ಯಂಜನ ಧ್ವನಿ ಬಳಕೆಯಲ್ಲಿದೆ ಹಾಗೂ ಶಿಕ್ಷಕರು ಇದರ ಉಚ್ಚಾರಣೆ ಬಗ್ಗೆ ಸ್ಪಷ್ಟವಾಗಿ ಹೇಳದೆ ಇರುವುದರಿಂದ "ಂ" ಅನುಸ್ವಾರ ಲೋಪಮಾಡಿ ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

೧.೧೭. ":" ವಿಸರ್ಗ ಲೋಪ ಮಾಡಿ ಓದುವುದು

ಪದಮಧ್ಯ ಪರಿಸರದಲ್ಲಿ "ಃ" ವಿಸರ್ಗವನ್ನು ಲೋಪಮಾಡಿ ೮, ೯, ೧೦ನೇ ತರಗತಿಯ ಎಲ್ಲ ಮಕ್ಕಳು ವ್ಯತ್ಯಾಸದಿಂದ ಓದುತ್ತಾರೆ. ಉದಾ:

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಅಂತಃಕರಣ	ಅಂತಕರಣ	ಮನಸು
ದುಃಖ	ದುಖ	ದುಃಖ
ಅಚಿತಃಪಟ	ಅಂತಪಟ	ವಸ್ತು
ಅಚಿತಃಮರ	ಅಂತಮರ	ರಾಣಿವಾಸ
ಅಂತಃಕಲಹ	ಅಂತಕಲಹ	ಒಳಜಗಳ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ "ಃ" ವಿಸರ್ಗ ಇಲ್ಲದೆ ಇರುವುದರಿಂದ ಹಾಗೂ ಇದರ ಉಚ್ಚಾರಣ ಕ್ರಮವನ್ನು ತಿಳಿಯದೆ ಲೋಪಮಾಡಿ ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

ಸಂಧ್ಯಕ್ಷರ

೧.೧೮. ಐ > ಅಯ್

ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಸಂದ್ಯಾಕ್ಷರವಾದ "ಐ" ಧ್ವನಿಯ ಬದಲು "ಅಯ್" ಎಂದು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಐಡಿ	ಅಯಿಡಿ	ಮುತ್ತೈದೆ
ಐಬು	ಅಯಿಬು	ಕೊರತೆ
ಐಲು	ಅಯಿಲು	ಹುಚ್ಚು
ಐಸಿಲಿ	ಅಯಿಸಿರಿ	ಐಶ್ವರ್ಯ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ದೈವ	ದೆಯವ	ದೈವ ಹಣೆಬರಹ
ತೈಲ	ತಯಿಲ	ಎಣ್ಣೆ
ಕೈದಿ	ಕಯಿದಿ	ಬಂದಿಖಾನೆ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಪೈ	ಪಯ್	ಬಿಡಿಕಾಸು
ಬೈ	ಬಯ್	ನಿಂದಿಸು
ಕೈ	ಕಯ್	ಕೈ
ಮೈ	ಮಯ್	ದೇಹ

ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲಿ ಸಂಧ್ಯಾಕ್ಷರಾದ "ಐ" ಧ್ವನಿಯ ಬದಲು "ಅಯ್" ಓದಲು ಕಾರಣ ಉರ್ದುಭಾಷಿಕರ ಮಕ್ಕಳು ತಮ್ಮ ಮಾತೃಭಾಷೆಯಾದ ಉರ್ದುವಿನಲ್ಲಿ ಉಚ್ಚರಿಸುವ ಪದಗಳ ಮಾದರಿಯಲ್ಲಿ ಉಚ್ಚರಿಸಬೇಕೆಂಬ ತಪ್ಪು ಕಲ್ಪನೆಯಿಂದ ಅಥವಾ ಬಿಡಿಯಾಗಿ ಉಚ್ಚರಿಸುವುದರಿಂದ ಈ ತೆರನಾದ ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

೧.೧೯. ಔ > ಅವ್

ಪದಾದಿ ಪದಮಧ್ಯ ಪರಿಸರದಲ್ಲಿ ಸಂಧ್ಯಾಕ್ಷರ "ಔ" ಧ್ವನಿ ಬದಲು "ಅವ್" ಎಂದು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಔಡಲ	ಅವಡಲ	ಹರಳು ಗಿಡ
ಜೌತಣ	ಅವತನ	ಬೋಜನ
ಔಪಚಾರಿಕ	ಅವಪಚಾರಿಕ	ವಾಡಿಕೆಯ
ಔಷಧ	ಅವಸದ	ವನಸ್ಪತಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕೌಮುದಿ	ಕವ್ ಮುದಿ	ಬೆಳದಿಂಗಳು
ಪೌರ	ಪವರ	ನಾಗರಿಕ
ಕಾಳಿಕ	ಕವಲಿಕ	ಮೋಸ
ಪೌಳಿ	ಪವ್ಲಿ	ಗೋಡೆ
ಕೌಶಿಕ	ಕವಸಿಕ	ವಿಶ್ವಾಮಿತ್ರ

ಪದಾದಿ ಪದಮಧ್ಯ ಪರಿಸರದಲ್ಲಿ ಸಂಧ್ಯಾಕ್ಷಕ "ಔ" ಧ್ವನಿ ಬದಲು "ಅವ್" ಎಂದು ಬಿಡಿಯಾಗಿ ಓದಲು ಕಾರಣ ಉಚ್ಚಾರಣೆ ಬಗ್ಗೆ ಸ್ಪಷ್ಟವಾಗಿ ಶಿಕ್ಷಕರು ಹೇಳದೆ ಇರುವುದು ಹಾಗೂ ಸಂಧ್ಯಾಕ್ಷರ ಓದುವ ಹಾಗೂ ಉಚ್ಚಾರಣ ರೀತಿ ತಿಳಿಯದೆ ಇರುವುದರಿಂದ ಈ ತರಹ ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

ವ್ಯಂಜನಗಳ ಓದು

೧.೨೦.ಕ > ಖ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಂಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿ "ಕ" ಬದಲು ಕಂಠ್ಯ ಮಹಾಪ್ರಾಣ ಸಂಘರ್ಷ ವ್ಯಂಜನ ಧ್ವನಿ "ಖ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕತ್ತಿ	ಖತ್ತಿ	ಖಡ್ಗ
ಕಡಲೆ	ಖಡಲೆ	ಬೀಜ, ಕಡಲೆ
ಕಬಡ್ಡಿ	ಖಬಡ್ಡಿ	ಆಟ, ಕ್ರೀಡೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ರಕ್ಕಂ	ರಖಂ	ಹಣ
ಚಕಿತ	ಚಖಿತ	ಬೆರಗುಗೊಂಡ
ಚಕಾರ	ಚಖಾರ	ತುಟಿ ಪಿಟಕ್ಕೆನ್ನದೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಂತಿವೆ.

೧. ಉರ್ದುಭಾಷೆಯಲ್ಲಿರುವ 'ಖ಼' ಅಲಿಜಿಹ್ವೀಯ ಅಘೋಷ ಸಂಘರ್ಷ ವ್ಯಂಜನ ಧ್ವನಿಯ ಪ್ರಭಾವವಾಗಿರುವುದು ಇಲ್ಲಿ ಕಂಡುಬರುವುದು.

೨. ಉರ್ದುಭಾಷಿಕ ಮಕ್ಕಳು ಕನ್ನಡ ಬಾಷೆಯನ್ನು ಓದುವಾಗ "ಕ" ಧ್ವನಿ ಮತ್ತು "ಖ" ಧ್ವನಿಯ ನಡುವೆ ಅಲ್ಪ ಧ್ವನಿಸಾಮತ್ಯೆ ಇರುವುದರಿಂದ ಈ ತೆರೆನಾದ ವ್ಯತ್ಯಾಸದಿಂದ ಓದಲು ಕಾರಣವಿರಬಹುದು,

೩. ಕನ್ನಡ ಭಾಷೆಯಲ್ಲಿನ "ಕ" ಧ್ವನಿ ಮತ್ತು "ಖ" ಧ್ವನಿಗಳ ಸ್ಪಷ್ಟವಾದ ಉಚ್ಚಾರಣಾ ವ್ಯತ್ಯಾಸ ತಿಳಿಯದೆ ಗೊಂದಲದಿಂದ ಈ ತೆರನಾದ ವ್ಯತ್ಯಾಸವನ್ನು ಉರ್ದು ಭಾಷಿಕ ಮಕ್ಕಳು ಮಾಡುವುದು ಕಂಡುಬರುವುದು

೧.೨೧. ಖ > ಖ಼

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಂಠ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ "ಖ" ಬದಲು ಅಲಿಜಿಹ್ವೀಯ ಅಘೋಷ ಸಂಘರ್ಷ ವ್ಯಂಜನ ಧ್ವನಿ "ಖ಼" ಎಂದು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಖಲಿಲುಲ್ಲಾಖಾನ	ಖ಼ಲಿಲುಲ್ಲಾಖಾನ	ವ್ಯಕ್ತಿಯ ಹೆಸರು
ಖಾಲಿ	ಖ಼ಾಲಿ	ಖಾಲಿ
ಖೂನಿ	ಖ಼ೂನಿ	ಕೊಲೆ
ಖಡಿಬೋಲಿ	ಖ಼ಡಿಬೋಲಿ	ಒಂದು ಭಾಷೆ
ಖಲೀಫ	ಖ಼ಲೀಫ	ವ್ಯಕ್ತಿಯ ಹೆಸರು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಪಾಯಖಾನೆ	ಪಾಯಖ಼ಾನೆ	ಕಕ್ಕಸು
ದಾಖಲ್	ದಾಖ಼ಲ್	ನೊಂದಾಯಿಸು
ನಿಖರ	ನಿಖ಼ರ	ಸ್ಪಷ್ಟವಾದುದ್ದು
ಗೊಮುಖ	ಗೋಮುಖ಼	ಹಸುವಿನ ಮುಖ
ಗೋರಖ	ಗೋರಖ಼	ಹೆಸರು
ನಿಖಾ	ನಿಖ಼ಾ	ಮದುವೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಈ ಮುಂದಿನಂತೆ ವಿಶ್ಲೇಷಿಸಬಹುದು. ಕಂಠ್ಯ ಅಘೋಷ್ ಸಂಘರ್ಷ ವ್ಯಂಜನ ಧ್ವನಿ "ಖ" ಉರ್ದುಭಾಷೆಯಲ್ಲಿ ಇಲ್ಲದೆ ಇರುವುದರಿಂದ ಉರ್ದುಭಾಷೆಯಲ್ಲಿ ಅಲಿಜಿಹ್ವೀಯ ಅಘೋಷ ಸಂಘರ್ಷ ವ್ಯಂಜನ ಧ್ವನಿ "ಖ಼" ಇದೆ. ಆದುದರಿಂದು ಉರ್ದುಭಾಷಿಕ ಮಕ್ಕಳು ಕನ್ನಡಭಾಷೆಯಲ್ಲಿ ಓದುವಾಗ ತಮ್ಮ ಮಾತೃಭಾಷೆಯ ಪ್ರಭಾವದಿಂದ "ಖ" ಧ್ವನಿಯನ್ನ "ಖ಼" ಧ್ವನಿ ಎಂದು ಪರಿಭಾವಿಸಿ ಓದುತ್ತಾರೆ. ಇದರಲ್ಲಿ ಅವರ ಮಾತೃಭಾಷೆಯ ಪ್ರಭಾವ ಸ್ಪಷ್ಟವಾಗಿ ಆಗಿರುವುದು ಕಂಡುಬರುವುದು.

೧.೨೨. ಜ > ಝ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಘೋಷ ಅನುಘರ್ಷ ವ್ಯಂಜನ "ಜ" ಬದಲು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಝ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಜಗ	ಝಗ	ಲೋಕ
ಜಕಾತಿ	ಝಕಾತಿ	ಸುಂಕ
ಜನ	ಝನ	ಜನ
ಜಯ	ಝಯ	ಗೆಲುವು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಖನಿಜ	ಖನಿಝ	ಗಣಿಯಲ್ಲಿ ಹುಟ್ಟಿದುದು
ಕುಟಜ	ಕುಟಝ	ಬೆಟ್ಟಮಲ್ಲಿಗೆ
ಗಜ	ಗಝ	ಆನೆ
ತನುಜ	ತನುಝ	ಮಗ
ಮಜಲು	ಮಝಲು	ಹಂತ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ ತಾಲವ್ಯ ಘೋಷ ಅನುಘರ್ಷ ವ್ಯಂಜನ "ಜ" ಮತ್ತು ಮೂರ್ಧನ್ಯ ಘೋಷ ಸಂಘರ್ಷ ವ್ಯಂಜನ "ಝ" ಈ ಎರಡು ಧ್ವನಿಗಳು ಉರ್ದುಭಾಷೆಯಲ್ಲಿ ಬೇರೆ ಬೇರೆ ಪರಿಸರದಲ್ಲಿ ಬಳಕೆಯಾಗುತ್ತವೆ. ಆದರೆ ಉರ್ದುಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಈ ತರಹದ ವ್ಯತ್ಯಾಸ ಕಂಡುಬರುವುದೊಂದು ವಿಶೇಷವಾಗಿದೆ.

೧.೨೩. ಜ > ಝು

ಪದಾದಿ ಪರಿಸರದಲ್ಲಿ ತಾಲವ್ಯ ಘೋಷ ಅನುಘರ್ಷ ವ್ಯಂಜನ "ಜ" ಧ್ವನಿ ಬದಲಾಗಿ ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಝು" ಧ್ವನಿ ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಜಗಳ	ಝುಗಡಾ	ಜಗಳ
ಜೋಪಾನ	ಝೋಪಾನ	ಎಚ್ಚರಿಕೆ
ಜೋಡ್	ಝೋಡ್	ಜೊತೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ (ಇದು ವಿಶೇಷವಾಗಿ ಕಂಡುಬರುವುದನ್ನು ಕಾಣುತ್ತೇವೆ) ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿನ ಮೂರ್ಧನ್ಯ ಘೋಷ ಸಂಘರ್ಷ ವ್ಯಂಜನ ಝ ಎಂದು ಸಂಭವಿಸಿ ಉರ್ದು ಮಾತೃಭಾಷಿಕರ ಮಕ್ಕಳು ತಾಲವ್ಯ ಘೋಷ

ಅನುಘರ್ಷ ವ್ಯಂಜನ "ಜ" ಧ್ವನಿ ಬದಲು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಝ" ಧ್ವನಿ ಓದಲು ಕಾರಣ. ಇಲ್ಲಿ ಅವರ ಉರ್ದು ಮಾತೃ ಭಾಷೆಯ ಪ್ರಭಾವದಿಂದಾಗಿ ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಈ ತರಹದ ವ್ಯತ್ಯಾಸ ಮಾಡುವುದು ಕಂಡುಬರುವುದು.

೧.೨೪. ಝ > ಜ಼

ಪದಾದಿ ಪರಿಸರದಲ್ಲಿ ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಝ" ಧ್ವನಿ ಬದಲು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಜ಼" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಝಗೆ	ಜ಼ಗೆ	ಹೊಳಪು
ಝಡತಿ	ಜ಼ಡತಿ	ಹುಡುಕುವುದು
ಝಣಕ	ಜ಼ಣಕ	ಚುರುಕು
ಝಲಿ	ಜ಼ಲಿ	ಕುಚ್ಚು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿನ ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ ಜ಼ ಕನ್ನಡ ಭಾಷೆಯಲ್ಲಿ ಇಲ್ಲ. ಆದರೆ ಉರ್ದುಭಾಷೆಯಲ್ಲಿಯ ಈ ಧ್ವನಿ ಉರ್ದು ಭಾಷಿಕ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಝ" ಧ್ವನಿಯನ್ನು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ ಜ಼ ಎಂದು ಪರಿಭಾವಿಸಿ ಈ ತೆರನಾದ ವ್ಯತ್ಯಾಸದಿಂದ ಪದಗಳನ್ನು ಓದುವುದನ್ನು ನಾವು ಕಾಣುತ್ತೇವೆ.

೧.೨೫. ಗ > ಘ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಂಠ್ಯ ಘೋಷ ಸ್ಪರ್ಶ ವ್ಯಂಜನ 'ಗ' ಧ್ವನಿ ಬದಲು ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ "ಘ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಗಳಿಸು	ಘಳಿಸು	ಗಳಿಸು
ಗಳಿಕೆ	ಘಳಿಕೆ	ಸಂಪಾದಿಸು
ಗಣನೆ	ಘನನೆ	ಲೆಕ್ಕಕ್ಕೆ ತೆಗೆದುಕೊಳ್ಳುವುದು
ಗಿರಣಿ	ಘಿರನಿ	ಕಾಳುಕಡ್ಡಿ ಬೀಸುವುದು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಬಂಗಾರ	ಬಂಘಾರ್	ಚಿನ್ನ
ಭಂಗಿ	ಭಂಘಿ	ಶೌಚ ತೊಳೆಯುವವ
ಭಗ	ಭಘ	ಸೂರ್ಯ
ಮೊಗೆ	ಮೊಘೆ	ಮೊಗೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದಿಲ್ಲ. ಉರ್ದು ಮಾತೃಭಾಷೆಯಲ್ಲಿ ಅರಬ್ಬೀ ಭಾಷೆಯ ಪದಗಳು ಯಥೇಚ್ಚವಾಗಿ ಬಳಕೆಯಲ್ಲಿ ಇವೆ. ಅರಬ್ಬೀ ಭಾಷೆಯಲ್ಲಿ "ಘ" ಧ್ವನಿ ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುವುದರಿಂದ ಉರ್ದು ಭಾಷಿಕ ಮಕ್ಕಳು ಕಂಠ್ಯ ಘೋಷ ಸ್ಪರ್ಶ ವ್ಯಂಜನ "ಗ" ಧ್ವನಿ ಬದಲು ಅಲಿಜ್ವೀಹ್ವೀಯ ಘೋಷ ಸ್ಪರ್ಶ ವ್ಯಂಜನ "ಘ" ಧ್ವನಿಯನ್ನು ವ್ಯತ್ಯಾಸದಿಂದ ಓದಲು ಸ್ಪಷ್ಟ ಕಾರಣ. ಉರ್ದು ಭಾಷೆಯ ಜೊತೆಗೆ ಅವರ ಮಾತೃ ಭಾಷೆಯಲ್ಲಿ "ಘ" ಧ್ವನಿ ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುವರು.

೧.೨೬. ಘ > ಗ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ "ಘ" ಧ್ವನಿ ಬದಲಾಗಿ ಕಂಠ್ಯ ಘೋಷ ಸ್ಪರ್ಶ ವ್ಯಂಜನ "ಗ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ನೇ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಘಳಿಗೆ	ಗಲಿಗೆ	ಸಮಯ
ಘಂಟೆ	ಗಂಟೆ	ಸಮಯ
ಘಟಕ	ಗಟಕ	ಅಂಗ
ಘನ	ಗನ	ಗಟ್ಟಿ
ಘಡಿ	ಗಡಿ	ಘಡಿ

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಮೇಘ	ಮೇಗ	ಮೋಡ
ಲಘು	ಲಗು	ಚಿಕ್ಕದು
ಸಂಘ	ಸಂಗ	ಗುಂಪು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ "ಘ" ಮತ್ತು ಕಂಠ್ಯ ಘೋಷ ಸ್ಪರ್ಶ ವ್ಯಂಜನ ಧ್ವನಿ "ಗ". ಈ ಎರಡು ಧ್ವನಿಗಳಲ್ಲಿ ಉಚ್ಚಾರಣೆಯ ಅಲ್ಪಸಾಮ್ಯತೆ ಇರುವುದರಿಂದ ಉರ್ದುಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಈ ತರಹದ ವ್ಯತ್ಯಾಸಗಳನ್ನು ಮಾಡುವುದು ಕಂಡುಬರುವುದು.

೧.೨೭ ಠ > ಟ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಠ" ಧ್ವನಿ ಬದಲು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿಯನ್ನು ಓದುತ್ತಾರೆ. ಈ ತೆರನಾದ ಘೋಷವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಠರಾವು	ಟರಾವು	ತೀರ್ಮಾನ
ಠಾಣ	ಟಾನ	ಬೀಡು
ಠಾನೆ	ಟಾನೆ	ನೆಲೆ
ಠಸ್ಸೆ	ಟಸ್ಸೆ	ಒತ್ತುವ ಮುದ್ರೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಪಾಠ	ಪಾಟ	ಪಾಠ, ಅಧ್ಯಾಯ
ಜಠರ	ಜಟರ	ಹೊಟ್ಟೆ
ಮಿಠಾಯಿ	ಮಿಟಾಯಿ	ಸಿಹಿತಿಂಡಿ
ಸಹಪಾಠಿ	ಸಹಪಾಟಿ	ಜೊತೆಗಾರ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ " ಠ " ಮತ್ತು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿಗಳು. ಈ ಎರಡು ಧ್ವನಿಗಳು ಧ್ವನಿ ಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಈ ತೆರನಾದ ವ್ಯತ್ಯಾಸ ಮಾಡುತ್ತಾರೆ.

೧.೨೮. ಡ > ಣ

ಪದ್ಯಮಧ್ಯ ಪರಿಸರದಲ್ಲಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಬದಲು ಮೂರ್ಧನ್ಯ ಅನುನಾಸಿಕ ವ್ಯಂಜನ "ಣ" ಧ್ವನಿ ಓದುತ್ತಾರೆ. ಈ ಒಂದು ದೊಷವನ್ನು ವಿಶೇಷವಾಗಿ ಗ್ರಾಮೀಣ ಭಾಗದ ಉರ್ದು ಮಾತೃಭಾಷೆಯ ಎಲ್ಲ ತರಗತಿಯ ಮಕ್ಕಳು ಮಾಡುವರು.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಹೆಂಡತಿ	ಎಣತಿ	ಪತ್ನಿ
ಹೆಂಡಿರು	ಹೆಣತಿರು	ಪತ್ನಿಯರು
ಹೆಂಡತಿಯರು	ಹೆಣತಿಯರು	ಪತ್ನಿಯರು
ಏಡಿ	ಏಣಿ	ಏಡಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಗ್ರಾಮೀಣ ಪ್ರದೇಶ ಉರ್ದು ಮಕ್ಕಳಿಗೆ ನಗರ ಪ್ರದೇಶದ ಮಕ್ಕಳಿಗಿಂತ ಕನ್ನಡಿಗರ ಸಂಪರ್ಕ ಹೆಚ್ಚು ಇರುವುದರಿಂದ ತಮ್ಮ ಆಡುಮಾತಿನಲ್ಲಿ "ಡ" ಧ್ವನಿಯ ಬದಲು "ಣ" ಧ್ವನಿಯನ್ನು ಬಳಕೆ ಮಾಡುವರು. ಈ ಒಂದು ಪ್ರಭಾವದಿಂದ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಬದಲು ಮೂರ್ಧನ್ಯ ಅನುನಾಸಿಕ ವ್ಯಂಜನ "ಣ" ಧ್ವನಿಯನ್ನು ಓದುತ್ತಾರೆ.

೧.೨೯. ಣ > ನ

ಪದಮಧ್ಯ ಪರಿಸರದಲ್ಲಿ ಮೂರ್ದನ್ಯ ಅನುನಾಸಿಕ "ಣ" ಧ್ವನಿ ಬದಲು ದಂತ್ಯ ಅನುನಾಸಿಕ ವ್ಯಂಜನ "ನ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಣಿ	ಕನಿ	ಭವಿಷ್ಯ
ಗೇಣಿ	ಗೇನಿ	ಗುತ್ತಿಗೆ
ಪಣ	ಪನ	ಜಿದ್ದು
ಗುಣ	ಗುನ	ಸ್ವಭಾವ
ಗಣತಿ	ಗನತಿ	ಎಣಿಕೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಇಲ್ಲದೆ ಇರುವುದರಿಂದ ಇವರ ಕೆಲಸವನ್ನು ದಂತ್ಯ ಅನುನಾಸಿಕ ವ್ಯಂಜನ "ನ" ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ

ಅಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿಯ ವ್ಯತ್ಯಾಸಗಳನ್ನು ಉರ್ದುಭಾಷಿಕರ ಮಕ್ಕಳು ಮಾಡುತ್ತಿರುವುದು ಗಮನಾರ್ಹವಾದದ್ದು.

೧.೩೦. ಣ > ಲ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಬದಲು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಸರಪಣಿ	ಸರಪಲಿ	ಸಂಕೋಲೆ
ಗಿಣಿ	ಗಿಲಿ	ಗಿಳಿ
ಅಣಕ	ಅಲಕ	ಅಪಹಾಸ್ಯ
ಕಣಿ	ಕಲಿ	ಭವಿಷ್ಯ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಉರ್ದುಭಾಷೆಯಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿ ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿಯ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಮಾಡುತ್ತಿರುವುದು ಗಮನಾರ್ಹವಾದದ್ದು.

೧.೩೧. ಚ > ಛ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಬದಲು ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಛ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೧೦ನೇ ತರಗತಿಯ ಮಕ್ಕಳಲ್ಲಿ ಕಂಡುಬರುವುದು.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಚಕಿತ	ಛಕಿತ	ಬೆರಗುಗೊಂಡ
ಚಕಮಕಿ	ಛಕಮಕಿ	ಜಗಳ
ಚಟ	ಛಟ	ಹವ್ಯಾಸ ಚಾಳಿ
ಚಟಾಕಿ	ಛಟಾಕಿ	ಪಟಾಕಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಚಾಚು	ಚಾಛು	ವಿಸ್ತಾರ
ಚಂಚಲ	ಚಂಛಲ	ಚಂಚಲ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಉರ್ದು ಭಾಷೆಯಲ್ಲಿ ಮಹಾಪ್ರಾಣ ಧ್ವನಿ "ಛ" ಹೆಚ್ಚು ಆಡುವ ಮಾತಿನಲ್ಲಿ ಬಳಕೆ ಮಾಡುವುದರಿಂದ ಇದರ ಒಂದು ಪ್ರಭಾವದಿಂದ ಉರ್ದು ಭಾಷಿಕರ ಮಕ್ಕಳು ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಬದಲು ತಾಲವ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ "ಛ" ಧ್ವನಿಯನ್ನು ಓದುವಾಗ ಬಳಕೆ ಮಾಡುವರು.

೧.೩.೨. ಛ > ಚ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಛ" ಧ್ವನಿಯ ಬದಲಾಗಿ ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಛಂದ	ಚಂದ	ರೀತಿ, ಇಚ್ಛೆ
ಛತ್ರಿ	ಚತಿರಿ	ಕೊಡೆ
ಛಲ	ಚಲ	ನೆಪ
ಛಿನ್ನ	ಚಿನ್ನ	ಕತ್ತರಿಸಲ್ಪಟ್ಟ
ಛೀಮಾರಿ	ಚಿಮಾರಿ	ಛೀಮಾರಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಮೂರ್ಛೆ	ಮೂರ್ಚೆ	ಮೂರ್ಛೆ
ಕಛೇರಿ	ಕಚೆರಿ	ಕಾರ್ಯಾಲಯ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಛ" ಧ್ವನಿ ಮತ್ತು ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿಗಳೆರಡು ಅಲ್ಪಧ್ವನಿ ಸಾಮ್ಯತೆ ಇರುವುದರಿಂದ ಗೊಂದಲಕ್ಕೊಳಗಾಗಿ ಉರ್ದು ಮಾತೃಭಾಷೆಯ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಈ ತೆರನಾದ ವ್ಯತ್ಯಾಸ ಮಾಡುವುದು ಕಂಡುಬರುತ್ತದೆ.

೧.೩೩. ಚ > ಶ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಬದಲು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಶ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ನೇ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಚಸ್ಮ	ಶಸ್ಮ	ಚಾಳೀಸು, ಕನ್ನಡಕ
ಚಪ್ಪರ	ಶಪ್ಪರ	ಛಾವಣಿ
ಚಕಿತ	ಶಕಿತ	ಬೆರಗುಗೊಂಡ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಪೈಶಾಚಿ	ಪಯಿಶಾಶಿ	ಒಂದು ಭಾಷೆ
ಅಚಲ	ಅಶಲ	ದೃಢ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಮತ್ತು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ "ಶ" ಗಳ ನಡುವೆ ಅಲ್ಪಧ್ವನಿ ವ್ಯತ್ಯಾಸ ಕಂಡುಬರುವುದರಿಂದ ಉರ್ದು ಭಾಷಿಕರ ಮಾತೃಭಾಷೆಯ ಮಕ್ಕಳು ಓದುವಾಗ ಈ ತರಹದ ವ್ಯತ್ಯಾಸ ಮಾಡುತ್ತಾರೆ.

೧.೩೪. ಚ > ಸ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಬದಲು ವರ್ತ್ಸ್ಯ ಅಘೋಷ ಸಂಘರ್ಷಿ ವ್ಯಂಜನ "ಸ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಚೀಲ	ಸಿಲ	ದಾನ್ಯಗಳ ಸಂಗ್ರಹ ಮಾಡುವ ಜಾಲ
ಚಿಲಕ	ಸಿಲಕ	ಚಿಲಕ
ಚೆಂಬು	ಸೆಬು	ಚೆಂಬು
ಚಟ	ಸಟ	ಹವ್ಯಾಸ
ಚಡಿ	ಸಡಿ	ಬೆತ್ತ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕುರ್ಚಿ	ಕುರಸಿ	ಕುರ್ಚಿ
ಕಚ್ಚು	ಕಸು	ಕಚ್ಚು
ಕಿರ್ಚು	ಕಿರಸು	ಒದರು
ಪರ್ಚು	ಪರಸು	ತೆರೆಚು
ತೀರ್ಚು	ತಿರಸು	ಮುಗಿಸು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಮತ್ತು ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಗಳೆರಡು ಸ್ವಚ್ಛಂದ ಪರಿಸರದಲ್ಲಿ ಬಳಕೆಯಾಗುತ್ತಿರುವುದರಿಂದ ಮತ್ತು ಉರ್ದು ಮಾತೃ ಭಾಷೆಯಲ್ಲಿ ಹಿಂದಿ ಭಾಷೆಯ

ಪದಗಳನ್ನು ಸ್ವೀಕರಣ ಮಾಡಿಕೊಂಡಿರುವದರಿಂದ ಹಿಂದಿ ಭಾಷೆಯ ಪದಗಳಲ್ಲಿ "ಚ" ದ್ವಿತ್ವದಿಂದ ಕೂಡಿದಾಗ "ಚ" ಧ್ವನಿಯ ಬದಲು "ಸ" ಧ್ವನಿಯನ್ನು ಉಪಯೋಗಿಸುತ್ತಾರೆ. ಅದರ ಪ್ರಭಾವದಿಂದ ಉರ್ದು ಮಾತೃಭಾಷಿಕರ ಮಕ್ಕಳು ಈ ತರಹದ ವ್ಯತ್ಯಾಸಗಳನ್ನು ಮಾಡುತ್ತಿರುವುದು ಕಂಡುಬರುವುದು.

೧.೩೫. ಗ > ಕ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಂಠ್ಯ ಘೋಷ ಸ್ಪರ್ಶ ವ್ಯಂಜನ "ಕ" ಧ್ವನಿಯ ಬದಲು ಕಂಠ್ಯ ಅಘೋಷ ಸ್ಪರ್ಶ ವ್ಯಂಜನ "ಗ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಗಲ್ಲ	ಕಲ್ಲ	ಕಪಾಳ
ಗಣಿ	ಕನಿ	ಕಣಿ
ಗಾಲಿ	ಕಾಲಿ	ಚಕ್ರ
ಗರಗಸ	ಕರಗಸ	ಉಪಕರಣ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ನಗದು	ನಕದ್	ನಗದು
ಕೋಗಿಲೆ	ಕೊಕಿಲೆ	ಕೋಗಿಲೆ
ನಾಲಿಗಿ	ನಾಲಿಕಿ	ನಾಲಿಗೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಇಲ್ಲದೇ ಇಲ್ಲ. ಕಂಠ್ಯ ಘೋಷ ಸ್ಪರ್ಶ ವ್ಯಂಜನ "ಕ" ಧ್ವನಿ ಕಂಠ್ಯ ಅಘೋಷ ಸ್ಪರ್ಶ ವ್ಯಂಜನ "ಗ" ಧ್ವನಿ ಸ್ವಚ್ಛಂದ ಪರಿಸರದಲ್ಲಿ ಈ ತೆರನಾಗಿ ಬಳಕೆಯಾಗುವುದರ ಜೊತೆಗೆ ಅವರ ಉರ್ದು ಮಾತೃಭಾಷೆಯಲ್ಲಿನ ಪದಗಳನ್ನು "ಗ" ಧ್ವನಿ ಬದಲು "ಕ" ಧ್ವನಿ ಓದುವಾಗ ಬಳಕೆ ಮಾಡುತ್ತಾರೆ. ಆದ್ದರಿಂದ ಅವರ ಮಾತೃಭಾಷೆಯ ಪ್ರಭಾವದಿಂದ ಉರ್ದು ಭಾಷಿಕರ ಮಕ್ಕಳು ಓದುವಾಗ ಈ ತೆರನಾದ ವ್ಯತ್ಯಾಸ ಮಾಡುತ್ತಾರೆ.

೧.೩೬. ಝ > ಜ

ಪದಾದಿ ಪರಿಸರದಲ್ಲಿ ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಝ" ಧ್ವನಿ ಬದಲು ತಾಲವ್ಯ ಘೋಷ ಅನುಘರ್ಷ ವ್ಯಂಜನ 'ಜ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಝಗಟ	ಜಗಟ	ಜಗಳ
ಝಟನೆ	ಜಟನೆ	ಜಡತಿ
ಝಟತಿ	ಜಟತಿ	ಜಡತಿ
ಝರಿ	ಜರಿ	ನದಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಇಲ್ಲದೆ ಇಲ್ಲ. ತಾಲವ್ಯ ಘೋಷ ಅನುಘರ್ಷ ವ್ಯಂಜನ 'ಜ' ಮತ್ತು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ ಈ ಎರಡು ಧ್ವನಿಗಳಲ್ಲಿ ಉಚ್ಚಾರಣ ಧ್ವನಿಸಾಮ್ಯತೆ ಇರುವುದರಿಂದ ಉರ್ದು ಭಾಷಿಕರ ಮಕ್ಕಳು ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

೧.೩೭. ಟ > ಡ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿ ಬದಲಾಗಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಿಟಕಿ	ಖಿಡಕಿ	ಕಿಟಕಿ
ಕಟಕಿ	ಖಡಕಿ	ಚುಚ್ಚುಮಾತು
ಸಂಗಟ	ಸಂಗಡ	ಜೊತೆಗಾರ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿ ಬದಲಾಗಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯನ್ನು ಪದಮಧ್ಯ ಪರಿಸರದಲ್ಲಿ ಓದುವಾಗ "ಡ" ಧ್ವನಿಗಿಂತ "ಟ" ಧ್ವನಿ ಕಠಿಣ ವಾಗುವಂತೆ ಕಾಣುವದು ಅದಕ್ಕಾಗಿ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಈ ತರಹದ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುವುದು.

೧.೩೮. ಣ > ನ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅನುನಾಸಿಕ ಅಘೋಷ "ಣ" ಧ್ವನಿ ಬದಲು ದಂತ್ಯ ಅನುನಾಸಿಕ ಅಘೋಷ ವ್ಯಂಜನ "ನ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಣಿ	ಕನಿ	ಬಂಡೆ ತೆಗೆಯುವ ಸ್ಥಳ
ಗೇಣಿ	ಗೇನಿ	ಗುತ್ತಿಗೆ
ಪಣ	ಪನ	ಜಿದ್ದು
ಗುಣ	ಗುನ	ಸ್ವಭಾವ
ಗಣತಿ	ಗನತಿ	ಎಣಿಕೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ದಂತ್ಯ ಅನುನಾಸಿಕ ವ್ಯಂಜನ "ನ" ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿಯ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಓದುವಾಗ ಮಾಡುತ್ತಿರುವುದು ಗಮನಾರ್ಹವಾದದ್ದು.

೧.೩೯. ಳ > ಲ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ ಧ್ವನಿ "ಳ" ಧ್ವನಿಯ ಬದಲು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿಯನ್ನು ಓದುತ್ತಾರೆ. ಈ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಗಳಗೆ	ಗಲಗೆ	ಬಿದರಿನ ದೊಡ್ಡ ಗೋಡೆ
ಜಗಳ	ಜಗಲ	ಕಲಹ
ಆಳಗ	ಜಲಕ	ಸ್ನಾನ
ದಾಳ	ದಾಲ	ಸಂಚು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ಮುಂದಿನಂತೆ ವಿಶ್ಲೇಷಿಸಬಹುದು. ಉರ್ದುಭಾಷೆಯಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ "ಳ" ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿ ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃ ಭಾಷೆಯಾದ ಉರ್ದು. ಹಾಗಾಗಿ ಈ ರೀತಿಯ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಮಾಡುತ್ತಿರುವುದು ಕಂಡುಬರುವುದು.

೧.೪೦. ಹ > ಅ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಾಕಲ್ಯ ಘೋಷ ಸಂಘರ್ಷಿ ವ್ಯಂಜನ "ಹ" ಧ್ವನಿ ಬದಲಾಗಿ ನಿಮ್ನ ಕೇಂದ್ರ ಅಗೋಳ ಹ್ರಸ್ವ ಸ್ವರ "ಅ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಹಳದಿ	ಅಲದಿ	ಅರಿಶಿಣದ ಬಣ್ಣ
ಹಂಗ	ಅಂಗ	ಶಕುನದ ಹಕ್ಕಿ
ಹಣ್ಣು	ಅನ್ನು	ಹಣ್ಣು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಸಮೂಹ	ಸಮೂಅ	ಗುಂಪು
ಕಲಹ	ಕಲಅ	ಜಗಳ
ತರಹದ	ತರದ	ತೆರನಾಗಿ
ಬರಹ	ಬರ	ಬರೆಯುವುದು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಕಾಕಲ್ಯ ಘೋಷ ಸಂಘರ್ಷ ವ್ಯಂಜನ "ಹ" ಧ್ವನಿ ಮತ್ತು ನಿಮ್ನ ಕೇಂದ್ರ ಅಗೋಳ ಹ್ರಸ್ವ ಸ್ವರ "ಅ" ಧ್ವನಿಗಳೆರಡು ಉಚ್ಚರಣಾ ಸಾಮ್ಯತೆ ಹೊಂದಿರುವುದರಿಂದ ಗೊಂದಲದಿಂದ ಉರ್ದು ಭಾಷಿಕರ ಮಕ್ಕಳು ಓದುವಾಗ ಈ ತೆರನಾಗಿ ವ್ಯತ್ಯಾಸ ಮಾಡುವುದು ಕಂಡುಬರುವುದು.

೧.೪೧. ಪ > ಫ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಪ" ಬದಲು ಅಲಿಜಿಹ್ವಿಯ ಅಘೋಷ ಸ್ಪರ್ಶ ವ್ಯಂಜನ "ಫ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಪಲ್ಲವಿ	ಫಲ್ಲವಿ	ಹಾಡಿನ ಸೊಲ್ಲು
ಪಲ್ಲೆ	ಫಲ್ಲೆ	ತರಕಾರಿ
ಪಲ	ಫಲ	ಫಲಿತಾಂಶ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ತೋಪು	ತೊಫು	ಮರಗಳ ಗುಂಪು
ನಪಾಸು	ನಫಾಸು	ತೇರ್ಗಡೆಯಾಗದಿರುವಿಕೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಉರ್ದು ಮಾತೃಭಾಷೆಯಲ್ಲಿ ಅಲಿಜಹ್ವೀಯ ಅಘೋಷ ಸ್ರ್ಪ ವ್ಯಂಜನ ಫ಼ ಇದೆ. ಕನ್ನಡ ಭಾಷೆಯಲ್ಲಿ ಈ ಧ್ವನಿ ಇಲ್ಲ. ಆದ್ದರಿಂದ ಉರ್ದು ಮಾತೃಭಾಷಿಕ ಮಕ್ಕಳು ದ್ವವ್ಯತ್ಯಾಸ್ಯ ಅಘೋಷ ಸ್ಪರ್ಶ ವ್ಯಂಜನ "ಫ" ಧ್ವನಿಯನ್ನು ಓದುವ ಸಂದರ್ಭ ಬಂದಾಗ ಅವರ ಉರ್ದು ಮಾತೃಭಾಷೆಯ "ಫ಼" ಧ್ವನಿ ಬಳಕೆ ಮಾಡಬೇಕೆಂಬ ಮನೋಭಾವನೆಯಿಂದ ಅಲಿಜಿಹ್ವಿಯ ಅಘೋಷ ಸ್ಪರ್ಷ ವ್ಯಂಜನ "ಫ" ಧ್ವನಿಯನ್ನು ಓದುವುದು ಕಂಡುಬರುವುದು.

೧.೪೨. ಭ > ಬ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಭ" ಧ್ವನಿಯ ಬದಲು ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಭಂಗಾರ	ಬಗಾರ	ಚಿನ್ನ
ಭಗಿನಿ	ಬಗಿನಿ	ಒಡಹುಟ್ಟಿದವರು
ಭೀತಿ	ಬಿತ	ಹೆದರಿದವನು

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಲಾಭ	ಲಾಬ	ಲಾಭ
ಗರ್ಭ	ಗರಬ	ಬಸಿರು
ಗರ್ಭಕ	ಗರಬಕ	ತಲೆ ಮೇಲೆ ಮುಡಿಯುವ ಹೂ
ಅಭಿನಯ	ಅಬಿನಯ	ನಟನೆ
ಅಭಯ	ಅಬಯ	ನಿರ್ಭಯತೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ರೀತಿ

ವಿಶ್ಲೇಷಿಸಬಹುದು. ಉರ್ದು ಭಾಷೆಯಲ್ಲಿ ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ 'ಭ' ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ಉರ್ದು ಮಾತೃಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ವ್ಯಂಜನ "ಭ" ಧ್ವನಿ ಓದುವಾಗ ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿಯನ್ನು ಓದುತ್ತಾರೆ. ಈ ಮಾದರಿಯ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸವನ್ನು ಉರ್ದು ಭಾಷಿಕರ ಮಕ್ಕಳು ಓದುವಾಗ ಮಾಡುತ್ತಿರುವುದು ಗಮನಾರ್ಹ ವಿಷಯ.

೧.೪೩. ಬ > ಭ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿಯ ಬದಲು ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಭ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೧೦ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಬೀಗ	ಭಿಗ	ಗಂಟ
ಬಯಲಾಟ	ಭಯಲಾಟ	ಬಯಲಾಟ
ಬುಗುರಿ	ಭುಗುರಿ	ಒಂದು ಆಟಿಕೆ
ಬಿಸ	ಭಿಸ	ವಿಷ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ದಬರಿ	ದಭರಿ	ಅಗಲಬಾಯಿವುಳ್ಳ ಪಾತ್ರೆ
ನಂಬು	ನಭು	ವಿಶ್ವಾಸ
ಅಬಲೆ	ಅಭಲೆ	ಹೆಂಗಸು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಎರಡು ಕಾರಣಗಳನ್ನು ಹೇಳಬಹುದು.

೧. ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ 'ಬ' ಧ್ವನಿ ಮತ್ತು ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಭ" ಈ ಎರಡು ಧ್ವನಿಗಳು ಅಲ್ಪ ಧ್ವನಿಸಾಮ್ಯತೆ ಹೊಂದಿರುವುದರಿಂದ ಓದುವಾಗ ಉರ್ದು ಭಾಷಿಕ ಮಕ್ಕಳು ಕನ್ನಡ ಭಾಷೆ ಕಲಿಯುವಾಗ ಈ ತೆರನಾದ ವ್ಯತ್ಯಾಸ ಮಾಡುವುದು ಕಂಡುಬರುವುದು.

೨. ಗೊಂದಲದಿಂದಲೂ ಈ ತರಹದ ವ್ಯತ್ಯಾಸ ಮಾಡುವುದನ್ನು ಕಾಣುತ್ತೇವೆ.

೧.೪೪. ಬ > ವ

ಪದಾದಿ ಪರಿಸರದಲ್ಲಿ ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿ ಬದಲು ದಂತೋಷ್ಠ್ಯ ಅರ್ಧ ಸ್ವರ ವ್ಯಂಜನ "ವ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಬಟ್ವೆ	ವಟ್ವೆ	ಬಟ್ಟೆ, ಅರಿವೆ
ಬೀದಿ	ವೀದಿ	ದಾರಿ
ಬಿಸಿ	ವಿಸಿ	ಕಾವು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಕಾರಣಗಳನ್ನು ಈ ರೀತಿ ಊಹಿಸಬಹುದು. ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿ ಮತ್ತು ದಂತೋಷ್ಠ್ಯ ಅರ್ಧಸ್ವರ "ವ" ಧ್ವನಿಗಳೆರಡು ರಚನೆಯಲ್ಲಿ ಅಲ್ಪಸಾಮ್ಯತೆ ಹೊಂದಿರುವುದರಿಂದ ಉರ್ದು ಮಾತೃಭಾಷಿಕರ ಮಕ್ಕಳು ಓದುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಿರುವುದು ಕಂಡುಬರುವುದು.

೧.೪೫. ಡ > ದ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದಂತ್ಯ ಘೋಷ ಸ್ಪರ್ಶ ವ್ಯಂಜನ "ದ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಡಮರು	ದಮರು	ಶಿವನ ಕೈಯಲ್ಲಿರುವ ಚರ್ಮವಾದ್ಯ
ಡಿಸೆಂಬರ್	ದಿಸೆಂಬರ್	ಡಿಸೆಂಬರ್
ಡಬರಿ	ದಬರಿ	ಅಗಲವಾದ ಬಾಯುಳ್ಳ ಪಾತ್ರೆ
ಡಗೆ	ದಗೆ	ಸೆಕೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ದಾಂಡಿಗ	ದಾಂದಿಗ	ಗಟ್ಟಿಮುಟ್ಟಾದ
ಎರಡು	ಎರದು	ಎರಡು
ಕಡಲೆ	ಕದಲೆ	ಕಡಲೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಈ ತೆರನಾಗಿ ಹೇಳಬಹುದು. ದಂತ್ಯ ಘೋಷ ಸ್ಪರ್ಷ ವ್ಯಂಜನ 'ದ' ಧ್ವನಿ ಮತ್ತು ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ 'ಡ' ಧ್ವನಿಗಳೆರಡು ಸ್ವಚ್ಚಂದ ಪರಿಸರದಲ್ಲಿ ಬಳಕೆಯಾಗುವುದರಿಂದ ಈ ತೆರನಾದ ವ್ಯತ್ಯಾಸದಿಂದ ಓದಲು ಕಾರಣವಿರಬಹುದು. ಹಾಗೂ ಧ್ವನಿಗಳ ಹೋಲಿಕೆಯ ಸಾಮ್ಯತೆಯ ಗೊಂದಲದಿಂದಲೂ ಈ ತೆರನಾದ ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

೧.೪೬. ಥ > ತ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ವರ್ತ್ಸ್ಯ ಅಘೋಷ ಸ್ಪರ್ಶ ವ್ಯಂಜನ "ಥ" ಧ್ವನಿಯ ಬದಲು ದಂತ್ಯ ಅಘೋಷ ಸ್ಪರ್ಶ ವ್ಯಂಜನ "ತ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಥಟ್ಟನೆ	ತಟ್ಟನೆ	ಬೇಗನೆ
ಥಳಕು	ತಲಕು	ನಾಜೂಕು
ಥಳಥಳಿಸು	ತಲತಲಿಸು	ಹೊಳೆ
ಥೈಲಿ	ತಯಲಿ	ಹಣ ಇಡುವ ಚೀಲ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಥನ	ಕತನ	ಕಥೆ
ಸಾರಥಿ	ಸಾರತಿ	ರಥ ನಡೆಸುವವನು
ಗಾಥೆ	ಗಾತೆ	ಪದ್ಯ
ಕಥಿತ	ಕತಿತ	ಹೇಳಲ್ಪಟ್ಟ
ಕಥಕಳಿ	ಕತಕಲಿ	ನೃತ್ಯ ನಾಟಕ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಉರ್ದು ಭಾಷೆಯಲ್ಲಿ ವರ್ತ್ಸ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿಯಾದ "ಥ" ಇಲ್ಲದೆ ಇರುವುದರಿಂದ ಅವರ ಮಾತೃ ಭಾಷೆ ಉರ್ದುವಿನ ಪ್ರಭಾವದಿಂದ ಓದುವಾಗ ವರ್ತ್ಸ ಅಘೋಷ ಸ್ಪರ್ಶ ವ್ಯಂಜನ "ಥ" ಧ್ವನಿ ಬದಲು ದಂತ್ಯ ಅಘೋಷ ಸ್ಪರ್ಶ ವ್ಯಂಜನ "ತ" ಧ್ವನಿ ಓದುವರು ಎಂದು ಹೇಳಬಹುದು.

೧.೪೭ ಫ > ಫ಼

ಪದಾದಿ ಮತ್ತು ಪದಮಧ್ಯ ಪರಿಸರದಲ್ಲೂ ದಂತೋಷ್ಠ್ಯ ಅಘೋಷ ಸಂಘರ್ಷ ವ್ಯಂಜನ "ಫ" ಧ್ವನಿ ಬದಲು ಅಲಿಜಿಹ್ವಿಯ ಅಘೋಷ ಸ್ಪರ್ಶ ವ್ಯಂಜನ "ಫ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಫಕೀರ	ಫ಼ಕಿರ	ಮುಸಲ್ಮಾನ ಸನ್ಯಾಸಿ, ಬಡವ
ಫಾಶಿ	ಫ಼ಾಸಿ	ಗಲ್ಲುಶಿಕ್ಷೆ, ನೇಣ
ಫಣ	ಫ಼ಣ	ಹಾವಿನ ಹೆಡೆ
ಫರಾಳ	ಫ಼ರಾಲ	ಫಲಾಹಾರ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಫ	ಕಫ಼್	ಶ್ಲೇಷ್ಮ
ನಫೆ	ನಫ಼ೆ	ಲಾಭ
ಬೇಕೂಫ	ಬೇಕೂಫ಼	ಮೂರ್ಖ
ಕೆಫೆ	ಕೆಫ಼ೆ	ಕೆಫೆ
ಕಾಫಿ	ಕಾಫ಼ಿ	ಕಾಫಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಈ ಮುಂದಿನಂತೆ ವಿಶ್ಲೇಷಿಸಬಹುದು. ಉರ್ದು ಭಾಷೆಯಲ್ಲಿರುವ 'ಫ಼' ಅಲ್ಲಿಜಹ್ವೀಯ ಅಘೋಷ ಸ್ಪರ್ಶ ವ್ಯಂಜನ ಕನ್ನಡ ಭಾಷೆಯಲ್ಲಿ ಇಲ್ಲ. ಆದರೆ ಕನ್ನಡ ಭಾಷೆಯಲ್ಲಿ ಬಳಕೆಯಿರುವ ದಂತೊಷ್ಠ್ಯ ಅಘೋಷ ಸಂಘರ್ಷಿ ವ್ಯಂಜನ 'ಫ' ಧ್ವನಿಯ ಬದಲಾಗಿ ಉರ್ದು ಮಾತೃಭಾಷಿಕ ಮಕ್ಕಳು ಉರ್ದು ಮಾತೃಭಾಷೆಯ ಪ್ರಭಾವದಿಂದಾಗಿ 'ಫ' ಧ್ವನಿಯನ್ನು 'ಫ಼' ಧ್ವನಿ ಎಂದು ಓದುವರು.

೧.೪೮. ಫ > ಪ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಮಹಾಪ್ರಾಣ ಸ್ಪರ್ಶ ವ್ಯಂಜನ "ಫ" ಧ್ವನಿ "ಪ" ಬದಲು ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಫರಾರಿ	ಪರಾರಿ	ಓಡಿ ಹೋಗು
ಫಲ	ಪಲ	ಹಣ್ಣು
ಫಣಿ	ಪನಿ	ಹೆಣೆಯಾಡುವ ಹಾವು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಅಫಿಮು	ಅಪಿಮು	ಅಪೀಮು
ಕಫ	ಕಪ	ಶ್ಲೇಷ್ಮ
ದಫನ್	ದಪನ್	ಅಂತ್ಯಕ್ರಿಯೆ
ಕಾಫಿ	ಕಾಪಿ	ಕಾಫಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಪ" ಧ್ವನಿ ಮತ್ತು ದ್ವಯೋಷ್ಠ್ಯ ಮಹಾಪ್ರಾಣ ಸ್ಪರ್ಶ ವ್ಯಂಜನ "ಫ" ಧ್ವನಿಗಳೆರಡು ಉಚ್ಚಾರಣಾ ಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕ ಮಾತೃಭಾಷೆಯ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಈ ಮಾದರಿಯ ವ್ಯತ್ಯಾಸವನ್ನು ಮಾಡುವುದು ಕಂಡುಬರುವುದು.

೧.೪೯. ಥ > ಡ

ಪದಾದಿ ಪರಿಸರದಲ್ಲಿ ದಂತ್ಯ ಘೋಷ ಸ್ಪರ್ಶ ವ್ಯಂಜನ "ಥ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಢಾಲು	ಡಾಲು	ಗುರಾಣಿ
ಢಾಳ	ಡಾಲ	ಹೊಳಪು
ಢಾಳಿಸು	ಡಾಲಿಸು	ಮಿಂಚು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ದಂತ್ಯ ಘೋಷ ಸ್ಪರ್ಶ ವ್ಯಂಜನ "ಢ" ಧ್ವನಿ ಮತ್ತು ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಓದಲು ಕಾರಣ. ಈ ಎರಡು ಧ್ವನಿಗಳಲ್ಲಿ ಅಲ್ಪ ಧ್ವನಿ ಸಾಮ್ಯತೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೧.೫೦. ಡ > ಢ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯ ಬದಲು ದಂತ್ಯ ಘೋಷ ಸ್ಪರ್ಶ ವ್ಯಂಜನ "ಢ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಡವರ	ಢವರ	ಒಂದು ಬಗೆಯ ಚರ್ಮವಾದ್ಯ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ದಡೆ	ದಢೆ	ಕೋಲು
ದಡಿಯ	ದಢಿಯ	ಬಲಶಾಲಿ
ತಡಕು	ತಢಕು	ಹುಡುಕು
ತಡವು	ತಢವು	ತಡೆ
ತಡಸು	ತಢಸು	ಒಂದು ಜಾತಿಯ ಮರ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಮತ್ತು ದಂತ್ಯ ಘೋಷ ಸ್ಪರ್ಶ ವ್ಯಂಜನ "ಧ" ಅಲ್ಪ ಧ್ವನಿಸಾಮ್ಯತೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೧.೫೧. ಡ > ಟ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯ ಬದಲು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಡಾಮರ	ಟಾಮರ	ಆಕ್ರಮಣ
ಡಾಲು	ಟಾಲು	ಪ್ರಭೆ
ಡುಬರಿ	ಟುಬರಿ	ಒಂಟೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಡ	ಕಟ	ಸಾಲ
ಕಡಕ	ಕಟಕ	ಕರಾರು ವಕ್ಕಾದ
ಗಡ	ಗಟ	ಸಣ್ಣ ಕೋಟೆ
ಗಡನೆ	ಗಟನೆ	ಬೇಗನೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಗಳ ನಡುವೆ ಮತ್ತು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿ ಉಚ್ಚಾರಣ ರೀತಿ ತಿಳಿಯದೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೧.೫೨. ಟ > ಠ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅಘೋಷ ಸ್ಪರ್ಷ ವ್ಯಂಜನ "ಟ" ಧ್ವನಿ ಬದಲು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಠ" ಧ್ವನಿಯನ್ನು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಟಮಕಿ	ಠಮಕಿ	ಸಣ್ಣ ತಮಟೆ
ಟಾರು	ಠಾರು	ಡಾಂಬರು
ಟಗರು	ಠಗರು	ಗಂಡುಕುರಿ
ಟಪಾಲು	ಠಪಾಲು	ಅಂಚೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಟಕ	ಕಠಕ	ಏಡಿ
ಕಟಕಿ	ಕಠಕಿ	ಚುಚ್ಚು ಮಾತು
ಗಟರು	ಗಠರು	ತೇಗು
ಚಟುಲ	ಚಠುಲ	ವೇಗ
ಚಟಿಕೆ	ಚಠಿಕೆ	ಮಡಿಕೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯ ಅಘೋಷ ಸ್ಪರ್ಷ ವ್ಯಂಜನ " ಟ " ಮತ್ತು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಠ" ಈ ಎರಡು ಧ್ವನಿಗಳು ಧ್ವನಿಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಓದುವಾಗ ಈ ತೆರನಾದ ವ್ಯತ್ಯಾಸ ಮಾಡುವುದು ಕಂಡುಬರುವುದನ್ನು ನಾವು ಕಾಣಬಹುದು.

೧.೫೩. ತ > ಥ

ಪದಾದಿ ಪರಿಸರದಲ್ಲಿ ದಂತ್ಯ ಅಘೋಷ ಸ್ಪರ್ಷ ವ್ಯಂಜನ "ತ" ಧ್ವನಿ ಬದಲು ವರ್ತ್ಸ್ಯ

ಅಘೋಷ ಸ್ಪರ್ಶ ವ್ಯಂಜನ "ಥ" ಧ್ವನಿಯನ್ನು ಓದುತ್ತಾರೆ. ಈ ತೆರನಾದ ಘೋಷವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕತನ	ಕಥನ	ಕತೆ
ಕತ	ಕಥ	ಕಾರಣ
ಚತುರ	ಚಥುರ	ನಾಲ್ಕು
ಚಿತೆ	ಚಿಥೆ	ಬೆಂಕಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ದಂತ್ಯ ಅಘೋಷ ಸ್ಪರ್ಷ ವ್ಯಂಜನ " ತ " ಮತ್ತು ವರ್ತ್ಸ್ಯ ಅಘೋಷ ಸ್ಪರ್ಶ ವ್ಯಂಜನ "ಥ" ಈ ಎರಡು ಧ್ವನಿಗಳು ಧ್ವನಿಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಓದುವಾಗ ಈ ತೆರನಾದ ವ್ಯತ್ಯಾಸ ಮಾಡುವರು.

೧.೫೪. ದ > ಧ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದಂತ್ಯ ಘೋಷ ಸ್ಪರ್ಷ ವ್ಯಂಜನ "ದ" ಧ್ವನಿ ಬದಲು ದಂತ್ಯ ಅಘೋಷ ಸಂಘರ್ಷ ವ್ಯಂಜನ "ಧ" ಧ್ವನಿಯನ್ನು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ದಡಿಗ	ಧಡಿಗ	ಶೂರ
ದನಿ	ಧನಿ	ಸದ್ದು
ದಸರಿ	ಧಸರಿ	ದಸರಾ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕದಲಿ	ಕಧಲಿ	ಬಾಳೆ ಗಿಡ
ಕದಲು	ಕಧಲು	ಅಲುಗಾಡು
ಚದುಕ	ಚಧುಕ	ಮಂಟಪ
ಚದುರ	ಚಧುರ	ಜಾಣ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ದಂತ್ಯ ಘೋಷ ಸ್ಪರ್ಷ ವ್ಯಂಜನ " ದ " ಮತ್ತು ದಂತ್ಯ ಅಘೋಷ ಸಂಘರ್ಷ ವ್ಯಂಜನ "ಧ" ಈ ಎರಡು ಧ್ವನಿಗಳು ಧ್ವನಿಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಓದುವಾಗ ಈ ತೆರನಾದ ವ್ಯತ್ಯಾಸ ಮಾಡುವರು.

೧.೫೫. ಧ > ದ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದಂತ್ಯ ಅಘೋಷ ಸಂಘರ್ಷಿ ವ್ಯಂಜನ "ಧ" ಧ್ವನಿ ಬದಲು ದಂತ್ಯ ಘೋಷ ಸ್ಪರ್ಷ ವ್ಯಂಜನ "ದ" ಧ್ವನಿಯನ್ನು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಧನಿ	ದನಿ	ಸದ್ದು
ಧನ	ದನ	ಹಣ
ಧಡ	ದಡ	ದಂಡೆ
ಧಗೆ	ದಗೆ	ಕಾವು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಅಧಮ	ಅದಮ	ಕೀಳು
ಅಧರ	ಅದರ	ಕೆಳ ತುಟಿ
ಆಧಿ	ಆದಿ	ಮಾನಸಿಕ ತೊಂದರೆ
ಆಧುನಿಕ	ಆದುನಿಕ	ಸಮಕಾಲೀನ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ದಂತ್ಯ ಅಘೋಷ ಸಂಘರ್ಷಿ ವ್ಯಂಜನ " ಧ " ಮತ್ತು ದಂತ್ಯ ಘೋಷ ಸ್ಪರ್ಷ ವ್ಯಂಜನ "ಧ" ಈ ಎರಡು ಧ್ವನಿಗಳು ಧ್ವನಿಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಓದುವಾಗ ಈ ತೆರನಾದ ವ್ಯತ್ಯಾಸ ಮಾಡುವುದು ಕಂಡುಬರುತ್ತದೆ.

೧.೫೬. ನ > ಣ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅನುನಾಸಿಕ "ನ" ಧ್ವನಿ ಬದಲು ದಂತ್ಯ ಅನುನಾಸಿಕ ವ್ಯಂಜನ "ಣ" ಧ್ವನಿಯನ್ನು ಓದುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕನಿಕರ	ಕಣಿಕರ	ಮರುಕ
ಕನಸು	ಕಣಸು	ಸ್ವಪ್ನ
ತನಿಗಿಡಿ	ತಣಿಗಿಡಿ	ತೀಕ್ಷ್ಣವಾದ ಕೆಂಡ
ತನಿರಸ	ತಣಿರಸ	ಸವಿಯಾದ ರಸ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ ಮೂರ್ಧನ್ಯ ಅನುನಾಸಿಕ "ನ" ಧ್ವನಿ ಇದೆ. ಆದರೆ ಅನುನಾಸಿಕ ವ್ಯಂಜನ "ಣ" ಧ್ವನಿ ಇಲ್ಲ. ಆದಾಗ್ಯೂ ಕೂಡ 'ನ' ಧ್ವನಿ ಬದಲು 'ಣ' ಧ್ವನಿ ಉಚ್ಚರಿಸಲು ಕಾರಣ ಉಚ್ಚಾರಣ ಸ್ಪಷ್ಟ ಕಲ್ಪನೆ ಇಲ್ಲದೇ ಇರುವುದರಿಂದ ಉರ್ದು ಭಾಷಿಕರ ಮಕ್ಕಳು ಓದುವಾಗ ವ್ಯತ್ಯಾಸದಿಂದ ಓದುತ್ತಿರುವುದು ಕಂಡುಬರುವುದು.

೧.೫೭. ಮ > ವ

ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಅನುನಾಸಿಕ ವ್ಯಂಜನ "ಮ" ಧ್ವನಿ ಬದಲು ದಂತೊಷ್ಠ್ಯ ಘೋಷ ಸ್ಪರ್ಷ ವ್ಯಂಜನ "ವ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಕಮಲ	ಕವಲ	ತಾವರೆ
ಕಮರು	ಕವರು	ಬಾಡುವಂತೆ ಮಾಡು
ಕಮರೆ	ಕವರಿ	ಬಾಡು
ಗಮನ	ಗವನ	ಸುವಾಸನೆ
ಗಮಾರ	ಗವಾರ	ಹಳ್ಳಿಗ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ದ್ವಯೋಷ್ಠ್ಯ ಅನುನಾಸಿಕ ವ್ಯಂಜನ "ಮ" ಧ್ವನಿ ಮತ್ತು ದಂತೊಷ್ಠ್ಯ ಘೋಷ ಸ್ಪರ್ಷ ವ್ಯಂಜನ "ವ" ಧ್ವನಿ ಎರಡು ಧ್ವನಿಗಳ ಹೋಲಿಕೆಯಲ್ಲಿ ಒಂದೇ ಎಂದು ಪರಿಭಾವಿಸಿ ಈ ತೆರನಾಗಿ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೧.೫೮. ಯ > ಎ

ಪದಮಧ್ಯ ಪರಿಸರದಲ್ಲಿ ತಾಲವ್ಯ ಅರ್ಧ ಸ್ವರ "ಯ" ಧ್ವನಿ ಬದಲು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ "ಎ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಯಮಲ	ಎಮಲ	ಜೊತೆ
ಯಮ	ಎಮ	ಇಂದ್ರಿಯ ನಿಗ್ರಹ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ . ತಾಲವ್ಯ ಅರ್ಧ ಸ್ವರ "ಯ" ಧ್ವನಿ ಮತ್ತು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ "ಎ" ಧ್ವನಿಯ ಉಚ್ಚಾರಣೆಯಲ್ಲಿ ಅಲ್ಪ ಸಾಮ್ಯತೆ ಇರುವುದರಿಂದ ಗೊಂದಲದಿಂದಾಗಿ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯ ಪದಗಳನ್ನು ಓದುವಾಗ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೧.೫೯. ರ > ಡ

ಪದಮಧ್ಯ ಪರಿಸರದಲ್ಲಿ ವರ್ತ್ಸ್ಯ ಕಂಪಿತ ವ್ಯಂಜನ "ರ" ಧ್ವನಿ ಬದಲು ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ "ಡ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಬರುತ್ತಾರೆ	ಬಡತಾರ	ಬರುತ್ತಾರೆ
ಗರತಿ	ಗಡತಿ	ಪತಿವ್ರತೆ
ಕರಗ	ಕಡಗ	ನೀರು ತುಂಬುವ ಕಳಸ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ವರ್ತ್ಸ್ಯ ಕಂಪಿತ ವ್ಯಂಜನ "ರ" ಧ್ವನಿ ಬದಲು ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ "ಡ" ಧ್ವನಿಯನ್ನು ಓದಲು ಕಾರಣ ಸೌಲಭ್ಯಕಾಂಕ್ಷೆಯಿಂದ ವ್ಯತ್ಯಾಸದಿಂದ ಓದುವುದು ಸ್ಪಷ್ಟವಾಗಿ ಕಂಡುಬರುವುದು.

೧.೬೦. ವ > ಒ

ಪದಮಧ್ಯ ಪರಿಸರದಲ್ಲಿ ದಂತೋಷ್ಠ್ಯ ಘೋಷ ಸ್ಪರ್ಷ ವ್ಯಂಜನ 'ವ' ಧ್ವನಿ ಬದಲು ಉನ್ನತ ಮಧ್ಯ ಪಶ್ಚಗೊಳ ಹ್ರಸ್ವ ಸ್ವರ 'ಒ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ವಸನ	ಒಸನ	ವಾಸಿಸುವಿಕೆ
ವಸತಿ	ಒಸತಿ	ವಾಸಮಾಡುವಿಕೆ
ವರಿಸು	ಒರಿಸು	ಆರಿಸು
ವಯಸ	ಒಯಸ	ವಯಸ್ಸು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ದಂತೋಷ್ಠ್ಯ ಘೋಷ ಸ್ಪರ್ಷ ವ್ಯಂಜನ 'ವ' ಧ್ವನಿ ಮತ್ತು ಉನ್ನತ ಮಧ್ಯ ಪಶ್ಚಗೊಳ ಹ್ರಸ್ವ ಸ್ವರ 'ಒ' ಧ್ವನಿಗಳಲ್ಲಿ ಧ್ವನಿ ಸಾಮ್ಯತೆ ಇರುವುದರಿಂದ ಸ್ಪಷ್ಟ ಉಚ್ಚಾರಣೆ ಕಲ್ಪನೆ ಇಲ್ಲದೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಓದುತ್ತಾರೆ.

೧.೬೧. ಶ > ಸ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಶ" ಧ್ವನಿ ಬದಲು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಯನ್ನು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಶಲದಿ	ಸಲದಿ	ಜೇಡರ ಹುಳು
ಶರಾಬು	ಸರಾಬು	ಮಾಧಕ ಪಾನಿಯ
ಶರಾಯಿ	ಸರಾಯಿ	ಪಾಯಿಜಮು
ಶರಾ	ಸರಾ	ಬಾಣ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ದಶ	ದಸ	ಒಂದು ಸಂಖ್ಯೆ
ದಶಮುಖ	ದಸಮುಖ	ರಾವಣ
ದಶೆ	ದಸೆ	ಸ್ಥಿತಿ
ದಾಶ	ದಾಸ	ಆಳು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಶ" ಧ್ವನಿ ಮತ್ತು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಗಳಲ್ಲಿ ಅಲ್ಪ ಧ್ವನಿಸಾಮ್ಯತೆ ಇರುವುದರಿಂದ ಉರ್ದು ಭಾಷಿಕ ಮಕ್ಕಳು ಓದುವಾಗ ವ್ಯತ್ಯಾಸದಿಂದ ಓದಲು ಎಂದು ಹೇಳಬಹುದು.

೧.೬.೨. ಷ > ಸ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಷ" ಧ್ವನಿ ಬದಲು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಯನ್ನು ಓದುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ಷರತ್ತು	ಸರತು	ಕರಾರು
ಷರಾ	ಸರಾ	ಟಿಪ್ಪಣಿ
ಷರಾಯಿ	ಸರಾಯಿ	ಶರಾಯಿ
ಷಹರು	ಸಹರು	ನಗರ
ಷಾಮಿಲು	ಸಾಮಿಲು	ಒತ್ತಾಸೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ವಿಷಮ ಕಾಲ	ವಿಸಮ ಕಾಲ	ಕೆಟ್ಟ ಕಾಲ
ವಿಷಯ	ವಿಸಯ	ವಿಷಯ
ವಿಷಮಿಸು	ವಿಸಮಿಸು	ನಂಜಾಗು
ವಿಷಧಿ	ವಿಸಧಿ	ಕಡಲು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಷ" ಧ್ವನಿ ಮತ್ತು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಗಳಲ್ಲಿ ಅಲ್ಪ ಧ್ವನಿ ಸಾಮ್ಯತೆ ಇರುವುದರಿಂದ ಉರ್ದು ಭಾಷಿಕ ಮಕ್ಕಳು ಕನ್ನಡ ಭಾಷೆ ಪದಗಳನ್ನು ಓದುವಾಗ ವ್ಯತ್ಯಾಸದಿಂದ ಓದಲು ಎಂದು ಹೇಳಬಹುದು.

೧.೬೩. ಳ > ಡ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ "ಳ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ "ಡ" ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ರೂಪ	ಅರ್ಥ
ನಾಳೆಗೆ	ನಾಡೆಗೆ	ನಾಳೆಗೆ
ಗಳಪ	ಗಡಪ	ಸುಳ್ಳು ಹೇಳುವದು
ಗೆಳತಿ	ಗಡತಿ	ಸ್ನೇಹಿತೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಮೂರ್ಧನ್ಯ ಪಾರ್ಶ್ವಿಕ ವ್ಯಂಜನ "ಳ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ "ಡ" ಧ್ವನಿಯನ್ನು ಓದಲು ಕಾರಣ 'ಳ' ಧ್ವನಿ ಉಚ್ಚಾರಣೆ ಮಾಡಲು ಉರ್ದು ಭಾಷಿಕ ಮಕ್ಕಳಿಗೆ ತೊಂದರೆಯಾಗುತ್ತಿರುವುದು ಕಂಡುಬರುವುದು. ಹಾಗೂ ಸೌಲಭ್ಯಕಾಂಕ್ಷೆಯಿಂದ ಈ ತೆರನಾಗಿ ವ್ಯತ್ಯಾಸದಿಂದ ಓದಲು ಕಾರಣ ಎಂದು ಹೇಳಬಹುದು.

ಅಧ್ಯಾಯ ೩

ಬರವಣಿಗೆ ಸಮಸ್ಯೆಗಳು

ಅಧ್ಯಾಯ ೩

ಬರವಣಿಗೆ ಸಮಸ್ಯೆಗಳು

ಪ್ರಸ್ತುತ ಅಧ್ಯಾಯದಲ್ಲಿ ಉರ್ದುಭಾಷಿಕರ ಮಕ್ಕಳು ಕನ್ನಡ ಭಾಷೆಯ ಪದಗಳನ್ನು ಬರೆಯುವಾಗ ಪದಾದಿ, ಪದಮಧ್ಯ, ಪದಾಂತ್ಯ ಪರಿಸರದಲ್ಲಿ ಯಾವ ತರಹದ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ. ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯ ಪದಗಳನ್ನು ಬರೆಯುವಾಗ ಮಾಡುವ ವ್ಯತ್ಯಾಸಗಳಿಗೆ ಕಾರಣಗಳು ಮತ್ತು ಅವುಗಳನ್ನು ಸರಿಪಡಿಸುವ ಕುರಿತು ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಹೇಳಲಾಗಿದೆ. ಉರ್ದು ಭಾಷಿಕರ ಮಕ್ಕಳು ಬರೆಯುವಾಗ ಯಾವ ತರಹದ ಸಮಸ್ಯೆಗಳನ್ನು ಎದುರಿಸುತ್ತಾರೆ ಅಥವಾ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಕಂಡುಹಿಡಿಯಲು ಅಕಾರಾದಿಯಾಗಿ ಪದಗಳ ಪಟ್ಟಿ ಮತ್ತು ಅವರ ಪಠ್ಯಪುಸ್ತಕಗಳಲ್ಲಿನ ಪಾಠಗಳನ್ನು ಓದಿ ಹೇಳಿ ಬರೆಯಿಸಲಾಗಿದೆ. ಹಾಗೂ ಅವರ ವಾರ್ಷಿಕ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ಅವರು ಬರೆದ ಪದ ಮತ್ತು ವಾಕ್ಯಗಳನ್ನು ಪರಿಶೀಲಿಸಲಾಗಿದೆ.

ಬರವಣಿಗೆಯ ಅರ್ಥ

ಭಾಷಾ ಕೌಶಲ್ಯಗಳಲ್ಲಿ ಬರವಣಿಗೆ ಅತ್ಯುತ್ತಮ ಕೌಶಲ್ಯ. ಭಾಷೆಯಲ್ಲಿ ಆಲಿಸುವುದು ಮಾತನಾಡುವುದು ಓದುವುದು ಎಷ್ಟು ಮುಖ್ಯವೋ ಬರವಣಿಗೆಯೂ ಅಷ್ಟೇ ಮುಖ್ಯ. ಉತ್ತಮವಾಗಿ ಬರೆಯುವ ವ್ಯಕ್ತಿಗೆ ನಾಡಿನಲ್ಲಿ ಗೌರವವಿದೆ. ಬರೆದ ಬರಹ ದುಂಡಾಗಿ ಅಂದವಾಗಿ ಕಣ್ಣನ್ನು ಆಕರ್ಷಿಸುವಂತೆ ಮನಸ್ಸು ಒಪ್ಪುವಂತಿದ್ದರೆ ಅಂತಹ ಬರಹವನ್ನು ಎಲ್ಲರೂ ಒಪ್ಪುತ್ತಾರೆ.

ಮಕ್ಕಳಿಗೆ ಬೋಧಕರು ಬರವಣಿಗೆ ಕೌಶಲ್ಯ ಬೆಳೆಸುವ ಕಡೆಗೆ ಹೆಚ್ಚು ಗಮನಹರಿಸಬೇಕು. ಏಕೆಂದರೆ ಬರೆಯುವುದು ಓದುವುದಕ್ಕಿಂತಲೂ ಕಠಿಣವಾಗಿದ್ದು; ಬರವಣಿಗೆಯ ಸಮಯದಲ್ಲಿ ಕಣ್ಣು ಮನಸ್ಸು ಕೈಯ ಸ್ನಾಯುಗಳು ಸಾಂಗೋಪಾಗವಾಗಿ ಪಾಲ್ಗೊಳ್ಳುತ್ತವೆ ಇಲ್ಲದಿದ್ದರೆ ಬರವಣಿಗೆಯು ಉತ್ತಮವಾಗಲಾರದು. ಬರವಣಿಗೆ ಎಂದರೆ ತಾನು ತಿಳಿದದ್ದನ್ನು ಅಥವಾ ಇನ್ನೊಬ್ಬರು ಹೇಳಿದ್ದನ್ನು ಗೊತ್ತಾದ ಲಿಪಿಯನ್ನು ಬಳಸಿಕೊಂಡು ಬೆರಳುಗಳ ಮೂಲಕ ವ್ಯಕ್ತಪಡಿಸುವಂಥದ್ದು. ಬಾಯಿಯಲ್ಲಿ ಅಕ್ಷರಗಳು ಉಚ್ಚಾರಣೆಯಾದಾಗ ಅದು ಕೈಯ ಸ್ನಾಯುಗಳ ಬಲದಿಂದ ಅಕ್ಷರಗಳನ್ನು ಬರೆಯುವ ಕ್ರಮವನ್ನು ಬರವಣಿಗೆ ಎಂದು ಕರೆಯುತ್ತೇವೆ. ಬಿದಿರಿನ ಕಡ್ಡಿ, ಬಳಪ, ಸೀಸದ ಕಡ್ಡಿ, ಲೇಖನಿ ಮುಂತಾದವುಗಳಿಂದ ಬರವಣಿಗೆಯನ್ನು ಬರೆಯಬಹುದು.

ಅಧ್ಯಯನದ ವಿಶ್ಲೇಷಣೆ

ಈಗಾಗಲೇ ಪ್ರಸ್ತಾವನೆಯಲ್ಲಿ ಹೇಳಿದಂತೆ ಉರ್ದು ಭಾಷಿಕರ ಮಕ್ಕಳು ಕನ್ನಡ ಬರೆಯುವಾಗ ಮಾಡುವ ವ್ಯತ್ಯಾಸಗಳನ್ನು ಮತ್ತು ಎದುರಿಸುವ ಸಮಸ್ಯೆಗಳನ್ನು ಪತ್ತೆ ಹಚ್ಚಲು ಎರಡು ವಿಧಾನಗಳನ್ನು ಅನುಸರಿಸಲಾಗಿದೆ. ಮೊದಲನೆಯದಾಗಿ ೮, ೯, ೧೦ ನೇ ತರಗತಿ ಕನ್ನಡ ಪಠ್ಯಪುಸ್ತಕಗಳಲ್ಲಿನ ಅಕಾರಾದಿಯಾಗಿ ಪದಗಳ ಪಟ್ಟಿಯನ್ನು ಸಿದ್ದಪಡಿಸಿಕೊಂಡು ಓದಿ ಮಕ್ಕಳ ಕಡೆಯಿಂದ ಬರೆಯಿಸುವುದು.

ಎರಡನೇಯದಾಗಿ ಉತ್ತರ ತರಗತಿಗೆ ನಿಗಧಿಪಡಿಸಿದ ಕನ್ನಡ ಭಾಷಾ ಪಠ್ಯಪುಸ್ತಕವನ್ನು ಓದಿಸಿ ಬರೆಯಿಸುವುದು. ಮತ್ತು ಅವರ ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ವಿಶ್ಲೇಷಿಸುವುದು. ನಂತರ ಅವರು ಎದುರಿಸುವ ಸಮಸ್ಯಗಳನ್ನು ಹಾಗೂ ವ್ಯತ್ಯಾಸಗಳನ್ನು ಗುರುತಿಸುವುದು. ಉರ್ದು ಭಾಷಿಕರ ಮಕ್ಕಳು ಕನ್ನಡ ಪಠ್ಯಪುಸ್ತಕಗಳಲ್ಲಿನ ಅಕಾರಾದಿಯಾಗಿ ಬರೆದ ಪದಗಳಿಗೆ ಬರಹರೂಪ ಮತ್ತು ಅವುಗಳಿಗೆ ಅರ್ಥ ಮಾತ್ರ ನೀಡಲಾಗಿದೆ. ಆದರೆ ಅವರು ವ್ಯತ್ಯಾಸದಿಂದ ಬರೆದ ಪದಗಳಿಗೆ ಅರ್ಥ ನೀಡಿರುವುದಿಲ್ಲ.

ಪ್ರಸ್ತುತ ಅಧ್ಯಾಯದಲ್ಲಿ ಉರ್ದು ಭಾಷಿಕರ ಮಕ್ಕಳು ಕನ್ನಡ ಪದಗಳನ್ನು ಬರೆಯುವಾಗ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಯಾವ ತರಹದ ವ್ಯತ್ಯಾಸ ಮಾಡುತ್ತಾರೆ ಎಂಬುದರ ಕುರಿತು ವಿಶ್ಲೇಷಿಸಲಾಗಿದೆ. ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯ ಪದಗಳನ್ನು ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಹೇಳಲಾಗಿದೆ. ಉರ್ದು ಭಾಷಿಕರ ಮಕ್ಕಳು ಬರೆಯುವಾಗ ಯಾವ ತರಹದ ಸಮಸ್ಯೆಗಳನ್ನು ಎದುರಿಸುತ್ತಾರೆ ಅಥವ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದನ್ನು ಕಂಡುಹಿಡಿಯಲು ಅಕಾರಾದಿಯಾಗಿ ಪದಗಳ ಪಟ್ಟಿ ಮತ್ತು ಅವರ ಪಠ್ಯಪುಸ್ತಕಗಳಲ್ಲಿನ ಪಾಠಗಳನ್ನು ಓದಿಹೇಳಿ ಬರೆಯಿಸಲಾಗಿದೆ. ಹಾಗೂ ಅವರ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ಅವರು ಬರೆದ ಪದ ವಾಕ್ಯಗಳನ್ನು ಪರಿಶೀಲಿಸಲಾಗಿದೆ.

೧. ಸ್ವರಗಳನ್ನು ಬರೆಯುವಾಗ ಸಮಸ್ಯೆಗಳು
೨. ಅರ್ಧ ಸ್ವರಗಳನ್ನು ಬರೆಯುವಾಗ ಸಮಸ್ಯೆಗಳು
೩. ವ್ಯಂಜನಗಳನ್ನು ಬರೆಯುವಾಗ ಸಮಸ್ಯೆಗಳು
೪. ಗುಣಿತಾಕ್ಷರಗಳನ್ನು ಬರೆಯುವಾಗ ಸಮಸ್ಯೆಗಳು
೫. ಸಂಯುಕ್ತಾಕ್ಷರಗಳನ್ನು ಬರೆಯುವಾಗ ಸಮಸ್ಯೆಗಳು

೧. ಸ್ವರಗಳನ್ನು ಬರೆಯುವಾಗ ಎದುರಿಸುವ ಸಮಸ್ಯೆಗಳು

ಉರ್ದುಭಾಷಿಕರ ಮಕ್ಕಳು ಶಾಲಾ ಪರಿಸರದಲ್ಲಿ ಕನ್ನಡ ಸ್ವರಗಳನ್ನು ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಯಾವ ತೆರನಾಗಿ ಉಚ್ಚಾರಣೆ ಮಾಡಿ ಬರೆಯುತ್ತಾರೆ ಎನ್ನುವುದನ್ನು ಈ ಕೆಳಗಿನಂತೆ ನೋಡಬಹುದು.

೧. ಸ್ವರಗಳನ್ನು ಬರೆಯುವುದು

೩. ೧ ಆ > ಅ

ಪದಾದಿ ಮತ್ತು ಪದಮಧ್ಯ ಪದಾಂತ್ಯ ಪರಿಸರದಲ್ಲಿ ಕೇಂದ್ರ ಮಧ್ಯ ಅಗೋಳ ದೀರ್ಘಸ್ವರ 'ಆ' ಧ್ವನಿ ಬದಲು ನಿಮ್ನ ಕೇಂದ್ರ ಮಧ್ಯ ಅಗೋಳ ಹ್ರಸ್ವ ಸ್ವರ 'ಅ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಆಲದ ಮರ	ಅಲದ ಮರ	ಅರಳಿ ಗಿಡ
ಆಚಾರ	ಅಚಾರ	ಕಟ್ಟುಪಾಡು
ಆಪತ್ತು	ಅಪತ್ತು	ಅನಾರೋಗ್ಯ
ಆಗಮನ	ಅಗಮನ	ಬರುವುದು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಭಗವಾನ	ಭಗವನ	ದೇವರು
ಪುರಾಣ	ಪುರನ	ಪುರಾಣ
ಸಹಪಾಠಿ	ಸಪಟಿ	ಜೊತೆಯಲ್ಲಿ ಓದುವವ
ಅಕಾಲ	ಅಕಲ	ಕಾಲವಲ್ಲದ ಕಾಲ
ಕಾಪಾಲಿ	ಕಾಪಲಿ	ಶಿವ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಜಟಕಾ	ಜಟಕ	ಬಂಡಿ
ಅಲಾಯುದಾ	ಅಲಯಿದ	ಬೇರೆಯಾಗಿ
ಅಪರಾ	ಅಪರ	ವಿಪುಲ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಇಲ್ಲದೇ ಇಲ್ಲ. ಉರ್ದುಭಾಷೆಯಲ್ಲಿ ಕೇಂದ್ರ ಮಧ್ಯ ದೀರ್ಘ ಸ್ವರ ಧ್ವನಿಯಾದ "ಆ" ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ನಿಮ್ನಕೇಂದ್ರ ಅಗೋಳ ಹ್ರಸ್ವ ಸ್ವರ 'ಅ' ಧ್ವನಿ ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃ ಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಮಾಡುತ್ತಿರುವುದು ಗಮನಾರ್ಹ.

೩.೨. ಅ > ಆ

ಪದಾದಿ ಮತ್ತು ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ನಿಮ್ನ ಕೇಂದ್ರ ಅಗೋಳ ಹ್ರಸ್ವ ಸ್ವರ 'ಅ' ಧ್ವನಿ ಬದಲು ಕೇಂದ್ರ ಮಧ್ಯ ಅಗೋಳ ದೀರ್ಘ ಸ್ವರ 'ಆ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಅವಮಾನ	ಆವಮಾನ	ಅಗೌರವ
ಅವಕಾಶ	ಆವಕಾಶ	ಅನುಕೂಲ
ಅವಧಿ	ಆವ್ಧಿ	ಸಮಯ
ಅರಳು	ಆರಲು	ವಿಕಾಸವಾಗು
ಅಡುಗೆ	ಆಡುಗೆ	ಊಟ/ಅಡುಗೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಸ	ಕಸಾ	ಕೊಳೆ
ಜಗಲ	ಜಗಲಾ	ಕಪಟಿ
ತರ	ತರಾ	ಸಾಲು
ನಟ	ನಟಾ	ನರ್ತಕ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ನಿಗಮ	ನಿಗಾಮಾ	ವೇದ
ನಿಗರ	ನಿಗಾರಾ	ಚೆಲುವ
ಜನಕ	ಜನಾಕಾ	ಜನ್ಮದಾತ
ಕಾಮಗಾರಿ	ಕಾಮಾಗಾರಿ	ಕಾರ್ಮಿಕರ ಕೆಲಸ
ಗಾಯನ	ಗಾಯಾನಾ	ಹಾಡುಗಾರಿಕೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ತೆರನಾಗಿ ಹೇಳಬಹುದು. ನಿಮ್ನ ಕೇಂದ್ರ ಅಗೋಳ ಹ್ರಸ್ವಸ್ವರ 'ಅ' ಮತ್ತು ಕೇಂದ್ರಮಧ್ಯ ಅಗೋಳ ದೀರ್ಘ ಸ್ವರ 'ಆ' ಈ ಎರಡು ಧ್ವನಿಗಳಲ್ಲಿ ಅಲ್ಪ ಧ್ವನಿ ಸಾಮ್ಯತೆ ಇರುವುದರಿಂದ ಮತ್ತು ಗೊಂದಲದಿಂದ ಈ ತೆರನಾಗಿ ಈ ಧ್ವನಿಯನ್ನು ಬರೆಯುವುದು ಕಂಡುಬರುವುದು.

೩.೩. ಅ > ಹ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನ ಕೇಂದ್ರ ಅಗೋಳ ಹ್ರಸ್ವ ಸ್ವರ 'ಅ' ಧ್ವನಿ ಬದಲು ಕಾಕಲ್ಯ ಘೋಷ ಸಂಘರ್ಷ ವ್ಯಂಜನ 'ಹ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಅಕ್ಕಸಾಲೆ	ಹಕಸಾಲೆ	ಚಿನ್ನ ಬೆಳ್ಳಿ ಕೆಲಸ ಮಾಡುವವನು
ಅಗಾಡಿ	ಹಗಾಡಿ	ಮುಂಭಾಗ
ಅಗಿ	ಹಗಿ	ಹೆದುರು
ಅಗಿನಿ	ಹಗಿನಿ	ಬೆಂಕಿ
ಅಗಸೆ	ಹಗಸೆ	ಒಂದು ಬಗೆಯ ಧಾನ್ಯ

೩.೪. ಆ > ಹಾ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕೇಂದ್ರ ಮಧ್ಯ ಅಗೋಳ ದೀರ್ಘ ಸ್ವರ 'ಆ' ಧ್ವನಿ ಬದಲು ಕಾಕಲ್ಯ ಘೋಷ ಸಂಘರ್ಷ ವ್ಯಂಜನ ಧ್ವನಿ 'ಹಾ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಆವರಿಕೆ	ಹಾವರಿಕೆ	ತಂಗಡಿ ಗಿಡ
ಆವರಿಸು	ಹಾವರಿಸು	ಹರಡು
ಆವಲಿ	ಹಾವಲಿ	ಸಾಲು
ಆವಾಗ	ಹಾವಾಗ	ಆ ಸಮಯದಲ್ಲಿ

೩.೫. ಇ > ಹಿ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವ ಸ್ವರ 'ಇ' ಧ್ವನಿ ಬದಲು ಕಾಕಲ್ಯ ಘೋಷ ಸಂಘರ್ಷ ವ್ಯಂಜನ 'ಹಿ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಇಮರು	ಹಿಮರು	ಹಲ್ಲಿನ ವಸಡು
ಇಡು	ಹಿಡು	ಮಡುಗು
ಇಡುಗು	ಹಿಡುಗು	ವ್ಯಾಪಿಸು
ಇಳೆ	ಹಿಳೆ	ಭೂಮಿ

೩.೬. ಇ > ಈ

ಪದಾದಿ ಮತ್ತು ಪದಮಧ್ಯ ಪದಾಂತ್ಯ ಪರಿಸರದಲ್ಲಿ ನಿಮ್ನೋನ್ನತ ಅಗ್ರಗೋಳ ಹ್ರಸ್ವಸ್ವರ 'ಇ' ಧ್ವನಿ ಬದಲು ಅಗ್ರಗೋಳ ದೀರ್ಘಸ್ವರ 'ಈ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಇಡು	ಈಡು	ಇಲಿಸು
ಇತರ	ಈತರ	ಬೇರೆಯ
ಇಲಿ	ಈಲಿ	ಮೂಷಕ
ಇಲಾಖೆ	ಈಲಾಖೆ	ಆಡಳಿತ ಶಾಖೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಪಿಪಾಸೆ	ಪೀಪಾಸೆ	ಬಾಚುಣಿಕೆ
ತೆನೆ	ತೀನೆ	ದಾನ್ಯದ ಹೊಡೆ
ಜಿಗ	ಜೀಗ	ಜಿಪುಣ
ದಿವ	ದೀವ	ಸ್ವರ್ಗ
ಗಿರಿ	ಗೀರಿ	ಪರ್ವತ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಾಲಿ	ಕಾಲೀ	ದುರ್ಗಿ
ಕಟಿ	ಕಟೀ	ನಿತಂಬ
ಗಡಿ	ಗಡೀ	ಮೇರೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ಒಂದು ವ್ಯತ್ಯಾಸಕ್ಕೆ ಕಾರಣಗಳು ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವ ಸ್ವರ 'ಇ' ಧ್ವನಿ ಬದಲಾಗಿ ಅಗ್ರ ಅಗೋಳ ಧೀರ್ಘ ಸ್ವರ 'ಈ' ಧ್ವನಿ ಬಳಕೆ ಮಾಡಲು ಕಾರಣ ಈ ಎರಡು ಧ್ವನಿಗಳು ಧ್ವನಿ ಸಾಮ್ಯತೆ ಹೊಂದಿರುವುದರಿಂದ ಮತ್ತು ಗೊಂದಲದಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಈ ತರಹದ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುವುದು.

೩.೭ ಈ > ಇ

ಪದಾದಿ ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಅಗ್ರ ಅಗೋಳ ಧೀರ್ಘ ಸ್ವರದ 'ಈ' ಧ್ವನಿ ಬದಲು ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವ ಸ್ವರ 'ಇ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಈದಮಿಲಾದ	ಇದಮಿಲಾದ	ಪ್ರವಾದಿ ಪೈಗಂಬರನ ಜನ್ಮ ದಿನ
ಈಚಲು	ಇಚಲು	ಈಚಲು
ಈವೆ	ಇವೆ	ನೀಡುವೆ
ಈಡೇರು	ಇಡೆರು	ನೆರವೇರು
ಈಚೆ	ಇಚೆ	ಈಕಡೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಿರೀಟ	ಕಿರಿಟ	ಶಿರೋಭೂಷಣ
ಜೀತ	ಜಿತ	ಕೂಲಿ
ಬೀಡಾರ	ಬಿಡಾರಿ	ತಂಗುವ ಸ್ಥಳ
ಬೇರು	ಬೆರು	ಬೇರು

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕೀ	ಕಿ	ಕಿವು ಆಗು
ಕರೀ	ಕರಿ	ಆನೆ
ಇಡೀ	ಇಡೆ	ಒಟ್ಟು
ಫೀ	ಫಿ	ಶುಲ್ಕ
ನೀ	ನಿ	ನಿನು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದುಭಾಷೆಯಲ್ಲಿ ಅಗ್ರ ಅಗೋಳ ದೀರ್ಘಸ್ವರ ಧ್ವನಿಯಾದ 'ಈ' ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ನಿಮ್ನೋನ್ನತ ಅಗ್ರ ಅಗೋಳ ಹ್ರಸ್ವಸ್ವರ 'ಇ' ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ

ಕನ್ನಡ ಭಾಷೆ ಕಾರಣವಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ದೋಷಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಮಾಡುತ್ತಿರುವುದು ಗಮನಾರ್ಹ ವಿಷಯ.

೩.೮. ಈ > ಹಿ

ಪದಾದಿ ಪರಿಸರದಲ್ಲಿ ನಿಮ್ನೋನ್ನತ ಅಗ್ರ ಅಗೋಳ ದೀರ್ಘಸ್ವರ 'ಈ' ಧ್ವನಿ ಬದಲಾಗಿ ಕಾಕಲ್ಯ ಘೋಷ ಸಂಘರ್ಷ ವ್ಯಂಜನ ಧ್ವನಿ 'ಹಿ' ಎಂದು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಂಟನೇ ತರಗತಿಯ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಈಜು	ಹಿಜು	ಈಜು
ಈಗೇ	ಹಿಗೆ	ಈ ರೀತಿ
ಈನಾಯ	ಹಿನಾಯ	ಅವಮಾನ
ಈರಕ	ಹಿರಕ	ವಜ್ರ
ಈಲೀ	ಹಿಲೀ	ನವಿಲು ಗರಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ತೆರನಾಗಿ ವಿಶ್ಲೇಷಿಸಬಹುದು. ಪದಾದಿ ಪರಿಸರದಲ್ಲಿ ನಿಮ್ನೋನ್ನತ ಅಗ್ರ ಅಗೋಳ ದೀರ್ಘಸ್ವರ 'ಈ' ಧ್ವನಿ ಬದಲಾಗಿ ಕಾಕಲ್ಯ ಘೋಷ ಸಂಘರ್ಷ ವ್ಯಂಜನ 'ಹಿ' ಎಂದು ಬರೆಯಲು ಕಾರಣ. ಈ ಎರಡು ಧ್ವನಿಗಳು ಉಚ್ಚಾರಣೆ ಸಾಮ್ಯತೆ ಇರುವುದರಿಂದ ಉರ್ದು ಭಾಷಿಕ ಮಕ್ಕಳು ಈ ತೆರನಾದ ವ್ಯತ್ಯಾಸದಿಂದ ಬರೆಯುವುದು ಕಂಡುಬರುವುದು.

೩.೯. ಉ > ಊ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವಸ್ವರದ 'ಉ' ಧ್ವನಿ ಬದಲು ಉನ್ನತ ಪಶ್ಚಗೋಳ ದೀರ್ಘಸ್ವರ 'ಊ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಂಟನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಉಡುಗೆ	ಊಡುಗೆ	ಬಟ್ಟೆ ಧರಿಸುವುದು
ಉದಯ	ಊದಯ	ಹುಟ್ಟು
ಉಸುಕು	ಊಸುಕು	ಮರಳು
ಉಗಮ	ಊಗಮ	ಹುಟ್ಟು
ಉಚಿತ	ಊಚಿತ	ಪುಕ್ಕಟ್ಟೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ತುರುಸು	ತೂರುಸು	ಬಿರುಸು
ತುತೂ	ತೂತೂ	ಒಂದು ಬಗೆಯ ವಿದ್ಯುತ್ ವಾದ್ಯ
ಉಂಡೆ	ಊಂಡೆ	ಲಡ್ಡು
ಗುಲಾಮ	ಗೂಲಾಮ್	ಸೇವಕ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ತೆರನಾದ ವ್ಯತ್ಯಾಸಕ್ಕೆ ಕಾರಣಗಳು ಉರ್ದು ಭಾಷೆಯಲ್ಲಿ ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವ ಸ್ವರದ 'ಉ' ಬದಲು ಉನ್ನತ ಪಶ್ಚಗೋಳ ದೀರ್ಘಸ್ವರ 'ಊ' ಧ್ವನಿಯನ್ನು ಬರೆಯಲು ಕಾರಣ ಈ ಎರಡು ಧ್ವನಿಗಳಲ್ಲಿ ಧ್ವನಿ ಸಾಮ್ಯತೆ ಇರುವುದಿಂದ ಉರ್ದು ಭಾಷಿಕರ ಮಕ್ಕಳು ಈ ತೆರನಾಗಿ ವ್ಯತ್ಯಾಸದಿಂದ ಬರೆಯುತ್ತಾರೆ.

೩.೧೦ ಊ > ಉ

ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಉನ್ನತ ಪಶ್ಚಗೋಳ ದೀರ್ಘಸ್ವರ 'ಊ' ಧ್ವನಿಯ ಬದಲು ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವ ಸ್ವರ "ಉ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಊರುಗೋಲು	ಉರುಗೋಲು	ಆಸರೆ ಕೋಲು
ಊಟ	ಉಟ	ಊಟ
ಊರು	ಉರು	ಊರು
ಊನ	ಉನ	ಕುಂದು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕೂಡು	ಕುಡು	ಕುಳಿತುಕೊಳ್ಳು
ಕೂಳು	ಕುಳು	ಊಟ
ಕೂಸು	ಕುಸು	ಮಗು
ಮೂರು	ಮುರು	ಮೂರು

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಮಗೂ	ಮಗು	ಮಗೂ
ಹೂ	ಹು	ಹೂ
ಜಂಬೂ	ಜಂಬು	ಭಾರತ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ತೆರನಾದ ವ್ಯತ್ಯಾಸ ಮಾಡಲಿಕ್ಕೆ ಕಾರಣವನ್ನು ಈ ತೆರನಾಗಿ ವಿಶ್ಲೇಷಿಸಬಹುದು. ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಉನ್ನತ ಪಶ್ಚಗೋಳ ಧೀರ್ಘಸ್ವರ 'ಊ' ಬದಲು ನಿಮ್ನತರ ಮಧ್ಯ ಪಶ್ಚಗೋಳ ಹ್ರಸ್ವ ಸ್ವರ 'ಉ' ಧ್ವನಿಯನ್ನು ಉಪಯೋಗಿಸಲು ಕಾರಣ ಉರ್ದು ಭಾಷೆಯಲ್ಲಿ ಈ ಎರಡು ಧ್ವನಿಗಳಿಲ್ಲ. ಈ ಎರಡು ಧ್ವನಿಗಳ ಕೆಲಸವನ್ನು ಉರ್ದು ಭಾಷೆಯಲ್ಲಿ ಬೇರೆ ಧ್ವನಿ ಕೆಲಸ ಮಾಡುವುದರಿಂದ ಕನ್ನಡ ಭಾಷೆ ಕಲಿಯುವ ಸಂದರ್ಭದಲ್ಲಿ ಗೊಂದಲದಿಂದ ಈ ತೆರನಾಗಿ ಬರೆಯುತ್ತಾರೆ.

೩.೧೧. ಋ > ರು

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಸ್ವರ ಧ್ವನಿ 'ಋ' ದ ಬದಲು ವರ್ತ್ಸ್ಯಕಂಪಿತ ವ್ಯಂಜನ 'ರು' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಋತು	ರುತು	ಕಾಲ
ಋಷಿ	ರುಸಿ	ಮುನಿ/ಸಾದು
ಋಜು	ರುಜು	ಸಾಬೀತು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಮಾತೃಕೆ	ಮಾತ್ರುಕೆ	ಸಂಖ್ಯೆ
ವಿಕೃತ	ವಿಕ್ರುತ	ವಿಕಾರ
ವೃತ್ತಿ	ವ್ರುತ್ತಿ	ಕೆಲಸ
ವೃತ್ತ	ವ್ರುತ್ತ	ಗೋಳ
ಕೃತಕ	ಕ್ರುತಕ	ಅಸಹಜ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆಯಿಲ್ಲ. ಸ್ವರಧ್ವನಿ 'ಋ' ಮತ್ತು ವರ್ತ್ಸ್ಯಕಂಪಿತ ವ್ಯಂಜನ ಧ್ವನಿ 'ರು' ಎರಡು ಧ್ವನಿಗಳು ಉಚ್ಚಾರಣೆಯಲ್ಲಿ ಧ್ವನಿ ಸಾಮ್ಯತೆಯನ್ನು ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಬರೆಯುವಾಗ ಈ ತೆರನಾದ ವ್ಯತ್ಯಾಸಗಳನ್ನು ಮಾಡುತ್ತಿರುವುದು ಗಮನಾರ್ಹ.

೩.೧೨.ಏ > ಎ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಉನ್ನತ ಮಧ್ಯ ಅಗ್ರ ಅಗೋಳ ಧೀರ್ಘ ಸ್ವರ 'ಏ' ಬದಲು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ 'ಎ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ಮತ್ತು ೯ ನೇ ತರಗತಿಯ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಏಕೆ	ಎಕೆ	ಏಕೆ
ಏಡಿ	ಎಡಿ	ಏಡಿ
ಏತ	ಎತ	ನೀರು ಎತ್ತುವ ಸಾಧನ
ಏಣಿ	ಎನಿ	ನಿಚ್ಚಣಿಕೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಗೇಟು	ಗೆಟು	ತಡೆಗೋಡೆ, ಬಾಗಿಲು
ಗೇರು	ಗೆರು	ವಾಹನ ಚಲನೆಯ ಹಂತ
ಚೇಳು	ಚೆಲು	ಕಶೇರುಕ ಪ್ರಾಣಿ
ಪೀರು	ಪಿರು	ಕುರಿ
ಪೀಪಿ	ಪಿಪಿ	ನಾಗಸ್ವರ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ತೆರನಾಗಿ ಹೇಳಬಹುದು. ಉನ್ನತ ಮಧ್ಯ ಅಗ್ರ ಅಗೋಳ ದೀರ್ಘಸ್ವರ 'ಏ' ಬದಲು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ 'ಎ' ಧ್ವನಿಯನ್ನು ಬರೆಯಲು ಕಾರಣ ಇಲ್ಲಿ ಈ ಎರಡು ಧ್ವನಿಗಳ ನಡುವೆ ಅಲ್ಪ ಧ್ವನಿಸಾಮ್ಯತೆ ಇರುವುದರಿಂದ ಈ ತೆರನಾಗಿ ಉರ್ದು ಭಾಷಿಕರ ಮಕ್ಕಳು ವ್ಯತ್ಯಾಸದಿಂದ ಬರೆಯಲು ಕಾರಣವೆಂದು ಹೇಳಬಹುದು.

೩.೧೩. ಎ > ಏ

ಪದಾದಿ ಪದಮಧ್ಯ ಹಾಗೂ ಪದಾಂತ್ಯ ಪರಿಸರದಲ್ಲಿ ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವಸ್ವರ 'ಎ' ಧ್ವನಿ ಬದಲು ಉನ್ನತ ಮಧ್ಯ ಅಗ್ರ ಅಗೋಳ ದೀರ್ಘಸ್ವರ 'ಏ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಎಲೆ	ಏಲೆ	ವೀಳ್ಯೆದೆಲೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕೆಡು	ಕೇಡು	ಆಳಾಗು
ಬೆಳೆ	ಬೇಳೆ	ಬೆಳವಣಿಗೆ
ಕೆರೆ	ಕೇರೆ	ನೀರು ನಿಲ್ಲಿಸಿದ ಸ್ಥಳ
ತೊರೆ	ತೋರೆ	ಅಲೆ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಸಟೆ	ಸಟೇ	ಸುಳ್ಳು
ಮರೆ	ಮರೇ	ಮರೆಯುವುದು
ಗಾರೆ	ಗಾರೇ	ಸುಣ್ಣ ಮತ್ತು ಮರಳುಗಳ ಮಿಶ್ರಣ
ತೆರೆ	ತೆರೇ	ತೆರೆಯುವಿಕೆ
ಮರೆ	ಮರೇ	ಮುಚ್ಚು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣವನ್ನು ಈ ತೆರನಾಗಿ ವಿಶ್ಲೇಷಿಸಬಹುದು. ಉರ್ದು ಭಾಷೆಯಲ್ಲಿ ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ ಧ್ವನಿಯಾದ 'ಎ' ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ಉನ್ನತ ಮಧ್ಯ ಅಗ್ರ ಅಗೋಳ ದೀರ್ಘ ಸ್ವರ 'ಏ' ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣವಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಮಾಡುತ್ತಿರುವುದು ಕಂಡುಬರುವುದು.

೩.೧೪.೭ > ಓ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಉನ್ನತ ಮಧ್ಯ ಪಶ್ಚ ಅಗೋಳ ಹ್ರಸ್ವ ಸ್ವರ 'ಒ' ಧ್ವನಿ ಬದಲು ನಿಮ್ನತರ ಮಧ್ಯ ಪಶ್ಚಗೋಳ ದೀರ್ಘಸ್ವರ 'ಓ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಒಡೆ	ಓಡೆ	ಸೀಳು
ಒಣ	ಓನ	ಹಾರಿದ
ಒರಗು	ಓರಗು	ನಿದ್ದೆಹೋಗು
ಒದರು	ಓದರು	ಕಿರುಚು
ಒಳಗೆ	ಓಳಗೆ	ಒಳಗಡೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಹೊರಡು	ಹೋರಡು	ಹೋಗು/ ತೆರಳು
ಕೊಳ	ಕೋಲ	ಸರೋವರ
ಕೊಡೆ	ಕೋಡೆ	ಛತ್ರಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ ಈ ಎರಡು ಧ್ವನಿಗಳಿಲ್ಲ. ಆದ್ದರಿಂದ ಉನ್ನತ ಮಧ್ಯ ಪಶ್ಚ ಅಗೋಳ ಹ್ರಸ್ವ ಸ್ವರದ 'ಒ' ಬದಲು ನಿಮ್ನತರ ಮಧ್ಯ ಪಶ್ಚಗೋಳ 'ಓ' ಧ್ವನಿಯನ್ನು ಬರೆಯುತ್ತಾರೆ. ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿ ಬರೆಯುವಾಗ ಹೆಚ್ಚು ಧೀರ್ಘಸ್ವರ ಧ್ವನಿಯನ್ನು ಬರೆಯುತ್ತಾರೆ. ಇದು ವಿದ್ಯಾರ್ಥಿಗಳಿಗೆ ಈ ಎರಡು ಧ್ವನಿಗಳು ರಚನೆಯಲ್ಲಿ ಕಂಡುಬರುವ ಸಾಮ್ಯತೆಯ ಗೊಂದಲದಿಂದ ಈ ತೆರನಾಗಿ ವ್ಯತ್ಯಾಸದಿಂದ ಬರೆಯಲು ಕಾರಣವೆಂದು ಹೇಳಬಹುದು. ವಿಶೇಷವಾಗಿ ಹೇಳುವುದೆಂದರೆ 'ಓ' ಧ್ವನಿ ಉರ್ದು ಭಾಷೆಯಲ್ಲಿ ಇಲ್ಲ.

೩.೧೫. ಓ > ಒ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ನಿಮ್ನತರ ಮಧ್ಯ ಪಶ್ಚಗೋಳ ದೀರ್ಘ ಸ್ವರದ 'ಓ' ಬದಲು ಉನ್ನತಮಧ್ಯ ಪಶ್ಚಗೋಳ ಹ್ರಸ್ವ ಸ್ವರ 'ಒ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿಯ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	**ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ**	**ಅರ್ಥ**
ಓಡು	ಒಡು	ಮಡಕೆ
ಓಟ	ಒಟ	ಓಡುವಿಕೆ
ಓಣಿ	ಒನಿ	ಓಣಿ
ಓರೆ	ಒರೆ	ಇಳಿಜಾರು

ಪದಮಧ್ಯ ಪರಿಸರ

ಬರಹ ರೂಪ	**ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ**	**ಅರ್ಥ**
ಗೋಲಿ	ಗೊಲಿ	ಬಂದೂಕಿನ ಗುಂಡು
ಗೋರಿ	ಗೊರಿ	ಸೆಳೆತ
ತೋಟಿ	ತೊಟಿ	ಸೇವಕ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ತೆರನಾಗಿ ಹೇಳಬಹುದು. ನಿಮ್ನತರ ಮಧ್ಯ ಪಶ್ಚಗೋಳ ದೀರ್ಘ ಸ್ವರದ 'ಓ' ಬದಲು ಉನ್ನತ ಮಧ್ಯ ಪಶ್ಚ ಅಗೋಳ ಹ್ರಸ್ವಸ್ವರ 'ಒ' ಧ್ವನಿಯನ್ನು ಬರೆಯುತ್ತಾರೆ. ಉರ್ದು ಭಾಷಿಕ ಮಕ್ಕಳು ಈ ಎರಡು ಧ್ವನಿಗಳಲ್ಲಿ ಅಲ್ಪಧ್ವನಿ ಸಾಮ್ಯತೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಓದುವುದು ಕಂಡುಬರುವುದು.

೩.೧೬. "ಂ" ಅನುಸ್ವಾರ ಲೋಪ ಮಾಡಿ ಬರೆಯುವುದು

ಪದಮಧ್ಯ ಪರಿಸರದಲ್ಲಿ "ಂ" ಅನುಸ್ವಾರವನ್ನು ಲೋಪ ಮಾಡಿ ೮, ೯, ೧೦ನೇ ತರಗತಿಯ ಎಲ್ಲ ಮಕ್ಕಳು ವ್ಯತ್ಯಾಸದಿಂದ ಬರೆಯುತ್ತಾರೆ. ಉದಾ:

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಂಗು	ಕಗು	ಅಡಕೆಯ ಮರ
ಖಂಡ	ಖಡ	ತುಂಡು
ಬಂದರು	ಬದರು	ಹಡಗು ನಿಲ್ಲುವ ಸ್ಥಳ
ಮುಂದೆ	ಮುದೆ	ಮುಂದು
ಪಂಚಮಿ	ಪಚಮಿ	ಪಕ್ಷದ ಐದನೆಯ ದಿನ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ "ಂ" ಅನುಸ್ವಾರ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ಉರ್ದು ಭಾಷೆಯಲ್ಲಿ "ನ" ದಂತ್ಯ ಅನುನಾಸಿಕ ವ್ಯಂಜನ ಧ್ವನಿ ಮಾಡುವುದು ಹಾಗೂ ಶಿಕ್ಷಕರು ಇದರ ಉಚ್ಚಾರಣೆ ಬಗ್ಗೆ ಸ್ಪಷ್ಟವಾಗಿ ಹೇಳದೆ ಇರುವುದರಿಂದ "ಂ" ಅನುಸ್ವಾರ ಉಪಯೋಗಿಸದೆ ಅದನ್ನು ಲೋಪ ಮಾಡಿ ವ್ಯತ್ಯಾಸದಿಂದ ಬರೆಯಲು ಕಾರಣವಿರಬಹುದು.

೩.೧೭. "ಃ" ವಿಸರ್ಗ ಲೋಪ ಮಾಡಿ ಬರೆಯುವುದು

ಪದಮಧ್ಯ ಪರಿಸರದಲ್ಲಿ "ಃ" ವಿಸರ್ಗವನ್ನು ಲೋಪ ಮಾಡಿ ೮, ೯, ೧೦ ನೇ ತರಗತಿಯ ಎಲ್ಲ ಮಕ್ಕಳು ವ್ಯತ್ಯಾಸದಿಂದ ಬರೆಯುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಅಂತಃಕರಣ	ಅಂತಕರಣ	ಮನಸು
ದುಃಖ	ದುಖ	ದುಃಖ
ಅಂತಃಪಟ	ಅಂತಪಟ	ವಸ್ತು
ಅಂತಃಪುರ	ಅಂತಪುರ	ರಾಣಿವಾಸ
ಅಂತಃಕಲಹ	ಅಂತಕಲಹ	ಒಳಜಗಳ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ "ಃ" ವಿಸರ್ಗ ಇಲ್ಲದೆ ಇರುವುದರಿಂದ ಹಾಗೂ ಇದರ ಉಚ್ಚಾರಣ ಕ್ರಮವನ್ನು ತಿಳಿಯದೆ ಲೋಪ ಮಾಡಿ ವ್ಯತ್ಯಾಸದಿಂದ ಬರೆಯಲು ಕಾರಣವಿರಬಹುದು.

ಸಂಧ್ಯಕ್ಷರಗಳು

೩.೧೮. ಐ > ಅಯ್

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಸಂಧ್ಯಕ್ಷರವಾದ "ಐ" ಧ್ವನಿಯ ಬದಲು "ಅಯ್" ಎಂದು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಐಡಿ	ಅಯಿಡಿ	ಮುತ್ತೈದೆ
ಐಬು	ಅಯಿಬು	ಕೊರತೆ
ಐಲು	ಅಯಿಲು	ಹುಚ್ಚು
ಐಸಿಲಿ	ಅಯಿಸಿರಿ	ಐಶ್ವರ್ಯ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ದೈವ	ದೆಯವ	ಹಣೆಬರಹ
ತೈಲ	ತಯಿಲ	ಎಲ್ಲ
ಪೈಲು	ಪಯಿಲು	ಮುಖ
ಪೈಸಲ್	ಪಯಿಸಲ್	ತೀರ್ಮಾನ
ಕೈದಿ	ಕಯಿದಿ	ಬಂದಿ ಕೌಲವಾನಿ

ಪದಾಂತ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಪೈ	ಪಯ್	ಬಿಡಿಕಾಸು
ಬೈ	ಬಯ್	ನಿಂದಿಸು
ಕೈ	ಕಯ್	ಕೈ
ಮೈ	ಮಯ್	ದೇಹ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲಿ ಸಂಧ್ಯಾಕ್ಷರಾದ "ಐ" ಧ್ವನಿಯ ಬದಲು "ಅಯ್" ಬರೆಯಲು ಕಾರಣ ಉರ್ದು ಭಾಷಿಕರ ಮಕ್ಕಳು ತಮ್ಮ ಮಾತೃ ಭಾಷೆಯಾದ ಉರ್ದುವಿನಲ್ಲಿ ಉಚ್ಚರಿಸುವ ಪದಗಳ ಮಾದರಿಯಲ್ಲಿ ಉಚ್ಚರಿಸಬೇಕೆಂಬ ತಪ್ಪು ಕಲ್ಪನೆಯಿಂದ ಅಥವಾ ಬಿಡಿಯಾಗಿ ಉಚ್ಚರಿಸುವುದರಿಂದ ಈ ತೆರನಾದ ವ್ಯತ್ಯಾಸದಿಂದ ಬರೆಯಲು ಕಾರಣವಿರಬಹುದು.

೩.೧೯. ಔ > ಅವ್

ಪದಾದಿ, ಪದಮಧ್ಯ ಪರಿಸರದಲ್ಲಿ ಸಂಧ್ಯಕ್ಷರ "ಔ" ಧ್ವನಿ ಬದಲು "ಅವ್" ಎಂದು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಔಡಲ	ಅವಡಲ	ಹರಳುಗಿಡ
ಜೌತಣ	ಅವತನ	ಬೋಜನ
ಔಪಚಾರಿಕ	ಅವಪಚಾರಿಕ	ವಾಡಿಕೆಯ
ಔಷಧ	ಅವಸದ	ವನಸ್ಪತಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕೌಮುದಿ	ಕವ್ ಮುದಿ	ಬೆಳದಿಂಗಳು
ಪೌರ	ಪವರ	ನಾಗರಿಕ
ಕಾಳಿಕ	ಕವಲಿಕ	ಮೋಸ
ಪೌಳಿ	ಪವ್‌ಲಿ	ಪ್ರಕಾರ ಸುತ್ತಗೋಡೆ
ಕೌಶಿಕ	ಕವಸಿಕ	ವಿಶ್ವಾಮಿತ್ರ

ಪದಾದಿ, ಪದಮಧ್ಯ ಪರಿಸರದಲ್ಲಿ ಸಂಧ್ಯಾಕ್ಷರ "ಔ" ಧ್ವನಿ ಬದಲು "ಅವ್" ಎಂದು ಬಿಡಿಯಾಗಿ ಬರೆಯಲು ಕಾರಣ ಉಚ್ಚಾರಣೆ ಬಗ್ಗೆ ಸ್ಪಷ್ಟವಾಗಿ ಶಿಕ್ಷಕರು ಹೇಳದೆ ಇರುವುದು ಹಾಗೂ ಸಂಧ್ಯಾಕ್ಷರ ಬರೆಯುವ ಹಾಗೂ ಉಚ್ಚರಣೆ ರೀತಿ ತಿಳಿಯದೆ ಇರುವುದು ಈ ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

ವ್ಯಂಜನಗಳು

೩.೨೦.ಕ > ಖ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಂಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿ "ಕ" ಬದಲು ಕಂಠ್ಯ ಮಹಾಪ್ರಾಣ ಸಂಘರ್ಷ ವ್ಯಂಜನ ಧ್ವನಿ "ಖ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕತ್ತಿ	ಖತ್ತಿ	ಖಡ್ಗ
ಕಡಲೆ	ಖಡಲೆ	ಬೀಜ,ಕಡಲೆ
ಕಬಡ್ಡಿ	ಖಬಡ್ಡಿ	ಒಂದು ಕ್ರೀಡೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ರಕ್ಕಂ	ರಖಂ	ಹಣ
ಅಕಡಿ	ಅಖಡಿ	ಭೂಮಿ ಅಗಲ
ಚಕಿತ	ಚಖಿತ	ಬೆರಗುಗೊಂಡ
ಚಕಾರ	ಚಖಾರ	ಆಕ್ಷೇಪಿಸದಿರುವುದು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಪದಾದಿ ಪದಮಧ್ಯ ಪರಿಸರದಲ್ಲಿ ಕಂಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿ "ಕ" ಬದಲು ಕಂಠ್ಯ ಮಹಾಪ್ರಾಣ ಸಂಘರ್ಷ ವ್ಯಂಜನ ಧ್ವನಿ "ಖ" ಬರೆಯುವುದಕ್ಕೆ ಕಾರಣಗಳನ್ನು ಈ ತೆರನಾಗಿ ವಿಶ್ಲೇಷಿಸಬಹುದು.

೧. ಉರ್ದು ಭಾಷೆಯಲ್ಲಿರುವ 'ಖ಼' ಅಲಿಜಿಹ್ವೀಯ ಅಘೋಷ ಸಂಘರ್ಷ ವ್ಯಂಜನ ಧ್ವನಿಯ ಪ್ರಭಾವವಾಗಿರುವುದು ಇಲ್ಲಿ ಕಂಡುಬರುವುದು.

೨. ಉರ್ದು ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ "ಕ" ಧ್ವನಿ ಮತ್ತು "ಖ" ಧ್ವನಿಯ ನಡುವೆ ಅಲ್ಪ ಧ್ವನಿಸಾಮ್ಯತೆ ಇರುವುದರಿಂದ ಈ ತೆರೆನಾದ ವ್ಯತ್ಯಾಸದಿಂದ ಬರೆಯಲು ಕಾರಣವಿರಬಹುದು.

೩. ಕನ್ನಡ ಭಾಷೆಯಲ್ಲಿನ "ಕ" ಧ್ವನಿ ಮತ್ತು "ಖ" ಧ್ವನಿಗಳ ಸ್ಪಷ್ಟವಾದ ಉಚ್ಚಾರಣಾ ವ್ಯತ್ಯಾಸ ತಿಳಿಯದೆ ಗೊಂದಲದಿಂದ ಈ ತೆರನಾದ ವ್ಯತ್ಯಾಸವನ್ನು ಉರ್ದು ಭಾಷಿಕ ಮಕ್ಕಳು ಮಾಡುವುದು ಕಂಡುಬರುವುದು.

೩.೨೧. ಘ > ಗ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ "ಘ" ಧ್ವನಿ ಬದಲಾಗಿ ಕಂಠ್ಯ ಘೋಷ ಸ್ಪರ್ಶ ವ್ಯಂಜನ "ಗ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ನೇ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಘಳಿಗೆ	ಗಲಿಗೆ	ಸಮಯ
ಘಂಟೆ	ಗಂಟೆ	ವೇಳೆ
ಘಟಕ	ಗಟಕ	ಅಂಗ
ಘನ	ಗನ	ಗಟ್ಟಿ
ಘಡಿ	ಗಡಿ	ಘಡಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಮೇಘ	ಮೇಗ	ಮೋಡ
ಲಘು	ಲಗು	ಚಿಕ್ಕದು
ಸಂಘ	ಸಂಗ	ಗುಂಪು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ "ಘ" ಮತ್ತು ಕಂಠ್ಯ ಘೋಷ ಸ್ಪರ್ಶ ವ್ಯಂಜನ ಧ್ವನಿ "ಗ" ಈ ಎರಡು ಧ್ವನಿಗಳಲ್ಲಿ ಉಚ್ಚಾರಣೆಯ ಅಲ್ಪ ಸಾಮ್ಯತೆ ಇರುವುದರಿಂದ ಉರ್ದುಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಬರೆಯುವಾಗ ಈ ತರಹದ ವ್ಯತ್ಯಾಸಗಳನ್ನು ಮಾಡುವುದು ಕಂಡುಬರುವುದು.

೩.೨೨. ಠ > ಟ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಠ" ಧ್ವನಿ ಬದಲು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿಯನ್ನು ಬರೆಯುತ್ತಾರೆ. ಈ ತೆರನಾದ ಘೋಷವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಠರಾವು	ಟರಾವು	ತೀರ್ಮಾನ
ಠಾಣ	ಟಾನ	ಬೀಡು
ಠಾನೆ	ಟಾನೆ	ನೆಲೆ
ಠಸ್ಸೆ	ಟಸ್ಸೆ	ಒತ್ತುವ ಮುದ್ರೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಪಾಠ	ಪಾಟ	ಪಾಠ, ಅಧ್ಯಾಯ
ಜಠರ	ಜಟರ	ಹೊಟ್ಟೆ
ಮಿಠಾಯಿ	ಮಿಟಾಯಿ	ಸಿಹಿತಿಂಡಿ
ಸಹಪಾಠಿ	ಸಹಪಾಟಿ	ಜೊತೆಯಲ್ಲಿ ಓದುವವ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಠ" ಮತ್ತು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಈ ಎರಡು ಧ್ವನಿಗಳು ಧ್ವನಿ ಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

೩.೨೩. ಡ > ಣ

ಪದ್ಯಮಧ್ಯ ಪರಿಸರದಲ್ಲಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಬದಲು ಮೂರ್ಧನ್ಯ ಅನುನಾಸಿಕ ವ್ಯಂಜನ "ಣ" ಧ್ವನಿ ಬರೆಯುತ್ತಾರೆ. ಈ ಒಂದು ದೊಷವನ್ನು ವಿಶೇಷವಾಗಿ ಗ್ರಾಮೀಣ ಭಾಗದ ಉರ್ದು ಮಾತೃಭಾಷೆಯ ಎಲ್ಲ ತರಗತಿಯ ಮಕ್ಕಳು ಮಾಡುವರು.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಹೆಂಡತಿ	ಎಣತಿ	ಪತ್ನಿ
ಹೆಂಡಿರು	ಹೆಣತಿರು	ಪತ್ನಿ
ಹೆಂಡತಿಯರು	ಹೆಣತಿಯರು	ಪತ್ನಿಯರು
ಕುಡಿಕೆ	ಕುಣಿಕೆ	ಜೀರುಗುಣಿಕೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಗ್ರಾಮೀಣ ಪ್ರದೇಶ ಉರ್ದು ಮಕ್ಕಳಿಗೆ ನಗರ ಪ್ರದೇಶದ ಮಕ್ಕಳಿಗಿಂತ ಕನ್ನಡಿಗರ ಸಂಪರ್ಕ ಹೆಚ್ಚು ಇರುವುದರಿಂದ ತಮ್ಮ ಆಡುಮಾತಿನಲ್ಲಿ "ಡ" ಧ್ವನಿಯ ಬದಲು "ಣ" ಧ್ವನಿಯನ್ನು ಉಪಯೋಗಿಸುವರು. ಈ ಒಂದು ಪ್ರಭಾವದಿಂದ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಬದಲು ಮೂರ್ಧನ್ಯ ಅನುನಾಸಿಕ ವ್ಯಂಜನ "ಣ" ಧ್ವನಿಯನ್ನು ಕನ್ನಡ ಭಾಷೆಯಲ್ಲಿನ ಪದಗಳನ್ನು ಬರೆಯುವಾಗ ಉರ್ದು ಮಾತೃಭಾಷಿಕ ಮಕ್ಕಳು ಈ ತೆರನಾಗಿ ವ್ಯತ್ಯಾಸದಿಂದ ಬರೆಯುವುದು ಕಂಡುಬರುವುದು.

೩.೨೪. ಣ > ಲ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಬದಲು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಸರಪಣಿ	ಸರಪಲಿ	ಸಂಕೋಲೆ
ಗಿಣಿ	ಗಿಲಿ	ಗಿಳಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಉರ್ದು ಭಾಷೆಯಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿ ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಮಾಡುತ್ತಿರುವುದು ಗಮನಾರ್ಹವಾದದ್ದು.

೩.೨೫. ಛ > ಚ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸಂಘರ್ಷ ವ್ಯಂಜನ ಛ ಧ್ವನಿಯ ಬದಲಾಗಿ ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಛಂದ	ಚಂದ	ರೀತಿ, ಇಚ್ಛೆ
ಛತ್ರಿ	ಚತಿರಿ	ಕೊಡೆ
ಛಲ	ಚಲ	ನೆಪ
ಛೀಮಾರಿ	ಚಿಮಾರಿ	ಛೀಮಾರಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಮೂರ್ಛೆ	ಮೂರ್ಚೆ	ಮೂರ್ಛೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಛ" ಧ್ವನಿ ಮತ್ತು ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿಗಳೆರಡು ಅಲ್ಪಧ್ವನಿ ಸಾಮ್ಯತೆ ಇರುವುದರಿಂದ ಗೊಂದಲಕ್ಕೊಳಗಾಗಿ ಉರ್ದು ಮಾತೃಭಾಷೆಯ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಬರೆಯುವಾಗ ಈ ತೆರನಾದ ವ್ಯತ್ಯಾಸ ಮಾಡುವುದು ಕಂಡುಬರುವುದು.

೩.೨೬ ಚ > ಸ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಬದಲು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಚೀಲ	ಸೀಲ	ದಾನ್ಯಗಳ ಸಂಗ್ರಹ ಮಾಡುವ ಜಾಲ
ಚಿಲಕ	ಸಿಲಕ	ಚಿಲಕ
ಚೆಂಬು	ಸೆಂಬು	ಚೆಂಬು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕುರ್ಚಿ	ಕುರ್ಸಿ	ಕುರ್ಚಿ
ಕಚ್ಚು	ಕಸ್ಸು	ಕಚ್ಚು
ಕಿರ್ಚು	ಕಿರ್ಸು	ಒದರು
ಪರ್ಚು	ಪರ್ಸು	ತೆರೆಚು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ತಾಲವ್ಯ ಅಘೋಷ ಸ್ಪರ್ಶ ವ್ಯಂಜನ "ಚ" ಧ್ವನಿ ಮತ್ತು ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಗಳೆರಡು ಸ್ವಚ್ಛಂದ ಪರಿಸರದಲ್ಲಿ ಬಳಕೆಯಾಗುತ್ತಿರುವುದರಿಂದ ಮತ್ತು ಉರ್ದು ಮಾತೃಭಾಷೆಯಲ್ಲಿ ಹಿಂದಿ ಭಾಷೆಯ ಪದಗಳನ್ನು ಸ್ವೀಕರಣ ಮಾಡಿಕೊಂಡಿರುವುದರಿಂದ ಹಿಂದಿ ಭಾಷೆಯ ಪದಗಳಲ್ಲಿ "ಚ" ದ್ವಿತ್ವದಿಂದ ಕೂಡಿದಾಗ "ಚ" ಧ್ವನಿಯ ಬದಲು "ಸ" ಧ್ವನಿಯನ್ನು ಉಪಯೋಗಿಸುತ್ತಾರೆ. ಅದರ ಪ್ರಭಾವದಿಂದ ಕನ್ನಡ ಭಾಷೆ ಕಲಿಯುವಾಗ ಉರ್ದು ಮಾತೃಭಾಷಿಕರ ಮಕ್ಕಳು ಈ ತರಹದ ವ್ಯತ್ಯಾಸಗಳನ್ನು ಮಾಡುತ್ತಿರುವುದು ಕಂಡುಬರುವುದು.

೩.೨೭ ಗ > ಕ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಂಠ್ಯ ಘೋಷ ಸ್ಪರ್ಶ ವ್ಯಂಜನ "ಕ" ಧ್ವನಿಯ ಬದಲು ಕಂಠ್ಯ ಅಘೋಷ ಸ್ಪರ್ಶ ವ್ಯಂಜನ "ಗ" ಧ್ವನಿಯ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಗಲ್ಲ	ಕಲ್ಲ	ಕಪಾಳ
ಗಣಿ	ಕನಿ	ಕಣಿ
ಗಾಲಿ	ಕಾಲಿ	ಚಕ್ರ
ನಾಲಿಗಿ	ನಾಲಿಕಿ	ನಾಲಿಗೆ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ನಗದಿ	ನಕದ್	ರೋಖ
ಕೋಗಿಲೆ	ಕೊಕಿಲೆ	ಕೋಗಿಲೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೇ ಇಲ್ಲ. ಕಂಠ್ಯ ಘೋಷ ಸ್ಪರ್ಶ ವ್ಯಂಜನ "ಕ" ಧ್ವನಿ ಕಂಠ್ಯ ಅಘೋಷ ಸ್ಪರ್ಶ ವ್ಯಂಜನ "ಗ" ಧ್ವನಿ ಸ್ವಚ್ಛಂದ ಪರಿಸರದಲ್ಲಿ ಈ ತೆರನಾಗಿ ಬಳಕೆಯಾಗುವುದರ ಜೊತೆಗೆ ಅವರ ಉರ್ದು ಮಾತೃಭಾಷೆಯಲ್ಲಿನ ಪದಗಳನ್ನು "ಗ" ಧ್ವನಿ ಬದಲು "ಕ" ಧ್ವನಿ ಹೆಚ್ಚು ಬರೆಯುವಾಗ ಬಳಕೆ ಮಾಡುತ್ತಾರೆ. ಆದ್ದರಿಂದ ಅವರ ಮಾತೃಭಾಷೆಯ ಪ್ರಭಾವದಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

೩.೨೮. ಝ > ಜ

ಪದಾದಿ ಪರಿಸರದಲ್ಲಿ ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಝ" ಧ್ವನಿ ಬದಲು ತಾಲವ್ಯ ಘೋಷ ಅನುಘರ್ಷ ವ್ಯಂಜನ 'ಜ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಝಗಟ	ಜಗಟ	ಜಗಳ
ಝಟನೆ	ಜಟನೆ	ಜಡತಿ
ಝಟತಿ	ಆಟತಿ	ಜಡತಿ
ಝಷ	ಜಸ	ಜಸ
ಝರಿ	ಆರಿ	ನದಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣ ಇಲ್ಲದೆ ಇಲ್ಲ. ತಾಲವ್ಯ ಘೋಷ ಅನುಘರ್ಷ ವ್ಯಂಜನ 'ಜ' ಮತ್ತು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ ಈ ಎರಡು ಧ್ವನಿಗಳಲ್ಲಿ ಉಚ್ಚಾರಣ ಧ್ವನಿ ಸಾಮ್ಯತೆ ಇರುವುದರಿಂದ ಉರ್ದು ಭಾಷಿಕರ ಮಕ್ಕಳು ವ್ಯತ್ಯಾಸದಿಂದ ಬರೆಯಲು ಕಾರಣವಿರಬಹುದು.

೩.೨೯. ಟ > ಡ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿ ಬದಲಾಗಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಿಟಕಿ	ಖಿಡಕಿ	ಕಿಟಕಿ
ಕಟಕಿ	ಖಡಕಿ	ಚುಚ್ಚುಮಾತು
ಸಂಗಟ	ಸಂಗಡ	ಜೊತೆಗಾರ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿ ಬದಲಾಗಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯನ್ನು ಬರೆಯುವಾಗ ಅವರ ಸೌಲಭ್ಯಕಾಂಕ್ಷೆ ಮತ್ತು ಪದಮಧ್ಯ ಪರಿಸರದಲ್ಲಿ ಬರೆಯುವಾಗ "ಡ" ಧ್ವನಿಗಿಂತ "ಟ" ಧ್ವನಿ ಕಠಿಣವಾಗುವಂತೆ ಕಾಣುವುದು. ಅದಕ್ಕಾಗಿ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಬರೆಯುವಾಗ ಈ ತರಹದ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುವುದು.

೩.೩೦. ಣ > ನ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಬದಲು ದಂತ್ಯ ಅನುನಾಸಿಕ ವ್ಯಂಜನ "ನ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಣಿ	ಕನಿ	ಬಂಡೆ ತೆಗೆಯುವ ಸ್ಥಳ
ಗೇಣಿ	ಗೇನಿ	ಗುತ್ತಿಗೆ
ಪಣ	ಪನ	ಜಿದ್ದು
ಗುಣ	ಗುಣ	ಸ್ವಭಾವ
ಗಣತಿ	ಗನತಿ	ಎಣಿಕೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ಉರ್ದು ಭಾಷೆಯಲ್ಲಿ ಮೂರ್ಧನ್ಯ ಅನುನಾಸಿಕ "ಣ" ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ದಂತ್ಯ ಅನುನಾಸಿಕ ವ್ಯಂಜನ "ನ" ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ; ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಮಾಡುತ್ತಿರುವುದು ಗಮನಾರ್ಹವಾದದ್ದು.

೩.೩೧. ಳ > ಲ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ ಧ್ವನಿ "ಳ" ಧ್ವನಿಯ ಬದಲು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಗಳಗೆ	ಗಲಗೆ	ಬಿದರಿನ ದೊಡ್ಡ ಗೋಡೆ
ಜಗಳ	ಜಗಲ	ಕಲಹ
ಜಳಗ	ಜಲಕ	ಸ್ನಾನ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ಮುಂದಿನಂತೆ ವಿಶ್ಲೇಷಿಸಬಹುದು. ಉರ್ದು ಭಾಷೆಯಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ "ಳ" ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ದಂತ್ಯ ಪಾರ್ಶ್ವಿಕ ವ್ಯಂಜನ "ಲ" ಧ್ವನಿ ನಿರ್ವಹಿಸುತ್ತದೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ; ಅವರ ಮಾತೃ ಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸಗಳನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಮಾಡುತ್ತಿರುವುದು ಕಂಡುಬರುವುದು.

೩.೩೨. ಹ > ಅ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಕಾಕಲ್ಯ ಘೋಷ ಸಂಘರ್ಷ ವ್ಯಂಜನ "ಹ" ಧ್ವನಿ ಬದಲಾಗಿ ನಿಮ್ನ ಕೇಂದ್ರ ಅಗೋಳ ಹ್ರಸ್ವ ಸ್ವರ "ಅ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಹಳದಿ	ಅಲದಿ	ಅರಿಶಿಣದ ಬಣ್ಣ
ಹಂಗ	ಅಂಗ	ಶಕುನದ ಹಕ್ಕಿ
ಹಡಿಕೆ	ಅಡಿಕೆ	ಹಡಿಗೆ
ಹಣ್ಣು	ಅನ್ನು	ಹಣ್ಣು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಸಮೂಹ	ಸಮೂಅ	ಗುಂಪು
ಕಲಹ	ಕಲಅ	ಜಗಳ
ತರಹದ	ತರದ	ತೆರನಾಗಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಕಾಕಲ್ಯ ಘೋಷ ಸಂಘರ್ಷ ವ್ಯಂಜನ "ಹ" ಧ್ವನಿ ಮತ್ತು ನಿಮ್ನ ಕೇಂದ್ರ ಅಗೋಳ ಹ್ರಸ್ವ ಸ್ವರ "ಅ" ಧ್ವನಿಗಳೆಂದು ಉಚ್ಚಾರಣಾ ಸಾಮ್ಯತೆ ಹೊಂದಿರುವುದರಿಂದ ಮತ್ತು ಗೊಂದಲದಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಬರೆಯುವಾಗ ಈ ತೆರನಾಗಿ ವ್ಯತ್ಯಾಸ ಮಾಡುವುದು ಕಂಡುಬರುವುದು.

೩.೩೩. ಪ > ಫ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಪ" ಬದಲು ಅಲಿಜಿಹ್ವಿಯ ಅಘೋಷ ಸ್ಪರ್ಶ ವ್ಯಂಜನ "ಫ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ៤ನೇ ತರಗತಿ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಪಲ್ಲವಿ	ಫಲ್ಲವಿ	ಹಾಡಿನ ಸೊಲ್ಲು
ಪಲ್ಲೆ	ಫಲ್ಲೆ	ತರಕಾರಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ತೋಪು	ತೋಫು	ಮರಗಳ ಗುಂಪು
ಪರಪುಟ್ಟ	ಪರಫುಟ್ಟ	ಕೋಗಿಲೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಉರ್ದು ಮಾತೃ ಭಾಷೆಯಲ್ಲಿ ಅಲಿಜಹ್ವೀಯ ಅಘೋಷ ಸ್ರ್ಪ ವ್ಯಂಜನ ಫ಼ ಇದೆ. ಕನ್ನಡ ಭಾಷೆಯಲ್ಲಿ ಈ ಧ್ವನಿ ಇಲ್ಲ. ಆದ್ದರಿಂದ ಉರ್ದು ಮಾತೃಭಾಷಿಕ ಮಕ್ಕಳು ದ್ವವ್ಯತ್ಯಾಸ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಪ" ಧ್ವನಿಯನ್ನು ಬರೆಯುವ ಸಂದರ್ಭ ಬಂದಾಗ ಅವರ ಉರ್ದು ಮಾತೃಭಾಷೆಯ "ಫ಼" ಧ್ವನಿ ಬಳಕೆ ಮಾಡಬೇಕೆಂಬ ಮನೋಭಾವನೆಯಿಂದ ಅಲಿಜಿಹ್ವಿಯ ಅಘೋಷ ಸ್ಪರ್ಷ ವ್ಯಂಜನ "ಫ" ಧ್ವನಿಯನ್ನು ಓದುವುದು ಕಂಡುಬರುವುದು.

೩.೩೪. ಭ > ಬ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಭ" ಧ್ವನಿಯ ಬದಲು ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಭಂಗಾರ	ಬಗಾರ	ಚಿನ್ನ
ಭಗ	ಬಗ	ಸೂರ್ಯ
ಭಗಿನಿ	ಬಗಿನಿ	ಒಡಹುಟ್ಟಿದವರು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಲಾಭ	ಲಾಬ	ಲಾಭ
ಗರ್ಭ	ಗರಬ	ಬಸಿರು
ಗರ್ಭಕ	ಗರಬಕ	ತಲೆ ಮೇಲೆ ಮುಡಿಯುವ ಹೂ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಹೀಗೆ ವಿಶ್ಲೇಷಿಸಬಹುದು. ಉರ್ದು ಭಾಷೆಯಲ್ಲಿ ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ 'ಭ' ಧ್ವನಿ ಇಲ್ಲದೆ ಇರುವುದರಿಂದ ಇದರ ಕೆಲಸವನ್ನು ಉರ್ದು ಮಾತೃ ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ವ್ಯಂಜನ "ಭ" ಧ್ವನಿ ಬರೆಯುವಾಗ ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿಯನ್ನು ಬರೆಯುತ್ತಾರೆ. ಈ ಮಾದರಿ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣ ಅಲ್ಲ. ಅವರ ಮಾತೃಭಾಷೆಯಾದ ಉರ್ದು. ಹಾಗಾಗಿ ಈ ಮಾದರಿ ವ್ಯತ್ಯಾಸವನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಮಾಡುತ್ತಿರುವುದು ಗಮನಾರ್ಹ ವಿಷಯ.

೩.೩೫. ಬ > ವ

ಪದಾದಿ ಪರಿಸರದಲ್ಲಿ ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿ ಬದಲು ದಂತೋಷ್ಠ್ಯ ಅರ್ಧ ಸ್ವರ ವ್ಯಂಜನ "ವ" ಧ್ವನಿಯ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಬಟ್ಟೆ	ವಟ್ಟೆ	ಬಟ್ಟೆ ಅರಿವೆ
ಬೀದಿ	ವೀದಿ	ದಾರಿ, ಕಸ್ತೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಕಾರಣಗಳನ್ನು ಈ ರೀತಿ ಹೇಳಬಹುದು. ದ್ವಯೋಷ್ಠ್ಯ ಘೋಷ ಸ್ಪರ್ಶ ವ್ಯಂಜನ "ಬ" ಧ್ವನಿ ಮತ್ತು ದಂತೋಷ್ಠ್ಯ ಅರ್ಧಸ್ವರ "ವ" ಧ್ವನಿಗಳೆರಡು ಉಚ್ಚಾರಣೆಯಲ್ಲಿ ಅಲ್ಪ ಸಾಮ್ಯತೆ ಹೊಂದಿರುವುದರಿಂದ ಉರ್ದು ಮಾತೃಭಾಷಿಕರ ಮಕ್ಕಳು ಕನ್ನಡ ಭಾಷೆಯ ಪದಗಳನ್ನು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಿರುವುದು ಕಂಡುಬರುವುದು.

೩.೩೬. ಡ > ದ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದಂತ್ಯ ಘೋಷ ಸ್ಪರ್ಶ ವ್ಯಂಜನ "ದ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಡಮರು	ದಮರು	ಶಿವನ ಕೈಯಲ್ಲಿರುವದು
ಡಿಸೆಂಬರ್	ದಿಸೆಂಬರ್	ತಿಂಗಳು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ದಾಂಡಿಗ	ದಾಂದಿಗ	ಗಟ್ಟಿ ಮುಟ್ಟಾದ
ಎರಡು	ಎರದು	ಎರಡು
ಕಡಲೆ	ಕಡಲೆ	ಕಡಲೆ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಹೀಗೆ ಹೇಳಬಹುದು. ದಂತ್ಯ ಘೋಷ ಸ್ಪರ್ಶ ವ್ಯಂಜನ 'ದ' ಧ್ವನಿ ಮತ್ತು ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ 'ಡ' ಧ್ವನಿಗಳೆರಡು ಸ್ವಚ್ಛಂದ ಪರಿಸರದಲ್ಲಿ ಬಳಕೆಯಾಗುವುದರಿಂದಲೂ ಅಥವಾ ಧ್ವನಿಗಳ ಹೋಲಿಕೆಯ ಸಾಮ್ಯತೆಯ ಗೊಂದಲದಿಂದಲೂ ಈ ತೆರನಾದ ವ್ಯತ್ಯಾಸದಿಂದ ಬರೆಯಲು ಕಾರಣವಿರಬಹುದು.

೩.೩೭. ಥ > ತ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ವರ್ತ್ಸ್ಯ ಅಘೋಷ ಸ್ಪರ್ಶ ವ್ಯಂಜನ "ಥ" ಧ್ವನಿಯ ಬದಲು ದಂತ್ಯ ಅಘೋಷ ಸ್ಪರ್ಶ ವ್ಯಂಜನ "ತ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಥಟ್ಟನೆ	ತಟ್ಟನೆ	ಬೇಗನೆ
ಥಟ್ಟು	ತಟ್ಟ	ಮುದ್ದು
ಥಳಕು	ತಲಕು	ತೋರಿಕೆ, ಕೃತಕ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಥನ	ಕತನ	ಕಥೆ
ಸಾರಥಿ	ಸಾರತಿ	ಮಷಕ ಮಧ್ಯಗಾರ್ತಿ
ಗಾಥೆ	ಗಾತೆ	ಪದ್ಯ

ಈ ಮೇಲಿನ ಉದಾಹರಣೆಗಳನ್ನು ನೋಡಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಉರ್ದು ಭಾಷೆಯಲ್ಲಿ ವರ್ತ್ಸ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿಯಾದ "ಥ" ಇಲ್ಲದೆ ಇರುವುದರಿಂದ ಅವರ ಮಾತೃ ಭಾಷೆ ಉರ್ದುವಿನ ಪ್ರಭಾವದಿಂದ ಕನ್ನಡ ಭಾಷೆಯ ಪದಗಳನ್ನು ಬರೆಯುವಾಗ ವರ್ತ್ಸ ಅಘೋಷ ಸ್ಪರ್ಶ ವ್ಯಂಜನ "ಥ" ಧ್ವನಿ ಬದಲು ದಂತ್ಯ ಅಘೋಷ ಸ್ಪರ್ಶ ವ್ಯಂಜನ "ತ" ಧ್ವನಿ ಬರೆಯುವರು ಎಂದು ಹೇಳಬಹುದು.

೩.೩೮. ಫ > ಪ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಮಹಾಪ್ರಾಣ ಸ್ಪರ್ಶ ವ್ಯಂಜನ "ಫ" ಧ್ವನಿ "ಪ" ಬದಲು ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಫಲ	ಪಲ	ಹಣ್ಣು
ಫಣಿ	ಪನಿ	ಹೆಡೆಯಾಡುವ ಹಾವು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಅಫಲ	ಅಪಲ	ಫಲಿಸದುದು
ಅಫಿಮು	ಅಪಿಮು	ಅಫೀಮು
ಕಫ	ಕಪ	ಶ್ಲೇಷ್ಮ
ದಫನ್	ದಪನ್	ಅಚಿತ್ಯಕ್ರಿಯೆ
ಕಾಫಿ	ಕಾಪಿ	ಕಾಫಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ದ್ವಯೋಷ್ಠ್ಯ ಅಘೋಷ ಸ್ಪರ್ಶ ವ್ಯಂಜನ "ಪ" ಧ್ವನಿ ಮತ್ತು ದ್ವಯೋಷ್ಠ್ಯ ಮಹಾಪ್ರಾಣ ಸ್ಪರ್ಶ ವ್ಯಂಜನ "ಫ" ಧ್ವನಿಗಳೆರಡು ಉಚ್ಚಾರಣಾ ಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕ ಮಾತೃಭಾಷೆಯ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಬರೆಯುವಾಗ ವ್ಯತ್ಯಾಸವನ್ನು ಮಾಡುವುದು ಕಂಡುಬರುವುದು.

೩.೩೯. ಧ > ಡ

ಪದಾದಿ ಪರಿಸರದಲ್ಲಿ ದಂತ್ಯ ಘೋಷ ಸ್ಪರ್ಶ ವ್ಯಂಜನ "ಢ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಢಾಲು	ಡಾಲು	ಗುರಾಣಿ
ಢಾಳ	ಡಾಲ	ಹೊಳಪು
ಢಾಳಿಸು	ಡಾಲಿಸು	ಮಿಂಚು
ಢೀಗು	ಡಿಗು	ಹೊರೆ
ಢಾಳು	ಡಾಲು	ಪ್ರಭೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಈ ತೆರನಾಗಿ ಹೇಳಬಹುದು. ದಂತ್ಯ ಘೋಷ ಸ್ಪರ್ಶ ವ್ಯಂಜನ "ಢ" ಧ್ವನಿ ಮತ್ತು ಮೂರ್ದನ್ಯ ಘೋಷ ಸ್ಪರ್ಶ

ವ್ಯಂಜನ "ಡ" ಧ್ವನಿ ಬರೆಯಲು ಕಾರಣ. ಈ ಎರಡು ಧ್ವನಿಗಳಲ್ಲಿ ಅಲ್ಪ ಧ್ವನಿ ಸಾಮ್ಯತೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಬರೆಯುವುದು ಕಂಡುಬರುವುದು.

೩.೪೦. ಡ > ಟ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿಯ ಬದಲು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಡಾಗು	ಟಾಗು	ಮುದ್ರೆ
ಡಾಮರ	ಟಾಮರ	ಆಕ್ರಮಣ
ಡಾಲು	ಟಾಲು	ಪ್ರಭೆ
ಡಾವರ	ಟಾವರ	ಬರಗಾಲ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಡ	ಕಟ	ಸಾಲ
ಕಡಕ	ಕಟಕ	ಕರಾರುವಕ್ಕಾದ
ಕಡಚಿ	ಕಟಚಿ	ಕುರುಪಿ
ಗಡ	ಗಟ	ಸಣ್ಣ ಕೋಟೆ
ಗಡನೆ	ಗಟನೆ	ಬೇಗನೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಈ ತೆರನಾಗಿ ಹೇಳಬಹುದು. ಮೂರ್ಧನ್ಯ ಘೋಷ ಸ್ಪರ್ಶ ವ್ಯಂಜನ "ಡ" ಧ್ವನಿ ಮತ್ತು ಮೂರ್ಧನ್ಯ ಅಘೋಷ ಸ್ಪರ್ಶ ವ್ಯಂಜನ "ಟ" ಧ್ವನಿ ಓದಲು ಕಾರಣ ಗೊಂದಲದಿಂದ ಹಾಗೂ ಉಚ್ಚಾರಣ ರೀತಿ ತಿಳಿಯದೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಬರೆಯುವುದು ಕಂಡುಬರುವುದು.

೩.೪೧. ಧ > ದ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ದಂತ್ಯ ಅಘೋಷ ಸಂಘರ್ಷ ವ್ಯಂಜನ "ಧ" ಧ್ವನಿ ಬದಲು ದಂತ್ಯ ಘೋಷ ಸ್ಪರ್ಷ ವ್ಯಂಜನ "ದ" ಧ್ವನಿಯನ್ನು ಬರೆಯುತ್ತಾರೆ. ಈ ತೆರನಾದ ಘೋಷವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಧನಿ	ದನಿ	ಸದ್ದು
ಧನ	ದನ	ಕುಬೇರ
ಧನ	ದನ	ಹಣ
ಧಡ	ದಡ	ದಂಡೆ
ಧಗೆ	ದಗೆ	ಕಾವು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಅಧಮ	ಅದಮ	ಕೀಳು
ಅಧರ	ಅದರ	ಕೆಳತುಟಿ
ಆಧಿ	ಆದಿ	ಮಾನಸಿಕ ತೊಂದರೆ
ಆಧರ	ಆದರ	ತನ್ನ ಸೋಲನ್ನು ತಾನೆ ಹೇಳಿಕೊಳ್ಳುವವ
ಆಧುನಿಕ	ಆದುನಿಕ	ಈಗಿನ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ದಂತ್ಯ ಅಘೋಷ ಸಂಘರ್ಷ ವ್ಯಂಜನ " ಧ " ಮತ್ತು ದಂತ್ಯ ಘೋಷ ಸ್ಪರ್ಷ ವ್ಯಂಜನ "ಧ" ಈ ಎರಡು ಧ್ವನಿಗಳ ನಡುವೆ ಧ್ವನಿಸಾಮ್ಯತೆ ಹೊಂದಿರುವುದರಿಂದ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಈ ತೆರನಾದ ವ್ಯತ್ಯಾಸ ಮಾಡುವುದು ಕಂಡುಬರುತ್ತದೆ.

೩.೪೨. ಮ > ವ

ಪದಮಧ್ಯ ಪರಿಸರದಲ್ಲಿ ದ್ವಯೋಷ್ಠ್ಯ ಅನುನಾಸಿಕ ವ್ಯಂಜನ "ಮ" ಧ್ವನಿ ಬದಲು ದಂತೋಷ್ಠ್ಯ ಘೋಷ ಸ್ಪರ್ಷ ವ್ಯಂಜನ "ವ" ಧ್ವನಿಯ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಕಮಲ	ಕವಲ	ತಾವರೆ
ಕಮರು	ಕವರು	ಬಾಡುವಂತೆ ಮಾಡು
ಕಮರೆ	ಕವರಿ	ಬಾಡು
ಗಮನ	ಗವನ	ಸುವಾಸನೆ
ಗಮಾರ	ಗವಾರ	ಹಳ್ಳಿಗ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ದ್ವಯೋಷ್ಠ್ಯ ಅನುನಾಸಿಕ ವ್ಯಂಜನ "ಮ" ಧ್ವನಿ ಮತ್ತು ದಂತೊಷ್ಠ್ಯ ಘೋಷ ಸ್ಪರ್ಷ ವ್ಯಂಜನ "ವ" ಧ್ವನಿ ಎರಡು ಧ್ವನಿಗಳ ಹೋಲಿಕೆಯಲ್ಲಿ ಒಂದೇ ಎಂದು ಪರಿಭಾವಿಸಿ ಈ ತೆರನಾಗಿ ವ್ಯತ್ಯಾಸದಿಂದ ಬರೆಯುವುದು ಕಂಡುಬರುವುದು.

೩.೪೩. ಯ > ಎ

ಪದಮಧ್ಯ ಪರಿಸರದಲ್ಲಿ ತಾಲವ್ಯ ಅರ್ಧ ಸ್ವರ "ಯ" ಧ್ವನಿ ಬದಲು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ "ಎ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಯಮಲ	ಎಮಲ	ಜೊತೆ
ಯಮಿ	ಎಮೆ	ಯಮುನಾ ನದಿ
ಯವ	ಎವ	ಜವೆ ಗೋದಿ
ಯವೆ	ಎವೆ	ಯವ
ಯಮ	ಎಮ	ಇಂದ್ರಿಯ ನಿಗ್ರಹ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ತಾಲವ್ಯ ಅರ್ಧ ಸ್ವರ "ಯ" ಧ್ವನಿ ಮತ್ತು ಉನ್ನತ ಮಧ್ಯ ಅಗ್ರ ಅಗೋಳ ಹ್ರಸ್ವ ಸ್ವರ "ಎ" ಧ್ವನಿಯ

ಉಚ್ಚಾರಣೆಯಲ್ಲಿ ಅಲ್ಪ ಸಾಮ್ಯತೆ ಇರುವುದರಿಂದ ಗೊಂದಲದಿಂದಾಗಿ ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯ ಪದಗಳನ್ನು ಬರೆಯುವಾಗ ವ್ಯತ್ಯಾಸದಿಂದ ಬರೆಯುವುದು ಕಂಡುಬರುವುದು.

೩.೪೪. ವ > ಒ

ಪದಮಧ್ಯ ಪರಿಸರದಲ್ಲಿ ದಂತೋಷ್ಠ್ಯ ಘೋಷ ಸ್ಪರ್ಷ ವ್ಯಂಜನ 'ವ' ಧ್ವನಿ ಬದಲು ಉನ್ನತ ಮಧ್ಯ ಪಶ್ಚಗೊಳ ಹ್ರಸ್ವ ಸ್ವರ 'ಒ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ವಸನ	ಒಸನ	ವಾಸಿಸುವಿಕೆ
ವಸತಿ	ಒಸತಿ	ವಾಸ ಮಾಡುವಿಕೆ
ವರಿಸು	ಒರಿಸು	ಆರಿಸು
ವಯಸ	ಒಯಸ	ವಯಸ್ಸು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೆ ಇಲ್ಲ. ದಂತೋಷ್ಠ್ಯ ಘೋಷ ಸ್ಪರ್ಷ ವ್ಯಂಜನ 'ವ' ಧ್ವನಿ ಮತ್ತು ಉನ್ನತ ಮಧ್ಯ ಪಶ್ಚಗೊಳ ಹ್ರಸ್ವ ಸ್ವರ 'ಒ' ಧ್ವನಿಗಳಲ್ಲಿ ಧ್ವನಿ ಸಾಮ್ಯತೆ ಇರುವುದರಿಂದ ಸ್ಪಷ್ಟ ಉಚ್ಚಾರಣೆ ಕಲ್ಪನೆ ಇಲ್ಲದೆ ಇರುವುದರಿಂದ ಈ ತೆರನಾಗಿ ವ್ಯತ್ಯಾಸದಿಂದ ಬರೆಯುವುದು ಕಂಡುಬರುವುದು.

೩.೪೫. ಶ > ಸ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಶ" ಧ್ವನಿ ಬದಲು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಯನ್ನು ಬರೆಯುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಶಲದಿ	ಸಲದಿ	ಜೇಡರ ಹುಳು
ಶಲ	ಸಲ	ಕಣೆ
ಶರಾಬು	ಸರಾಬು	ಮಾಧಕ ಪಾನಿಯ
ಶರಾಯಿ	ಸರಾಯಿ	ಪಾಯಿಜಮು
ಶರಾ	ಸರಾ	ಟಿಪ್ಪಣಿ

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ದಶ	ದಸ	ಒಂದು ಸಂಖ್ಯೆ
ದಶನ	ದಸನ	ಹಲ್ಲು
ದಶಮುಖ	ದಸಮುಖ	ರಾವಣ
ದಶೆ	ದಸೆ	ಸ್ಥಿತಿ
ದಾಶ	ದಾಸ	ಆಳು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ತಾಲವ್ಯ ಅಘೋಷ ಸಂಘರ್ಷ ವ್ಯಂಜನ "ಶ" ಧ್ವನಿ ಮತ್ತು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಗಳಲ್ಲಿ ಅಲ್ಪ ಧ್ವನಿ ಸಾಮ್ಯತೆ ಇರುವುದರಿಂದ ಉರ್ದು ಭಾಷಿಕ ಮಕ್ಕಳು ಕನ್ನಡ ಭಾಷೆ ಪದಗಳನ್ನು ಬರೆಯುವಾಗ ವ್ಯತ್ಯಾಸದಿಂದ ಓದಲು ಎಂದು ಹೇಳಬಹುದು.

೩.೪೬. ಷ > ಸ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಷ" ಧ್ವನಿ ಬದಲು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಯನ್ನು ಬರೆಯುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ಷರತ್ತು	ಸರತು	ಕರಾರು
ಷರಾ	ಸರಾ	ಟಿಪ್ಪಣಿ
ಷರಾಯಿ	ಸರಾಯಿ	ಶರಾಯಿ
ಷಹರು	ಸಹರು	ನಗರ
ಷಾಮಿಲು	ಸಾಮಿಲು	ಒಂದಾಗು

ಪದಮಧ್ಯ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ವಿಷಮ ಕಾಲ	ವಿಸಮ ಕಾಲ	ಕೆಟ್ಟ ಕಾಲ
ವಿಷಮಿಸು	ವಿಸಮಿಸು	ನಂಜಾಗು
ವಿಷಧಿ	ವಿಸಧಿ	ಕಡಲು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ "ಷ" ಧ್ವನಿ ಮತ್ತು ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ "ಸ" ಧ್ವನಿಗಳಲ್ಲಿ ಅಲ್ಪ ಧ್ವನಿ ಸಾಮ್ಯತೆ ಇರುವುದರಿಂದ ಉರ್ದು ಭಾಷಿಕ ಮಕ್ಕಳು ಕನ್ನಡ ಭಾಷೆ ಪದಗಳನ್ನು ಬರೆಯುವಾಗ ವ್ಯತ್ಯಾಸದಿಂದ ಬರೆಯುತ್ತಾರೆ.

೨.೪೭. ಳ > ಡ

ಪದಮಧ್ಯ ಪರಿಸರದಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ "ಳ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ "ಡ" ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಪದಾದಿ ಪರಿಸರ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ರೂಪ	ಅರ್ಥ
ನಾಳೆಗೆ	ನಾಡೆಗೆ	ನಾಳೆಗೆ
ಗಳಪ	ಗಡಪ	ಸುಳ್ಳು ಹೇಳುವದು
ಗೆಳತಿ	ಗಡತಿ	ಹದಗಳತಿ
ತಳರು	ತಡರು	ಹೊರಡು
ತಳಪ	ತಡಪ	ಹೊಳಮ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಮೂರ್ಧನ್ಯ ಪಾರ್ಶ್ವಿಕ ವ್ಯಂಜನ "ಳ" ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ "ಡ" ಧ್ವನಿಯನ್ನು ಬರೆಯಲು ಕಾರಣ 'ಳ' ಧ್ವನಿ ಉಚ್ಚಾರಣೆ ಮಾಡಲು ಉರ್ದು ಭಾಷಿಕ ಮಕ್ಕಳಿಗೆ ತೊಂದರೆಯಾಗುತ್ತಿರುವುದು ಕಂಡುಬರುವುದು ಹಾಗೂ ಸೌಲಭ್ಯಕಾಂಕ್ಷೆಯಿಂದ ಈ ತೆರನಾಗಿ ವ್ಯತ್ಯಾಸದಿಂದ ಬರೆಯಲು ಕಾರಣ ಎಂದು ಹೇಳಬಹುದು.

ಅಧ್ಯಾಯ ೪

ಗುಣಿತಾಕ್ಷರ ಮತ್ತು ಒತ್ತಕ್ಷರಗಳು

ಅಧ್ಯಾಯ ೪

ಗುಣಿತಾಕ್ಷರ ಮತ್ತು ಒತ್ತಕ್ಷರಗಳು

ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಓದುವುದು ಮತ್ತು ಬರೆಯುವುದು

ಗುಣಿತಾಕ್ಷರಗಳನ್ನು ಉರ್ದು ಭಾಷಿಕರ ಮಕ್ಕಳು ಓದು ಮತ್ತು ಬರಹ ಎರಡೂ ನೆಲೆಗಳಲ್ಲೂ ವ್ಯತ್ಯಾಸ ಮಾಡಿ ಬಳಸುವರು. ಅಂತಹ ರಚನೆಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಅಂದರೆ ಇಲ್ಲಿ ಓದುವುದನ್ನು ಮತ್ತು ಬರೆಯುವುದನ್ನು ಪ್ರತ್ಯೇಕವಾಗಿ ವಿಶ್ಲೇಷಣೆ ಮಾಡದೆ ಒಟ್ಟಿಗೆ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಉರ್ದುಭಾಷಿಕರ ಮಕ್ಕಳು ಗುಣಿತಾಕ್ಷರಗಳನ್ನು ಓದುವಾಗ ಮತ್ತು ಬರೆಯುವಾಗ ವರ್ಗೀಯ ಮತ್ತು ಅವರ್ಗೀಯ ಎಂಬ ಎರಡು ಗುಣಿತಾಕ್ಷರ ನೆಲೆಗಳಲ್ಲಿ ವ್ಯತ್ಯಾಸ ಮಾಡುತ್ತಾರೆ. ನಿದರ್ಶನಕ್ಕಾಗಿ ಕೆಲವು ಗುಣಿತಾಕ್ಷರಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿದೆ.

ಸ್ವರದ ಸಹಾಯದಿಂದ ಉಚ್ಚಾರವಾಗುವ ಅಕ್ಷರಗಳನ್ನು ಗುಣಿತಾಕ್ಷರ ಎನ್ನುವರು. ವ್ಯಂಜನಕ್ಕೆ ಸ್ವರ ಸೇರಿ ಉಚ್ಚಾರವಾಗುವ ಅಕ್ಷರ ವ್ಯಂಜನಾಕ್ಷರ. ಇವುಗಳೇ ಗುಣಿತಾಕ್ಷರಗಳು. ಪ್ರಸ್ತುತ ಗುಣಿತಾಕ್ಷರಗಳ ರಚನೆಯನ್ನು ಪಠ್ಯಪುಸ್ತಕದಲ್ಲಿ ಬಳಕೆಯಲ್ಲಿರುವ ರಚನೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದೆ. ಉರ್ದು ಭಾಷಿಕರ ಮಕ್ಕಳು ಗುಣಿತಾಕ್ಷರಗಳನ್ನು ಓದುವಾಗ ಮತ್ತು ಬರೆಯುವಾಗ ವ್ಯತ್ಯಾಸ ಮಾಡುವುದಕ್ಕೆ ಕಾರಣಗಳನ್ನು ಈ ರೀತಿ ಊಹಿಸಬಹುದು.

೧. ಎರಡು ಗುಣಿತಾಕ್ಷರಗಳ ನಡುವೆ ಇರುವ ರಚನೆಯಲ್ಲಿನ ಅಲ್ಪ ವ್ಯತ್ಯಾಸ ಮತ್ತು ಉಚ್ಚಾರಣೆಯ ಸಾಮ್ಯತೆ

೨. ಬೋಧಕರು ಗುಣಿತಾಕ್ಷರಗಳ ಉಚ್ಚಾರಣೆಯನ್ನು ಸರಿಯಾಗಿ ಬೋಧಿಸದಿರುವುದು.

೩. ಗುಣಿತಾಕ್ಷರಕ್ಕೂ ಮತ್ತು ಮೂಲಕ್ಷರಕ್ಕೂ ವ್ಯತ್ಯಾಸವನ್ನು ಸ್ಪಷ್ಟ ಉಚ್ಚಾರಣೆ ಮಾಡಿ ಬೋಧಿಸದೆ ಇರುವುದು.

೪. ಉರ್ದು ಭಾಷಿಕರ ಮನೆಮಾತಿನ ಪ್ರಭಾವ

೪.೧ ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಗುಣಿತಾಕ್ಷರ ಧ್ವನಿಗಳಾದ 'ಕಾ ಕೆ ಕೈ' ಬದಲು 'ಖಾ ಖೆ ಖೇ ಖೈ' ಧ್ವನಿಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಕಾಕಂಬಿ	ಖಾಕಬಿ	ಚಿಲ್ಲತಯಾರಿಕೆಗೆ ಬಳಸುವ ಕಬ್ಬಿನ ಪಾಕ
ಕೆಚ್ಚೆದೆ	ಖೆಚೆದೆ	ಗಟ್ಟಿಯಾದ ಎದೆ, ಎದೆಗಾರಿಕೆ
ಕೈಕಸಬು	ಖೈಖಸಬು	ಕೈಯಿಂದ ಮಾಡುವಕಾರ್ಯ
ಕೈಕೆಳಗು	ಖೈಖೆಳಗೆ	ಅಧೀನ, ವಶ

೪.೨ ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಘೀ' ಧ್ವನಿಗೆ ಬದಲಾಗಿ 'ಗೀ' ಧ್ವನಿಯನ್ನು ಬರೆಯುತ್ತಾರೆ ಮತ್ತು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ನೇ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಘೀಳಿಡು	ಗಿಳಿಡು	ಕಿರಿಚು, ಅರಚು

೪.೩ ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಠೀ ಠೇ' ಧ್ವನಿ ಬದಲು ಗುಣಿತಾಕ್ಷರ 'ಟೀ ಟೇ' ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ತೆರನಾದ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಠೀವಿ	ಟಿವಿ	ಬೆಡಗು, ಬಿನ್ನಾಣ, ಗತ್ತು
ಠೇವಣಿ	ಟಿವಣಿ	ಠೇವಣಿ

೪.೪ ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಛಿ ಛೂ' ಧ್ವನಿಗಳ ಬದಲಾಗಿ ಗುಣಿತಾಕ್ಷರ 'ಚಿ ಚೂ' ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಛಿಮಾರಿ	ಚಿಮಾರಿ	ಧಿಕ್ಕಾರ, ತಿರಸ್ಕರ
ಛೂಮಂತ್ರ	ಚೂಮಂತ್ರ	ಗ್ರಹಗಳ ಕಾಟ ತಪ್ಪಿಸುವ ಮಂತ್ರ

೪.೫ ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಚೀ ಚು ಚೆ' ಧ್ವನಿಗಳ ಬದಲು ಗುಣಿತಾಕ್ಷರ 'ಸೀ ಸು ಸೆ' ಧ್ವನಿಗಳನ್ನು ಬರೆಯುತ್ತಾರೆ ಮತ್ತು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಚೀರು	ಸಿರು	ಕೂಗು
ಚುರುಕು	ಸುರುಕು	ತೀಕ್ಷ್ಣವಾದುದ್ದು
ಚೆಂಬು	ಸೆಬು	ಚಂಬು
ಚೌಡಂಗಿ	ಸೌಡಗಿ	ಒಂದು ಬಗೆಯ ಸಸ್ಯ

೪.೬ ಪದಮಧ್ಯ ಪರಿಸರದಲ್ಲಿ ಗುಣಿತಾಕ್ಷರ 'ಗಿ' ಧ್ವನಿಯ ಬದಲು ಗುಣಿತಾಕ್ಷರ 'ಕಿ' ಧ್ವನಿಯನ್ನು ಬರೆಯುತ್ತಾರೆ ಮತ್ತು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗಿಡ	ಕಿಡ	ಸಣ್ಣ ಮರ

೪.೭ ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಹ ಹಾ ಹೈ' ಧ್ವನಿಗಳ ಬದಲಾಗಿ ನಿಮ್ನ ಕೇಂದ್ರ ಮಧ್ಯ ಅಗೋಳ ಹ್ರಸ್ವಸ್ವರ 'ಅ, ಆ, ಅಯ್' ಧ್ವನಿಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾಹರಣೆ

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಹಕ್ಕುದಾರಿ	ಅಕುದಾರಿ	ಒಡೆತನ, ಭಾದ್ಯತೆ
ಹಾಡಿ	ಆಡಿ	ಹಳ್ಳಿ, ಪಾಡಿ, ಗ್ರಾಮ
ಹೈದ	ಅಯ್‌ದ	ಹುಡುಗ, ಬಾಲಕ

೪.೮ ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಗುಣಿತಾಕ್ಷರ 'ಪು ಪೇ ಪೋ ಪೌ' ಧ್ವನಿಗಳ ಬದಲು ಗುಣಿತಾಕ್ಷರ 'ಫು ಫೇ ಫೋ ಫೌ' ಧ್ವನಿಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಪುಗಸಟ್ಟೆ	ಫುಗಸಟೆ	ಉಚಿತವಾಗಿ, ಬಿಟ್ಟಿಯಾಗಿ
ಪೇಟ	ಫೇಟ	ರುಮಾಲು, ಮುಂಡಾಸು
ಪೋಣಿಸು	ಫೋಣಿಸು	ಹೊಂದಿಸು, ಜೊಡಿಸು
ಪೌಜು	ಫವ್‌ಜು	ದಂಡು, ಸೈನ್ಯ ಪಡೆ

೪.೯ ಪದಮಧ್ಯ ಪರಿಸರದಲ್ಲಿ ಗುಣಿತಾಕ್ಷರ 'ಡ ಡಾ ಡಿ ಡೋ' ಧ್ವನಿಗಳ ಬದಲು ಗುಣಿತಾಕ್ಷರ 'ದ ದಾ ದಿ ದೋ' ಧ್ವನಿಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಡಕಾಯಿತ	ದಕಾಯತ	ಕೊಳ್ಳೆ ಹೊಡೆಯುವವ ದರೋಡೆಕೋರ
ಡಾಕ್ಟರ್	ದಾಕ್ಟರು	ವೈದ್ಯ
ಡಾಬು	ದಾಬು	ನಡುಪಟ್ಟಿ
ಡಿಪೊ	ದಿಪೊ	ಉಗ್ರಾಣ
ಡೋಂಗಿ	ದೋಂಗಿ	ಮೋಸ, ವಂಚನೆ

೪.೧೦ ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ಗುಣಿತಾಕ್ಷರ 'ಥೇ' ಧ್ವನಿಯ ಬದಲು ಗುಣಿತಾಕ್ಷರ 'ತೇ' ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ ನೇ ತರಗತಿ ಮಕ್ಕಳು ಮಾತ್ರ ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಥೇಟ್	ತೇಟ್	ತದ್ರೂಪವಾದ, ವ್ಯತ್ಯಾಸವಿಲ್ಲದ

೪.೧೧ ಪದಾದಿ ಪರಿಸರದಲ್ಲಿ ಗುಣಿತಾಕ್ಷರ ಧ್ವನಿ 'ಖಾ ಖು' ಧ್ವನಿಗಳ ಬದಲು ಗುಣಿತಾಕ್ಷರ ಧ್ವನಿ 'ಕಾ ಕು' ಧ್ವನಿಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಖಾಕಬಿ	ಕಾಕಂಬಿ	ಚಿಲ್ಲತಯಾರಿಕೆಗೆ ಬಳಸುವ ಕಬ್ಬಿನ ಪಾಕ
ಖುಕೆ	ಕುಕ್ಕೆ	ಬಿದಿರಿನಿಂದ ಹೆಣೆದ ಬುಟ್ಟಿ

೪.೧೨ ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಶಾ ಶಿ ಶೀ ಶೆ ಶೊ' ಧ್ವನಿಯ ಬದಲು ಗುಣಿತಾಕ್ಷರ 'ಸಾ ಸೀ ಸೆ ಸೊ' ಧ್ವನಿಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಶಾಂತಿ	ಸಾಂತಿ	ಮೌನ, ನೀರವತೆ
ಶಾಖ	ಸಾಖ	ಕೊಂಬೆ, ಗೆಲ್ಲು, ಕಾವು, ಬಿಸುಪು
ಶಿಕ್ಷಕ	ಸಿಕ್ಸಕ	ಉಪಾಧ್ಯಾಯ, ಗುರು
ಶಿಕ್ಷೆ	ಸಿಕ್ಸೆ	ಕಲಿಕೆ, ವಿಧ್ಯಾಭ್ಯಾಸ
ಶೀತ	ಸೀತ	ಚಳಿ, ಥಂಡಿ
ಶೀರ್ಷಿಕೆ	ಸೀರ್ಸಿಕೆ	ತಲೆಬರಹ, ಶಿರೋನಾಮೆ
ಶೂರ	ಸೂರ	ಕಲಿ, ವೀರ

ಶೇಕಡ	ಸೇಕಡ	ನೂರಕ್ಕೆ ಪ್ರತಿ ಶತ ಇಷ್ಟು
ಶೇಷ	ಸೇಸ	ಉಳಿದುದು ಮಿಕ್ಕಿದುದು
ಶೋಧ	ಸೋಧ	ತನಿಖೆ, ತಪಾಸಣೆ
ಶೋಧಿಸು	ಸೋಧಿಸು	ಅಂದವಾಗು, ಚೆಲುವಾಗು

೪.೧೩ ಪದಾದಿ ಪರಿಸರದಲ್ಲಿ ಗುಣಿತಾಕ್ಷರ 'ಷ ಷಾ ಷಿ' ಧ್ವನಿಗಳ ಬದಲು ಗುಣಿತಾಕ್ಷರ 'ಸ ಸಾ ಸಿ' ಧ್ವನಿಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಷಟ್ಪದಿ	ಸಟ್ಪದಿ	ಆರುಪಾದಗಳುಳ್ಳ ಒಂದು ಪದ್ಯ
ಷರತ್ತು	ಸರತ್ತು	ಕರಾರು, ನಿಯಮ
ಷಾಮೀಲು	ಸಾಮೀಲು	ಒತ್ತಾಸೆ, ನೆರವು, ಜೊತೆ
ಷಿಕಾರಿ	ಸಿಕಾರಿ	ಬೇಟೆ

೫. ಸಂಯುಕ್ತಾಕ್ಷರಗಳು (ದ್ವಿತ್ವಕ್ಷರಗಳು)

ಎರಡು ಅಥವಾ ಮೂರು ಧ್ವನಿಗಳನ್ನು ಒಟ್ಟಾಗಿ ಉಚ್ಚರಿಸುವುದು ಮತ್ತು ಬರೆಯುವುದನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರವೆನ್ನುತ್ತೇವೆ. ಇಲ್ಲಿ ಒಂದೇ ಜಾತಿಯ ಎರಡು ವ್ಯಂಜನಗಳು ಸೇರಿ ಆಗುವ ಅಕ್ಷರವು (ಧ್ವನಿ) ಸಜಾತಿಯ ಸಂಯುಕ್ತಾಕ್ಷರವೆನಿಸುವುದು. ಇದಕ್ಕೆ ದ್ವಿತ್ವವೆಂದೂ ಹೆಸರು. ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರಕ್ಕೆ ವಿಜಾತೀಯ ಸಂಯುಕ್ತಾಕ್ಷರ ಎನ್ನುತ್ತೇವೆ. ಆದರೆ ಒತ್ತಕ್ಷರಗಳನ್ನು ಅವುಗಳ ರೂಪ ಗಾತ್ರ ಭಿನ್ನರೂಪವನ್ನು ಅನುಸರಿಸಿ ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು.

ಪದಾದಿ ಪರಿಸರದಲ್ಲಿ ಸಂಘರ್ಷ ಮತ್ತು ಸಂಘರ್ಷೇತರ ಸಂಯುಕ್ತ ವ್ಯಂಜನಗಳ ಹಿಂದೆ (ವಿಶೇಷವಾಗಿ "ಸ್" ವ್ಯಂಜನದ ಹಿಂದೆ) 'ಇ' ಸ್ವರ ಸೇರಿಸಿ ವ್ಯತ್ಯಾಸ ಮಾಡಿ ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಸ್ಟೂಲು	ಇಸ್ಟೂಲ್	ಸ್ಟೂಲ್
ಸ್ಕೂಲು	ಇಸ್ಕೂಲು	ಶಾಲೆ
ಸ್ಟೋರಿ	ಇಸ್ಟೋರಿ	ಕಥೆ
ಸ್ಮಶಾನ	ಇಸ್ಮಶಾನ	ಹೆಣ ಊಳುವ ಸ್ಥಳ
ಸ್ನಾನ	ಇಸ್ನಾನ	ಮೈ ತೊಳೆಯುವದು
ಸ್ಪೆಷಲ್	ಇಸ್ಪೆಸಲ್	ವಿಶೇಷ
ಸ್ಕ್ರೂ	ಇಸ್ಕ್ರೂ	ತಿರುವಿನ ಮೊಳೆ
ಸ್ಟ್ಯಾಂಪ್	ಇಸ್ಟ್ಯಾಂಪು	ಅಂಚೆ ಚೀಟಿ
ಸ್ಕ್ರೀನ್	ಇಸ್ಕೀನು	ಪರಡಿ
ಸ್ಟಾವ್	ಇಸ್ಟವು	ಸೀಮೆ ಎಣ್ಣೆ ಒಲೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ವ್ಯತ್ಯಾಸಕ್ಕೆ ಕಾರಣಗಳು ಇಲ್ಲದೇ ಇಲ್ಲ. ಈ ಧ್ವನಿ ವ್ಯತ್ಯಾಸಕ್ಕೆ ಪ್ರಮುಖ ಕಾರಣ ಅವರ ಮಾತೃಭಾಷೆ ಉರ್ದುವಿನಲ್ಲಿ ಸಂಘರ್ಷ ಮತ್ತು ಸಂಘರ್ಷೇತರ ಸಂಯುಕ್ತ ವ್ಯಂಜನ ದ್ವಿತ್ವಗಳು ಪದಾದಿ ಪರಿಸರದಲ್ಲಿ ಕಂಡುಬರುವುದಿಲ್ಲ. ಆದರೆ ಪರ್ಶಿಯನ್ ಭಾಷೆಯಿಂದ ಉರ್ದು ಭಾಷೆಗೆ ಹಲವಾರು ಶಬ್ದಗಳು ಬಂದಿವೆ. ಪರ್ಶಿಯನ್ ಭಾಷೆಯಲ್ಲಿ ಸಂಘರ್ಷ ಮತ್ತು ಸಂಘರ್ಷೇತರ ಸಂಯುಕ್ತ ವ್ಯಂಜನ ದ್ವಿತ್ವ ಬರೆಯುವಾಗ "ಇ" ಧ್ವನಿ ಸೇರಿಸಿ ಬರೆಯುವರು. ಇದಕ್ಕೆ ಕಾರಣ ಪರ್ಶಿಯನ್ ಭಾಷೆಯ ಪ್ರಭಾವದಿಂದಲೇ ಉದ್ದೇಶಪೂರ್ವಕವಾಗಿ ಕನ್ನಡದಲ್ಲಿಯೂ "ಇ" ಧ್ವನಿ ಉಚ್ಚರಿಸಬೇಕೆಂಬ ಮನೋಭಾವನೆಯಿಂದ ಈ ರೀತಿ ವ್ಯತ್ಯಾಸದಿಂದ ಉಚ್ಚರಿಸುತ್ತಾರೆ.

ದ್ವಿತ್ವಾಕ್ಷರಗಳ ರಚನೆಯ ಆಧಾರದಿಂದ ಮೂರು ತೆರನಾಗಿ ವರ್ಗೀಕರಿಸಬಹುದು.

೧. ನೇರ ಮೂಲ ಅಕ್ಷರಗಳೆ ಒತ್ತಕ್ಷರ (ಸಣ್ಣ ಗಾತ್ರದ ಪೂರ್ಣರೂಪ)
ಖ, ಟ, ಣ, ಜ, ಬ, ವ

೨. ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರ (ಅಕ್ಷರದ ತಲೆಕಟ್ಟಿಲ್ಲದ ರೂಪ)
ಕಿ, ಗಿ, ಚಿ, ಠಿ, ಡಿ, ಢಿ, ಫಿ, ಛಿ, ಥಿ, ದಿ, ಧಿ

೩. ಭಿನ್ನ ರೂಪಗಳು ((ಮ (್ಮ), ನ (್ನ), ತ (್ತ) ರ (್ರ), ಲ (್ಲ), ಯ (್ಯ) ಭಿನ್ನರೂಪದ ಒತ್ತಕ್ಷರಗಳು.

ಈ ಒತ್ತಕ್ಷರಗಳನ್ನು ಉರ್ದು ಭಾಷಿಕರ ಮಕ್ಕಳು ಓದುವಾಗ ಮತ್ತು ಬರೆಯುವಾಗ ಯಾವ ತೆರನಾಗಿ ವ್ಯತ್ಯಾಸಗಳನ್ನು ಮಾಡುತ್ತಾರೆ ಎಂಬುದು ಗಮನಿಸುವಂತಹ ಅಂಶ.

೧. ನೇರ ಮೂಲ ಅಕ್ಷರಗಳ ಒತ್ತಕ್ಷರ (ಸಣ್ಣ ಗಾತ್ರದ ಪೂರ್ಣರೂಪ)
ಖ, ಟ, ಣ, ಜ, ಬ, ವ

೪.೧೪ ಜ್ಜ > ಜ

ಪದಮಧ್ಯ ಪರಿಸರದಲ್ಲಿ "ಜ್ಜ" ದ್ವಿತ್ವ ಧ್ವನಿ ಬದಲು "ಜ" ತಾಲವ್ಯ ಘೋಷ ಅನುಘರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಜ್ಜ	ಅಜ	ತಂದೆಯ ತಂದೆ
ಗೆಜ್ಜೆ	ಗೆಜೆ	ಕಿರುಗುಂಟೆ
ಗಜ್ಜರಿ	ಗಜರಿ	ಒಂದು ಬಗೆಯ ತರಕಾರಿ ಗಡ್ಡೆ
ಗಜ್ಜು	ಗಜು	ಸರದಿ

೪.೧೫ ಜ್ಜ > ಝ

ಪದಮಧ್ಯ ಪರಿಸರದಲ್ಲಿ "ಜ್ಜ" ದ್ವಿತ್ವ ಧ್ವನಿ ಬದಲು "ಝ" ಮೂರ್ಧನ್ಯ ಅಘೋರ್ಷ ಸಂಘರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಕಜ್ಜಿ	ಕಜಿ	ಒಂದು ಬಗೆಯ ಚರ್ಮರೋಗ
ಗೊಜ್ಜು	ಗೊಝು	ಶಿಥಿಲವಾಗಿರುವುದು
ಗಜ್ಜುಗ	ಗಝುಗ	ಒಂದು ಬಗೆಯ ಮುಳ್ಳು ಪೊದೆ

೪.೧೬ ಟ್ಟ > ಟ

ಪದಮಧ್ಯ ಪರಿಸರದಲ್ಲಿ "ಟ್ಟ" ದ್ವಿತ್ವ ಧ್ವನಿ ಬದಲು "ಟ" ಮೂರ್ಧನ್ಯ ಅಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಟ್ಟಡವಿ	ಅಟಡವಿ	ದಟ್ಟವಾದ ಕಾಡು
ಇಟ್ಟಿಗೆ	ಇಟಿಗೆ	ಇಟ್ಟಿಗಾ
ಕಟ್ಟು	ಕಟು	ಬಂದಿಸು
ಗಟ್ಟಿ	ಗಟಿ	ಹೆಪ್ಪು ಗಟ್ಟಿದುದ್ದು

೪.೧೭ ಟ್ಟ > ಠ

ಪದಮಧ್ಯ ಪರಿಸರದಲ್ಲಿ "ಟ್ಟ" ದ್ವಿತ್ವ ಧ್ವನಿ ಬದಲು "ಠ" ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಕೆಟ್ಟ	ಕೆಠ	ಕೆಡಕು ಮಾಡುವುದು
ಕಟ್ಟಾಯ	ಕಠಾಯ	ಬಿಕ್ಕಟಿನ ಸಮಯ
ಚಟ್ಟ	ಚಠ	ಸತ್ತಾಗ ಕಟ್ಟುವ ಸಲಗೆ
ತಟ್ಟು	ತಠು	ಬಡಿ
ತಟ್ಟನೆ	ತಠನೆ	ಬೇಗನೆ

೪.೧೮ ವ್ವ > ವ

ಪದಮಧ್ಯ ಪರಿಸರದಲ್ಲಿ 'ವ್ವ' ದ್ವಿತ್ವ ಧ್ವನಿ ಬದಲು 'ವ' ಅರ್ಧಸ್ವರ ಅಘೋಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅವ್ವ	ಅವ	ತಾಯಿ
ದೆವ್ವ	ದೆವ	ಭೂತ

೪.೧೯ ಣ್ಣ > ನ

ಪದಮಧ್ಯ ಪರಿಸರದಲ್ಲಿ "ಣ್ಣ" ದ್ವಿತ್ವ ಧ್ವನಿ ಬದಲು "ನ" ದಂತ್ಯ ಅನುನಾಸಿಕ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಣ್ಣ	ಅನ್ನ	ಹಿರಿಯ ಸಹೋದರ
ತಣ್ಣನೆ	ತನ್ನನೆ	ತಂಪಾಗಿ
ಅಣ್ಣಲೆ	ಅನಲೆ	ದೊಡ್ಡ ಮನುಷ್ಯ
ತಣ್ಣಗೆ	ತನಗೆ	ಉಲ್ಲಾಸಕರವಾದ ನಗೆ
ತಣ್ಣಗಾಗು	ತನಗಾಗು	ತಂಪಾಗು

೪.೨೦ ಬ್ಬ > ಬ

ಪದಮಧ್ಯ ಪರಿಸರದಲ್ಲಿ "ಬ್ಬ" ದ್ವಿತ್ವ ಧ್ವನಿ ಬದಲು "ಬ" ದ್ವಯೋಷ್ಠ್ಯ ಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗಬ್ಬ	ಗಬ	ಗರ್ಭ
ತಬ್ಬರಿಸು	ತಬರಿಸು	ಮುಗ್ಗರಿಸು
ತಬ್ಬಲಿ	ತಬಲಿ	ಅನಾಥ ಶಿಸು
ಗುಬ್ಬಿ	ಗುಬಿ	ಉಬ್ಬಿಕೊಂಡಿರುವುದು
ಗೊಬ್ಬರ	ಗೊಬರ	ಜಾನುವಾರುಗಳ ಸಗಣಿ

೪.೨೧ ಬ್ಬ > ಭ

ಪದಮಧ್ಯ ಪರಿಸರದಲ್ಲಿ "ಬ್ಬ" ದ್ವಿತ್ವ ಧ್ವನಿ ಬದಲು "ಭ" ದ್ವಯೋಷ್ಠ್ಯ ಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗುಬ್ಬಿಗೂಡು	ಗುಭಿಗೂಡು	ಗುಬ್ಬಚ್ಚಿಯ ಗೂಡು
ಗೊಬ್ಬೆ	ಗೊಭೆ	ಗಡಿಗೆ
ಕಬ್ಬಿ	ಕಭಿ	ಕಡಿವಾಣ

೨. ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರ (ಅಕ್ಷರದ ತಲೆ ಕಟ್ಟಿಲ್ಲದ ರೂಪ)
ಕಿ, ಗಿ, ಚಿ, ಠಿ, ಡಿ, ಢಿ, ಫಿ, ಭಿ, ಥಿ, ದಿ, ಧಿ

೪.೨೨ ಕ್ಕ > ಕ

ಪದಮಧ್ಯ ಪರಿಸರದಲ್ಲಿ "ಕ್ಕ" ಸಂಯುಕ್ತಾಕ್ಷರ ಧ್ವನಿ ಬದಲು "ಕ" ಕಂಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ೮, ೯ನೇ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಕ್ಕ	ಅಕ	ಹಿರಿಯ ಸಹೋದರಿ
ಕಕ್ಕಡ	ಕಕಡ	ದೀವಟಿಗೆ
ಕಕ್ಕರ	ಕಕರ	ಮಾಸಲು

೪.೨೩ ಕ್ಕ > ಖ

ಪದಮಧ್ಯ ಪರಿಸರದಲ್ಲಿ "ಕ್ಕ" ಸಂಯುಕ್ತಾಕ್ಷರ ವ್ಯಂಜನ ಧ್ವನಿ ಬದಲು "ಖ" ಕಂಠ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಚಕ್ಕಡಿ	ಚಖಡಿ	ಎತ್ತಿನ ಬಂಡಿ

೪.೨೪ ಗ್ಗ > ಗ

ಪದಮಧ್ಯ ಪರಿಸರದಲ್ಲಿ "ಗ್ಗ" ಸಂಯುಕ್ತಾಕ್ಷರ ಧ್ವನಿ ಬದಲು "ಗ" ಕಂಠ್ಯ ಅಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ೮ ನೇ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಗ್ಗ	ಅಗ	ಕಡಿಮೆ ಬೆಲೆ
ಒಗ್ಗಟ್ಟು	ಒಗಟು	ಒಗ್ಗಟ್ಟು
ಗಗ್ಗರ	ಗಗರ	ಒಂದು ಬಗೆಯ ಗೆಜ್ಜೆ
ಅಗ್ಗಿ	ಅಗಿ	ಬೆಂಕಿ

೪.೨೫ ಗ್ಗ > ಘ

ಪದಮಧ್ಯ ಪರಿಸರದಲ್ಲಿ "ಗ್ಗ" ಸಂಯುಕ್ತಾಕ್ಷರ ಧ್ವನಿ ಬದಲು "ಘ" ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಗ್ಗಡಲ್	ಅಘಡಲ್	ಆಳವಾದ ಸಮುದ್ರ
ಅಗ್ಗಲ	ಅಘಲ್	ಶ್ರೇಷ್ಠ
ಉಗ್ಗ	ಉಘ	ದಡ್ಡ

೪.೨೬ ಚ್ಚ > ಚ

ಪದಮಧ್ಯ ಪರಿಸರದಲ್ಲಿ "ಚ್ಚ" ದ್ವಿತ್ವ ಧ್ವನಿ ಬದಲು "ಚ" ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಚ್ಚರ	ಅಚರ	ದೇವತೆ
ಕಚ್ಚು	ಕಚು	ಹಲ್ಲಿನಿಂದ ಹಿಡಿ
ನಿಚ್ಚಲ	ನಿಚಲ	ಅಲ್ಲುಗಾಡದಂತ ಸ್ಥಿತಿ
ಉಚ್ಚರಿಸು	ಉಚರಿಸು	ನುಡಿ

೪.೨೭ ಚ್ಛ > ಚ

ಪದಮಧ್ಯ ಪರಿಸರದಲ್ಲಿ "ಚ್ಛ" ದ್ವಿತ್ವ ಧ್ವನಿ ಬದಲು "ಚ" ಅಲಿಜಿಹ್ವೀಯ ಘೋಷ ಸ್ಪರ್ಶ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಇಚ್ಛಿತ	ಇಚಿತ	ಬಯಕೆ
ಪಚ್ಛೆ	ಪಚೆ	ಹಸಿರು ಬಣ್ಣ ಒಡವೆ
ಕಚ್ಛ	ಕಚ	ದೊತ್ರ ಅಥವಾ ಸಿರಿಯ ಕಚ್ಚೆ
ಕಚ್ಛಡ	ಕಚಡ	ಕೊಳೆ
ಇಚ್ಛಿಸು	ಇಚಿಸು	ಆಸೆ ಪಡು

೪.೨೮ ಠ > ಟ

ಪದಮಧ್ಯ ಪರಿಸರದಲ್ಲಿ "ಠ" ಒತ್ತಕ್ಷರ ಧ್ವನಿ ಬದಲು "ಟ" ಒತ್ತಕ್ಷರ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗೋಷ್ಠಿ	ಗೊಸ್ಟಿ	ಗುಂಪು
ಕೋಷ್ಠ	ಕೊಸ್ಟ	ಕುಷ್ಪ ಕಲೆ
ಕೋಷ್ಠಗಾರ	ಕೊಸ್ಟಗಾರ	ಕಣಜ
ಷಷ್ಠಿ	ಸಸ್ಟಿ	ಆರನೆ

೪.೨೯ ಡ್ಡ > ಡ

ಪದಮಧ್ಯ ಪರಿಸರದಲ್ಲಿ "ಡ್ಡ" ದ್ವಿತ್ವ ಧ್ವನಿ ಬದಲು "ಡ" ಮೂರ್ಧನ್ಯ ಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಡ್ಡ	ಅಡ	ಅಡ್ಡ
ಅಡ್ಡದಾರಿ	ಅಡದಾರಿ	ಮುಖ್ಯವಾಗಿರುವ ದಾರಿಗೆ ಅಡ್ಡದಾರಿ
ಕಡ್ಡಿ	ಕಡಿ	ಸಣ್ಣ ಶಿಗರು
ಗೊಡ್ಡಿ	ಗೊಡಿ	ಮಕ್ಕಳಿಲ್ಲದವಳು

೪.೩೦ ಡ್ಡ > ಢ

ಪದಮಧ್ಯ ಪರಿಸರದಲ್ಲಿ "ಡ್ಡ" ದ್ವಿತ್ವ ಧ್ವನಿ ಬದಲು "ಢ" ಮೂರ್ಧನ್ಯ ಅಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗಡ್ಡಿ	ಗಢಿ	ಹತ್ತು ದಸ್ತುಗಳ ಕಾಗದದ ಕಟ್ಟು
ಅಡ್ಡ	ಅಢ	ಪಕ್ಕದಿಂದ ಪಕ್ಕಕೆ ಸಾಗಿಸುವುದು
ಕಡ್ಡ	ಕಢ	ದಿಟ್ಟತನ
ದುಡ್ಡು	ದುಢು	ಒಂದು ತಾಮ್ರದ ನಾಣ್ಯ
ಅಡ್ಡಿ	ಅಢಿ	ತೊಂದರೆ

೪.೩೧ ತ್ತ > ತ

ಪದಮಧ್ಯ ಪರಿಸರದಲ್ಲಿ "ತ್ತ" ದ್ವಿತ್ವ ಧ್ವನಿ ಬದಲು "ತ" ದಂತ್ಯ ಅಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅತ್ತ	ಅತ	ಆ ಕಡೆ
ಕತ್ತರೆ	ಕತರೆ	ಒಂದು ಬಗೆಯ ವಾದ್ಯ
ಚಿತ್ತ	ಚಿತ	ಮನಸ್ಸು

೪.೩೨ ತ್ತ > ಥ

ಪದಮಧ್ಯ ಪರಿಸರದಲ್ಲಿ "ತ್ತ" ದ್ವಿತ್ವ ಧ್ವನಿ ಬದಲು "ಥ" ವರ್ತ್ಸ್ಯ ಅಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಕತ್ತೆ	ಕಥೆ	ಕತ್ತೆ
ಗುತ್ತಿಗೆ	ಗುಥಿಗೆ	ಸಂಪೂರ್ಣ ಕೆಲಸ ವಹಿಸುವುದು

೪.೩೩ ದ್ದ > ದ

ಪದಮಧ್ಯ ಪರಿಸರದಲ್ಲಿ "ದ್ದ" ದ್ವಿತ್ವ ಧ್ವನಿ ಬದಲು "ದ" ದಂತ್ಯ ಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅದ್ದಿಸು	ಅದಿಸು	ಮುಳುಗಿಸು
ಇದ್ದಲಿ	ಇದಲಿ	ಇಜ್ಜಲು
ಉದ್ದ	ಉದ	ಎತ್ತರ

೪.೩೪ ದ್ದ > ದ

ಪದಮಧ್ಯ ಪರಿಸರದಲ್ಲಿ "ದ್ದ" ದ್ವಿತ್ವ ಧ್ವನಿ ಬದಲು "ಧ" ದಂತ್ಯ ಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗುದ್ದಲಿ	ಗುದಲಿ	ಮುಟ್ಟು
ಅದ್ದೆ	ಅದೆ	ಬದಲಿ
ಗುದ್ದಿ	ಗುದಿ	ದುಡಿ
ಅದ್ದುಗೆ	ಅದುಗೆ	ಮುಳುಗುವುದು
ಅದ್ದಗಣಿ	ಅದಗಣಿ	ಅಡಿಗಲ್ಲು

೪.೩೫ ದ್ಧ > ಧ

ಪದಮಧ್ಯ ಪರಿಸರದಲ್ಲಿ "ದ್ಧ" ದ್ವಿತ್ವ ಧ್ವನಿ ಬದಲು "ಧ" ದಂತ್ಯ ಅಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಉದ್ಧಾರ	ಉಧಾರ	ಮೇಲಕ್ಕೆ ಎತ್ತುವುದು
ಗದ್ಧಲ	ಗಧಲ	ಗೊಂದಲ
ಗದ್ಧರಿಸು	ಗಧರಿಸು	ಗರ್ಜಿಸು
ತದ್ಧಿತ ಪ್ರತ್ಯಯ	ತಧಿತ	ದಾತುವಲ್ಲದ ಪ್ರಕೃತಿಗಳಿಗೆ ಹತ್ತುವ

೪.೩೬ ಪ್ಪ > ಪ

ಪದಮಧ್ಯ ಪರಿಸರದಲ್ಲಿ "ಪ್ಪ" ದ್ವಿತ್ವ ಧ್ವನಿ ಬದಲು "ಪ" ದ್ವಯೋಷ್ಠ್ಯ ಅಘೋಷ ಸ್ಪರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಪ್ಪಟ	ಅಪಟ	ಶುದ್ಧವಾದದ್ದು
ಅಪ್ಪಣೆ	ಅಪಣೆ	ಆಜ್ಞೆ
ಅಪ್ಪು	ಅಪು	ಆಲಂಗಿಸು
ಚಪ್ಪಲಿ	ಚಪಲಿ	ಮೆಟ್ಟು
ಚಪ್ಪರ	ಚಪರ	ಚಾವಣೆ

೪.೩೭ ಪ್ಪ > ಫ

ಪದಮಧ್ಯ ಪರಿಸರದಲ್ಲಿ "ಪ್ಪ" ದ್ವಿತ್ವ ಧ್ವನಿ ಬದಲು "ಫ" ದಂತೋಷ್ಠ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅಪ್ಪಿಸು	ಅಫಿಸು	ಅಪ್ಪುವಂತೆ ಮಾಡು
ಗುಪ್ಪೆ	ಗುಫೆ	ಕುಪ್ಪೆ, ರಾಶಿ
ಚಪ್ಪಡಿ	ಚಫಡಿ	ಚಪ್ಪಟೆಯಾದ ಕಲ್ಲು
ಚಪ್ಪಳ	ಚಫಳ	ಚಪ್ಪಾಳೆ
ಚಿಪ್ಪಡಿ	ಚಿಫಡಿ	ಚೂರು

೩. ಭಿನ್ನ ರೂಪಗಳು ((ಮ (್ಮ), ನ (್ನ), ತ (್ತ) ರ (್ರ), ಲ (್ಲ), ಯ (್ಯ) ಭಿನ್ನರೂಪದ ಒತ್ತಕ್ಷರಗಳು.

೪.೩೮ ನ್ನ > ನ

ಪದಮಧ್ಯ ಪರಿಸರದಲ್ಲಿ "ನ್ನ" ದ್ವಿತ್ವ ಧ್ವನಿ ಬದಲು "ನ" ದಂತ್ಯ ಅನುನಾಸಿಕ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಅನ್ನ	ಅನ	ಆಹಾರ
ಅನ್ನದಾನ	ಅನದಾನ	ಆಹಾರವನ್ನು ಉಚಿತವಾಗಿ ಕೊಡುವುದು
ಗುನ್ನ	ಗುನ	ದಿಬ್ಬ
ಅನ್ನು	ಅನು	ಒಂದು ಪ್ರತ್ಯಯ
ಚೆನ್ನಾಗಿ	ಚೆನಾಗಿ	ಚೆನ್ನಾಗಿ

೪.೩೯ ಮ್ಮ > ಮ

ಪದಮಧ್ಯ ಪರಿಸರದಲ್ಲಿ "ಮ್ಮ" ದ್ವಿತ್ವ ಧ್ವನಿ ಬದಲು "ಮ" ದ್ವಯೋಷ್ಠ್ಯ ಅನುನಾಸಿಕ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗುಮ್ಮನೆ	ಗುಮನೆ	ಗುಮ್ಮನೆ
ಗುಮ್ಮಾ	ಗುಮಾ	ಒಂದು ಕಾಲ್ಪನಿಕ ಭೂತ
ಗುಮ್ಮಟ	ಗುಮಟ	ಗುಂಬಜ
ಜಮ್ಮನೆ	ಜಮನೆ	ಜಮ್ಮನೆ

೪.೪೦ ಯ್ಯ > ಯ

ಪದಮಧ್ಯ ಪರಿಸರದಲ್ಲಿ ಯ್ಯ" ದ್ವಿತ್ವ ಧ್ವನಿ ಬದಲು "ಯ" ತಾಲವ್ಯ ಅರ್ಧ ಸ್ವರ ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗುಯ್ಯಲ್	ಗುಯಲ್	ಕೊಳ ಸರೊವರ
ಅಯ್ಯಾ	ಅಯಾ	ತಂದೆ
ಅಯ್ಯೊ	ಅಯೊ	ಅಯ್ಯೊ

೪.೪೧ ರ್ > ರ

ಪದಮಧ್ಯ ಪರಿಸರದಲ್ಲಿ "ರ್" ಸಂಯುಕ್ತಾಕ್ಷರ (ಒತ್ತಕ್ಷರ) ಬದಲು "ರ" ವರ್ತ್ಸ್ಯ ಕಂಪಿತ ವ್ಯಂಜನ ಧ್ವನಿಯನ್ನು ಒದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ದರ್ಪಣ	ದರಪಣ	ಕನ್ನಡಿ
ಪರ್ವ	ಪರವ	ಸೇರಿಕೆ
ತರ್ಕ	ತರಕ	ಊಹೆ

೪.೪೨ ೃ > ್ರ

ಪದಾದಿ ಪರಿಸರದಲ್ಲಿ " ೃ " ಸಂಯುಕ್ತ ವ್ಯಂಜನ ಬದಲು "್ರ" ಸಂಯುಕ್ತ ವ್ಯಂಜನ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗೃಹ	ಗ್ರಹ	ಮನೆ
ಕೃಪೆ	ಕ್ರಪೆ	ಆಶೀರ್ವಾದ
ತೃತೀಯ	ತ್ರತಿಯ	ಮೂರನೆ
ಬೃಹತ	ಬ್ರಹತ್	ದೊಡ್ಡ
ಶೃತಿ	ಶ್ರತಿ	ಸ್ವರ

೪.೪೩ ್ರ > ರ

ಪದಾದಿ ಪರಿಸರದಲ್ಲಿ ಸ್ಪರ್ಷ "್ರ" ಸಂಯುಕ್ತ ವ್ಯಂಜನ ಬದಲು "ರ" ವರ್ತ್ಸ್ಯ ಕಂಡಿತ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ತ್ರಾಣ	ತರಣ	ಶಕ್ತಿ
ತ್ರಿಗುಣ	ತಿರಗುಣ	ಸತ್ತ್ವ
ಪ್ರಾಣ	ಪರಣ	ಜೀವ
ದ್ರವ	ದರವ	ಓಟ

ಪದಾದಿ ಪರಿಸರದಲ್ಲಿ ಸ್ಪರ್ಷ "್ರ" ಸಂಯುಕ್ತ ವ್ಯಂಜನ ಬದಲು "ರ" ವರ್ತ್ಸ್ಯ ಕಂಪಿತ ವ್ಯಂಜನ ಧ್ವನಿಯನ್ನು ಉಚ್ಚರಿಸಲು ಕಾರಣ ಸಂಯುಕ್ತ ವ್ಯಂಜನಗಳ ಉಚ್ಚಾರಣೆ ಮಾಡಲು ಪದಾದಿ ಪರಿಸರದಲ್ಲಿ ತೊಂದರೆಯಿಂದ ಈ ತೆರನಾಗಿ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುವುದು.

೪.೪೪ ್ರ > Ø

ಪದಾದಿ ಪರಿಸರದಲ್ಲಿ ್ರ ಸ್ಪರ್ಷ ಸಂಯುಕ್ತ ವ್ಯಂಜನವನ್ನು ಲೋಪ ಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿಯ ಮಕ್ಕಳು ಮಾತ್ರ ಮಾಡುವುದು ಕಂಡುಬರುವುದು.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ವ್ರತ	ವತ	ನಡವಳಿಕೆ
ಶ್ರುತಿ	ಸುತಿ	ಕೇಳುವಿಕೆ
ಶ್ರೀಮುಖ	ಸಿಮುಖ	ಸುಂದರವಾದ ಮುಖ
ಶ್ರೇಯಾ	ಸೆಯಾ	ಉತ್ತಮವಾದದು
ಶ್ರವಣ	ಸವಣ	ಕೇಳುವಿಕೆ

ಸ್ಪರ್ಷ ವ್ಯಂಜನಾಕ್ಷರಗಳನ್ನು ಪದಾದಿ ಪರಿಸರದಲ್ಲಿ ಓದುವಾಗ ತೊಂದರೆ ಮತ್ತು ಸ್ಪಷ್ಟ ಉಚ್ಚಾರಣ ಕೌಶಲ್ಯ ಕಲಿಸದೆ ಇರುವುದರಿಂದ ಈ ತೆರನಾಗಿ ಮಗು ವ್ಯತ್ಯಾಸ ಮಾಡಲು ಕಾರಣವಿರಬಹುದು.

೪.೪೫ ್ಲ > Ø

ಪದಾದಿ ಪರಿಸರದಲ್ಲಿ "ಲ್ಲ" ಸ್ಪರ್ಷ ಸಂಯುಕ್ತ ವ್ಯಂಜನವನ್ನು ಲೋಪ ಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಶ್ಲೇಷ	ಸೇಷ	ಸೇರುವಿಕೆ
ಶ್ಲೋಕ	ಸೊಕ	ಕೀರ್ತಿ
ಶ್ಲಾಘನೀಯ	ಸಾಗನಿಯ	ಹೊಗಳು
ಪ್ಲೇಗು	ಪೆಗು	ಒಂದು ಖಾಯಿಲೆ

ಪದಾದಿ ಪರಿಸರದಲ್ಲಿ ಉರ್ದು ಭಾಷಿಕರ ಮಕ್ಕಳಿಗೆ ಸಂಯುಕ್ತ ವ್ಯಂಜನ ಉಚ್ಚರಿಸಲು ತೊಂದರೆಯಾಗುತ್ತಿರುವುದು ಕಂಡುಬರುವುದು. ಕಾರಣ ಉಚಾರಣೆ ಬಗ್ಗೆ ಸ್ಪಷ್ಟವಾಗಿ ತಿಳಿಯದೆ ಇರುವುದು ಹಾಗೂ ಅವರ ಮಾತೃಭಾಷೆಯಲ್ಲಿ ಸಂಯುಕ್ತ ವ್ಯಂಜನಗಳು ಇರದೆ ಇರುವುದರಿಂದ ಉರ್ದು ಭಾಷೆಯನ್ನು ಮಾತನಾಡುವವರೆಲ್ಲ ಈ ರೀತಿಯ ವ್ಯತ್ಯಾಸವನ್ನು ಮಾಡುತ್ತಾರೆ.

೪.೪೬ ಸೃ > ಸ್ರು

ಪದಾದಿ ಪರಿಸರದಲ್ಲಿ "ಸೃ" ಸಂಘರ್ಷ ವ್ಯಂಜನದ ಬದಲು "ಸ್ರು" ಸಂಘರ್ಷ ವ್ಯಂಜನ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಸೃಷ್ಟಿ	ಸ್ರುಷ್ಟಿ	ಉತ್ಪತ್ತಿ
ಸೃಷ್ಟಿಸು	ಸ್ರುಸ್ಟಿಸು	ಉತ್ಪತ್ತಿಮಾಡು

೪.೪೭ ವೃ > ರು

ಪದಾದಿ ಪರಿಸರದಲ್ಲಿ "ವೃ" ಸಂಘರ್ಷ ವ್ಯಂಜನದ ಬದಲು "ರು" ವರ್ತ್ಸ್ಯ ಕಂಪಿತ ವ್ಯಂಜನ ಗುಣಿತಾಕ್ಷರ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ವೃತ್ತಿ	ರುತ್ತಿ	ಕಸುಬು
ವೃಷಭ	ರುಸಬ	ಎತ್ತು

೪.೪೭ ಲ್ಲ > ಲ

ಪದಮಧ್ಯ ಪರಿಸರದಲ್ಲಿ "ಲ್ಲ" ಸಂಯುಕ್ತ ವ್ಯಂಜನ ಬದಲು "ಲ" ದಂತ್ಯ ಪಾರ್ಶ್ವಿಕ ವ್ಯಂಜನವನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಇಲ್ಲ	ಇಲ	ಇಲ್ಲ
ಬೆಲ್ಲ	ಬೆಲ	ಬೆಲ್ಲ
ನೆಲ್ಲು	ನೆಲು	ಅಕ್ಕಿ
ಕಲ್ಲು	ಕಲು	ಕಲ್ಲು
ಸೊಲ್ಲು	ಸೊಲು	ಸೊಲ್ಲು

೪.೪೮ ್ಯ > Ø

ಪದಾದಿ ಪರಿಸರದಲ್ಲಿ "ನ್ಯಾ" ಅನುನಾಸಿಕ ಸಂಯುಕ್ತ ವ್ಯಂಜನವನ್ನು "?" ಲೋಪ ಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ನ್ಯಾಯ	ನಾಯ	ನಿಯಮ
ನ್ಯಾಯಾಲಯ	ನಾಯಾಲಯ	ಕೋರ್ಟು
ಧ್ಯಾನ	ದಾನ	ಚಿಂತನೆ
ಧ್ಯೇಯ	ಧೆಯ	ಲಕ್ಷ್ಯ

೪.೪೯ ೃ > ್ರ

ಪದಾದಿ ಪರಿಸರದಲ್ಲಿ " ೃ " ಸಂಯುಕ್ತ ವ್ಯಂಜನ ಬದಲು "್ರ" ಸಂಯುಕ್ತ ವ್ಯಂಜನ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಗೃಹ	ಗ್ರಹ	ಮನೆ
ಕೃಪೆ	ಕ್ರಪೆ	ಆಶಿರ್ವಾದ
ತೃತೀಯ	ತ್ರತಿಯ	ಮೂರನೆ
ಬೃಹತ	ಬ್ರಹತ್	ದೊಡ್ಡ
ಶೃತಿ	ಶ್ರತಿ	ಸ್ವರ

೪.೫೦ ್ರ > ರ

ಪದಾದಿ ಪರಿಸರದಲ್ಲಿ ಸ್ಪರ್ಷ "್ರ" ಸಂಯುಕ್ತ ವ್ಯಂಜನ ಬದಲು "ರ" ವರ್ತ್ಸ್ಯ ಕಂಡಿತ ವ್ಯಂಜನ ಧ್ವನಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ ಮತ್ತು ೯ನೆ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ತ್ರಾಣ	ತರಣ	ಶಕ್ತಿ
ತ್ರಿಗುಣ	ತಿರಗುಣ	ಸತ್ತ್ವ
ಪ್ರಾಣ	ಪರಣ	ಜೀವ

೪.೫೧ ್ರ > Ø

ಪದಾದಿ ಪರಿಸರದಲ್ಲಿ ್ರ ಸ್ಪರ್ಷ ಸಂಯುಕ್ತ ವ್ಯಂಜನವನ್ನು ಲೋಪ ಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ೮ನೇ ತರಗತಿಯ ಮಕ್ಕಳು ಮಾತ್ರ ಮಾಡುವುದು ಕಂಡುಬರುವುದು.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ವ್ರತ	ವತ	ನಡುವಳಿಕೆ
ಶ್ರುತಿ	ಸುತಿ	ಕೇಳುವಿಕೆ
ಶ್ರೀಮುಖ	ಸಿಮುಖ	ಸುಂದರವಾದ ಮುಖ
ಶ್ರೇಯಾ	ಸೆಯಾ	ಉತ್ತಮವಾದದು
ಶ್ರವಣ	ಸವಣ	ಕೇಳುವಿಕೆ
ಶ್ರವ	ಸವ	ದಣಿವು

೪.೫೨ ್ಲ > Ø

ಪದಾದಿ ಪರಿಸರದಲ್ಲಿ "ಲ್ಲ" ಸ್ಪರ್ಷ ಸಂಯುಕ್ತ ವ್ಯಂಜನವನ್ನು () ಲೋಪ ಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ	ಅರ್ಥ
ಶ್ಲೇಷ	ಸೇಷ	ಸೇರುವಿಕೆ
ಶ್ಲೋಕ	ಸೊಕ	ಕೀರ್ತಿ
ಶ್ಲಾಘನೀಯ	ಸಾಗನಿಯ	ಹೊಗಳಲು
ಪ್ಲೇಗು	ಪೆಗು	ಒಂದು ಖಾಯಿಲೆ

ಪದಾದಿ ಪರಿಸರದಲ್ಲಿ ಉರ್ದು ಭಾಷಿಕರ ಮಕ್ಕಳಿಗೆ ಸಂಯುಕ್ತ ವ್ಯಂಜನ ಉಚ್ಚರಿಸಲು ತೊಂದರೆಯಾಗುತ್ತಿರುವುದು ಕಂಡುಬರುವುದು. ಕಾರಣ ಉಚ್ಚಾರಣೆ ಬಗ್ಗೆ ಸ್ಪಷ್ಟವಾಗಿ ತಿಳಿಯದೆ ಇರುವುದು ಹಾಗೂ ಅವರ ಮಾತೃಭಾಷೆಯಲ್ಲಿ ಸಂಯುಕ್ತ ವ್ಯಂಜನಗಳು ಇರುವುದರಿಂದ ಉರ್ದು

ಭಾಷೆಯಲ್ಲಿ ಉಚ್ಚರಿಸುವ ಪದಗಳ ರೀತಿಯಲ್ಲಿ ಕನ್ನಡ ಭಾಷೆ ಓದುವಾಗ ಮತ್ತು ಬರೆಯುವಾಗ ವ್ಯತ್ಯಾಸ ಮಾಡುವರು.

೪.೫೩ ಸೃ > ಸ್ರು

ಪದಾದಿ ಪರಿಸರದಲ್ಲಿ "ಸೃ" ಸಂಘರ್ಷಿ ವ್ಯಂಜನದ ಬದಲು "ಸ್ರು" ಸಂಘರ್ಷಿ ವ್ಯಂಜನ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	**ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ**	**ಅರ್ಥ**
ಸೃಷ್ಟಿ	ಸ್ರುಷ್ಟಿ	ಉತ್ಪತ್ತಿ
ಸೃಷ್ಟಿಸು	ಸ್ರುಸ್ಟಿಸು	ಉತ್ಪತ್ತಿಮಾಡು

೪.೫೪ ವೃ > ರು

ಪದಾದಿ ಪರಿಸರದಲ್ಲಿ "ವೃ" ಸಂಘರ್ಷಿ ವ್ಯಂಜನದ ಬದಲು "ರು" ವರ್ತ್ಸ್ಯ ಕಂಪಿತ ವ್ಯಂಜನ ಗುಣಿತಾಕ್ಷರ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹ ರೂಪ	**ಉರ್ದು ಭಾಷಿಕರ ಮಕ್ಕಳು ಬರೆಯುವ ಮತ್ತು ಓದುವ ರೂಪ**	**ಅರ್ಥ**
ವೃತ್ತಿ	ರುತ್ತಿ	ಕಸುಬು
ವೃಷಭ	ರುಸಬ	ಎತ್ತು

ಪದಾದಿ ಪರಿಸರದಲ್ಲಿ ಉರ್ದು ಭಾಷಿಕರ ಮಕ್ಕಳಿಗೆ ಸಂಯುಕ್ತ ವ್ಯಂಜನ ಉಚ್ಚರಿಸಲು ತೊಂದರೆಯಾಗುತ್ತಿರುವುದು ಕಂಡುಬರುವುದು. ಕಾರಣ ಉಚ್ಚರಣೆ ಬಗ್ಗೆ ಸ್ಪಷ್ಟವಾಗಿ ತಿಳಿಯದೆ ಇರುವುದು ಹಾಗೂ ಅವರ ಮಾತೃಭಾಷೆಯಲ್ಲಿ ಸಂಯುಕ್ತ ವ್ಯಂಜನಗಳಿಂದೆ ಇರುವುದರಿಂದ ಉರ್ದು ಭಾಷೆಯಲ್ಲಿ ಉಚ್ಚರಿಸುವ ಪದಗಳ ರೀತಿಯಲ್ಲಿ ಕನ್ನಡ ಭಾಷೆ ಓದುವಾಗ ವ್ಯತ್ಯಾಸದಿಂದ ಉಚ್ಚರಿಸುವುದು ಕಂಡುಬರುವುದು.

ಅಧ್ಯಾಯ ೫

ವ್ಯಾಕರಣಾಂಶಗಳು

ಅಧ್ಯಾಯ ೫

ವ್ಯಾಕರಣಾಂಶಗಳು

ಓದು ಮತ್ತು ಬರವಣಿಗೆಯಲ್ಲಿ ವ್ಯಾಕರಣಾಂಶಗಳು

ಭಾಷಿಕ ರಚನೆಗಳ ವೈಜ್ಞಾನಿಕ ಅಧ್ಯಯನವೇ ವ್ಯಾಕರಣ. ವ್ಯಾಕರಣವನ್ನು ಬಳಕೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕು ಮತ್ತು ವಿಶ್ಲೇಷಿಸಬೇಕಾಗಿದೆ. ಮಾತು ಮತ್ತು ಬರಹದ ನಡುವೆ ಇರುವ ವ್ಯತ್ಯಾಸವನ್ನು ವ್ಯಾಕರಣದ ರಚನೆಯಿಂದ ತಿಳಿಯಬಹುದು.

ಪದಗಳ ಜೋಡಣೆಯ ಸಂದರ್ಭದಲ್ಲಿ ಆಗುವ ವ್ಯತ್ಯಾಸಗಳನ್ನು ಸಂಧಿ ಸಮಾಸಗಳ ಮೂಲಕ ತಿಳಿಯುವುದು. ಹಾಗೆಯೇ ಭಾಷೆಯಲ್ಲಿ ದೇಶಿ ಮತ್ತು ಅನ್ಯದೇಶಿ ಪದಗಳ ಬಳಕೆಯನ್ನು ತತ್ಸಮ ತದ್ಭವ ಪರಿಕಲ್ಪನೆಗಳ ಮೂಲಕ ವಿಶ್ಲೇಷಿಸುವುದು. ಭಾಷೆಯಲ್ಲಿನ ಲೇಖನ ಚಿನ್ಹೆ ಮತ್ತು ಪದ ಬಳಕೆಯ ಪರಸ್ಪರ ಸಂಬಂಧಗಳನ್ನು ವಿವರಿಸುವುದು.

ಪ್ರಸ್ತುತ ಅಧ್ಯಯನದಲ್ಲಿ ಚರ್ಚೆ ಮಾಡಿರುವ ವ್ಯಾಕರಣಾಂಶಗಳು ೮, ೯ ಮತ್ತು ೧೦ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಅಳವಡಿಸಿರುವಂತಹವು. ಅಲ್ಲಿ ಅಳವಡಿಸಿರುವ ವ್ಯಾಕರಣ ವಿಚಾರಗಳನ್ನು ಉರ್ದು ಭಾಷಿಕರ ಮಕ್ಕಳಿಂದ ಓದಿಸಿ ಮತ್ತು ಬರವಣಿಗೆ ಮಾಡಿಸಲಾಗಿದೆ. ಅಂತಹ ಸಂದರ್ಭದಲ್ಲಿ ಮಾಡುವ ವ್ಯಾಕರಣ ವ್ಯತ್ಯಾಸಗಳನ್ನು ಪಟ್ಟಿ ಮಾಡಲಾಗಿದೆ. ಸಾಧ್ಯವಾದ ಕಡೆಗಳಲ್ಲಿ ಕಾರಣಗಳ ಸಹಿತ ಚರ್ಚಿಸಲಾಗಿದೆ. ಕೆಲವು ಕಡೆ ಕಾರಣಗಳ ಸಾಧ್ಯತೆ ಕುರಿತು ವಿಶ್ಲೇಷಣೆ ಮಾಡಲಾಗಿದೆ.

೫.೧ ಸಂಧಿ ವಿಚಾರ

ಕನ್ನಡ ಸಂಧಿಗಳನ್ನು ಲೋಪ ಆಗಮ ಆದೇಶ ಎಂದು ಅವುಗಳ ಬಳಕೆಯ ಹಿನ್ನೆಲೆಯಲ್ಲಿ ವರ್ಗೀಕರಣ ಮಾಡಲಾಗಿದೆ. ಕನ್ನಡ ಪದಕ್ಕೆ ಕನ್ನಡ ಪದ ಸೇರಿದಾಗ ಈ ಸಂಧಿಗಳು ಜರುಗುತ್ತವೆ. ಉತ್ತರ ಪದ ಸ್ವರದಿಂದ ಮೊದಲಾದರೆ ಲೋಪ ಇಲ್ಲವೆ ಆಗಮ ಸಂಧಿ, ವ್ಯಂಜನವಿದ್ದರೆ ಆದೇಶ ಸಂಧಿ, ಈ ಮಾದರಿಯ ಸಂಧಿ ಕಾರ್ಯಗಳನ್ನು ಉರ್ದುಭಾಷಿಕರ ಮಕ್ಕಳು ಕೂಡಿಸುವುದನ್ನು ಮತ್ತು ಬಿಡಿಸುವುದನ್ನು ಪ್ರಸ್ತುತ ಭಾಗದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಕ್ರಸಂ.	ಪದಗಳು	ಉರ್ದುಭಾಷಿಕರ ಮಕ್ಕಳು ಬಿಡಿಸುವ ಪದಗಳು	ಬರಹದ ರೂಪ
೧.	ಹಿರಿತನ	ಹಿರಿತ+ನ	ಹಿರಿ+ತನ
೨.	ಮನೆತನ	ಮನೆತ+ನ	ಮನೆ+ತನ
೩.	ದೊಡ್ಡತನ	ದೊಡ್ಡತ+ನ	ದೊಡ್ಡ+ತನ
೪.	ಕಳ್ಳತನ	ಕಳ್ಳತ+ನ	ಕಳ್ಳ+ತನ
೫.	ಮನೆಯಲ್ಲಿ	ಮನೆ+ಯಲ್ಲಿ	ಮನೆ+ಅಲ್ಲಿ
೬.	ಮಳೆಗಾಲ	ಮಳೆ+ಗಾಲ	ಮಳೆ+ಕಾಲ
೭.	ಹಣವಂತ	ಹಣ+ಅಂತ	ಹಣ+ವಂತ
೮.	ಗುಣವಂತ	ಗುಣ+ಅಂತ	ಗುಣ+ವಂತ
೯.	ಕೇಶಾಲಂಕಾರ	ಕೇಶಾಲ+ ಅಂಕಾರ	ಕೇಶ+ಅಲಂಕಾರ
೧೦.	ಅರಮನೆ	ಅರ+ಮನೆ	ಅರಸನ+ಮನೆ
೧೧.	ಹಳೆಗನ್ನಡ	ಹಳ+ಗನ್ನಡ	ಹಳ+ಕನ್ನಡ
೧೨.	ಹಿಂಗಾಲು	ಹಿಂ+ಗಾಲು	ಹಿಂದಾದ+ಕಾಲು

ಪದಗಳು	ಸರಿಯಾದ ವಿಂಗಡಣೆಯ ಕ್ರಮ	ಉರ್ದುಭಾಷಿಕರ ಮಕ್ಕಳು ಬಿಡಿಸುವ ಮತ್ತು ಉಚ್ಚರಿಸುವ ಸಂಧಿ ರೂಪ	ಉರ್ದುಭಾಷಿಕರ ಮಕ್ಕಳು ಹೆಸರಿಸುವ ಸಂಧಿ	ಸರಿಯಾದ ಸಂಧಿ ಹೆಸರು
ನಮ್ಮೂರು	ನಮ್ಮ + ಊರು	ನಮ್ಮದು + ಊರು	ಲೋಪ	ಲೋಪ
ಅಲ್ಲೊಬ್ಬ	ಅಲ್ಲಿ + ಒಬ್ಬ	ಅಲ್ಲಿ + ಒಬ್ಬ	ಲೋಪ	ಲೋಪ
ನಾವೆಲ್ಲ	ನಾವು + ಎಲ್ಲ	ನಾ + ವೆಲ್ಲ	ಲೋಪ	ಲೋಪ
ಆಯಿರ್ದ	ಆ + ಇರ್ದ	ಆ + ಯಿರ್ದ	ಲೋಪ	ಯಕಾರಾಗಮ
ಹಿಡಿಯೆಂದು	ಹಿಡಿ + ಎಂದು	ಹಿಡಿದು + ಯೆಂದು	ಲೋಪ	ಯಕಾರಾಗಮ
ಬೇಯಿಸು	ಬೇ + ಇಸು	ಬೇ + ಯಿಸು	ಲೋಪ	ಯಕಾರಾಗಮ
ಮೈಯನ್ನು	ಮೈ + ಅನ್ನು	ಮೈಯ + ಯನ್ನು	ಲೋಪ	ಯಕಾರಾಗಮ
ಹಸುವಿನ	ಹಸು + ಇನ	ಹಸು + ವಿನ	ಲೋಪ	ವಕಾರಾಗಮ
ಹೂವೆಲ್ಲ	ಹೂ + ಎಲ್ಲ	ಹೂ + ವೆಲ್ಲ	ಲೋಪ	ವಕಾರಾಗಮ
ಬೇರೊಂದು	ಬೇರೆ + ಒಂದು	ಬೇರು + ವೊಂದು	ಲೋಫ	ವಕಾರಾಗಮ

ಉರ್ದುಭಾಷಿಕ ಮಕ್ಕಳಿಗೆ ಪದಗಳನ್ನು ಸ್ಪಷ್ಟವಾಗಿ ವಿಂಗಡಿಸಿ ಅಂದರೆ ಪ್ರಕೃತಿ ಮತ್ತು ಪ್ರತ್ಯಯಗಳ ಬಗೆಗೆ ಸ್ಪಷ್ಟವಾಗಿ ತಿಳಿಯದೆ ಇರುವುದರಿಂದ ಈ ತೆರನಾದ ವ್ಯತ್ಯಾಸದಿಂದ ಸಂಧಿ ಪದಗಳನ್ನು ಬಿಡಿಸಿ ಓದಲು ಕಾರಣವಿರಬಹುದು.

ಸಂಧಿ ಕಾರ್ಯಗಳು ಲೋಪ, ಆಗಮ, ಆದೇಶ ಈ ಮೂರು ಸಂಧಿಗಳಿಗೆ ಸಂಬಂಧಿಸಿದಂತೆ ಪದಗಳನ್ನು ವಿಂಗಡಿಸಿ ಸಂಧಿ ಹೆಸರು ಹೇಳಲು ಹೇಳಿದಾಗ ಲೋಪ ಸಂಧಿಗೆ ಸಂಬಂಧಿಸಿದ ಪದಗಳನ್ನು ವಿಂಗಡಿಸಿ ಓದುವಲ್ಲಿ ಎಲ್ಲ ವಿದ್ಯಾರ್ಥಿಗಳು ವ್ಯತ್ಯಾಸದಿಂದ ವಿಂಗಡಿಸಿ ಓದುವುದನ್ನು ಕಾಣುತ್ತೇವೆ. ಆದರೆ ಸಂಧಿ ಹೆಸರು ಸರಿಯಾದ ರೀತಿಯಿಂದ ಓದುತ್ತಾರೆ. ಆದರೆ ಆಗಮ, ಆದೇಶ, ಸಂಧಿಗೆ ಸಂಬಂಧಿಸಿದಂತೆ ಪದಗಳನ್ನು ಪ್ರಕೃತಿ ಮತ್ತು ಪ್ರತ್ಯಯಗಳಂತೆ ವಿಂಗಡನೆ ಮಾಡದೆ ಪದಗಳ ವಿಂಗಡನೆ ಮಾಡಿ ಪದಗಳನ್ನು ತಪ್ಪಾಗಿ ವಿಂಗಡಿಸಿ ಓದುವರು. ಉರ್ದು ಭಾಷಿಕರ ಮಕ್ಕಳು ಕನ್ನಡ ಮತ್ತು ಸಂಸ್ಕೃತ ಸಂಧಿಗಳನ್ನು ವರ್ಗೀಕರಿಸುವಲ್ಲಿ ಹೆಚ್ಚು ವ್ಯತ್ಯಾಸ ಮಾಡುವರು. ಅಂದರೆ ಕನ್ನಡ ಭಾಷ ರಚನೆಯನ್ನು ಬೋಧಕರು ಸರಿಯಾಗಿ ಬೋಧಿಸಬೇಕಾಗಿದೆ.

೫.೨ ಸಮಾಸ ವಿಚಾರ

ಅಕ್ಷರಗಳು ಸೇರುವುದರಿಂದ ಸಂಧಿಯಾದರೆ ಪದಗಳ ಸೇರುವಿಕೆಯಿಂದ ಸಮಾಸವಾಗುತ್ತದೆ. ಉರ್ದು ಭಾಷಿಕರ ಮಕ್ಕಳಿಗೆ ಸಮಾಸ ಪದಗಳನ್ನು ವರ್ಗೀಕರಿಸುವುದು ಮತ್ತು ಹೆಸರಿಸುವುದು ಕಷ್ಟವೆನಿಸಿದೆ.

ಸಮಾಸ ಪದಗಳು	ಸರಿಯಾಗಿ ವಿಂಗಡಿಸಿದ ಸಮಾಸ ಪದಗಳು	ಉರ್ದುಭಾಷಿಕರ ಮಕ್ಕಳು ಉಚ್ಚರಿಸುವ ಮತ್ತು ಬರೆಯುವ ಸಮಾಸ ಪದಗಳು	ಉರ್ದುಭಾಷಿಕರ ಮಕ್ಕಳು ಹೆಸರಿಸುವ ಸಮಾಸಗಳು
ಕೈಬಳೆ	ಕೈಗೆ + ಬಳೆ	ಕೈ + ಬಲೆ, ಕೈದು + ಬಲೆ	ಕರ್ಮಧಾರೆಯ
ಬೆಟ್ಟದಾವರೆ	ಬೆಟ್ಟದ + ತಾವರೆ	ಬೆಟ್ಟದು + ತಾವರೆ	ಕರ್ಮಧಾರೆಯ
ಹಗಲುಗನಸು	ಹಗಲಿನಲ್ಲಿ + ಕನಸು	ಹಗಲು + ಕನಸು	ಕರ್ಮಧಾರೆಯ
ಚಿಕ್ಕಮಗು	ಚಿಕ್ಕದಾದ + ಮಗು	ಚಿಕ್ಕದು + ಮಗು	ಗಮಕ
ತಣ್ಣೀರು	ತಣ್ಣನೆಯ + ನೀರು	ತಣ್ + ನೀರು	ದ್ವಂದ್ವ
ಹೆಬ್ಬಾವು	ಹಿರಿದು + ಹಾವು	ಹೆಬ್ + ಹಾವು	ದ್ವಿಗು

೫. ೩ ಲಿಂಗ ವಿಚಾರ

ಈ ಕೆಳಗಿನ ಪದಗಳ ವಿವಿಧ ಲಿಂಗರೂಪಗಳನ್ನು ಗುರುತಿಸಿ

ಉರ್ದು ಭಾಷಿಕ ಮಕ್ಕಳು ಉಚ್ಚರಿಸುವ ಮತ್ತು ಬರೆಯುವ ರೂಪ		
ಸ್ತ್ರೀಲಿಂಗ	ಪುಲ್ಲಿಂಗ	ನಪುಂಸಕಲಿಂಗ
ಟೀಚರ್	ಶಿಕ್ಷಕ	
ಮೇಡಂ	ಮಗು	
ಎಮ್ಮೆ	ಎತ್ತು	
ಬುಟ್ಟಿ	ಕೋಣ	
ರಾಧ	ರಾಮ	
ಸೀತೆ		
ಕವಿ		
ತಂದಿ		
ನಾಯಿದ		
ಅಗಸ		
ಮೋಚಿ		
ದೋಬಿ		
ದರ್ಜಿ		

೮. ೯. ೧೦ನೇ ತರಗತಿಯ ಉರ್ದು ಮಾತೃಭಾಷಿಕರ ಮಕ್ಕಳಿಗೆ ಪದಗಳ ಪಟ್ಟಿ ಕೊಟ್ಟು ಅವುಗಳನ್ನು ಸ್ತ್ರೀಲಿಂಗ, ಪುಲ್ಲಿಂಗ ಮತ್ತು ನಪುಂಸಕಲಿಂಗ ಪದಗಳನ್ನಾಗಿ ವಿಂಗಡಿಸಿ ಓದಲು ಮತ್ತು ಬರೆಯಲು ಕೇಳಿದಾಗ ಮೇಲಿನಂತೆ ವ್ಯತ್ಯಾಸ ಮಾಡಲು ಕಾರಣಗಳನ್ನು ಊಹಿಸಬಹುದು.

೧. ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗ ಎಂಬ ಮೂರು ಲಿಂಗ ಭೇದ ಪದ್ಧತಿಯಿದೆ. ಉರ್ದುವಿನಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗವೆಂದು ಎರಡು ಲಿಂಗಭೇದವಿದೆ. ಆದರೆ ಉರ್ದು ಭಾಷೆಯಲ್ಲಿ ನಪುಂಸಕ ಲಿಂಗವಿಲ್ಲ. ಕನ್ನಡದಲ್ಲಿ ನಿರ್ಜಿವ ವಸ್ತುಗಳಿಗೆ ಸಾಮಾನ್ಯವಾಗಿ ನಪುಂಸಕಲಿಂಗವೆಂದು ಹೇಳುತ್ತೇವೆ. ಆದರೆ ಉರ್ದು ಭಾಷೆಯಲ್ಲಿ ನಿರ್ಜೀವ ವಸ್ತುಗಳ ಗಾತ್ರಕ್ಕನುಸಾರವಾಗಿ ಲಿಂಗ ವಿಂಗಡನೆ ಮಾಡುವರು. ಮತ್ತು ಉರ್ದು ಭಾಷೆ ವಿವಿಧ ಭಾಷೆಯಿಂದ ಪದಗಳನ್ನು ಸ್ವೀಕರಿಸಿದೆ. ಸ್ವೀಕರಣ ಪದಗಳನ್ನು ಅನುಸರಿಸಿ ಲಿಂಗಭೇದ ಮಾಡುತ್ತಾರೆ.

೨. ಉರ್ದು ಭಾಷೆಯಲ್ಲಿ 'ಇ'ಕಾರಾಂತದಿಂದ ಪದ ಅಂತ್ಯವಾದರೆ ಅಂತಹ ಪದಗಳಿಗೆ ಸ್ತ್ರೀಲಿಂಗವೆಂದು ಭಾವಿಸುವರು. ವೃತ್ತಿಯಾಧಾರಿತ ವ್ಯಕ್ತಿಗಳನ್ನು ನಾವು ಪುಲ್ಲಿಂಗವೆಂದು ಭಾವಿಸುವುದುಂಟು. ಆದರೆ ಉರ್ದು ಭಾಷೆಯಲ್ಲಿ ಇಂತಹವುಗಳನ್ನು ಸ್ತ್ರೀಲಿಂಗವೆಂದು ಭಾವಿಸುವರು. ಆದ್ದರಿಂದ ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಮತ್ತು ಬರೆಯುವಾಗ ಉರ್ದು ಭಾಷಿಕರ ಮಕ್ಕಳು ಗೊಂದಲದಲ್ಲಿ ಇದ್ದಾರೆ. ಮತ್ತು ಅವರ ಮಾತೃಭಾಷೆಯ ಪ್ರಭಾವದಿಂದ ಹಾಗೂ ಕನ್ನಡ ಭಾಷೆಯ ರಚನೆಯಲ್ಲಿನ ಗೊಂದಲದಿಂದ ಈ ಮಾದರಿಯ ವ್ಯತ್ಯಾಸ ಮಾಡುವರು.

ಉರ್ದು ಭಾಷಿಕರ ಮಕ್ಕಳ ವಾಕ್ಯಗಳ ಮಾದರಿ	ಬರಹದ ರೂಪ
ಮೇಡಂ ಬರುತ್ತೆ	ಮೇಡಂ ಬರುತ್ತಾರೆ
ಶಿಕ್ಷಕ್ ಬರುತ್ತೆ	ಶಿಕ್ಷಕರು ಬರುತ್ತಾರೆ

ಉರ್ದು ಭಾಷಿಕರ ಮಕ್ಕಳು ಕನ್ನಡದ ಲಿಂಗ ವ್ಯವಸ್ಥೆಯನ್ನು ವಿಶಿಷ್ಟವಾಗಿ ಓದುವರು ಮತ್ತು ಬರೆಯುವರು. ಯಾಕೆಂದರೆ, ಉರ್ದು ಮತ್ತು ಕನ್ನಡ ಭಾಷೆಯ ಲಿಂಗದ ವಿಚಾರ ಭಿನ್ನವಾಗಿರುವುದರಿಂದ ಈ ಮಾದರಿಯ ವ್ಯತ್ಯಾಸ ಮಾಡುವರು. ಮೂಲತಃ ಉರ್ದುಭಾಷೆಯಲ್ಲಿ ನಪುಂಸಕಲಿಂಗವಿಲ್ಲ. ಅದರ ಕೆಲಸವನ್ನು ಪುಲ್ಲಿಂಗ ಮತ್ತು ಸ್ತ್ರೀಲಿಂಗ ಸಾಂದರ್ಭಿಕವಾಗಿ ನಿರ್ವಹಿಸುವವು. ಉರ್ದುಭಾಷಿಕರು ಮಾನವ ಜೀವಿಗಳಿಗೆ ಮಾನವೇತರ ಲಿಂಗ ಪ್ರತ್ಯಯಗಳನ್ನು ಹಚ್ಚಿ ಬಳಕೆ ಮಾಡಿದರೆ ಮಾನವೇತರ ಜೀವಿಗಳಿಗೆ ಮಾನವಜೀವಿಗಳ ಲಿಂಗಪ್ರತ್ಯಯಗಳನ್ನು ಅನ್ವಯಿಸಿ ಬರೆಯುವರು ಮತ್ತು ಓದುವರು.

ಲಿಂಗಕ್ಕನುಸಾರವಾಗಿ ಬಹುವಚನದ ಕ್ರಿಯಾಪದ ಬಳಕೆಯಾಗುವ ಕಡೆ ಏಕವಚನದ ಕ್ರಿಯಾಪದ ಬಳಕೆ ಮಾಡುವರು. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವರು. ಉದಾ:

ಉರ್ದು ಭಾಷಿಕರ ಮಕ್ಕಳ ವಾಕ್ಯಗಳ ಮಾದರಿ	ಬರಹದ ರೂಪ
ನಮ್ಮ ಶಾಲೆಯಲ್ಲಿ ಸರ್ ಬಹಳ ಚೆನ್ನಾಗಿದೆ	ನಮ್ಮ ಶಾಲೆಯಲ್ಲಿ ಸರ್ ಬಹಳ ಚೆನ್ನಾಗಿದ್ದಾರೆ
ನಮ್ಮ ಊರಿನಲ್ಲಿ ಬಾವಿಗಳು ಬಹಳ ಇದೆ	ನಮ್ಮ ಊರಿನಲ್ಲಿ ಬಾವಿಗಳು ಬಹಳ ಇವೆ

ಕಾರಣ ಲಿಂಗ ವಚನಕ್ಕನುಸಾರವಾಗಿ ಕ್ರಿಯಾಪದ ಬದಲಾವಣೆ ಮಾಡಬೇಕೆಂದು ತಿಳುವಳಿಕೆ ಇಲ್ಲದೆ ಇರುವುದರಿಂದ ಈ ತೆರನಾದ ವ್ಯತ್ಯಾಸದಿಂದ ಓದುವುದು ಮತ್ತು ಬರೆಯುವುದು ಕಂಡುಬರುವುದು.

ಪುಲ್ಲಿಂಗ ಮತ್ತು ಸ್ತ್ರೀಲಿಂಗಕ್ಕನುಸಾರವಾಗಿ ಲಿಂಗ ಬದಲಾವಣೆ ಮಾಡದೆ ನಪುಂಸಕ ಲಿಂಗದಲ್ಲಿ ಕ್ರಿಯಾಪದ ಬಳಸುವರು. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಉದಾ:

ಉರ್ದು ಭಾಷಿಕರ ಮಕ್ಕಳ ವಾಕ್ಯಗಳ ಮಾದರಿ	ಬರಹದ ರೂಪ
ನಮ್ಮ ಶಾಲೆಯಲ್ಲಿ ಒಂದು ಲೇಡೀಸ್ ಟೀಚರ್ ಇದೆ	ನಮ್ಮ ಶಾಲೆಯಲ್ಲಿ ಒಬ್ಬ ಲೇಡೀಸ್ ಟೀಚರ್ ಇದ್ದಾರೆ.
ನಮ್ಮ ಶಾಲೆಯಲ್ಲಿ ಒಂದು ಜವಾನ್ ಇದೆ	ನಮ್ಮ ಶಾಲೆಯಲ್ಲಿ ಒಬ್ಬ ಜವಾನ ಇದ್ದಾನೆ.

ಪುಲ್ಲಿಂಗ ಮತ್ತು ಸ್ತ್ರಿಲಿಂಗಕ್ಕನುಸಾರವಾಗಿ ಲಿಂಗ ಬದಲಾವಣೆ ಮಾಡದೆ ನಪುಂಸಕ ಲಿಂಗದಲ್ಲಿ ಬಳಸುವ ಕ್ರಿಯಾಪದವನ್ನು ಉರ್ದು ಭಾಷಿಕರ ಮಕ್ಕಳು ಸ್ತ್ರೀಲಿಂಗ ಮತ್ತು ಪುಲ್ಲಿಂಗಕ್ಕೆ ಒಂದೆ ತೆರನಾದ ಕ್ರಿಯಾಪದ ಬಳಸುವರು. ಇದಕ್ಕೆ ಕಾರಣ ಲಿಂಗ ವಚನಕ್ಕನುಸಾರವಾಗಿ ಕ್ರಿಯಾಪದ ಬಳಸಬೇಕೆಂಬ ಸ್ಪಷ್ಟವಾದ ತಿಳುವಳಿಕೆ ಇಲ್ಲದೆ ಇರುವುದರಿಂದ ಈ ತರಹದ ವ್ಯತ್ಯಾಸ ಮಾಡಲು ಕಾರಣವಿರಬಹುದು.

ಲಿಂಗಕ್ಕನುಸಾರವಾಗಿ ಬಹುವಚನದ ಕ್ರಿಯಾಪದ ಉಪಯೋಗವಾಗುವ ಕಡೆ ಏಕ ವಚನದ ಕ್ರಿಯಾಪದ ಬಳಕೆ ಮಾಡುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವರು. ಉದಾ:

ಉರ್ದು ಭಾಷಿಕರ ಮಕ್ಕಳ ವಾಕ್ಯಗಳ ಮಾದರಿ	ಬರಹದ ರೂಪ
ನಮ್ಮ ಶಾಲೆಯಲ್ಲಿ ಸರ್ ಬಹಳ ಚೆನ್ನಾಗಿದೆ	ನಮ್ಮ ಶಾಲೆಯಲ್ಲಿ ಸರ್ ಬಹಳ ಚೆನ್ನಾಗಿದ್ದಾರೆ
ನಮ್ಮ ಊರಿನಲ್ಲಿ ಬಾವಿಗಳು ಬಹಳ ಇದೆ	ನಮ್ಮ ಊರಿನಲ್ಲಿ ಬಾವಿಗಳು ಬಹಳ ಇವೆ

ಲಿಂಗಕ್ಕನುಸಾರವಾಗಿ ಬಹುವಚನದ ಕ್ರಿಯಾಪದ ಉಪಯೋಗವಾಗುವ ಕಡೆ ಏಕವಚನದ ಕ್ರಿಯಾಪದ ಬಳಕೆ ಮಾಡಲು ಕಾರಣ ಉರ್ದುವಿನಲ್ಲಿ ಪ್ರತಿ ವಾಕ್ಯದ ಕೊನೆಯಲ್ಲಿ ಕ್ರಿಯಾಪದ ಬಳಸುವರು. ಅವರ ಮಾತೃಭಾಷೆಯ ಪ್ರಭಾವದಿಂದ ಈ ತರಹದ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುವುದು.

ನಪುಂಸಕ ಲಿಂಗದಿಂದ ಕೊನೆಯಾಗುವ ವಾಕ್ಯದಲ್ಲಿ ಬಳಸಬಹುದಾದ ಕ್ರಿಯಾಪದವನ್ನು; ಬಳಸದೆ ಪುಲ್ಲಿಂಗ ಸ್ತ್ರೀಲಿಂಗ ವಾಕ್ಯಗಳಲ್ಲಿ ಬಳಸಬಹುದಾದ ಕ್ರಿಯಾಪದವನ್ನು ಬಳಸುವರು. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವರು. ಉದಾ:

ಉರ್ದು ಭಾಷಿಕರ ಮಕ್ಕಳ ವಾಕ್ಯಗಳ ಮಾದರಿ	ಬರಹದ ರೂಪ
ಎತ್ತು ಬರ್ತಾರೆ	ಎತ್ತು ಬರುತ್ತದೆ.
ಎಮ್ಮೆ ಹಾಲು ಕೊಡುತ್ತಾಳೆ	ಎಮ್ಮೆ ಹಾಲು ಕೊಡುತ್ತದೆ.

ಈ ಮೇಲಿನ ವಾಕ್ಯದಲ್ಲಿ ಎತ್ತು, ಎಮ್ಮೆ ಎಂಬ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಎಂದು ತಿಳಿದು ಬರ್ತಾರೆ, ಕೊಡ್ತಾಳೆ ಎಂದು ಉರ್ದು ಭಾಷಿಕರ ಮಕ್ಕಳು ಬಳಸುತ್ತಾರೆ. ಇದಕ್ಕೆ ಕಾರಣ ಉರ್ದು ಭಾಷೆಯಲ್ಲಿ ಲಿಂಗಗಳೆರಡು ಇರುವುದರಿಂದ ಕನ್ನಡ ಭಾಷೆಯಲ್ಲಿನ ವಾಕ್ಯಗಳನ್ನು ಬಳಸುವಾಗ ವಿದ್ಯಾರ್ಥಿಗಳು ಉರ್ದು ಭಾಷೆಯ ಪ್ರಭಾವದಿಂದ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

ಉರ್ದುಭಾಷಿಕರ ಮಕ್ಕಳು ಕನ್ನಡ ಭಾಷೆಯ ವಾಕ್ಯ(ಪದ)ಗಳನ್ನು ಬಳಸುವಾಗ ವಸ್ತುವಿನ ಗಾತ್ರಕ್ಕೆ ಅನುಸಾರವಾಗಿ ಲಿಂಗ ಬದಲಾವಣೆ ಮಾಡುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವುದನ್ನು ಕಾಣುತ್ತೇವೆ.

ಉರ್ದು ಭಾಷಿಕರ ಮಕ್ಕಳ ವಾಕ್ಯಗಳ ಮಾದರಿ	ಬರಹದ ರೂಪ
ಸಣ್ಣ ಬುಟ್ಟಿ (ಪುಲ್ಲಿಂಗ)	ಸಣ್ಣ ಬುಟ್ಟಿ (ನಪುಂಸಕ ಲಿಂಗ)
ದೊಡ್ಡ ಬುಟ್ಟಿ (ಸ್ತ್ರೀಲಿಂಗ)	ದೊಡ್ಡ ಬುಟ್ಟಿ (ನಪುಂಸಕ ಲಿಂಗ)
ದೊಡ್ಡ ನಕ್ಷತ್ರ (ಸ್ತ್ರೀಲಿಂಗ)	ದೊಡ್ಡ ನಕ್ಷತ್ರ (ನಪುಂಸಕ ಲಿಂಗ)
ಸಣ್ಣ ನಕ್ಷತ್ರ (ಪುಲ್ಲಿಂಗ)	ಸಣ್ಣ ನಕ್ಷತ್ರ (ನಪುಂಸಕ ಲಿಂಗ)

ಉರ್ದು ಭಾಷಿಕರ ಮಕ್ಕಳಿಗೆ ಕನ್ನಡ ಭಾಷೆಯಲ್ಲಿ ವಸ್ತುಗಳನ್ನು ಸ್ತ್ರೀಲಿಂಗ ಪುಲ್ಲಿಂಗ ನಪುಂಸಕಲಿಂಗಗಳೆಂದು ಗುರುತಿಸಲು ಕೇಳಿದಾಗ ಕನ್ನಡ ಭಾಷೆಯಲ್ಲಿ ನಪುಂಸಕ ಪದಗಳ ಹಿಂದೆ ದೊಡ್ಡ, ಚಿಕ್ಕ, ಸಣ್ಣ ಮುಂತಾದ ಶುದ್ಧ ವಿಶೇಷಣಗಳನ್ನು ಬಳಸಿ ಅಂದರೆ ವಸ್ತುವಿನ ಗಾತ್ರಕ್ಕನುಸಾರವಾಗಿ ಉರ್ದು ಭಾಷಿಕರ ಮಕ್ಕಳು ಚಿಕ್ಕ ವಸ್ತುಗಳಿಗೆಲ್ಲ ಪುಲ್ಲಿಂಗವೆಂದು ದೊಡ್ಡ ವಸ್ತುಗಳಿಗೆಲ್ಲ ಸ್ತ್ರೀಲಿಂಗವೆಂದು ಉಪಯೋಗಿಸುವರು. ಈ ತೆರನಾದ ವ್ಯತ್ಯಾಸ ಮಾಡಲು ಅವರ ಮಾತೃಭಾಷೆಯಾದ ಉರ್ದುವೇ ಕಾರಣ. ಏಕೆಂದರೆ ಉರ್ದು ಭಾಷೆಯಲ್ಲಿ ವಸ್ತುವಿನ ಗಾತ್ರಕ್ಕನುಸಾರವಾಗಿ ಲಿಂಗಭೇದ ಮಾಡುವುದನ್ನು ಕಾಣುತ್ತೇವೆ. ಈ ಪ್ರಭಾವದಿಂದ ವ್ಯತ್ಯಾಸ ಮಾಡಲು ಕಾರಣವಿರಬಹುದೆಂದು ಹೇಳಬಹುದು.

ಉರ್ದು ಭಾಷಿಕರ ಮಕ್ಕಳು ಸ್ವೀಕರಣ ಪದಕ್ಕನುಸಾರವಾಗಿ ಲಿಂಗ ಬದಲಾವಣೆ ಮಾಡುವರು. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವುದನ್ನು ಕಾಣುತ್ತೇವೆ. ಉದಾ:

ಉರ್ದು ಭಾಷಿಕರ ಮಕ್ಕಳ ವಾಕ್ಯಗಳ ಮಾದರಿ	ಬರಹದ ರೂಪ
ದೋಬಿ (ಸ್ತ್ರೀಲಿಂಗ)	ದೋಬಿ (ಪುಲ್ಲಿಂಗ)
ದರ್ಜಿ (ಸ್ತ್ರೀಲಿಂಗ)	ದರ್ಜಿ (ಪುಲ್ಲಿಂಗ)

ಕನ್ನಡ ಭಾಷೆಯಲ್ಲಿ ವಿವಿಧ ಭಾಷೆಯ ಸ್ವೀಕರಣ ಪದಗಳಿರುವಂತೆ ಉರ್ದು ಭಾಷೆಯಲ್ಲೂ ವಿವಿಧ ಭಾಷೆಯ ಸ್ವೀಕರಣ ಪದಗಳಿವೆ. ಈ ಸ್ವೀಕರಣ ಪದಗಳ ರಚನೆಯನ್ನು ಆಧರಿಸಿ ಉರ್ದು ಭಾಷೆಯಲ್ಲಿ ಲಿಂಗಭೇದ ಮಾಡುತ್ತಾರೆ. ಈ ಪ್ರಭಾವದಿಂದ ಸ್ವೀಕರಣ ಭಾಷೆಯ ಪದಗಳನ್ನು ಕನ್ನಡದಲ್ಲಿ ಬಳಸುವಾಗ ಲಿಂಗಭೇದವನ್ನು ವ್ಯತ್ಯಾಸದಿಂದ ಬಳಕೆ ಮಾಡುವುದು ಕಂಡುಬರುವುದು.

೫.೪ ವಚನ ವಿಚಾರ

ಕೆಳಕಂಡ ಏಕವಚನ ಪದಗಳನ್ನು ಬಹುವಚನ ಪದಗಳಾಗಿ ಬರೆಯಿರಿ

ಏಕವಚನ ಪದಗಳು	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪಗಳು	ಬರಹ ರೂಪ
ರಾಜಾ	ರಾಜಾ	ರಾಜರು
ತಂದೆ	ತಂದೆ	ತಂದೆಯಂದಿರು
ಚಿಕ್ಕಪ್ಪ	ಚಿಕ್ಕಪ್ಪ	ಚಿಕ್ಕಪ್ಪಂದಿರು
ಅಜ್ಜ	ಅಜ್ಜ	ಅಜ್ಜಂದಿರು

ಕನ್ನಡ ಭಾಷೆಯಲ್ಲಿ ನಾಮಪದಗಳನ್ನು ಗುರುತಿಸುವ ವ್ಯಕ್ತಿ, ವಸ್ತು ಮೊದಲಾದವುಗಳ ಸಂಖ್ಯೆಯನ್ನು ಸೂಚಿಸುವುದಕ್ಕೆ ವಚನ ಎಂದು ಕರೆಯುವರು. ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ವಚನ ವಿಚಾರಗಳು ಭಿನ್ನವಾಗಿವೆ. ಈ ಹಿನ್ನೆಲೆಯಿಂದ ಉರ್ದುಭಾಷಿಕರ ಮಕ್ಕಳು ಏಕವಚನದ ಪದಗಳನ್ನು ಬಹುವಚನ ಪದಗಳನ್ನಾಗಿ, ಬಹುವಚನದ ಪದಗಳನ್ನು ಏಕವಚನದ ಪದಗಳನ್ನಾಗಿ ಓದುವ ಮತ್ತು ಬರೆಯುವ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ. ಇದಕ್ಕೆ ಕಾರಣ ಉರ್ದುವಿನಲ್ಲಿ ಕೆಲವು ಪದಗಳ ಕೊನೆಯ ಅಕ್ಷರ 'ಆ' ಅಥವ 'ಹಾ'ದಿಂದ ಕೊನೆಗೊಂಡರೆ ಪುಲ್ಲಿಂಗದ ಏಕವಚನದಲ್ಲಿದ್ದ ಪದಗಳು ಬಹುವಚನ ಪದಗಳಾಗಿ ಬದಲಾವಣೆ ಹೊಂದುವುದಿಲ್ಲ. ಈ ಒಂದು ಕಾರಣದಿಂದ ಕನ್ನಡದ ಏಕವಚನದಲ್ಲಿನ ಪದಗಳನ್ನು ಬಹುವಚನದ ಪದಗಳನ್ನಾಗಿ ಪರಿವರ್ತಿಸಿ ಓದದೆ, ಬರೆಯದೆ ಏಕವಚನದ ಪದಗಳನ್ನಾಗಿ ಓದುವುದನ್ನು ಮತ್ತು ಬರೆಯುವುದನ್ನು ಕಾಣಬಹುದು.

ಸಂಸ್ಕೃತದಿಂದ ಸ್ವೀಕರಣ ಮಾಡಿಕೊಂಡು ಉರ್ದು ಭಾಷೆಯಲ್ಲಿ ಕೆಲವೊಂದು ಪದಗಳು ಬಳಕೆ ಮಾಡುವರು. ಸಂಸ್ಕೃತದಿಂದ ಸ್ವೀಕರಣ ಮಾಡಿಕೊಂಡ ಪದಗಳು ಪುಲ್ಲಿಂಗ ಏಕವಚನವಿದ್ದ ಪದಗಳು ಬಹುವಚನಗಳಾಗಿ ಮಾಡುವುದಿಲ್ಲ ಈ ಒಂದು ಪ್ರಭಾವದಿಂದಲೂ ಕೂಡ ಉರ್ದು ಭಾಷಿಕರ ಮಕ್ಕಳು ಏಕವಚನದ ಪದಗಳನ್ನು ಬಹುವಚನದ ಪದಗಳನ್ನಾಗಿ ಪರಿವರ್ತಿಸದೆ ಏಕವಚನದ ಪದಗಳನ್ನಾಗಿ ಓದುವುದನ್ನು ಕಾಣುತ್ತೇವೆ.

೫.೫ ವಿಭಕ್ತಿ ಪ್ರತ್ಯಯಗಳ ವಿಚಾರ

ಉರ್ದು ಭಾಷಿಕರ ಮಕ್ಕಳು ಕನ್ನಡದ ಯಾವ ವಿಭಕ್ತಿ ಪ್ರತ್ಯಯವನ್ನು ವಿಶಿಷ್ಟವಾಗಿ ವ್ಯತ್ಯಾಸ ಮಾಡಿ ಓದುವ ಮತ್ತು ಬರೆಯುವಂತಹವುಗಳನ್ನು ಮಾತ್ರ ಪ್ರಸ್ತುತ ಅಧ್ಯಯನಕ್ಕೆ ಎತ್ತಿಕೊಳ್ಳಲಾಗಿದೆ.

ಪ್ರಥಮ ವಿಭಕ್ತಿ ಪ್ರತ್ಯಯ

ಉರ್ದು ಭಾಷಿಕರ ಮಕ್ಕಳು ಬರವಣಿಗೆ ಮತ್ತು ಓದಿನಲ್ಲಿ ಪ್ರಥಮ ವಿಭಕ್ತಿಯನ್ನು ಲೋಪ ಮಾಡುವರು. ಈ ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವರು.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ಮತ್ತು ಬರೆಯುವ ಮಾದರಿ
ಹುಡುಗಿಯು ಕೆಲಸ ಮಾಡುತ್ತಾಳೆ	ಹುಡುಗಿ ಕಲಸ ಮಾಡುತ್ತಾಳೆ
ನಾನು ಪರೋಪಕಾರಿ	ನಾ ಪರೋಪಕಾರಿ
ಗೋಪಾಲನು ಬರೆಯುತ್ತಾನೆ.	ಗೋಪಾಲ ಬರೆಯುತ್ತಾನೆ.
ರಾಮನು ಈ ಕೆಲಸವನ್ನು ಮಾಡಿದನು	ರಾಮ ಈ ಕೆಲಸ ಮಾಡಿದನ್ನು
ರಾಮನು ರಾವಣನನ್ನು ಕೊಂದನು	ರಾಮ ರಾವಣನ ಕೊಂದನು.

ದ್ವಿತೀಯ ವಿಭಕ್ತಿ

ಉರ್ದು ಭಾಷಿಕರ ಮಕ್ಕಳು ದ್ವಿತೀಯ ವಿಭಕ್ತಿ ಪ್ರತ್ಯಯ 'ಅನ್ನು' ಬದಲು ಚತುರ್ಥಿ ವಿಭಕ್ತಿ ಪ್ರತ್ಯಯ 'ಗೆ' ಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ಮತ್ತು ಬರೆಯುವ ಮಾದರಿ
ರಾಜನನ್ನು ಕರೆ	ರಾಜಗೆ ಕರೆ
ಮರವನ್ನು ತರಿ	ಮರಗೆ ತರೆ
ರಾಮನು ರಾವಣನನ್ನ ಕೊಂದನು	ರಾಮ ರಾವಣಗೆ ಕೊಂದನು
ಅವರನ್ನು ಕರೆ	ಅವರ್ಗೆ ಕರೆ
ನಾಯಿಯನ್ನು ಕರೆ	ನಾಯಿಗೆ ಕರೆ
ಹಸುವನ್ನು ಹೊಡೆ	ಹುಸುಗೆ ಹೊಡೆ

ಮಾನವೇತರ ಜೀವಿಗಳಾದ ನಾಯಿ, ಹಸು, ಎಮ್ಮೆ ಮುಂತಾದ ಪ್ರಾಣಿಗಳನ್ನು ಮಾನವ ಜೀವಿಗಳಂತೆ ಸಂಬೋಧಿಸುವುದು ವಿಶಿಷ್ಟ. ಹಾಗೆಯೇ ಮಾನವ ಜೀವಿಗಳಾದ ತಂದೆ, ತಾಯಿ, ಅಣ್ಣ ತಮ್ಮ, ಅಕ್ಕ, ತಂಗಿ ಮುಂತಾದ ಬಂದುತ್ವ ಸೂಚಕ ಪದಗಳನ್ನು ಮಾನವೇತರ ಜೀವಿಗಳಂತೆ ಸಂಬೋಧಿಸುವುದು ಇವರ ಕನ್ನಡದ ಮತ್ತೊಂದು ವೈಶಿಷ್ಟ್ಯ. ದ್ವಿತೀಯ ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ ಚತುರ್ಥಿ ವಿಭಕ್ತಿ ಪ್ರತ್ಯಯ ಬಳಸುವುದು ಇವರ ಬರವಣಿಗೆಯಲ್ಲಿ ಕಂಡುಬರುವುದು ಪ್ರಮುಖ ವೈಶಿಷ್ಟ್ಯ. ಭೀಮನನ್ನು ಕರೆ ಮತ್ತು ಭೀಮನಿಗೆ ಕರೆ ಎರಡೂ ಸನ್ನಿವೇಶದಲ್ಲಿ ಉರ್ದು ಭಾಷೆಯಲ್ಲಿ 'ಭೀಮಕೋ ಬುಲಾವ್' ಎಂದೇ ಸಂಬೋಧಿಸುತ್ತಾರೆ. ಹಾಗಾಗಿ ಉರ್ದು ಭಾಷೆಯಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯದ ಕೆಲಸವನ್ನು ಚತುರ್ಥಿ ವಿಭಕ್ತಿ ಪ್ರತ್ಯಯವೇ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಉರ್ದು ಭಾಷಿಕರ ಮಕ್ಕಳ ಕನ್ನಡ ಓದು ಮತ್ತು ಬರವಣಿಗೆಯಲ್ಲಿ ಚರ್ತುರ್ಥಿ ವಿಭಕ್ತಿ ಪ್ರತ್ಯಯ ಪ್ರಧಾನವಾಗಿ ಬಳಕೆಯಲ್ಲಿರುವುದು ಕಂಡುಬರುವುದು. ಇದು ಅವರ ಮಾತೃಭಾಷೆಯಾದ ಉರ್ದು ಪ್ರಭಾವದಿಂದಲೇ ಹೊರತು ಕನ್ನಡ ಭಾಷೆಯ ಪ್ರಭಾವದಿಂದಲ್ಲ.

ಚತುರ್ಥಿ ವಿಭಕ್ತಿ ಪ್ರತ್ಯಯ

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಉಚ್ಚರಿಸುವ ಮತ್ತು ಬರೆಯುವ ಮಾದರಿ
ಕೂಲಿಯವನಿಗೆ	ಕೂಲಿಗೆ
ಮಗುವಿಗೆ	ಮಗಿಗೆ
ಮರಕ್ಕೆ	ಮರಗೆ
ನನಗೆ	ನಂಗೆ
ಕಾಲುಗೆ	ಕಾಲಿಗೆ

೫.೬ ಸರ್ವನಾಮ ವಿಚಾರ

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಇವನು ಹುಡುಗ	ಇದು ಹುಡುಗ ಇದೆ
ಇವಳು ಹುಡುಗಿ	ಇದು ಹುಡುಗಿ ಇದೆ

ಕನ್ನಡ ಭಾಷೆಯಲ್ಲಿ ಸರ್ವನಾಮ ಮತ್ತು ನಿರ್ದೇಶಕ ಸರ್ವನಾಮ ಎಂಬುವು ಬೇರೆ ಬೇರೆಯಾಗಿ ಬರವಣಿಗೆಯಲ್ಲಿ ಬಳಕೆ ಮಾಡುತ್ತೇವೆ. ಆದರೆ ಆದರೆ ಉರ್ದು ಭಾಷಿಕರ ಎಲ್ಲ ತರಗತಿ ಮಕ್ಕಳು ಕನ್ನಡ ಪದ ಮತ್ತು ವಾಕ್ಯಗಳನ್ನು ಓದುವಾಗ ಮತ್ತು ಬರೆಯುವಾಗ 'ಇವನು' ಎಂಬುದರ ಬದಲು 'ಇದು' ಎಂದು ಬರೆಯುವುದನ್ನು ಕಾಣುತ್ತೇವೆ. ಈ ಒಂದು ವ್ಯತ್ಯಾಸ ಮಾಡಲು ಕಾರಣ ಅವರ ಮಾತೃಭಾಷೆಯಾದ ಉರ್ದು. ಸರ್ವನಾಮ ಮತ್ತು ನಿರ್ದೇಶನದ ಸರ್ವನಾಮ ಎರಡು ಒಂದೇ ಪರಿಸರದಲ್ಲಿ ಬಳಸುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಈ ಮಾದರಿಯ ವ್ಯತ್ಯಾಸ ಮಾಡಿ ಓದುವರು ಮತ್ತು ಬರೆಯುವರು.

೫.೭ ವಿಶೇಷಣಗಳ ವಿಚಾರ

ಉರ್ದು ಭಾಷಿಕ ಮಕ್ಕಳು ಶುದ್ಧ ವಿಶೇಷಣದ ಬದಲಾಗಿ ವಿಶೇಷಣದ ಕಾರಕ ರೂಪವನ್ನು ಬಳಸುವರು. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವರು.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ದೊಡ್ಡ ಹುಡುಗ	ದೊಡ್ಡದು ಹುಡುಗ
ದೊಡ್ಡ ಹುಡುಗಿ	ದೊಡ್ಡದು ಹುಡುಗಿ
ದೊಡ್ಡ ಹುಡುಗರು	ದೊಡ್ಡದು ಹುಡುಗರು
ಈ ದೊಡ್ಡ ಮನೆ ನಿಮ್ಮದು?	ಈ ದೊಡ್ಡದು ಮನೆ ನಿಮ್ಮದಾ
ಆ ಚಿಕ್ಕ ಪುಸ್ತಕ ತನ್ನಿ	ಆ ಚಿಕ್ಕದು ಪುಸ್ತಕ ತನ್ನಿ
ಈ ದಪ್ಪ ಪೆನ್ನ ಯಾರದು	ಈ ದಪ್ಪದು ಪೆನ್ನ ಯಾರದು?

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ವಾಕ್ಯದಲ್ಲಿ ಶುದ್ಧ ವಿಶೇಷಣದ ಬದಲಾಗಿ ವಿಶೇಷಣ ಕಾರಕ ರೂಪವನ್ನು ಬಳಸುತ್ತಾರೆ. ಈ ಒಂದು ವ್ಯತ್ಯಾಸಕ್ಕೆ ಕಾರಣ "ದು" ಧ್ವನಿ ಕನ್ನಡ ಭಾಷೆಯದೆ ಅಥವಾ ಉರ್ದು ಭಾಷೆಯದೆ ಎಂಬುವುದು ಮುಖ್ಯವಾದ ಅಂಶ. ಇದರ ಸ್ಪಷ್ಟತೆಗಾಗಿ

ಕನ್ನಡ ಪರಿಸರದ "ದು" ಧ್ವನಿ ಬಳಕೆ ನೋಡಬಹುದು. "ನಿನ್ನದು ಆ ತೀರ ಮತ್ತು ನನ್ನದು ಈ ತೀರ ಈ ಎರಡು ಸರಳ ವಾಕ್ಯಗಳಲ್ಲಿ ಬಳಕೆಯಾಗಿರುವ 'ದು' ಧ್ವನಿ ಕಿವಿಗೆ ಬಿದ್ದರೆ ಏನೂ ಅನ್ನಿಸುವದಿಲ್ಲ. ಆದರೆ ಉರ್ದು ಭಾಷಿಕ ಮಕ್ಕಳಲ್ಲಿ 'ದು' ಧ್ವನಿ ಬಳಕೆ ವಿಶಿಷ್ಟವಾಗಿದೆ. ಆದ್ದರಿಂದ 'ದು' ಧ್ವನಿಯನ್ನು ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಿಂದ ಸ್ವೀಕರಿಸಿದ್ದಾರೆ ಹೊರತು ಉರ್ದು ಭಾಷೆಯಿಂದಲ್ಲ ಅಂದರೆ ಇಲ್ಲಿ ಸೌಲಭ್ಯಕಾಂಕ್ಷೆಯಿಂದ ಅಥವಾ ಗೊಂದಲದಿಂದ ಈ ತರಹದ ವಾಕ್ಯಗಳನ್ನು ಬಳಕೆ ಮಾಡುವುದು ಕಂಡುಬರುವುದೆಂದು ಹೇಳಬಹುದು.

ವಿಶೇಷ ಮತ್ತು ವಿಶೇಷ್ಯ ಇವೆರಡು ಒಟ್ಟಿಗೆ ಬಾರದೆ ಹಿಂದೆಯೂ ಮುಂದೆಯೂ ಅಂದರೆ ವಿಶೇಷ್ಯದ ನಂತರ ವಿಶೇಷಣ ಬಳಕೆ ಮಾಡುವರು. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುವರು.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಚಿಕ್ಕ ಮನೆ	ಮನೆ ಚಿಕ್ಕದು
ದೊಡ್ಡ ಗುಟ್ಟು	ಗುಟ್ಟು ದೊಡ್ಡದು

ಈ ರೀತಿಯ ಗೊಂದಲದಿಂದ ಹಾಗೂ ಆಡುಮಾತಿನ ಪ್ರಭಾವದಿಂದ ಬರೆಯಲು ಕಾರಣವಿರಬಹುದು. ಉರ್ದುಭಾಷೆಯಲ್ಲಿ ನಾಮಪದಗಳ ಲಿಂಗ ವಚನಕ್ಕೆ ತಕ್ಕಂತೆ ರೂಪ ಬದಲಾವಣೆಯನ್ನು ಹೊಂದುವುದಿಲ್ಲ. ಆದರೆ ಉರ್ದುವಿನಲ್ಲಿ ವಿಶೇಷಣಗಳು ತನ್ನ ಮುಂದಿನ ನಾಮಪದದ ಲಿಂಗ ವಚನಕ್ಕೆ ತಕ್ಕಂತ ರೂಪ ಬದಲಾವಣೆ ಹೊಂದುವುದನ್ನು ಕಾಣುತ್ತೇವೆ.

೫.೮ ಸಂಖ್ಯಾ ವಾಚಕಗಳ ವಿಚಾರ

ಉರ್ದುಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿ ಸಂಖ್ಯಾಸೂಚಕ ಮತ್ತು ಮಾನವ ಸೂಚಿತ ಸಂಖ್ಯಾವಾಚಕ ಎರಡು ಪರಿಸರಕ್ಕೂ ಒಂದೇ ತೆರನಾದ ಸಂಖ್ಯಾವಾಚಿ ಸೂಚಕ ಪ್ರತಯವನ್ನು ಬಳಸುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿ ಮಕ್ಕಳು ಮಾಡುತ್ತಾರೆ.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಒಂದು ಊರಿನಲ್ಲಿ ಒಬ್ಬ ಮುದುಕನಿದ್ದ	ಒಂದು ಊರಿನಲ್ಲಿ ಒಂದು ಮುದುಕನಿದ್ದ
ಒಬ್ಬ ಮನುಷ್ಯ ಒಂದು ಊರಿನಲ್ಲಿ ಇರುವುದಿಲ್ಲ	ಒಂದು ಮನುಷ್ಯ ಒಂದೇ ಊರಿನಲ್ಲಿ ಇರುವುದಿಲ್ಲ.

ಉರ್ದುಭಾಷಿಕರ ಮಕ್ಕಳು ಸಂಖ್ಯಾಸೂಚಕ ಮತ್ತು ಮಾನವಸೂಚಿತ ಸಂಖ್ಯಾವಾಚಕ ಎರಡೂ ಪರಿಸರಕ್ಕೂ ಒಂದೇ ತೆರನಾದ ಸಂಖ್ಯಾಸೂಚಕ ಬಳಕೆ ಮಾಡುವರು. ಇದಕ್ಕೆ ಕಾರಣ ಉರ್ದು ಭಾಷೆಯಲ್ಲಿ ಸಂಖ್ಯಾವಾಚಕ ಮತ್ತು ಮಾನವಸೂಚಿತ ಸಂಖ್ಯಾವಾಚಕ ಎರಡು ಪರಿಸರಕ್ಕೂ ಒಂದೇ ಪ್ರತ್ಯಯ ಬಳಸುತ್ತಾರೆ. ಅದು "ಏಕ್". ಉದಾಹರಣೆಗೆ 'ಏಕ್ ಗಾಂವ್ ಮೇ ಏಕ್ ಬುಡಾ ತಾ' ಎನ್ನುವಲ್ಲಿ ಸಂಖ್ಯಾವಾಚಕ ಮತ್ತು ಮಾನವಸೂಚಿತ ಸಂಖ್ಯಾವಾಚಕ ಎರಡು ಪರಿಸರಕ್ಕೂ 'ಏಕ್' ಎಂಬ ಒಂದೇ ರೂಪ ಬಳಕೆಯಲ್ಲಿದೆ. ಹಾಗಾಗಿ ಅವರು ಕನ್ನಡದಲ್ಲಿ ಕಥೆ ಹೇಳುವ ಸಂದರ್ಭದಲ್ಲಿ ಮಾನವಸೂಚಿತ ಸಂಖ್ಯಾವಾಚಕಕ್ಕೂ "ಒಂದು"" ಎಂದೇ ಸಂಬೋಧಿಸುತ್ತಾರೆ. ಈ ಪ್ರಕ್ರಿಯೆ ಅವರ ಮಾತೃಭಾಷೆ ಪ್ರಭಾವದಿಂದುಂಟಾದುದೆ ಹೊರತು, ವ್ಯವಹಾರಿಕ ಭಾಷೆಯಾದ ಕನ್ನಡದಿಂದ ಆದದ್ದಲ್ಲ ಎಂದು ಹೇಳಬಹುದು.

ಉರ್ದು ಭಾಷಿಕರ ಮಕ್ಕಳು ಸಂಖ್ಯಾವಾಚಕಗಳ ಷಷ್ಠಿ ರೂಪಗಳ ಬದಲಾಗಿ ನೇರವಾಗಿ ಸಂಖ್ಯಾವಾಚಕಗಳ ಬಳಕೆಯನ್ನೇ ಮಾಡುತ್ತಾರೆ. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಒಬ್ಬ ಮುಲ್ಲಾ	ಒಂದು ಮುಲ್ಲಾ
ಒಬ್ಬ ಹುಡುಗಿ	ಒಂದು ಹುಡುಗಿ
ಇಬ್ಬರು ಮನುಷ್ಯರು	ಎರಡು ಮನಷ್ಯರು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಸಂಖ್ಯಾವಾಚಕಗಳ ಷಷ್ಠಿ ರೂಪಗಳ ಬದಲಾಗಿ ನೇರವಾಗಿ ಸಂಖ್ಯಾವಾಚಕಗಳ ಬಳಕೆಯನ್ನೇ ಮಾಡುವುದನ್ನು ಕಾಣುತ್ತೇವೆ. ಈ ಒಂದು ವ್ಯತ್ಯಾಸ ಮಾಡಲು ಕಾರಣ ಅವರ ಮಾತೃಭಾಷೆ ಎಂದು ಹೇಳಬಹುದು.

೫.೯ ಕ್ರಿಯಾಪದ ವಿಚಾರ

ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ವಾಕ್ಯಗಳನ್ನು ಬಳಸುವಾಗ ಕ್ರಿಯಾಪದದಿಂದ ಕೊನೆಯಾಗುವ ವಾಕ್ಯಗಳಲ್ಲಿ 'ಇದೆ' ಎಂಬ ರೂಪವನ್ನು ಬಳಕೆ ಮಾಡುವರು. ಈ ಒಂದು ವ್ಯತ್ಯಾಸವನ್ನು ಎಲ್ಲ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಇವನು ಹುಡುಗ	ಇವನು ಹುಡುಗ ಇದೆ
ಇವಳು ಹುಡುಗಿ	ಇವಳು ಹುಡುಗಿ ಇದೆ
ಇದು ಪುಸ್ತಕ	ಇದು ಪುಸ್ತಕ ಇದೆ
ಅವರು ಅದ್ಯಾಪಕಿ	ಅವರು ಅಧ್ಯಾಪಕಿ ಇದ್ದಾರೆ

ಈ ಮೇಲಿನ ವಾಕ್ಯಗಳಲ್ಲಿ ಕನ್ನಡದಲ್ಲಿ ಕ್ರಿಯಾರೂಪವಿಲ್ಲದೆ ಕೇವಲ ನಾಮಪದಗಳಿಂದಲೇ ಆದ ಪೂರ್ಣ ವಾಕ್ಯಗಳಿವೆ. ಅಂತಹ ವಾಕ್ಯಗಳು ಅಧ್ಯಾಹಾರದಿಂದ ಕೂಡಿರುತ್ತವೆ. ಉರ್ದು ಭಾಷಿಕರ ಮಕ್ಕಳು ಕನ್ನಡದಲ್ಲಿ ವಾಕ್ಯದ ಕೊನೆಗೆ 'ಇದೆ' ರೂಪವನ್ನು ಸೇರಿಸಿ ಬಳಕೆ ಮಾಡುವರು. ಇದಕ್ಕೆ ಕಾರಣ ಅವರ ಮನೆಮಾತಿನಲ್ಲಿ 'ಯಾಹ ಲಡಕಾ ಹೈ' 'ಯಾಹಾ ಲಡಕಿ ಹೈ' ಇಲ್ಲಿ "ಹೈ" ಸಹಾಯಕ ಕ್ರಿಯಾರೂಪವಾಗಿರುತ್ತದೆ. ಉರ್ದುವಿನ "ಹೈ" ರೂಪಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಇದೆ' ರೂಪವೊಂದನ್ನು ಬಳಸುವುದು ರೂಢಿ. ಈ ಮಾದರಿಯ ವ್ಯತ್ಯಾಸಕ್ಕೆ ಅವರ ಮನೆಮಾತಿನ ಪ್ರಭಾವ ಇದೆ.

ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ಕನ್ನಡದಲ್ಲಿ ಪ್ರಶ್ನಾರ್ಥಕ ವಾಕ್ಯಗಳು ವಿಶಿಷ್ಟವಾಗಿವೆ.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಅದು ಪುಕ್ತಕಾನಾ?	ಅಲ್ಲ ಅದು ಪುಸ್ತಕ ಅಲ್ಲ
ಇಲ್ಲ ಅದು ಪುಸ್ತಕ ಇಲ್ಲ	ಅವರು ಬರ್ತಾರಾ?
ಇಲ್ಲ ಅವರು ಬರಲ್ಲ	ಅಲ್ಲ ಅವರು ಬರಲ್ಲ

ಕನ್ನಡದ 'ಇಲ್ಲ' ಅಥವ 'ಅಲ್ಲ' ನಿಷೇಧ ರೂಪಕ್ಕೆ ಉರ್ದುನಲ್ಲಿ 'ನಹೀಂ' ಎಂದು ಬಳಕೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಉರ್ದು ಭಾಷಿಕರ ಮಕ್ಕಳು 'ಅಲ್ಲ' ಎಂಬ ನಿಷೇಧ ರೂಪವನ್ನು ವಾಕ್ಯದ ಮೊದಲು ಮತ್ತು ಕೊನೆಯಲ್ಲಿ ಬಳಸುವರು.

೫.೧೦ ವಾಕ್ಯ ರಚನೆಯ ವಿಚಾರ

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳ ವಾಕ್ಯ ರಚನೆಯ ಮಾದರಿ
ಭೂಮಿಕಾ ಆಟವನ್ನು ಆಡುತ್ತಾಳೆ	ಭೂಮಿಕಾ ಆಟ ಆಡುತ್ತಾಳೆ
ತೇಜಸ್ ಕ್ರೀಡಾಂಗಣಕ್ಕೆ ಹೋಗುತ್ತಾನೆ	ಕ್ರೀಡಾಂಗಣಕ್ಕೆ ತೇಜಸ್ ಹೋಗುತ್ತಾನೆ.
ಆಯೆಷಾ ಕಾಗದವನ್ನು ಬರೆಯುವಳು	ಕಾಗದವನ್ನು ಆಯೆಷಾ ಬರೆಯುವಳು
ರಾಬರ್ಟ್ ನಿನ್ನೆ ಊರಿಗೆ ಹೋದನು	ನಿನ್ನೆ ರಾಬರ್ಟ್ ಊರಿಗೆ ಹೋದನು
ರೂಪ ಪುಸ್ತಕವನ್ನು ಕೊಟ್ಟಳು	ಪುಸ್ತಕವನ್ನು ರೂಪ ಕೊಟ್ಟಳು
ವಿವೇಕ ನಾಳೆ ಬಂದಾನು	ನಾಳೆ ವಿವೇಕ ಬಂದಾನು

೧. ಉರ್ದು ಭಾಷಿಕರ ಮಕ್ಕಳಿಗೆ ಸ್ಪಷ್ಟವಾಗಿ ಕನ್ನಡ ಕರ್ತೃ ಕರ್ಮ ಕ್ರಿಯಾಪದಗಳ ಬಗ್ಗೆ ತಿಳುವಳಿಕೆ ಇಲ್ಲದೆ ಇರುವುದು.

೨. ಉರ್ದು ಭಾಷಿಕರ ಮಕ್ಕಳಿಗೆ ಕರ್ತೃ ಬರುವ ಸ್ಥಾನದಲ್ಲಿ ಕರ್ತೃ ಪದ ಬರಬೇಕು ಕರ್ಮ ಪದ ಬರುವ ಸ್ಥಾನದಲ್ಲಿ ಕರ್ಮ ಪದ ಬರಬೇಕು ಕ್ರಿಯಾಪದ ಬರುವ ಸ್ಥಾನದಲ್ಲಿ ಕ್ರಿಯಾಪದವೇ ಬರಬೇಕು ಎಂಬ ಬಗ್ಗೆ ತಿಳಿಯದೆ ಆಡುವ ಭಾಷೆಯಲ್ಲಿ ಉಪಯೋಗಿಸಿದಂತೆ ಪದಗಳನ್ನು ವಾಕ್ಯದಲ್ಲಿ ಬಳಸುವುದನ್ನು ನೋಡಿದರೆ ಉರ್ದು ಭಾಷಿಕರ ಮಕ್ಕಳಿಗೆ ಕರ್ತೃ ಕರ್ಮ ಕ್ರಿಯಾಪದಗಳ ಸ್ಪಷ್ಟ ಸ್ಥಾನಗಳ ಬಗ್ಗೆ ತಿಳಿಯದೆ ಇರುವುದು ಕಂಡುಬರುತ್ತದೆ.

೫.೧೧ ಸಮನಾರ್ಥಕ ಪದಗಳ ವಿಚಾರ

ಉರ್ದು ಭಾಷಿಕರ ಮಕ್ಕಳಿಗೆ ಸಮನಾರ್ಥಕ ಪದಗಳನ್ನು ಓದುವ ಮತ್ತು ಬರೆಯುವ ಪ್ರಕ್ರಿಯೆ ಗೊಂದಲದಿಂದ ಕೂಡಿದೆ.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಅರಸ	ಅರಸ
ಹೆಂಡತಿ	ಹೆಣತಿ
ಹತ್ತಿರ	ಹತ್ತಿರ
ಬಂಗಾರ	ಬಂಗಾರ

ಉರ್ದು ಭಾಷಿಕರ ಮಕ್ಕಳಿಗೆ ಸ್ವಂತ ವಾಕ್ಯ ರಚನೆಯಲ್ಲೂ ಕೆಲವು ತೊಡಕುಗಳಿವೆ. ಕನ್ನಡದಲ್ಲಿ 'ಇದು ಹುಲಿ, ಇದು ಹಳ್ಳಿ ಮತ್ತು ಇದು ಕಾಲು' ಎಂಬ ರೂಪಗಳನ್ನು ಕೆಳಗಿನಂತೆ ಓದುವರು ಮತ್ತು ಬರೆಯುವರು.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಇದು ಹುಲಿ	ಇದು ಹುಲಿ ಇದೆ
ಇದು ಹಳ್ಳಿ	ಇದು ಹಳ್ಳಿ ಇದೆ
ಇದು ಹಲ್ಲಿ	ಇದು ಹಲ್ಲಿ ಇದೆ
ಇದು ಕಾಲು	ಇದು ಕಾಲು ಇದೆ

ಉರ್ದು ಭಾಷಿಕರ ಮಕ್ಕಳಿಗೆ ವಿರುದ್ಧಾರ್ಥಕ ಪದಗಳ ಕಲ್ಪನೆ ಇಲ್ಲದೆ ಇರುವುದು ಕೆಳಗಿನ ಉದಾಹರಣೆಗಳಿಂದ ತಿಳಿಯಬಹುದು.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳ ಬರಹದ ಕನ್ನಡ
ಬಡತನ	ಬಡವರು
ಕಷ್ಟ	ಕಷ್ಟ
ಕಡಿಮೆ	ಸ್ವಲ್ಪ
ಹುಟ್ಟು	ಹುಟ್ಟುವುದು

ಉರ್ದು ಭಾಷಿಕರ ಮಕ್ಕಳಿಗೆ ಕನ್ನಡ ಪದಗಳನ್ನು ಕೂಡಿಸಿ ಬರೆಯಲು ಕೇಳಿದಾಗ ಪ್ರಕೃತಿ ಮತ್ತು ಪ್ರತಯಗಳನ್ನು ಸೇರಿಸಿ ಒಪ್ಪಿತ ಬರವಣಿಗೆಯ ಮಾದರಿಯಲ್ಲಿ ಬರೆಯಲಾರರು.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಮಳೆ+ಕಾಲ = ಮಳೆಗಾಲ	ಮಳೆಕಾಲ
ಕಿರು+ತೆರೆ = ಕಿರುದೆರೆ	ಕಿರುತೆರೆ
ಸಿರಿ+ಕನ್ನಡ = ಸಿರಿಗನ್ನಡ	ಸಿರಿ ಕನ್ನಡ
ಹುಲಿ+ತೊಗಲು = ಹುಲಿತೊಗಲು	ಹುಲಿತೊಗಲು
ಕಣ್+ಪನಿ = ಕಂಬನಿ	ಕಣಪನಿ
ತತಿ+ತೋರು = ತಲೆದೀರು	ತಲೆತೋರು
ಪರಿಚಯ+ಅನ್ನು = ಪರಿಚಯದನ್ನು	ಪರಿಚಯನ್ನು
ದೂರದರ್ಶನ+ಅನ್ನು =ದೂರದರ್ಶನವನ್ನು	ದೂರದರ್ಶನವನ್ನು
ದಬ್ಬ+ಆಗು = ದಟ್ಟವಾಗು	ದಟ್ಟಾಗ
ಗುರು+ಇಗೆ = ಗುರುವಿಗೆ	ಗುರುಗೆ

ಉರ್ದು ಭಾಷಿಕರ ಮಕ್ಕಳಿಗೆ ಕನ್ನಡ ಪದಗಳನ್ನು ಕೂಡಿಸಿ ಬರೆಯಲು ಹೇಳಿದಾಗ ಪ್ರಕೃತಿ ಮತ್ತು ಪ್ರತ್ಯಯಗಳನ್ನು ಸೇರಿಸಿ ಬರೆಯದೆ ನಾವು ಕೊಟ್ಟ ಪದಗಳನ್ನು ಕೊಟ್ಟಂತೆ ಅಧಿಕ (+) ಚಿಹ್ನೆ ತೆಗೆದು ಪದಗಳನ್ನು ಬರೆಯುವುದನ್ನು ಕಾಣುತ್ತೇವೆ. ಈ ಒಂದು ವ್ಯತ್ಯಾಸ ಮಾಡಲು ಕಾರಣ ಪ್ರಕೃತಿ ಮತ್ತು ಪ್ರತ್ಯೇಯಗಳ ಕಲ್ಪನೆ ಇರದೆ ಇರುವುದರಿಂದ ಈ ತೆರನಾದ ವ್ಯತ್ಯಾಸ ಮಾಡುವರು.

ಉರ್ದು ಭಾಷಿಕರ ಮಕ್ಕಳು ಗುಂಪಿಗೆ ಸೇರದ ಪದಗಳನ್ನು ಸರಿಯಾಗಿ ಓದುತ್ತಾರೆ. ಆದರೆ ಸರಿಯಾಗಿ ಗುರುತಿಸಲಾರರು.

ಬರಹದ ಕನ್ನಡ	ಗುಂಪಿಗೆ ಸೇರದ ಪದಗಳು	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಲಾಂಛನ, ಚಿಹ್ನೆ, ಸಂಕೇತ, ನಿಯಮ	ನಿಯಮ	ಚಿಹ್ನೆ
ಯೋಧ, ವೀರ, ಶೂರ, ಧೀರ,	ಯೋಧ	ವೀರ
ಸಂಗಾತಿ, ಸಹೋದರ, ಸಂಗಡಿಗ, ಜೊತೆಗಾರ	ಸಂಗಾತಿ	ಸಂಗಡಿಗ
ಅಡಗು, ಅವಿತುಕೊಳ್ಳು, ಓಡಿಹೋಗು, ಮುಚ್ಚಿಟ್ಟುಕೊ	ಓಡಿಹೋಗು	ಅಡಗು

ಬಿಟ್ಟಿರುವ ಜಾಗವನ್ನು ಭರ್ತಿಮಾಡಿ ಎಂಬ ಪ್ರಶ್ನೆಯನ್ನು ಉರ್ದುಭಾಷಿಕರ ಮಕ್ಕಳು ಸರಿಯಾಗಿ ಗ್ರಹಿಸಿಲ್ಲ. ಉರ್ದುಭಾಷಿಕರ ಮಕ್ಕಳಿಗೆ ಕಾಲ ಸೂಚಕ ಪ್ರತ್ಯಯಗಳ ಪರಿಕಲ್ಪನೆ ಇಲ್ಲ ಎಂಬುದು ಇದರಿಂದ ತಿಳಿಯುತ್ತದೆ.

ಬರಹದ ಕನ್ನಡ	ಸರಿಯಾದ ರೂಪ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ
ಹುಸೇನ್ ನಿನ್ನೆ ಊರಿಗೆ ಹೋದನು/ ಹೋಗುತ್ತಿದ್ದಾನೆ/ ಹೋಗುತ್ತಾನೆ	ಹೋದನು	ಹುಸೇನ್ ನಿನ್ನೆ ಊರಿಗೆ ಹೋಗುತ್ತಿದ್ದಾನೆ
ಶೀಲ ಕಳೆದ ವರ್ಷ ಒಂದು ನಾಯಿಯನ್ನು ಸಾಕಿದಳು/ ಸಾಕಿದ್ದಳು/ ಸಾಕುತ್ತಿದ್ದಾಳೆ	ಸಾಕಿದಳು	ಶೀಲ ಕಳೆದ ವರ್ಷ ಒಂದು ನಾಯಿಯನ್ನು ಸಾಕುತ್ತಿದ್ದಾಳೆ
ನಾನು ನಾಳೆ ಓಟದ ಸ್ಪರ್ದೆಯಲ್ಲಿ ಭಾಗವಹಿಸಿದೆ / ಭಾಗವಹಿಸುವೆ / ಭಾಗವಹಿಸುತ್ತೇನೆ	ಭಾಗವಹಿಸುತ್ತೇನೆ	ನಾನು ನಾಳೆ ಓಟದ ಸ್ಪರ್ದೆಯಲ್ಲಿ ಭಾಗವಹಿಸಿದೆ
ಜ್ಯೋತಿ ಇಂದು ಅಜ್ಜನ ಮನೆಗೆ ಹೋಗುವಳು/ ಹೋಗುತ್ತಾಳೆ/ ಹೋದಳು	ಹೋಗುವಳು	ಜ್ಯೋತಿ ಅಜ್ಜನ ಮನೆಗೆ ಹೋದಳು
ಮೇರಿ ಸಂಜೆ ಗೆಳೆಯರ ಜೊತೆ ಆಟವಾಡಲು ಬರುತ್ತಾರೆ / ಬರುವಳು / ಬಂದಳು	ಬರುವಳು	ಮೇರಿ ಸಂಜೆ ಗೆಳೆಯರ ಜೊತೆ ಆಟವಾಡಲು ಬರುತ್ತಾರೆ

ಉರ್ದು ಭಾಷಿಕರ ಮಕ್ಕಳಿಗೆ ಕನ್ನಡ ಕಲಿಕೆಯ ಭಾಷೆಯಾಗಿರುವುದರಿಂದ ಕನ್ನಡ ಪದಕೋಶದ ಕೊರತೆಯಿಂದ ಈ ಕೆಳಗಿನಂತೆ ವ್ಯತ್ಯಾಸ ಮಾಡಿ ಓದುವರು ಮತ್ತು ಬರೆಯುವರು.

ಬರಹದ ಕನ್ನಡ	ಉರ್ದು ಭಾಷಿಕರ ಮಕ್ಕಳು ಓದುವ ಮತ್ತು ಬರೆಯುವ ರೂಪ	ಸರಿಯಾದ ರೂಪ
ದೀನ–ದಲಿತ	ದಾನ–ದಾನತ	ದಾನವ
ಬಡವ–ಬಲ್ಲಿದ	ನೋವು–ನೋವುದ	ನಲಿವು
ಪೂರ್ಣ–ಅಪೂರ್ಣ	ಗೌರವ–ಗೌರವರ	ಅಗೌರವ
ಏಕತೆ–ವಿವಿಧತೆ	ನಿರ್ದಿಷ್ಟತೆ–ನಿರ್ದಿಷ್ಟ	ಅನಿಷ್ಟತೆ
ಕತೆ–ಕತೆಗಾರ್ತಿ	ನೃತ್ಯ–ನೃತ್ಯ	ನೃತ್ಯಗಾರ್ತಿ

ಉರ್ದು ಭಾಷಿಕರ ಮಕ್ಕಳು ಕನ್ನಡ ಸ್ವರ ಧ್ವನಿಗಳನ್ನು ವ್ಯತ್ಯಾಸ ಮಾಡಿ ಓದುವ/ಬರೆಯುವ ರೂಪಗಳು

ಕ್ರಸಂ.	ಕನ್ನಡ ಸ್ವರ ಧ್ವನಿಗಳು	ಹೆಚ್ಚುವರಿಯಾಗಿ ಓದುವ/ ಬರೆಯುವ ರೂಪ	ಲೋಪ ಮಾಡಿ ಓದುವ/ ಬರೆಯುವ ರೂಪ	ಬದಲಾವಣೆ ಮಾಡಿ ಓದುವ/ ಬರೆಯುವ ರೂಪ
೧.	ಅ			ಆ,
೨.	ಆ			ಅ,
೩.	ಇ			ಈ,
೪.	ಈ			ಇ,
೫.	ಉ			ಊ
೬.	ಊ			ಉ
೭.	ಋ			ರು,
೮.	ಎ			ಏ,
೯.	ಏ			ಎ
೧೦.	ಐ			ಅಯ್
೧೧.	ಒ			ಓ
೧೨.	ಓ			ಒ
೧೩.	ಔ			ಅವ್
೧೪.	ಅಂ			ಅ
೧೫.	ಅಃ			ಅ

ಉರ್ದು ಭಾಷಿಕರ ಮಕ್ಕಳು ಕನ್ನಡ ವ್ಯಂಜನ ಧ್ವನಿಗಳನ್ನು ವ್ಯತ್ಯಾಸ ಮಾಡಿ ಓದುವ/ಬರೆಯುವ ರೂಪಗಳು

ಕ್ರಸಂ.	ಕನ್ನಡ ವ್ಯಂಜನ ಧ್ವನಿಗಳು	ಹೆಚ್ಚುವರಿಯಾಗಿ ಓದುವ/ ಬರೆಯುವ ರೂಪ	ಲೋಪ ಮಾಡಿ ಓದುವ/ ಬರೆಯುವ ರೂಪ	ಬದಲಾವಣೆ ಮಾಡಿ ಓದುವ/ ಬರೆಯುವ ರೂಪ
೧	ಕ			ಖ
೨	ಖ			ಖ಼, ಕ
೩	ಗ			ಘ಼, ಕ
೪	ಘ			ಗ
೫	ಙ			
೬	ಚ			ಛ, ಶ, ಸ
೭	ಛ			ಚ
೮	ಜ			ಝ, ಜ಼
೯	ಝ			ಞ಼
೧೦	ಞ			
೧೧	ಟ			ಠ, ಡ
೧೨	ಠ			ಐ
೧೩	ಡ			ಢ, ಟ,ಣ,ದ
೧೪	ಢ			ಡ
೧೫	ಣ			ನ, ಲ
೧೬	ತ			ಥ
೧೭	ಥ			ತ
೧೮	ದ			ಧ
೧೯	ಧ			ದ
೨೦	ನ			ಖಿ
೨೧	ಪ			ಫ, ಫ಼
೨೨	ಫ			ಪ
೨೩	ಬ			ಭ, ವ
೨೪	ಭ			ಬ
೨೫	ಮ			ವ
೨೬	ಯ			ಎ
೨೭	ರ			ಡ
೨೮				
೨೯	ವ			ಒ
೩೦	ಶ			ಸ
೩೧	ಷ			ಸ
೩೨				
೩೩	ಹ			ಅ
೩೪	ಳ			ಲ, ಡ
೩೫	ಕ್ಷ	ಕಸ		
೩೬	ಜ್ಞ	ಗನ		

ಉರ್ದು ಭಾಷಿಕರ ಮಕ್ಕಳು ಕನ್ನಡ ಗುಣಿತಕ್ಷರಗಳನ್ನು ವ್ಯತ್ಯಾಸ ಮಾಡಿ ಓದುವ/ಬರೆಯುವ ರೂಪಗಳು

ಕ್ರಸಂ.	ಕನ್ನಡ ಗುಣಿತಕ್ಷರಗಳು	ಹೆಚ್ಚುವರಿಯಾಗಿ ಓದುವ/ ಬರೆಯುವ ರೂಪ	ಲೋಪ ಮಾಡಿ ಓದುವ/ ಬರೆಯುವ ರೂಪ	ಬದಲಾವಣೆ ಮಾಡಿ ಓದುವ/ ಬರೆಯುವ ರೂಪ
೧	ಕಾ			ಖಾ
೨	ಕೆ			ಖೆ
೩	ಕೇ			ಖೇ
೪	ಕೈ			ಖೈ
೫	ಘೀ			ಗೀ
೬	ಠೀ			ಟೀ
೭	ಠೇ			ಟೇ
೮	ಛಿ			ಚಿ
೯	ಛೂ			ಚೂ
೧೦	ಚೀ			ಸೀ
೧೧	ಚು			ಸು
೧೨	ಚೆ			ಸೆ
೧೩	ಗಿ			ಕಿ
೧೪	ಹ			ಅ
೧೫	ಹಾ			ಆ
೧೬	ಹೈ			ಅಯ್
೧೭	ಮ			ಘ
೧೮	ಫೆ			ಫೆ
೧೯	ಮೋ			ಫೊ
೨೦	ಡ			ದ
೨೧	ಡಾ			ದಾ
೨೨	ಡಿ			ದಿ
೨೩	ಡೋ			ದೋ
೨೪	ಥೇ			ತೇ
೨೫	ಖಾ			ಕಾ
೨೬	ಕು			ಖು
೨೭	ಶಾ			ಸಾ
೨೮	ಶಿ			ಸಿ
೨೯	ಶೀ			ಸೀ
೩೦	ಶೊ			ಸೊ
೩೧	ಷ			ಸ
೩೨	ಷಾ			ಸಾ
೩೩	ಷಿ			ಸಿ

ಉರ್ದು ಭಾಷಿಕರ ಮಕ್ಕಳು ಕನ್ನಡ ದ್ವಿತ್ವಾಕ್ಷರಗಳನ್ನು ವ್ಯತ್ಯಾಸ ಮಾಡಿ ಓದುವ/ಬರೆಯುವ ರೂಪಗಳು

ಕ್ರಸಂ.	ಕನ್ನಡ ದ್ವಿತ್ವಕ್ಷರ ಧ್ವನಿಗಳು	ಹೆಚ್ಚುವರಿಯಾಗಿ ಓದುವ/ ಬರೆಯುವ ರೂಪ	ಲೋಪ ಮಾಡಿ ಓದುವ/ ಬರೆಯುವ ರೂಪ	ಬದಲಾವಣೆ ಮಾಡಿ ಓದುವ/ ಬರೆಯುವ ರೂಪ
೧	ಕ್ಕ			ಕ ್ಕ
೨	ಖ್ಖ			ಖ ್ಖ
೩	ಗ್ಗ			ಗ ್ಗ
೪	ಘ್ಘ			ಘ ್ಘ
೫	ಚ್ಚ			ಚ ್ಚ
೬	ಛ್ಛ			ಛ ್ಛ
೭	ಛ್ಛ			
೮	ಜ್ಜ			್ಚ ಜ ್ಜ
೯	ಝ್ಝ			ಝ ್ಝ
೧೦	ಟ್ಟ			ಐ
೧೧	ಠ್ಠ			ಠ ್ಠ
೧೨	ಠ್ಠ			್ಟ
೧೩	ಡ್ಡ			ಡ ್ಡ
೧೪	ಢ್ಢ			ಢ ್ಢ
೧೫	ಣ್ಣ			ಖಿ
೧೬	ತ್ತ			ತ ್ತ
೧೭	ಥ್ಥ			ಥ ್ಥ
೧೮	ದ್ದ			ದ ್ದ
೧೯	ಧ್ಧ			ಧ ್ಧ
೨೦	ದ್ಧ			್ದ
೨೧	ನ್ನ			ನ ್ನ
೨೨	ಪ್ಪ			ಪ ್ಪ
೨೩	ಫ್ಫ			ಫ ್ಫ
೨೪	ಫ್ಪ			್ಪ
೨೫	ಬ್ಬ			ಬ ್ಬ
೨೬	ಭ್ಭ			ಭ ್ಭ

೨೭	ಮ್ಮ	ಮ
೨೮	ಯ್ಯ	ಯ
೨೯	ರ್ರ	ರ
೩೦	೯	ರ
೩೧		
೩೨	ಲ	
೩೩	ಲ್ಲ	ಲ
೩೪	ವ್ವ	ವ
೩೫	ಶ್ಯ	ಸ
೩೬	ಷ್ಟ	ಸ
೩೭	ಸ್ಸ	ಸ
೩೮	ಹ್ಹ	ಹ
೩೯	ಳ್ಳ	ಳ
೪೦	ಕ್ಷ	ಕಸ
೪೧	ಜ್ಞ	ಗನ

ಶಿಕ್ಷಣ ಇಲ್ಲಾಖೆಯು ಅನುಷ್ಠಾನಗೊಳಿಸಿದ, ಬೋಧನೆ, ತರಬೇತಿಗಳ ಸ್ಥೂಲ ಪರಿಚಯವನ್ನು ಓದುಗರ ಅನುಕೂಲಕ್ಕಾಗಿ ಇಲ್ಲಿ ನೀಡಿದೆ.

ಶಿಕ್ಷಣ ಇಲಾಖೆಯ ವಿವಿಧ ಸ್ತರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೂರಕವಾಗಿರುವ ಸಮುದಾಯ ಪ್ರತಿನಿದಿಗಳಿಗೂ ನೀಡುವ ತರಬೇತಿಗಳ ಪರಿಚಯಾತ್ಮಕ ನೋಟ ಇಲ್ಲಿದೆ.

ಕ್ರಮ ಸಂ	ತರಬೇತಿ ಹೆಸರು	ತರಬೇತಿ ವಿಷಯ	ತರಬೇತಿ ಪಡೆಯುವವರು	ತರಬೇತಿ ದಿನಗಳ ಸಂಖ್ಯೆ	ತರಬೇತಿ ಉದ್ದೇಶಗಳು
01.	SPOT Special Orientation for Primary Teachers	ವಿಷಯಾಧಾರಿತ ಪುನಶ್ಚೇತನ	ಪ್ರಾಥಮಿಕ ಶಾಲಾ ಶಿಕ್ಷಣ	07	ರಾಷ್ಟ್ರೀಯ ಶಿಕ್ಷಣ ನೀತಿ ಪರಿಚಯ ಶಿಕ್ಷಕ ಬೋಧನಾ ಕೌಶಲ್ಯಗಳ ಪುನರ್ಮನನ ಪಠ್ಯ ಪೂರಕ ಚಟುವಟಿಕೆಗಳ ಪರಿಚಯ
02	ಚೈತನ್ಯ (ಭಾಗ-1)	ಪ್ರಾಥಮಿಕ ಹಂತದಲ್ಲಿ ಕನಿಷ್ಠ ಕಲಿಕಾ ಹಂತಗಳ ಪರಿಚಯ	ಪ್ರಾಥಮಿಕ ಶಾಲಾ ಶಿಕ್ಷಕರು	05	ಪ್ರಾಥಮಿಕ ಹಂತದಲ್ಲಿ ಸಾಮರ್ಥ್ಯಾಧಾರಿತ ಚಟುವಟಿಕೆ ಆಧಾರಿತ ಬೋಧನೆ, ಶಾಲಾ ವಾತಾವರಣ ಆಕರ್ಷಣೀಯ ಗೊಳಿಸುವುದು, ಸಂತಸದಾಯಕ ಕಲಿಕೆಗೆ ಅನುವುಮಾಡುವುದು
03	ಚೈತನ್ಯ (ಭಾಗ-2) (ಕನ್ನಡ)	ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಬೋಧಿಸುವ ಶಿಕ್ಷಕರು	ಹಿ. ಪ್ರಾ. ಶಾಲಾ ಶಿಕ್ಷಕರು	07	ಕನ್ನಡ ಭಾಷಾ ಪ್ರಭುತ್ವ ಬೆಳೆಸುವುದು, ಭಾಷಾ ಬೋಧನಾ ಕೌಶಲ ಬೆಳೆಸುವುದು (ಸಂವರ್ಧನೆಗೊಳಿಸುವುದು)
04	ಚೈತನ್ಯ -2 (ಸಮಾಜ ವಿಜ್ಞಾನ)	ಸಮಾಜ ವಿಜ್ಞಾನ ಬೋಧಿಸುವ ಶಿಕ್ಷಕರು	ಹಿ. ಪ್ರಾ. ಶಾಲಾ ಶಿಕ್ಷಕರು	07	ಇತಿಹಾಸ, ಪೌರನೀತಿ, ಭೂಗೋಳ ಕುರಿತು ಹೆಚ್ಚಿನ ಮಾಹಿತಿ, ಬೋಧನಾ ವಿಧಾನದ ಸ್ಪಷ್ಟತೆ
05	ಚೈತನ್ಯ -2 (ಗಣಿತ)	ಗಣಿತ ಬೋಧಿಸುವ ಶಿಕ್ಷಕರು	ಹಿ.ಪ್ರಾ. ಶಾಲಾ ಶಿಕ್ಷಕರು	07	ಗಣಿತ ಪರಿಕಲ್ಪನೆಗಳ್ಲಿ ಸ್ಪಷ್ಟತೆ, ಗಣಿತ ಕಲಿಕಾ ಬೋಧನೆಯಲ್ಲಿನ ಆತಂಕ, ನಿವಾರಣೆ
06	ಚೈತನ್ಯ	ವಿಜ್ಞಾನ ಬೋಧಿಸುವ ಶಿಕ್ಷಕರು	ಹಿ.ಪ್ರಾ.ಶಾಲಾ ಶಿಕ್ಷಕರು	07	ವೈಜ್ಞಾನಿಕ ಮನೋಭಾವ ಬೆಳೆಸುವುದು, ವಿಜ್ಞಾನ ಸಂಶೋಧನೆಗಳ ಬಗ್ಗೆ ಮಾಹಿತಿ ಕ್ಲಿಷ್ಟ ವಿಜ್ಞಾನ ಪರಿಕಲ್ಪನೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆ
07	ಚೈತನ್ಯ-2 (ಇಂಗ್ಲಿಷ್)	ಇಂಗ್ಲಿಷ್ ಬೋಧಿಸುವ ಶಿಕ್ಷಕರು	ಹಿ.ಪ್ರಾ. ಶಾಲಾ ಶಿಕ್ಷಕರು	07	ದ್ವಿತೀಯ ಭಾಷೆಯಾಗಿ ಇಂಗ್ಲಿಷ್ ಬೋಧನಾ ತಂತ್ರಗಳ ಪರಿಚಯ, ಶಿಕ್ಷಕರಲ್ಲೂ ಭಾಷಾ ಪ್ರಭುತ್ವ ಹೆಚ್ಚಿಸುವುದು.

08	ಶಿಕ್ಷಣದಲ್ಲಿ ರಂಗಕಲೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	ಪ್ರಾಥಮಿಕ ಶಾಲಾ ಶಿಕ್ಷಕರು	03	ರಂಗಕಲೆ ತಂತ್ರಗಳನ್ನು ತರಗತಿ ಬೋಧನೆಯಲ್ಲಿ ಅಳವಡಿಕೆ, ಸೃಜನಾತ್ಮಕ ಅಭಿವ್ಯಕ್ತಿಗೆ ಅವಕಾಶ
09	ಚೈನತ್ಯ ವಿತರಣೆ	ಪ್ರಾ. ಹಂತದ ಎಲ್ಲಾ ಶಿಕ್ಷಕರು	ಪ್ರಾಥಮಿಕ ಶಾಲಾ ಶಿಕ್ಷಕರು	03	ಬೋಧನೆ ಕಲಿಕೆಗೆ ಸಹಾಯಕವಾಗುವ ಉಪಕರಣ ತಯಾರಿಕೆ ಮತ್ತು ಬಳಕೆಯ ಕುರಿತು ಮಾರ್ಗದರ್ಶನ
10	ಜೀವನ ವಿಜ್ಞಾನ	ದೈಹಿಕ ಶಿಕ್ಷಕರು	ದೈಹಿಕ ಶಿಕ್ಷಕರು	05	ಯೋಗ, ಆರೋಗ್ಯ ಶಿಕ್ಷಣ, ವರ್ತನೆ, ದೈಹಿಕ ಶಿಕ್ಷಣ, ವ್ಯಾಯಾಮಗಳ ಕುರಿತು ಶಿಕ್ಷಕರಿಗೆ ಪ್ರಾಯೋಗಿಕ ಮಾರ್ಗದರ್ಶನ
11	ಸಮನ್ವಯ ಶಿಕ್ಷಣ	ಅಂಗವಿಕಲ ಮಕ್ಕಳ ನಿರ್ವಹಣೆ	ಪ್ರಾ. ಹಂತದ ಎಲ್ಲಾ ಶಿಕ್ಷಕರು	03	ಸಾಮಾನ್ಯ ತರಗತಿಗಳಲ್ಲಿ ವಿಕಲ ಚೇತನ ಮಕ್ಕಳನ್ನು ನಿಬಾಯಿಸುವ ಬಗ್ಗೆ ಮಾರ್ಗದರ್ಶನ
12	ಸೌರಭ	ತ್ರೈಮಾಸಿಕ ಪದ್ಧತಿ ಕುರಿತು	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	03	ತ್ರೈಮಾಸಿಕ ಪದ್ಧತಿ ಅಳವಡಿಕೆಯ ಕುರಿತು ಮಾರ್ಗದರ್ಶನ
13	ಬಹುಮುಖಿ	ಬಹುವರ್ಗ ಬೋಧನೆ ಕುರಿತು	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	03	ಪ್ರಾಥಮಿಕ ತರಗತಿಯುಗಳಲ್ಲಿ ಬಹುತರಗತಿಗಳನ್ನು ನಿರ್ವಹಣೆ ಮಾಡುವ ಬಗ್ಗೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಲಾಗುತ್ತದೆ.
14	ಸೃಜನ	ಮುಖ್ಯ ಶಿಕ್ಷಕರಿಗೆ	ಆಡಳಿತಾತ್ಮಕ ಮುಖ್ಯ ಶಿಕ್ಷಕರು	03	ಶಾಲಾ ಆಡಳಿತ ನಿರ್ವಹಣೆ ಕುರಿತು ಹಾಗೂ ಇಲಾಖಾ ನಿಯಮ, ಆರ್ಥಿಕ ವ್ಯವಹಾರ ನಿರ್ವಹಣೆ ಬಗ್ಗೆ ತಿಳಿವಳಿಕೆ
15	ನಲಿಕಲಿ	ನಲಿಕಲಿ ಬೋಧನಾ ಪದ್ಧತಿ ಬಗ್ಗೆ	1 ರಿಂದ 4ನೇ ತರಗತಿಗೆ ಬೋಧಿಸುವ ಶಿಕ್ಷಕರು	12	ನಲಿಕಲಿ ಕಲಿಕಾ ವಿಧಾನ ಚಾಲ್ತಿಯಲ್ಲಿರುವ ಶಾಲೆಗಳ ಶಿಕ್ಷಕರಿಗೆ ಬೋಧನಾ ಸಾಹಿತ್ಯ ರಚನೆ ಮಾಡಿಸಲು ತರಬೇತಿ ನೀಡಲಾಗುತ್ತದೆ.
16	ಹೊಂಗಿರಣ	ಪ್ರಶಿಕ್ಷಕರ ಬೋಧನಾ ಕೌಶಲಗಳು	ಶಿಕ್ಷಕರ ತರಬೇತಿ ಕೇಂದ್ರಗಳ ಪ್ರಶಿಕ್ಷಕರು	05	ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳ ಪ್ರಶಿಕ್ಷಕರಿಗೆ ಇಲಾಖಾ ಕಾರ್ಯಕ್ರಮಗಳ ಕುರಿತು ಮಾರ್ಗದರ್ಶನ
17	ಆಂಗ್ಲಭಾಷಾ ಬೋಧನೆ	ಆಂಗ್ಲಭಾಷಾ ಬೋಧನೆ ಬಗ್ಗೆ	ಪ್ರಾ. ಶಾಲೆಗಳಲ್ಲಿ ಇಂಗ್ಲೀಷ್ ಬೋಧಿಸುವುದು	10	ಹಿರಿಯ ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ ಬೋಧನೆಯನ್ನು ಪುನಶ್ಚೇತನಗೊಳಿಸುವುದು, ಕಲಿಕೆಗೆ ಸಹಾಯಕ ಸಾಮಗ್ರಿ ತಯಾರಿಕೆ.
18	ಯೋಗದೀಪಿಕಾ	ಯೋಗಶಿಕ್ಷಣ ಕುರಿತು	ದೈಹಿಕ ಶಿಕ್ಷಕರು	10	ಶಾಲೆಗಳಲ್ಲಿ 'ಯೋಗ' ತರಬೇತಿಯನ್ನು ಮಕ್ಕಳಿಗೆ ನೀಡುವ ಕುರಿತು ಶಿಕ್ಷಕರಿಗೆ ಮಾರ್ಗದರ್ಶನ

19	ಸ್ವಯಮೇವ	8ನೇ ತರಗತಿ ವಿಜ್ಞಾನ ಶಿಕ್ಷಕರಿಗೆ	ಟ.ಜಿ.ಟಿ. ಶಿಕ್ಷಕರು	05	ಹೊಸದಾಗಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ವಿಜ್ಞಾನ ಶಿಕ್ಷಕರಿಗೆ ವಿಜ್ಞಾನ, ಗಣಿತ ವಿಷಯಗಳಲ್ಲಿ ಪುನಶ್ಚೇತನ
20	ಪ್ರೇರಣಾ	ಇಲಾಖಾ ಪರಿಚಯ	ನೂತನ ಪ್ರಾ. ಶಾ. ಶಿಕ್ಷಕರು	15	ಹೊಸದಾಗಿ ನೇಮಕವಾದ ಪ್ರಾ. ಶಾ. ಶಿಕ್ಷಕರಿಗೆ ಸರ್ಕಾರದ ಯೋಜನೆ, ನೀತಿ ಹಾಗೂ ಶಿಕ್ಷಕರ ಜವಾಬ್ದಾರಿ ಕುರಿತು ತಿಳಿವಳಿಕೆ
21	ಚಿಣ್ಣರ ಅಂಗಳ	ಸೇತುಬಂಧ ಕಾರ್ಯಕ್ರಮ	ಚಿಣ್ಣರ ಅಂಗಳ ಕೇಂದ್ರ ಶಾಲೆ ಶಿಕ್ಷಕರು	10	ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಆರಂಭಗೊಂಡ ಚಿಣ್ಣರ ಅಂಗಳ ಕೇಂದ್ರ ನಿರ್ವಹಣೆ ಕುರಿತು ತರಬೇತಿ.
22	ಗುಣಮಂಥನ	ಮೌಲ್ಯಾಂಕನ ಪ್ರಕ್ರಿಯೆ	ಆಯ್ದ ಮೌಲ್ಯಮಾಪಕರು	04	ಮೌಲ್ಯಾಂಕನ ಕಾರ್ಯಕ್ರಮ ಹಾಗೂ ಮೌಲ್ಯಮಾಪನ ವಿಧಾನಗಳ ಕುರಿತು ಆಯ್ದ ಶಿಕ್ಷಕರಿಗೆ ತರಬೇತಿ.
23	ಮೌಲ್ಯಮಾಪನ	ಮೌಲ್ಯಮಾಪನ ತಂತ್ರಗಳು	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	05	ಪ್ರಶ್ನೆಪತ್ರಿಕೆ, ನೀಲನಕ್ಷೆ ತಯಾರಿಕೆ ಬಗ್ಗೆ ತಂತ್ರಗಳುಮಾರ್ಗದರ್ಶನ, ಮೌಲ್ಯಮಾಪನ ದಾಖಲೆ ನಿರ್ವಹಣೆ ಬಗ್ಗೆ ಚರ್ಚೆ
24	ಪರಿಹಾರ ಬೋಧನೆ	ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ನಿರ್ವಹಣೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	05	ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ನಿಭಾಯಿಸುವ ಬಗ್ಗೆ ಮಾರ್ಗದರ್ಶನ
25	ಸಮನ್ವಿತಾ	ಸಮನ್ವಯ ಶಿಕ್ಷಣ ಕುರಿತು	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	03	ವಿವಿಧ ದೋಷವುಳ್ಳ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಬಗ್ಗೆ ಶಿಕ್ಷಕರಿಗೆ ತಿಳಿವಳಿಕೆ ಮೂಡಿಸುವುದು.
26	ಯೋಜನೆ/ತರಗತಿ ಮೌಲ್ಯಮಾಪನ	ತ್ರೈಮಾಸಿಕ ಪದ್ಧತಿ ಬಗ್ಗೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	01	ಯೋಜನೆ ಕಾರ್ಯ ಹಂಚಿಕೆ ಮತ್ತು ತರಗತಿ ಹಂತದಲ್ಲಿ ಮೌಲ್ಯಮಾಪನ ನಡೆಸುವ ಬಗ್ಗೆ ತಿಳುವಳಿಕೆ
27	ಕಿರಣ	ಆಂಗ್ಲಭಾಷಾ ಬೋಧನೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	01	ಹಿರಿಯ ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ್ ಬೋಧನೆ, ಸಮಸ್ಯೆ-ಪರಿಹಾರಗಳ ಬಗ್ಗೆ ಮನವರಿಕೆ ಮಾಡುವುದು
28	ಅಂಕಿತ	ಗಣಿತ ಬೋಧನೆ ಬಗ್ಗೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	01	ಗಣಿತದ ಕ್ಲಿಷ್ಟ ಪರಿಕಲ್ಪನೆಗಳ ಸರಳೀಕರಣ ಹಾಗೂ ಪಾಠೋಪಕರಣ ತಯಾರಿಕೆ ಕುರಿತು ಮಾರ್ಗದರ್ಶನ
29	ದರ್ಪಣಾ	ವಿಜ್ಞಾನ ಬೋಧನೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	01	ವಿಜ್ಞಾನದಲ್ಲಿ ಮೌಲ್ಯಪಾಮಪನ ತಂತ್ರ ಹಾಗೂ ಪ್ರಯೋಗಗಳನ್ನು ಸಂಘಟಿಸುವ ಕುರಿತು ಮಾರ್ಗದರ್ಶನ
30	ಭೂಮಿಕಾ ಸಮಾಜ ವಿಜ್ಞಾನ ಬೋಧನೆ	ಸಮಾಜ ವಿಜ್ಞಾನ ಬೋಧನೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	01	ಭೂಗೋಳ, ಸಮಾಜ ವಿಜ್ಞಾನವನ್ನು ಆಸಕ್ತಿದಾಯಕವಾಗಿ ಮಾಡುವ ಬಗ್ಗೆ ಮಾರ್ಗದರ್ಶನ

31	ಚುಕ್ಕಿಚಿನ್ನ	ಕೇಳಿಕಲಿ ಕಾರ್ಯಕ್ರಮದ ಬಗ್ಗೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	01	ರೇಡಿಯೋ ಕಾರ್ಯಕ್ರಮವನ್ನು ತರಗತಿ ಮಟ್ಟದಲ್ಲಿ ಉತ್ತಮವಾಗಿ ನಿರ್ವಹಿಸುವ ಬಗ್ಗೆ ತಿಳುವಳಿಕೆ
32	ಕ್ರಿಯಾ ಸಂಶೋಧನೆ	ಕ್ರಿಯಾ ಸಂಶೋಧನೆ ಕೈಗೊಳ್ಳುವ ಬಗ್ಗೆ	ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರು	02	ತರಗತಿ ಒಳಗಿನ ಸಮಸ್ಯೆಗಳನ್ನು ಶಾಲಾ ಹಂತದಲ್ಲಿಯೇ ನಿವಾರಿಸಿಕೊಳ್ಳುವ ಬಗ್ಗೆ ಕ್ರಿಯಾ ಸಂಶೋಧನೆ ಕೈಗೊಳ್ಳಲು ಮಾರ್ಗದರ್ಶನ
33	ಗಣಕ ತರಬೇತಿ	ಕಂಪ್ಯೂಟರ್ ಕಲಿಕೆ	ಆಯ್ದ ಪ್ರಾ. ಶಾ. ಶಿಕ್ಷಕರು	10	ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಮಕ್ಕಳಿಗೂ ವಿಸ್ತರಿಸುವ ಬಗ್ಗೆ ಶಿಕ್ಷಕರಿಗೆ ಪರಿಚಯಾತ್ಮದ ಕಾರ್ಯಕ್ರಮ
34	ಸ್ಕೌಟ್ಸ್ & ಗೈಡ್ಸ್	ಸ್ಕೌಟ್ಸ್	ಆಯ್ದ ಶಿಕ್ಷಕರು	10	ಶಾಲೆಗಳಲ್ಲಿ ಸ್ಕೌಟ್ ತಂಡ ರಚನೆ, ನಿರ್ವಹಣೆ ಬಗ್ಗೆ ಮಾರ್ಗದರ್ಶನ
35	ಸೇವಾದಳ	ಸೇವಾದಳ	ಆಯ್ದ ಶಿಕ್ಷಕರು	10	ಶಾಲೆಗಳಲ್ಲಿ ಶಿಸ್ತು, ಕಾರ್ಯಕ್ರಮ ಸಂಘಟನೆ ಕುರಿತು
36	ಪುನಶ್ಚೇತನ	ಇಲಾಖೆ ನಿಯಮ ಬೋಧನಾ ಕೌಶಲಗಳು	-	60	ಹಿಂದೆ ತರಬೇತಿ ಪಡೆಯದೆ, ಬರೀ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ವಿದ್ಯಾರ್ಹತೆಯ ಮೇಲೆ ನೇಮಕವಾದ ಶಿಕ್ಷಕರಿಗೆ ಬೋಧನಾ ಕೌಶಲಗಳ ಬಗ್ಗೆ ತಿಳಿಸುವುದು.
37	ಸ್ವಸ್ಥ ತರಬೇತಿ (SWASTH)	ಶಾಲಾ ನೈರ್ಮಲ್ಯ ಕಾರ್ಯಕ್ರಮ	ಪ್ರಾ.ಶಾ. ಶಿಕ್ಷಕರು	04	ಶಾಲಾ ಮಟ್ಟದಲ್ಲಿ ನೈರ್ಮಲ್ಯೀಕರಣ ಕಾರ್ಯಕ್ರಮ, ನಿರ್ವಹಣೆ ಕುರಿತು ತರಬೇತಿ.
38	ಪಠ್ಯ ಪುಸ್ತಕ ಬಳಕೆ ಬಗ್ಗೆ	ಪ್ರಾಥಮಿಕ ಶಾಲಾ ಶಿಕ್ಷಕರಿಗೆ		03	ಹೊಸದಾಗಿ ಜಾರಿಮಾಡುವ ಪಠ್ಯ ಪುಸ್ತಕಗಳನ್ನು ಬಳಸುವುದು. ಕಲಿಕೆಗೆ ಸಹಾಯಕಗಳಾಗಿ ಬಳಸುವ ಬಗ್ಗೆ ತಿಳಿಸುವುದು.
39	ನೀತಿ ಶಿಕ್ಷಣ	ಶಾಲಾ ಹಂತದಲ್ಲಿ ನೀತಿ ಶಿಕ್ಷಣದ ಅಳವಡಿಕೆ ಕುರಿತು	ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಕರಿಗೆ	15	ಶಿಕ್ಷಣ ಇಲಾಖೆಯ ಸಹಯೋಜನೆಯಲ್ಲಿ ರಾಮಕೃಷ್ಣಾಶ್ರಮ ಮತ್ತು ಈಶ್ವರೀಯ ವಿಶ್ವವಿದ್ಯಾಲಯಗಳು ತರಬೇತಿ ನೀಡುತ್ತವೆ.
40	ಸಿ.ಸಿ.ಆರ್.ಟಿ. ತರಬೇತಿ	ಸಂಸ್ಕೃತಿ ಪರಿಚಯ, ಬೋಧನಾ ಸಾಮಗ್ರಿ ತಯಾರಿಕೆ SUPW	ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಕರಿಗೆ	21	ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಪ್ರಾಯೋಜಿತದಲ್ಲಿ ಆಯ್ದ ಶಿಕ್ಷಕರಿಗೆ ಭಾರತೀಯರ ಸಂಸ್ಕೃತಿ ಹಿರಿಮೆ ಬಗ್ಗೆ ತರಬೇತಿ ನೀಡಲಾಗುತ್ತದೆ.
41	ಕಾರ್ಯಾನುಭವ ತರಬೇತಿ	ಸಾ.ಉ.ಉ.ಕಾ. ಕಲಿಕಾ ಬೋಧನಾ ಸಾಮಗ್ರಿ ತಯಾರಿಕೆ	ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಕರು	05	ಸಾಮಾಜಿಕ ಉಪಯುಕ್ತ ವಸ್ತುಗಳ ತಯಾರಿಕೆ ಕುರಿತು ಮಾರ್ಗದರ್ಶನ ನೀಡುವುದು.

42	ಜೀವನ ಕೌಶಲ ತರಬೇತಿ	ಜೀವನ ಕೌಶಲಗಳ ಅಭಿವೃದ್ಧಿ	ಪ್ರಾ.ಶಾ. ಶಿಕ್ಷಕರು	04	ಶಿಕ್ಷಜೀವನದಲ್ಲಿ ಅವಶ್ಯಕ ಕೌಶಲ್ಯಗಳ ಅಳವಡಿಕೆ ಕುರಿತು ಮಾರ್ಗದರ್ಶನ
43	ಸ್ಪಂದನ	ಶಾಲಾ ಆಡಳಿತ ನಿರ್ವಹಣೆ	ಮುಖ್ಯ ಶಿಕ್ಷಕರು SDM ಸದಸ್ಯರು	02	ಶಾಲಾ ಆಡಳಿತದ ಸುಗಮ ನಿರ್ವಹಣೆ ಕುರಿತು ಶಾಲೆಯ ಮುಖ್ಯ ಶಿಕ್ಷಕರಿಗೆ SDM ಸದಸ್ಯರಿಗೆ ತರಬೇತಿ
44	ಸಂಕಲ್ಪ	ಶಾಲಾಭಿವೃದ್ಧಿಯಲ್ಲಿ ಸಮುದಾಯ	ಮುಖ್ಯ ಶಿಕ್ಷಕರು SDM ಸದಸ್ಯರು ಗ್ರಾ. ಪಂ. ಕಾರ್ಯದರ್ಶಿ	02	ಶಾಲಾ ಸುಧಾರಣೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಬಗ್ಗೆ ಮಾರ್ಗದರ್ಶನ

ಹೀಗೆ ವಿವಿಧ ವಿಷಯಗಳನ್ನು ಕುರಿತು DSERT, DIET, BRC, CRC ಗಳ ಮೂಲಕ ಸೇವಾನಿರತ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.

ಅಧ್ಯಾಯ ೬

ಪರಿಹಾರಗಳು

ಅಧ್ಯಾಯ ೬

ಪರಿಹಾರಗಳು

ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯಲ್ಲಿನ ಧ್ವನಿಗಳು, ಪದ ಮತ್ತು ವಾಕ್ಯಗಳು ಹಾಗೂ ವ್ಯಾಕರಣಾಂಶಗಳನ್ನು ಓದುವಾಗ, ಬರೆಯುವಾಗ, ಪದಾದಿ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ವ್ಯತ್ಯಾಸಗಳನ್ನು ಮಾಡದಂತೆ ಈ ಕೆಳಕಂಡ ಪರಿಹಾರಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

೧. ಪಠ್ಯಪುಸ್ತಕ
೨. ಶಿಕ್ಷಕ
೩. ಓದುವ ಕೌಶಲ್ಯಗಳಿಗೆ ಪರಿಹಾರಗಳು,
೪. ಬರಹ ಕೌಶಲ್ಯಗಳಿಗೆ ಪರಿಹಾರಗಳು
೫. ಗುಣಿತಾಕ್ಷರಗಳಿಗೆ ಪರಿಹಾರಗಳು.
೬. ಒತ್ತಕ್ಷರಗಳಿಗೆ ಪರಿಹಾರಗಳು
೭. ವ್ಯಾಕರಣಾಂಶಗಳಿಗೆ ಪರಿಹಾರಗಳು.

೧. ಪಠ್ಯಪುಸ್ತಕ

ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ದ್ವಿತೀಯ ಭಾಷೆಯನ್ನಾಗಿ ವ್ಯಾಸಂಗ ಮಾಡುತ್ತಾರೆ. ಇಂತಹ ದ್ವಿತೀಯ ಭಾಷೆ ಪಠ್ಯರಚನೆ ಸಭೆಯಲ್ಲಿ ಈ ಕೆಳಕಂಡ ಸದಸ್ಯರಿಗೆ ಅವಕಾಶ ನೀಡುವುದು ಸರಿಯೆನಿಸುತ್ತದೆ.

೧. ಭಾಷಾತಜ್ಞರು.

೨. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಉರ್ದು ಭಾಷೆ ಶಾಲೆಗಳಲ್ಲಿ ಕನ್ನಡ ಭಾಷೆ ಭೋದಕರಾಗಿ ಕೆಲಸ ನಿರ್ವಹಿಸುವವರು.

೩. ದ್ವಿಭಾಷಿಕ ತಜ್ಞರು.

೪. ಪಠ್ಯಪುಸ್ತಕ ರಚನೆಯಲ್ಲಿ ಧ್ವನಿ ಉಚ್ಛರಣೆಯ ಸ್ಥಾನಗಳ ಬಗ್ಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದು ಹಾಗೂ ಭಾಷಾಭ್ಯಾಸಗಳಲ್ಲಿ ಹೆಚ್ಚು ಚಟುವಟಿಕೆಗಳನ್ನು ನೀಡುವುದು.

೫. ವಿವಿಧ ಪ್ರಾದೇಶಿಕ ಭಾಷೆಯನ್ನು ಉಪಯೋಗಿಸಿ ಪಠ್ಯ ರಚಿಸುವುದು.

೬. ಸರಳವಾದ ಪಠ್ಯಪುಸ್ತಕ ರಚನೆ ಮಾಡುವುದು.

೨. ಶಿಕ್ಷಕರು

೧. ಉರ್ದು ಮಾಧ್ಯಮ ಪ್ರೌಢಶಾಲೆಗಳಲ್ಲಿ ಕನ್ನಡ ಭಾಷಾ ಬೋಧನೆ ಮಾಡುವ ಶಿಕ್ಷಕರು ಐಚ್ಛಿಕ ವಿಷಯ ಕನ್ನಡ ಭಾಷೆಯನ್ನು ಬಿ.ಎ.,ಬಿ.ಇಡಿ. ಪದವಿಯಲ್ಲಿ ತೆಗೆದುಕೊಂಡು ಅಭ್ಯಾಸ ಮಾಡಿದವರಿಗೆ ನೀಡಬೇಕು.

೨. ಉರ್ದು ಭಾಷಿಕರ ಮಕ್ಕಳಿಗೆ ಕನ್ನಡ ಭಾಷೆ ಭೋದನೆ ಮಾಡುವ ಶಿಕ್ಷಕರಿಗೆ ಕನ್ನಡಭಾಷೆ ಜೊತೆಗೆ ಉರ್ದುಭಾಷೆಯ ಧ್ವನಿಗಳ ಪರಿಚಯವಿರುವುದು ಅವಶ್ಯಕ. ಉರ್ದು ಭಾಷಾ ಬೋಧಕರಿಗೆ ಉರ್ದು ಧ್ವನಿಗಳ ಪರಿಚಯವಿದ್ದಲ್ಲಿ ಉರ್ದು ಭಾಷಿಕರ ಮಗು ಕನ್ನಡ ಭಾಷೆ ಧ್ವನಿಗಳ ಉಚ್ಚಾರಣೆಯಲ್ಲಿ ಯಾವ ತೆರನಾಗಿ ವ್ಯತ್ಯಾಸಮಾಡುತ್ತಾನೆ. ಹಾಗೂ ಉರ್ದುಭಾಷೆಯ ಧ್ವನಿಗಳ ಉಚ್ಚಾರಣೆಯ ಪ್ರಭಾವ ಕನ್ನಡ ಭಾಷೆಯ ಧ್ವನಿಗಳ ಉಚ್ಚಾರಣೆಯಲ್ಲಿ ಯಾವ ತೆರನಾಗಿರುತ್ತದೆಂದು ಗುರುತಿಸಿ ಪರಿಹರಿಸಬಹುದಾಗಿದೆ.

೩. ಶಿಕ್ಷಕರು ಪ್ರತಿಯೊಂದು ವರ್ಣದ ಉತ್ಪತ್ತಿ ಸ್ಥಾನ (ಧ್ವನ್ಯಾಂಗ) ಗಳಾದ ಕಂಠ್ಯ, ತಾಲವ್ಯ, ಮೂರ್ಧನ್ಯ ದಂತ್ಯ, ಓಷ್ಠ್ಯ , ದಂತೋಷ್ಠ್ಯಗಳನ್ನು ಉಚ್ಚರಿಸಿ ಪರಿಚಯಿಸಬೇಕು.

೫. ಓದಿನ ಕೌಶಲ್ಯವನ್ನು ಪ್ರತಿ ವಿದ್ಯಾರ್ಥಿಯು ಗಳಿಸುವಂತೆ, ಬೋಧಿಸುವುದು, ಶಿಕ್ಷಕರ ಹೊಣೆ. ಹಾಗೆ ಬೋಧಿಸುವುದನ್ನೇ ಸಾಮಾರ್ಥ್ಯಾಧಾರಿತ ಬೋಧನೆಯೆನ್ನುವುದು.

೬. ಶಿಕ್ಷಕರು ಮಾದರಿ ವಾಚನ ಮಾಡುವುದು.

೮. ಶಿಕ್ಷಕರು ಓದುವಾಗ ಸರಿಯಾದ ಭಾವ ಅರ್ಥವಾಗುವಂತೆ ಓದಬೇಕು.

೯. ಮಕ್ಕಳು ಸರಾಗವಾಗಿ ಓದಲು ಶಕ್ತರನ್ನಾಗಿ ಮಾಡಲು ಅಕ್ಷರ ಪುನರಾವರ್ತನೆಯ ಅಭ್ಯಾಸವನ್ನು ಬಳಸುವುದು.

೧೦. ಶಿಕ್ಷಕರು ಸರಿಯಾದ ನಿಲುಗಡೆ ಕೊಟ್ಟು ಓದುವುದರಿಂದ ಅರ್ಥಸ್ಪಷ್ಟವಾಗುವುದು.

೧೧. ಲ, ಳ, ಅ, ಹ. ಈ ಅಕ್ಷರಗಳು ಬಾಯಿಯ ಯಾವ ಸ್ಥಾನದಲ್ಲಿ ಹೇಗೆ ಉಚ್ಚಾರಗೊಳ್ಳುತ್ತವೆ ಎಂಬ ಸ್ಪಷ್ಟ ಪರಿಕಲ್ಪನೆಯನ್ನು ತಾವೇ ಆ ಶಬ್ದಗಳನ್ನು ಉಚ್ಚಾರ ಮಾಡಿ ತೋರಿಸುವ ಮೂಲಕ ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು.

೧೨. ಶಿಕ್ಷಕರು ಉಕ್ತಲೇಖನ ನೀಡುವಾಗ ಒಂದೊಂದು ಪದವನ್ನು ಎರಡೆರಡು ಸಲ ಗಟ್ಟಿಯಾಗಿ ನಿಧಾನವಾಗಿ ಸ್ಪಷ್ಟವಾಗಿ ಉಚ್ಚರಿಸಬೇಕು. ಇದರಿಂದ ವಿದ್ಯಾರ್ಥಿಗಳು ಸ್ಪಷ್ಟವಾಗಿ ಆಲಿಸಿಕೊಂಡು ಸರಿಯಾಗಿ ಬರೆಯಲು ಸಹಾಯಕವಾಗುತ್ತದೆ.

೧೩. ಅನುಸ್ವಾರಕ್ಕೆ ನಿಖರವಾದ ಉಚ್ಚಾರಣೆಯಿಲ್ಲ ಅನುಸ್ವಾರ (೦) ದ ನಂತರ ಯಾವ ವರ್ಗೀಯ ವ್ಯಂಜನ ಬಂದಿದೆಯೋ ಅದರ ಅನುನಾಸಿಕ ಉಚ್ಚಾರಣೆಗೆ ಬರುತ್ತದೆ ಎಂಬುವುದನ್ನು ತಿಳಿಸಬೇಕು.

೧೪. ಶಿಕ್ಷಕರು ಲಿಂಗ, ವಚನ, ವಿಭಕ್ತಿ, ಕ್ರಿಯಾಪದ, ಕಾಲ, ರೂಪ, ಸಂಧಿ ಸಮಾಸ ಇಂತಹ ವ್ಯಾಕರಣಾಂಶಗಳ ಪರಿಕಲ್ಪನೆಯನ್ನು ಉತ್ತಮ ಉದಾಹರಣೆಗಳ ಮೂಲಕ ಮನದಟ್ಟು ಮಾಡುವುದು.

೧೫. ಶಿಕ್ಷಕರು ವ್ಯಾಕರಣ ಬೋಧನೆ ಮಾಡುವಾಗ ಕಪ್ಪು ಹಲಗೆಗಳನ್ನು ಸೂಕ್ತ ರೀತಿಯಲ್ಲಿ ಬಳಸುವುದು ಮತ್ತು ಸಾಕಷ್ಟು ಉದಾಹರಣೆಗಳನ್ನು ಕೊಡುವುದು.

೧೬. ಶಿಕ್ಷಕರು ವ್ಯಾಕರಣ ಬೋಧನೆಯನ್ನು ಪೂರ್ಣ ಚಟುವಟಿಕೆ ಆಧಾರಿತ ಮಾಡಿ ಕುತೂಹಲ ಕೆರಳಿಸುವಂತೆ ಹಾಗೂ ಹಾಸ್ಯ ಪ್ರಜ್ಞೆಯನ್ನು ಇಟ್ಟುಕೊಂಡು ಬೋಧಿಸುವುದು.

೧೭. ಶಿಕ್ಷಕರು ಪಠ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾಷೆಗೆ ತಕ್ಕಂತೆ ವ್ಯಾಕರಣವನ್ನು ಬೋಧಿಸಬೇಕು. ಇದನ್ನೇ ಪ್ರಾಯೋಗಿಕ ಕ್ರಿಯಾತ್ಮಕ ವ್ಯಾಕರಣ ಎಂದು ಕರೆಯುವುದು.

೧೮. ಶಿಕ್ಷಕರು ಪಾಠದಲ್ಲಿ ಬರುವ ಪದಗಳನ್ನು ಪರಿಚಯಿಸುವಾಗ ಅದರ ವ್ಯಾಕರಣಾಂಶಗಳನ್ನು ತಿಳಿಸುವುದು ಅಗತ್ಯ ಇದರಿಂದ ಮಕ್ಕಳಿಗೆ ವ್ಯಾಕರಣ ಕಲಿಕೆ ಸರಳವಾಗುವುದು.

೩. ಓದುವ ಕೌಶಲ್ಯಗಳಿಗೆ ಪರಿಹಾರಗಳು

೧. ಪಠ್ಯಪುಸ್ತಕದಲ್ಲಿರುವ ಗದ್ಯ ಹಾಗೂ ಪದ್ಯಭಾಗಗಳನ್ನು ಸ್ಪಷ್ಟವಾಗಿ ಸರಾಗವಾಗಿ ಭಾವಪೂರ್ಣವಾಗಿ ಗಟ್ಟಿಯಾಗಿ ಓದುವುದು. ಮೌನವಾಗಿಯೂ ಓದುವುದು.

೨. ಕೈ ಬರಹದಲ್ಲಿ ಬರೆದ ಪತ್ರಗಳು, ವರದಿಗಳು, ವಿಷಯಗಳನ್ನು ಓದುವುದು.

೩. ದಿನ ಪತ್ರಿಕೆ, ಸಣ್ಣ ಕಥೆ, ನಿಯತಕಾಲಿಕ, ಮಕ್ಕಳ ಪುಸ್ತಕಗಳನ್ನು ಓದಿಸುವುದು.

೪. ಪ್ರಬಂಧ ಚರಿತ್ರೆಗಳನ್ನು ಓದಿ ಮುಖ್ಯಾಂಶಗಳನ್ನು ಗುರುತಿಸುವುದು.

೫. ಇಬ್ಬರು ವಿದ್ಯಾರ್ಥಿಗಳಿಂದ ಸಂಭಾಷಣೆಗಳನ್ನು ನಾಟಕೀಯವಾಗಿ ಓದಿಸುವುದು.

೬. ದೃಶ್ಯಗಳ ಸ್ತಬ್ಧ ಚಿತ್ರ ಪ್ರದರ್ಶನ – ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಂದ ಆಯಾ ಸಂಭಾಷಣೆಯನ್ನು ಓದಿಸುವುದು.

೭. ವಾರ ಪತ್ರಿಕೆಗಳಲ್ಲಿ ಮಕ್ಕಳ ವಿಭಾಗದಲ್ಲಿ ಬರುವ ಪುಟಾಣಿ ಲೇಖನಗಳನ್ನು ಗ್ರಹಣಯುಕ್ತ ಓದಿಗೆ ಮೌನಓದಿಗೆ ನೀಡಬಹುದು.

೮. ರೂಪದಲ್ಲಿ ಸಾಮ್ಯತೆ ಇರುವ ಅಕ್ಷರಗಳನ್ನು ಬರೆಯುತ್ತಾ ಹೇಳುವುದು ಮತ್ತು ಅಂತಹ ಅಕ್ಷರಗಳಿಂದ ಆರಂಭವಾಗುವ ಪದಗಳನ್ನು ಒಟ್ಟಿಗೆ ಬರೆಯಿಸಿ, ಓದಿಸಿ, ಅರ್ಥವ್ಯತ್ಯಾಸ ತಿಳಿಯುವಂತೆ ಮಾಡುವುದು.

ಉದಾಹರಣೆಗೆ : ಅಗಸ – ಆಗಸ, ಬಲೆ – ಭಲೆ , ಒಂದು –ಓಟ

೯. ಸ್ವರ, ವ್ಯಂಜನ ಅಲ್ಪಪ್ರಾಣ, ಮಹಾಪ್ರಾಣ, ಹ್ರಸ್ವ ದೀರ್ಘಗಳನ್ನು ವ್ಯತ್ಯಾಸಮಾಡಿ ಹೇಳುವುದರ ಸಮಸ್ಯೆ ಕುರಿತು ಬಗೆಹರಿಸಲು ಉಚ್ಚಾರಣೆಯೊಂದಿಗೆ ಪ್ರತಿವರ್ಣದ ಉತ್ಪತ್ತಿ ಸ್ಥಾನ (ಧ್ವನ್ಯಾಂಗ) ಗಳಾದ ಕಂಠ್ಯ, ತಾಲವ್ಯ, ಮೂರ್ಧನ, ದಂತ್ಯೆ, ಓಷ್ಠ್ಯ, ದಂತ್ಯೋಷ್ಠ್ಯಗಳನ್ನು, ತಾಲವ್ಯಗಳನ್ನು ಪರಿಚಯಿಸಬೇಕು. ಜೊತೆಗೆ ಕೇಳಿ ಹೇಳು, ಓದಿ ಹೇಳು, ಓದಿ ಬರೆ, ರೂಪದ ಅಭ್ಯಾಸಗಳನ್ನು ರಚಿಸಿ ನೀಡಬೇಕು.

೪. ಬರವಣಿಗೆ ಕೌಶಲ್ಯಗಳಿಗೆ ಪರಿಹಾರಗಳು

೧. ಹ್ರಸ್ವ ದೀರ್ಘ ಸ್ವರಗಳ ಸ್ಪಷ್ಟ ಉಚ್ಚಾರಣೆಯ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ನೀಡಬೇಕು. ಸ್ವರಾಕ್ಷರಗಳ ಮಿಂಚುಪಟ್ಟಿಗಳಿರುವ ಡಬ್ಬದಿಂದ ಯಾದೃಚ್ಛಿಕವಾಗಿ ಒಂದು ಮಿಂಚು ಪಟ್ಟಿಯನ್ನು ತೆಗೆದು ಅದರಲ್ಲಿ ಬರೆದಿರುವ ಸ್ವರಾಕ್ಷರವನ್ನು ಗಟ್ಟಿಯಾಗಿ ಓದುವಂತೆ ಹೇಳುವುದು. ಈ ಚಟುವಟಿಕೆಯನ್ನು ಎಲ್ಲ ವಿದ್ಯಾರ್ಥಿಗಳಿಗೂ ಪುನರಾವರ್ತಿಸುವುದು. ತಪ್ಪು ಓದಿದಲ್ಲಿ ಅಲ್ಲಲ್ಲಿಯೇ ತಿದ್ದುವುದು.

೨. ಹಾಲು – ಹಾಳು, ಬಂದಿ – ಬದಿ, ಬೆಲೆ – ಬೆಳೆ ಮುಂತಾದಗಳ ಪದಗಳ ಜೋಡಿಯನ್ನು ಉಕ್ತಲೇಖನ ನೀಡಿ ತಿದ್ದಬೇಕು. ಅರ್ಥದಲ್ಲಾಗುವ ಬದಲಾವಣೆಯನ್ನು ಮನದಟ್ಟು ಮಾಡಬೇಕು.

೩. ವಿದ್ಯಾರ್ಥಿಗಳ ಗುಂಪುಮಾಡಿ ಪ್ರತಿಗುಂಪಿನಲ್ಲಿ ಪ್ರತಿ ವಿದ್ಯಾರ್ಥಿಯೂ ತಮ್ಮ ಪಾಠಗಳನ್ನು ಅನುಸ್ವಾರ (೦) ಸಹಿತದ ಪದಗಳನ್ನು ಹುಡುಕಿ ಬರೆದು ಪಟ್ಟಿಮಾಡಿ ಓದುವ ಅಭ್ಯಾಸವನ್ನು ಮಾಡಿಸಬೇಕು.

೪. ಅಲ್ಪಪ್ರಾಣ, ಮಹಾಪ್ರಾಣಾಕ್ಷರಗಳ ಉಚ್ಚಾರಣೆಯನ್ನು ಸ್ಪಷ್ಟಪಡಿಸಬೇಕು. ಮೊದಲು ಅಲ್ಪಪ್ರಾಣಾಕ್ಷರಗಳ ಮಿಂಚುಪಟ್ಟಿಗಳಿರುವ ಡಬ್ಬದಿಂದ ಯಾದೃಚ್ಛಿಕವಾಗಿ ಒಂದು ಮಿಂಚು ಪಟ್ಟಿಯನ್ನು ತೆಗೆದು ಅದರಲ್ಲಿರುವ ಅಲ್ಪಪ್ರಾಣಾಕ್ಷರವನ್ನು ಗಟ್ಟಿಯಾಗಿ ಓದುವಂತೆ ಹೇಳುವುದು. ಈ ಚಟುವಟಿಕೆಯನ್ನು ಎಲ್ಲ ವಿದ್ಯಾರ್ಥಿಗಳಿಗೆ ಪುನರಾವರ್ತಿಸುವುದು. ತಪ್ಪು ಓದಿದಲ್ಲಿ ಅಲ್ಲಲ್ಲಿಯೇ ತಿದ್ದುವುದು.

೫. ಮಹಾಪ್ರಾಣಕ್ಷರಗಳನ್ನು ಉಚ್ಚಾರ ಮಾಡುವಾಗ ಹೆಚ್ಚು ಉಸಿರು ಬಿಡಬೇಕೆಂದು ಸ್ಪಷ್ಟಪಡಿಸಬೇಕು.

೬. ವಿದ್ಯಾರ್ಥಿಗಳ ಗುಂಪುಮಾಡಿ ಪ್ರತಿಗುಂಪಿನಲ್ಲಿ ಪ್ರತಿವಿದ್ಯಾರ್ಥಿಯೂ ತಮ್ಮ ಪಾಠಗಳಲ್ಲಿರುವ ಮಹಾಪ್ರಾಣಕ್ಷರ ಸಹಿತದ ಪದಗಳನ್ನು ಹುಡುಕಿ ಓದುವ, ಬರೆಯುವ, ಅಭ್ಯಾಸ ಮಾಡಿಸಬೇಕು.

೫. ಗುಣಿತಾಕ್ಷರ ಕೌಶಲ್ಯಗಳಿಗೆ ಪರಿಹಾರಗಳು

೧. ಗುಣಿತಾಕ್ಷರಗಳ ಚಿನ್ಹೆಗಳನ್ನು ಸ್ಪಷ್ಟಪಡಿಸುವುದು. ವ್ಯಂಜನಾಕ್ಷರಗಳಿಗೆ ಗುಣಿತ ಚಿಹ್ನೆಗಳನ್ನು ಹಚ್ಚಿದಾಗ ಉಚ್ಚರಿಸಬೇಕಾದ ಕ್ರಮವನ್ನು ಸ್ಪಷ್ಟಪಡಿಸುವುದು.ಈ ಸಂದರ್ಭದಲ್ಲಿ (ು) (ೂ) ಹೀಗೆ ಎರಡೆರಡು ಗುಣಿತ ಚಿಹ್ನೆಗಳನ್ನು ವ್ಯಂಜನಾಕ್ಷರಗಳಿಗೆ ಹಚ್ಚಿ ಓದಿಸುವ ಬರೆಸುವ ಅಭ್ಯಾಸ ಮಾಡಿಸುವುದು ಸೂಕ್ತ. ಅನಂತರ ದಾರ – ದರ, ನಾರಿ – ನರಿ, ಬೀಸಿ–ಬಿಸಿ, ಕೂರಿ–ಕುರಿ ಮುಂತಾದ ಪದಗಳ ಮಾದರಿಯಲ್ಲಿ ಜೋಡಿಯನ್ನು ಉಕ್ತಲೇಖನ ನೀಡಿ ತಿದ್ದಬೇಕು. ಅರ್ಥದಲ್ಲಾಗುವ ಬದಲಾವಣೆಯನ್ನು ಮನದಟ್ಟು ಮಾಡಬೇಕು.

೨. ವಿದ್ಯಾರ್ಥಿಗಳಿಗೆ ಗುಂಪು ಚಟುವಟಿಕೆ ನೀಡುವಂತೆ ಪ್ರತಿಗುಂಪಿಗೂ ಗುಣಿತಾಕ್ಷರದ ಪದಗಳ ಪಟ್ಟಿಯನ್ನು ನೀಡಿ ಪ್ರತಿಗುಂಪಿನಲ್ಲೂ, ಪ್ರತಿ ವಿದ್ಯಾರ್ಥಿಗೂ ಓದುವ ಬರೆಯುವ ಅಭ್ಯಾಸ ಮಾಡಿಸುವುದು.

೩. ಕಾಗುಣಿತಕ್ಕೆ ಸ್ಪಷ್ಟ ಉಚ್ಚಾರಣೆಗೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

೬. ಸಂಯುಕ್ತಾಕ್ಷರ ಕೌಶಲ್ಯಗಳಿಗೆ ಪರಿಹಾರಗಳು

೧. ಮಕ್ಕಳಿಗೆ ಶಿಕ್ಷಕರು ಬೋಧನೆ ಮಾಡುವಾಗ ಕೆಲವು ಅಕ್ಷರಗಳಿಗೆ ಒತ್ತುಕೊಟ್ಟು ಉಚ್ಛರಿಸುತ್ತೇವೆ. ಅವುಗಳು ಒತ್ತಕ್ಷರಗಳೆಂದು ಸ್ಪಷ್ಟವಾಗಿ ಹೇಳುವುದು.

೨. ನೇರ ಮೂಲದ ಒತ್ತಕ್ಷರದ ಬಗ್ಗೆ ಹೇಳುವಾಗ ನೇರ ವ್ಯಂಜನಾಕ್ಷರಗಳು ಒತ್ತಕ್ಷರಗಳಾಗುತ್ತವೆ ಎಂಬುವ ಬಗ್ಗೆ ಹೇಳುವುದು. ಪದ ಮತ್ತು ವಾಕ್ಯಗಳನ್ನು ಬರೆಸುವುದು ಮತ್ತು ಓದಿಸುವುದು.

೩. ತಲೆಕಟ್ಟಿಲ್ಲದ ಒತ್ತಕ್ಷರಗಳ ಬಗ್ಗೆ ಮತ್ತು ಪದಗಳ ಪಟ್ಟಿ ಅಂತಹ ವಾಕ್ಯಗಳ ಪಟ್ಟಿಯನ್ನು ಮಾಡಿ ಓದಿಸುವುದು ಮತ್ತು ಬರೆಸುವುದು.

೪. ಬೇರೆ ಬೇರೆ ಜಾತಿಯ ವ್ಯಂಜನಾಕ್ಷರಗಳು ಒಂದಕ್ಕೊಂದು ಸೇರಿಸಿ ಉಚ್ಛರಿಸುವ ರೀತಿ ಮತ್ತು ಬರೆಯುವ ರೀತಿ ಹೇಳುವುದು. ಇಂತಹ ಪದಗಳ ಪಟ್ಟಿ ಮತ್ತು ವಾಕ್ಯಗಳ ಪಟ್ಟಿಯನ್ನು ಮಾಡಿ ಬರೆಸುವುದು ಮತ್ತು ಓದಿಸುವುದು.

೭. ವ್ಯಾಕರಣಾಂಶಗಳಿಗೆ ಸಂಬಂಧಿಸಿದ ಪರಿಹಾರಗಳು

೧. ಪದಗಳನ್ನು ಬಿಡಿಸಿ ಆ ಪದದ ಅರ್ಥ ಅಲ್ಲಿ ಆಗಿರುವ ಸಂಧಿಕಾರ್ಯಗಳನ್ನು ತಿಳಿಸಬೇಕು. ಇವುಗಳ ಜೊತೆಗೆ ಇನ್ನಷ್ಟು ಇಂತಹ ಪದಗಳನ್ನು ಉಕ್ತಲೇಖನ ನೀಡಿ ಪದವಿಭಾಗ ಮಾಡಲು ಸಂಧಿ ಕಾರ್ಯ ಮತ್ತು ಸಂಧಿ ಬರೆಯಲು ತಿಳಿಸಬೇಕು.

೨. ವ್ಯಾಕರಣದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು/ ಸೂತ್ರಗಳನ್ನು ಸಮರ್ಪಕವಾಗಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಂತೆ ಮಾಡುವುದು.

೩. ಪರಿಕಲ್ಪನೆಯನ್ನು ಖಚಿತವಾಗಿ ಸಂದೇಹವಿಲ್ಲದಂತೆ ಗ್ರಹಿಸುವುದರಲ್ಲಿ ಕೊರತೆಯನ್ನು ಪರಿಹರಿಸುವುದು.

೪. ಕೆಲವು ಅಕ್ಷರಗಳು ಮತ್ತು ಪದಗಳ ಪರಿಚಯದಲ್ಲಿ ತೊಡಕು ನಿವಾರಿಸುವುದು. ಹಾಗೂ ಪ್ರಾತ್ಯಕ್ಷಿಕ ಮೂಲಕ ಮಾಡಿಸುವುದು.

೫. ಉಚ್ಚಾರಣೆ ಹಾಗೂ ಬರವಣಿಗೆಯಲ್ಲಿ ವ್ಯತ್ಯಾಸವಾಗದಂತೆ ನೋಡಿಕೊಳ್ಳುವುದು.

೬. ಧ್ವನ್ಯಾಂಗಗಳಲ್ಲಿ ತೊಡಕು ನಿವಾರಿಸುವುದು.

೭. ಆಲಿಸುವಿಕೆಯಲ್ಲಿನ ವ್ಯತ್ಯಾಸ ಪರಿಹರಿಸುವುದು.

೮. ಔದಾಸೀನ್ಯ/ನಿರಾಸಕ್ತಿಯನ್ನು ಹೋಗಲಾಡಿಸುವುದು.

೯. ವ್ಯಾಕರಣದ ಬಗೆಗಿನ ಭಯ ಹೋಗಲಾಡಿಸುವುದು.

೧೦. ನಿರಂತರವಾಗಿ ಮಾತುಗಾರಿಕೆ ಮತ್ತು ಬರವಣಿಗೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.

ಅಧ್ಯಾಯ ೭

ಉಪಸಂಹಾರ

ಅಧ್ಯಾಯ ೭

ಉಪಸಂಹಾರ

ಭಾಷಾಬೋಧನೆ ಒಂದು ಪ್ರಕ್ರಿಯೆ. ಕಲಿಕೆಯ ಫಲ. ಮುಖ್ಯವಾಗಿ ಬೋಧನೆಯ ಆಧಾರದಿಂದ ನಿರ್ಧಾರಿತವಾಗಿರುತ್ತದೆ. ಕಲಿಕೆಗೆ ಅಗತ್ಯವಾದ ಪರಿಸರ ಕ್ರಮ ಹಾಗೂ ಉದ್ದೇಶಿತ ಹಿನ್ನಲೆಯಲ್ಲಿ ಕಲಿಸುವುದೇ ಬೋಧನೆಯ ಮುಖ್ಯ ಗುರಿ. ಕಲಿಕೆಯಲ್ಲಿ ಆಲಿಸುವಿಕೆಯ ಕೌಶಲ್ಯದಿಂದ ಭಾಷೆಯ ಪದಸಂಪತ್ತನ್ನು ಅರ್ಥಮಾಡಿಕೊಳ್ಳುವುದೇ ಆಗಿದೆ. ಕೇಳಿದ ಮಾತು ಗ್ರಹಿಕೆಗೆ ಒಳಪಡುವುದೇ ಆಲಿಸುವಿಕೆ. ಕೇಳಿಸಿಕೊಂಡ ಮಾತು, ಕೇಳುಗರ ಉದ್ದೇಶ ಏಕಾಗ್ರತೆ ಹಾಗೂ ಬುದ್ಧಿ ಭಾವಗಳ ಸಾಮರ್ಥ್ಯಕ್ಕನುಗುಣವಾಗಿ ಗ್ರಹಿಕೆಯಾಗುತ್ತದೆ. ಕೇಳುವಿಕೆಗೂ ಆಲಿಸುವಿಕೆಗೂ ಅಂತರವಿದೆ. ಆಲಿಸುವಿಕೆಯ ಮುಖ್ಯ ಉದ್ದೇಶ ಅಭಿಪ್ರಾಯ ಸೂಚನೆ ಮೊದಲಾದವುಗಳನ್ನು ತಿಳಿದುಕೊಳ್ಳುವುದು. ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸುವುದು. ಜ್ಞಾನ ಸಂಪತ್ತನ್ನು ಗಳಿಸುವುದು. ಮಾಹಿತಿ ತನ್ನದಾಗಿಸಿಕೊಳ್ಳುವುದು. ಪಠ್ಯದ ಆಧಾರದಿಂದ ರಸಗ್ರಹಣೆಯನ್ನು ಹೊಂದುವುದು. ಮನರಂಜನೆಯನ್ನು ಪಡೆಯುವುದು. ಜೊತೆಗೆ ಮುಖ್ಯವಾಗಿ ವಿಚಾರಶಕ್ತಿ ಮತ್ತು ವಿಶ್ಲೇಷಣೆಯ ಕೌಶಲ್ಯವನ್ನು ಬೆಳಸಿಕೊಳ್ಳುವುದು.

ಉರ್ದು ಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಅತ್ಯಂತ ಕನಿಷ್ಠವಾಗಿ ಆಲಿಸುವಂತಹ ಪರಿಸ್ಥಿತಿ ಇದೆ. ಕನ್ನಡ ಬಾಷೆಯನ್ನು ಉರ್ದುಭಾಷೆಯ ಮೂಲಕ ಆಲಿಸುತ್ತಿರುವುದು ಕಂಡುಬರುತ್ತದೆ. ಉದಾಹರಣೆಗೆ ಚಿತ್ರದ ಮೂಲಕ ಭಾಷೆಯನ್ನು ಕಲಿಯುವ ಸಂದರ್ಭದಲ್ಲಿ ಕನ್ನಡ 'ಕೋಳಿ' ಪದ ಮತ್ತು ಚಿತ್ರವನ್ನು ಉರ್ದುವಿನ "ಮುರ್ಗಿ"ಪದದ ಮೂಲಕ ಆಲಿಸುತ್ತಿರುವುದು ವಿಶಿಷ್ಠವೆನಿಸಿದೆ. ಕಲಿಕೆಯಲ್ಲಿ

ಆಲಿಸುವಿಕೆ ಕ್ರಿಯೆ ಏಕಭಾಷಿಕರು, ದ್ವಿಭಾಷಿಕರು ಮತ್ತು ಬಹುಭಾಷಿಕರ ಮಕ್ಕಳ ನಡುವೆ ವ್ಯತ್ಯಾಸ ಇದ್ದೇ ಇದೆ. ವಾಕ್ಯ ರಚನೆಯ ಸಾಮರ್ಥ್ಯ, ಗ್ರಹಿಕೆ, ಗದ್ಯ ಪದ್ಯ ಸಾಂದರ್ಭಿಕ ಸಂಭಾಷಣೆ ಮತ್ತು ಪ್ರಕಟಣೆ ಆಲಿಸುವಿಕೆಯಲ್ಲಿ ಬರುತ್ತದೆ. ಉರ್ದುಭಾಷಿಕರ ಮಕ್ಕಳು ದ್ವಿಭಾಷಿಕರು ಹೌದು ಮತ್ತು ಬಹುಭಾಷಿಕರು ಹೌದು. (ಕನ್ನಡ ಬಾಷಾ ಸಂದರ್ಭದಲ್ಲಿ) ಇಂತಹ ಮಕ್ಕಳಿಗೆ ಆಲಿಸುವಿಕೆಯ ಪ್ರಕ್ರಿಯೆ ತನ್ನಿಂದ ತಾನೇ ಬರುತ್ತದೆ ಎಂದು ತಿಳಿದುಕೊಳ್ಳುವ ಹಾಗಿಲ್ಲ. ಅದಕ್ಕಾಗಿ ಕೆಲವು ಪ್ರತ್ಯೇಕವಾದಂತ ಭಾಷಾ ಚಟುವಟಿಕೆಗಳನ್ನು ಪರಿಚಯಿಸುವುದು ಅಗತ್ಯವೆನಿಸಿದೆ. ನಿಗಧಿತ ಸಮಯಕ್ಕೆ ಹೆಚ್ಚಿನ ಸಮಯವನ್ನು ಕಲ್ಪಿಸಿ ವಾಕ್ಯರಚನೆಯ ಕೆಲವು ತರಗತಿಗಳನ್ನು ಮೀಸಲಿಡಬೇಕಾಗಿದೆ. ಶಿಕ್ಷಕರು ಇನ್ನಷ್ಟು ವೈವಿಧ್ಯಮಯವಾದ ಸಾಮಾಗ್ರಿಗಳನ್ನು ಸೂಕ್ತವೆನಿಸುವ ಭೋದನಾ ಕ್ರಮವನ್ನು ಅಳವಡಿಸಿಕೊಳ್ಳಬೇಕಾಗಿದೆ. ಒಟ್ಟಾರೆ ಮನೆ ಮಾತಿನ ಸಂದರ್ಭದಲ್ಲಿ ಆಲಿಸುವಿಕೆ ಪ್ರಕ್ರಿಯೆ ಒಂದು ಪರಿಣಾಮಕಾರಿ ಕೌಶಲ್ಯವಾಗಿದೆ. ಉರ್ದುಭಾಷಿಕರಂತೂ ದ್ವಿಭಾಷಿಕ ಮತ್ತು ಬಹುಭಾಷಿಕರ ಮಕ್ಕಳಿಗೆ ಆಲಿಸುವಿಕೆಯ ಪ್ರಕ್ರಿಯೆಯನ್ನು ಮತ್ತಷ್ಟು ಗಟ್ಟಿಯಾದ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ ಎನಿಸುತ್ತದೆ.

ಭಾಷಾ ಕಲಿಕೆಯಲ್ಲಿ ಮಾತುಗಾರಿಕೆ ಕೌಶಲ್ಯವು ಒಂದು. ಮಾತುಗಾರಿಕೆಯ ಕೌಶಲ್ಯವನ್ನು ದ್ವಿಭಾಷಿಕರು ಬಹುಭಾಷಿಕರ ಮಕ್ಕಳಲ್ಲಿ ಹೆಚ್ಚು ಮಾಡಬೇಕಾದರೆ ವಿಶಿಷ್ಟವಾದ ಬೋಧನಾ ಕ್ರಮವನ್ನು ಅನುಸರಿಸಬೇಕಾಗುತ್ತದೆ. ಸ್ವರಭಾರ, ಧ್ವನಿಏರಿಳಿತ, ತಡೆ, ಮತ್ತು ಸೂಕ್ತವೇಗ ಮುಂತಾದ ವಿಧಾನಗಳಲ್ಲಿ ಮಾತುಗಾರಿಕೆಯ ಕೌಶಲ್ಯವನ್ನು ಭೋದಿಸಬೇಕಾಗುತ್ತದೆ. ಉರ್ದುಭಾಷಿಕರ ಮಕ್ಕಳು ಶಾಲೆಯ ಆವರಣದಲ್ಲಿ ಸಂಭಾಷಣೆ ಮಾಡುವಾಗ ಉರ್ದುವಿನ ಮೂಲಕ ಅಥವಾ ಉರ್ದುವಿನ ಮಿಶ್ರಿತ ಕನ್ನಡವನ್ನು ಮಾತನಾಡುವುದು ವಿಶಿಷ್ಟವೆನಿಸಿದೆ. ಆಡುಮಾತು ಉರ್ದುವಿನ ಮೂಲಕ ಕನ್ನಡ ಪದವನ್ನು ಅರ್ಥಮಾಡಿಕೊಂಡು ಅಭಿವ್ಯಕ್ತಿಸಿರುವುದು ಗಮನಿಸುವಂತಹ ಅಂಶ. ಕನ್ನಡದ ಮಾತನ್ನು ಆಡುವ ಸಂದರ್ಭದಲ್ಲಿ ಅನೇಕ ವ್ಯತ್ಯಾಸಗಳನ್ನು ಓದಿನ ಮತ್ತು ಬರವಣಿಗೆಯ ಸಂದರ್ಭದಲ್ಲಿ ಅಧ್ಯಯನ ಮಾಡಲಾಗಿದೆ. ಸಾಮಾನ್ಯವಾಗಿ ಕನ್ನಡ ಭಾಷೆಯನ್ನು ಓದುವಾಗ ಬರೆಯುವಾಗ ಹ್ರಸ್ವ ದೀರ್ಘಗಳ ನಡುವಿನ ಗೊಂದಲ, ಒತ್ತಕ್ಷರಗಳು, ಅಲ್ಪಪ್ರಾಣ, ಮಹಾಪ್ರಾಣ ನಡುವಿನ ಗೊಂದಲ "ಅ"ಕಾರ ಮತ್ತು "ಹ"ಕಾರ "ಸ"ಕಾರ ಮತ್ತು "ಶ"ಕಾರ ಇವೇ ಮುಂತಾದ ವ್ಯತ್ಯಾಸಗಳನ್ನು ಮಾಡುತ್ತಿರುವುದು ಗಮನಾರ್ಹವಾದ ವಿಚಾರ. ಈ ಮಾದರಿ ವ್ಯತ್ಯಾಸಗಳನ್ನು ಏಕಭಾಷಿಕರು ಮತ್ತು ಬಹುಭಾಷಿಕರ ಮಕ್ಕಳಲ್ಲಿ ಒಂದೇ ಮಾದರಿಯಲ್ಲಿ ಇಲ್ಲ. ಏಕ ಭಾಷಿಕರ ಮಕ್ಕಳಲ್ಲಿ ಕಂಡುಬರುವ ವ್ಯತ್ಯಾಸಗಳಿಗೆ ಅವರವರ ಸಾಮಾಜಿಕ ಆರ್ಥಿಕ ಹಿನ್ನಲೆಗಳು ಕಾರಣವಾಗಿದ್ದರೆ ದ್ವಿಭಾಷಿಕರು ಮತ್ತು ಬಹುಭಾಷಿಕರ ಮಕ್ಕಳಲ್ಲಿ ಕಂಡುಬರುವ ಈ ಮಾದರಿ ವ್ಯತ್ಯಾಸಗಳಿಗೆ ಅವರವರ ಮನೆ ಮಾತಿನ ಪ್ರಭಾವವಿರುವುದು ಕಂಡುಬರುತ್ತದೆ. ಮನೆ ಮಾತಿನ ಪ್ರಭಾವ ಕಲಿಯುವ ಭಾಷೆಯ ಮೇಲೆ ಎಲ್ಲೆಲ್ಲಿ ಎಷ್ಟು ಪ್ರಮಾಣದಲ್ಲಿ ಹೇಗೆ ಪ್ರಭಾವ ಬೀರುತ್ತದೆ ಎಂಬುವುದು ಆದಷ್ಟು ಮಟ್ಟಿಗೆ ಬೋಧಕರಿಗೆ ಸಾಮಾನ್ಯ ತಿಳುವಳಿಕೆ ಇರಬೇಕಾಗುತ್ತದೆ.

ಭಾಷೆ ಕಲಿಕೆಯಲ್ಲಿ ಓದು ಅತ್ಯಂತ ಪರಿಣಾಮಕಾರಿ ವಿಧಾನ. ಓದು ಕಲಿಸುವುದೆಂದರೆ, ಅಪೂರ್ಣ ಮಾನವನನ್ನು ಪೂರ್ಣ ಮಾನವನನ್ನಾಗಿ ಮಾಡುವ ಕಾರ್ಯ ಎಂದು ಬೇಕನ್ ಅಭಿಪ್ರಾಯಪಡುತ್ತಾರೆ. ಓದು ಎಂದರೆ ಕೈಯಿಂದ ಬರೆದಿದ್ದನ್ನು ಅಥವಾ ಮುದ್ರಿತ ಲಿಪಿಯನ್ನು ಉಚ್ಛರಿಸುವುದೆಂದು ಸರಳವಾಗಿ ವ್ಯಾಖ್ಯಾನಿಸಬಹುದು. ಲಿಪಿಯ ಸಂಕೇತಗಳು ಕಣ್ಣಿನಿಂದ ಗುರುತಿಸಿ, ವಿಚಾರಣೆ ಮೂಲಕ ಶಬ್ದರೂಪದಲ್ಲಿ ಹೊರಹೊಮ್ಮಿದಾಗ ಅರ್ಥವು, ಭಾವವು ಉಂಟಾಗಬೇಕು. ಆದರೆ ಅದು ನಿಜವಾದ ಓದು ಎನಿಸುವುದು. ಉರ್ದುಭಾಷಿಕರ ಮಕ್ಕಳಿಗೆ ಕನ್ನಡ ಓದುವ ಕೌಶಲ್ಯಕ್ಕೆ ನೀಡಿರುವ ಅವಕಾಶ ಸಾಲದೆಂದು ಹೇಳಬಹುದು. ಇದು ಶಿಕ್ಷಕರ ಅಭಿಪ್ರಾಯ ಕೂಡ ಹೌದು. ಓದಿನ ಕೌಶಲ್ಯ ಅಂತಿಮವಾಗಿ ವಿದ್ಯಾರ್ಥಿಗಳ ಹವ್ಯಾಸವಾಗುವಂತೆ ಮಾಡುವುದು ಶಿಕ್ಷಕರ ಹೊಣೆಗಾರಿಕೆಯಾಗಿದೆ. ಓದಿನ ಕೌಶಲ್ಯ ಸಾಮರ್ಥ್ಯವನ್ನು ಯೋಚಿಸಲು ಇತರ ಪುಟ್ಟ ಪುಟ್ಟ ಪುಸ್ತಕಗಳನ್ನು ಒದಗಿಸಬೇಕು. ಅವು ಕನ್ನಡ ಭಾಷೆಯ ಪದ ಕೋಶವನ್ನು ಹೆಚ್ಚಿಸುವಂತಿರಬೇಕು. ಇದಕ್ಕಾಗಿ ವೃತ್ತಪತ್ರಿಕೆ, ವಿಶೇಷ ಪುರವಣಿ, ವಾರಪತ್ರಿಕೆ ಮತ್ತು ಮಾಸ ಪತ್ರಿಕೆಗಳಲ್ಲಿ ದೊರೆಯುವ ಕಥೆ ಕವನ, ಚಿತ್ರ ಕಲೆ, ಪತ್ರ ಲೇಖನ, ನಗೆ ಹನಿ, ಪ್ರಬಂಧ ಸ್ಥಳ ಪರಿಚಯ ವಿಜ್ಞಾನ ವಿಸ್ಮಯ ವಿವರಗಳನ್ನು ಸಂಗ್ರಹಿಸಿ ನೀಡಬಹುದು. ಎಲ್ಲ ವಿದ್ಯಾರ್ಥಿಗಳಿಗೂ ಈ ಮಾದರಿ ಚಟುವಟಿಕೆಗಳನ್ನು ಸರಬರಾಜು ಮಾಡಲು ಕಷ್ಟವೆನಿಸಿದಾಗ ಶಾಲೆಯ ಸೂಚನಾಪಲಕ ಕಪ್ಪು ಹಲಗೆಗಳ ಮೇಲೆ ಪ್ರದರ್ಶನ ಮಾಡಬಹುದು. ವಿದ್ಯಾರ್ಥಿಗಳಿಗೆ ಅವುಗಳನ್ನು ನಿರ್ಧಿಷ್ಟ ದಿನದೊಳಗೆ ಓದಿ ಮುಗಿಸಲು ತಿಳಿಸಿ ಸೂಚಿಸಬೇಕು.

ಭಾಷಾ ಕಲಿಕೆಯಲ್ಲಿ ಬರವಣಿಗೆ ಕೌಶಲ್ಯವು ಒಂದು, ಒಂದು ವಿಷಯ, ಆಲೋಚನೆ ಕಲ್ಪನೆ ಹಾಗೂ ಅಭಿಪ್ರಾಯಗಳನ್ನು ಅಕ್ಷರಗಳ ನಿರ್ದಿಷ್ಟ ರೇಖಾವಿನ್ಯಾಸಗಳಿಂದ ಕ್ರಮಬದ್ಧವಾಗಿ ಜೋಡಿಸಿ ಬರೆಯುವುದೇ ಬರೆವಣಿಗೆ. ಕೈಬರಹದಲ್ಲಿ ಕಣ್ಣು, ಮನಸ್ಸು, ಕೈ ಬೆರಳುಗಳು, ಒಂದಕ್ಕೊಂದು ಸಮನ್ವಗೊಂಡಿರುತ್ತವೆ.

ಕನ್ನಡವು ಮೂಲತಃ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆ. ಆದರೂ ವರ್ಣಮಾಲೆಯ ರಚನೆಯಲ್ಲಿ ವ್ಯಾಕರಣಕಾರರು ಹಿಂದಿನಿಂದಲೂ ಸಂಸ್ಕೃತವನ್ನೇ ಅನುಸರಿಸುತ್ತಾ ಬಂದಿದ್ದಾರೆ. ಇದರಿಂದ ಕನ್ನಡ ಭಾಷೆಯಲ್ಲಿ ಒಂದೊಂದು ಧ್ವನಿಗೂ ಒಂದೊಂದು ಪ್ರತ್ಯೇಕ ಲಿಪಿ, ಚಿಹ್ನೆ ಸಾಧ್ಯವಾಗಿದೆ. ಉರ್ದು ಇಂಡೋಆರ್ಯನ್ ಕುಟುಂಬಕ್ಕೆ ಸೇರಿದ ಭಾಷೆ. ಉರ್ದು ಮತ್ತು ಕನ್ನಡ ಭಾಷೆಗಳ ಬರವಣಿಗೆಯ ಕ್ರಮ ಭಿನ್ನ ಕನ್ನಡ ಭಾಷೆ ಬರವಣಿಗೆ ಎಡದಿಂದ ಬಲಕ್ಕೆ ಮೇಲಿನಿಂದ ಕೆಳಕ್ಕೆ, ಚಲಿಸಿದರೆ, ಉರ್ದುಭಾಷೆ ಬರವಣಿಗೆ ಬಲದಿಂದ ಎಡಕ್ಕೆ ಸಾಗುತ್ತದೆ. ಈ ಹಿನ್ನಲೆಯಿಂದ ಉರ್ದುಭಾಷಿಕರ ಮಕ್ಕಳ ಬರವಣಿಗೆ ವಿಶಿಷ್ಟವೆನಿಸುತ್ತದೆ. ಅಂದರೆ ಕನ್ನಡ ಬರವಣಿಗೆ ಕ್ರಮ, ವಿಧಾನ ಒಂದು ಮಾದರಿ ಅಧ್ಯಯನವಾದರೆ, ಒಂದು ಧ್ವನಿಗೆ ಮತ್ತೊಂದು ಧ್ವನಿಯನ್ನು ಬಳಸುವುದು, ಇರುವ ಧ್ವನಿಯನ್ನೇ ಲೋಪಮಾಡಿ ಬಳಕೆ ಮಾಡುವುದು ಮತ್ತು ಹೆಚ್ಚುವರಿ ಧ್ವನಿಗಳನ್ನು ಸೇರಿಸಿ, ಉಚ್ಚರಿಸಿ ಬರೆಯುವುದು. ದ್ವಿಭಾಷಿಕರ ಪರಿಸರದಲ್ಲಿರುವ ಮಕ್ಕಳಲ್ಲಿ ಸಾಮಾನ್ಯ ಸಂಗತಿ. ಬರವಣಿಗೆಯ ಮುಖ್ಯ ಉದ್ದೇಶ ಅಕ್ಷರವನ್ನು

ಸರಿಯಾದ ಕ್ರಮದಲ್ಲಿ ಮತ್ತು ತಪ್ಪಿಲ್ಲದಂತೆ ಬರೆಯುವುದನ್ನು ಕಲಿಸುವುದಾಗಿದೆ. ಅಕ್ಷರಗಳನ್ನು ಸಂಯೋಜಿಸಿ ಅರ್ಥಪೂರ್ಣ ಪದಗಳನ್ನು ಬರೆಯುವಂತೆ ಮಾಡುವುದು. ಮಕ್ಕಳಲ್ಲಿ ತಪ್ಪಿಲ್ಲದೆ ಸರಳ ವಾಕ್ಯರಚಿಸುವ ಸಾಮರ್ಥ್ಯ ಬೆಳೆಸುವುದು ಸೂಕ್ತ. ಲೇಖನ ಚಿನ್ಹೆಗಳನ್ನು ಸೂಕ್ತ ಕಡೆಗಳಲ್ಲಿ ಬಳಸುವ ಅರಿವನ್ನು ಮೂಡಿಸುವುದು. ಉರ್ದು ಭಾಷಿಕರ ಮಕ್ಕಳು ಕನ್ನಡದ "ತ"ಕಾರ, "ಅ"ಕಾರ, ಮುಂತಾದ ಅಕ್ಷರಗಳನ್ನು ಬರೆಯುವಾಗ ಕನ್ನಡ ಬರವಣಿಗೆ ಕ್ರಮಕ್ಕೆ ವಿರುದ್ಧವಾಗಿ ಬರೆಯುವುದು ಒತ್ತಕ್ಷರಗಳನ್ನು ಕನ್ನಡದಲ್ಲಿರುವಂತೆ ಮೂಲಕ್ಷರದ ಕೆಳಗೆ ನೀಡದೆ ಒತ್ತಕ್ಷರಕ್ಕೂ ಮೂಲಕ್ಷರಕ್ಕೂ ವ್ಯತ್ಯಾಸವಿಲ್ಲದಂತೆ ಬರೆಯುವರು. ಗುಣಿತಾಕ್ಷರಗಳನ್ನು ರೂಪಸಾಮ್ಯತೆ ಗೊಂದಲದಿಂದ ಅಲ್ಪಪ್ರಾಣಕ್ಕೆ ಮಹಾಪ್ರಾಣವನ್ನು, ಮಹಾಪ್ರಾಣಕ್ಕೆ ಅಲ್ಪಪ್ರಾಣವನ್ನು ಹ್ರಸ್ವಕ್ಕೆ ದೀರ್ಘವನ್ನು, ದೀರ್ಘಕ್ಕೆ ಹ್ರಸ್ವವನ್ನು ಬರೆಯುವ ರೂಢಿ ಅವರಲ್ಲಿ ಹೆಚ್ಚಿದೆ. ಇಂತಹ ಸಮಸ್ಯೆಗಳನ್ನು ಸರಿಯಾಗಿ ಗುರುತಿಸಿ ತಿದ್ದಬೇಕಾಗಿದೆ. ಬರವಣಿಗೆ ಸುಂದರವಾಗಿರಲು ಕಾಪಿ ಪುಸ್ತಕ ಬರೆಯಿಸುವುದು ಸೂಕ್ತ. ಪದಕೋಶವನ್ನು ಹೆಚ್ಚಿಸಲು ಸಂದರ್ಭಕ್ಕೆ ಅನುಸಾರವಾಗಿ ಬರೆಯಲು ಉಕ್ತಲೇಖನ ನೀಡಿ ತಿದ್ದುವುದು ಮುಖ್ಯ.

ಕನ್ನಡದ ವ್ಯಾಕರಣ ಅಂಶಗಳನ್ನು ಓದುವಾಗ ಮತ್ತು ಬರೆಯುವಾಗ ಹಲವು ರೀತಿಯಲ್ಲಿ ವ್ಯತ್ಯಾಸ ಮಾಡುವುದನ್ನು ನೋಡಬಹುದು. ಲಿಂಗ ವಚನ, ವಿಭಕ್ತಿ, ಕ್ರಿಯಾಪದ,ಕಾಲ, ಸಂಧಿ, ಸಮಾಸ ಮುಂತಾದ ವ್ಯಾಕರಣ ಪರಿಕಲ್ಪನೆಗಳ ಬಗ್ಗೆ ಈ ಮಕ್ಕಳಿಗೆ ಸ್ಪಷ್ಟತೆ ಇಲ್ಲದೇ ಇರುವುದು. ಅರ್ಥ ಗ್ರಹಿಕೆಯಲ್ಲಿ ಕೊರತೆ ಪದ ಸಂಪತ್ತು, ಉತ್ತಮ ಭಾಷಾ ಶೈಲಿ, ಭಾಷಾ ಸಾಮರ್ಥ್ಯ, ಔಚಿತ್ಯ ಪೂರ್ಣ ಪದಗಳ ಬಳಕೆ, ಸರ್ಕಾರ ನಿಗಧಿಪಡಿಸಿದ ಪ್ರಮಾಣದಲ್ಲಿ ಇಲ್ಲದೇ ಇರುವುದು ಕಂಡುಬರುತ್ತದೆ. ವ್ಯಾಕರಣ ವಿಷಯಗಳನ್ನು ಸಂಬಂಧಿಸಿದ ನಿಯಮಗಳನ್ನು ಕಂಠಪಾಠ ಮಾಡಿದ ಮಾತ್ರಕ್ಕೆ ಕಲಿಕೆ ಸಮರ್ಪಕವಾಗುವುದಿಲ್ಲ. ಸೂಕ್ತ ನಿದರ್ಶನಗಳ ಮೂಲಕ ವಿಷಯ ನಿರೂಪಣೆ ಮಕ್ಕಳೇ ಅರ್ಥಮಾಡಿಕೊಳ್ಳುವಂತೆ ಪ್ರೇರಣೆ ನೀಡಬೇಕು. ಔಚಿತ್ಯಪೂರ್ಣವಾದ ಸೂಕ್ತವಾದ ಪದಪ್ರಯೋಗಗಳ ಪರಿಚಯದೊಂದಿಗೆ ಬಳಕೆ ಮಾಡುವಂತೆ ಸೂಚಿಸಬೇಕು. ವ್ಯಾಕರಣದ ಕಲಿಕೆ ಮರೆಯುವುದಕ್ಕೆ ಎಂಬ ಕವಿವಾಣಿ ಇದ್ದರೂ ಕಲಿಕೆ ಭಾಷೆಯ ನಿಯಮಗಳನ್ನು ತಿಳಿಯಲು ಅನಿವಾರ್ಯ. ವ್ಯಾಕರಣ ಅಧ್ಯಯನ ನೀರಸ ಎಂಬ ಭಾವನೆಯು ಮಕ್ಕಳಿಗೆ ಬರದಂತೆ ಸೂಕ್ತ ಉದಾಹರಣೆಗಳು ನೀಡಿ ಚಟುವಟಿಕೆಗಳಲ್ಲಿ ಹೆಚ್ಚಾಗುವಂತೆ ಮಾಡುವುದರಿಂದ ವ್ಯಾಕರಣ ಬೋಧನೆ ಪರಿಣಾಮಕಾರಿಯಾಗುತ್ತದೆ. ಹಾಗೂ ಅರ್ಥಪೂರ್ಣವಾಗುತ್ತದೆ. ಒಟ್ಟಾರೆ ದ್ವಿಭಾಷಿಕರ ಮಕ್ಕಳು ಕನ್ನಡ ಭಾಷೆಯನ್ನು ಕಲಿಯುವಾಗ ಏನೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಂತಹ ಸಮಸ್ಯೆಗಳು ಯಾವುವು? ಆ ಸಮಸ್ಯೆಗಳಿಗೆ ಕಾರಣಗಳೇನು? ಪರಿಹಾರ ಏನು? ಎಂಬ ಅಂಶಗಳ ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚೆ ಮಾಡಲಾಗಿದೆ. ಇಂತಹ ಚರ್ಚೆಗಳನ್ನು ಸರ್ಕಾರ ಗಮನಿಸಿ ದ್ವಿಭಾಷಿಕರು ಮತ್ತು ಬಹುಭಾಷಿಕರ ಮಕ್ಕಳು ಶಿಕ್ಷಣ ವಲಯದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನಹರಿಸಿ. ಸೂಕ್ತ ನಿರ್ಧಾರ ಕೈಗೊಳ್ಳಬಹುದಾಗಿದೆ. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನದ ಪ್ರಾಮುಖ್ಯತೆ ಮಹತ್ವವೆನಿಸಿದೆ.

ಗ್ರಂಥಋಣ

ಗ್ರಂಥಋಣ

ಅಂಗಡಿ ಎಸ್ ಎಸ್, ೨೦೦೦, ಕನ್ನಡ ಕ್ರಿಯಾರೂಪಗಳು, ಪ್ರಸಾರಾಂಗ, ಕನ್ನಡ ವಿವಿ ಹಂಪಿ

ಓಂಪ್ರಕಾಶ ನಾಯಕ ಬಿ, ೨೦೦೨, ಬಳ್ಳಾರಿ ವ್ಯವಹಾರಿಕ ಕನ್ನಡದ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು, ಕನ್ನಡ ವಿವಿ ಹಂಪಿ (ಅಪ್ರಕಟಿತ ಎಂಫಿಲ್ ಸಂಪ್ರಬಂಧ)

ಕಲಬುರ್ಗಿ ಎಂ ಎಂ, ೧೯೮೯, ಕನ್ನಡ ನಾಮ ವಿಜ್ಞಾನ, ಪ್ರಸಾರಾಂಗ, ಬೆಂಗಳೂರು ವಿವಿ, ಬೆಂಗಳೂರು

ಕುಶಾಲಪ್ಪಗೌಡ ಕೆ, ೨೦೦೭, ಕನ್ನಡ ಭಾಷೆಯ ಸಂಕ್ಷಿಪ್ತ ವ್ಯಾಕರಣ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ಕುಶಾಲಪ್ಪಗೌಡ ಕೆ, ೧೯೮೮, ಕನ್ನಡ ಭಾಷಾವಲೋಕನ, ಮದರಾಸು ವಿಶ್ವವಿದ್ಯಾಲಯ, ಮದರಾಸು

ಕುಶಾಲಪ್ಪಗೌಡ ಕೆ, ೧೯೭೬, ಕನ್ನಡದ ಈಗಿನ ಪಾದೇಶಿಕ ಪ್ರಭೇದಗಳು, ಸುವರ್ಣ ಸಂಚಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ಕೃಷ್ಣಪರಮೇಶ್ವರಭಟ್ಟ, ೧೯೯೫, ಕನ್ನಡ ಮತ್ತು ತೆಲುಗು ದ್ವಿಭಾಷಿಕತೆಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕೆಂಪೇಗೌಡ ಕೆ, ೨೦೦೩, ಕನ್ನಡ ಉಪಭಾಷೆಗಳ ಅಧ್ಯಯನ, ಭಾರತೀ ಪ್ರಕಾಶನ, ಮೈಸೂರು

ಕೆಂಪೇಗೌಡ ಕೆ, ೧೯೯೩, ಸಾಮಾನ್ಯ ಭಾಷಾ ವಿಜ್ಞಾನ, ಭಾರತೀ ಪ್ರಕಾಶನ, ಮೈಸೂರು

ಚಿದಾನಂದಮೂರ್ತಿ ಎಂ, ೧೯೮೧, ವಾಗರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು

ನಾಯಕ ಹಾ ಮಾ, ೧೯೭೩, ಕನ್ನಡ ವಿಶ್ವಕೋಶ, ಮೈಸೂರು ವಿವಿ, ಮೈಸೂರು

ನಾರಾಯಣ ಕೆ ವಿ, ೧೯೯೫, ಕನ್ನಡ ಶೈಲಿ ಕೈಪಿಡಿ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ನಾರಾಯಣ ಕೆ ವಿ (ಸಂ), ೨೦೦೦, ಭಾಷೆ ವಿಶ್ವಕೋಶ ೧, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ನಾರಾಯಣ ಕೆ ವಿ, ೨೦೦೦, ಭಾಷೆಯ ಸುತ್ತಮುತ್ತ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು

ನಾರಾಯಣ ಕೆ ವಿ, ೨೦೦೨, ಮತ್ತೆ ಭಾಷೆಯ ಸುತ್ತಮುತ್ತ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

ಬಿಳಿಗಿರಿ ಎಚ್ ಎಸ್, ೧೯೭೦, ವರ್ಣನಾತ್ಮಕ ವ್ಯಾಕರಣ, ಪ್ರಸಾರಾಂಗ, ಬೆಂಗಳೂರು ವಿವಿ, ಬೆಂಗಳೂರು

ಮಹಾದೇವಯ್ಯ ಪಿ, ೨೦೦೦, ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ಮಹಾದೇವಯ್ಯ ಪಿ, ೧೯೯೯, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ಮಹಾದೇವಯ್ಯ ಪಿ, ೧೯೯೯, ಮುಸ್ಲಿಂ ಕನ್ನಡ : ಒಂದು ಸಾಮಾಜಿಕ ಭಾಷಾ ಅಧ್ಯಯನ, ಪಿಎಚ್.ಡಿ. ಅಪ್ರಕಟಿತ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ರಹಮತ್ ತರೀಕೆರೆ, ೧೯೯೯, ಬಹುಭಾಷಿಕತೆ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ರಾಮಚಂದ್ರ ಸಿಎಸ್, ೨೦೦೪, ಕನ್ನಡ ಭಾಷಾಲೋಚನ, ಮಾಂಗಿರಿ ಪ್ರಕಾಶನ,. ಮೈಸೂರು

ಲಿಂಗದೇವರು ಹಳೆಮನೆ, ೨೦೦೩, ಕನ್ನಡ ಕಲಿ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ವಿಲ್ಯಂ ಮಾಡ್ತ, ೧೯೯೩, ಕನ್ನಡ ಭಾಷೆಯ ರೂಪುರೇಷೆಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ವಿಲ್ಯಂ ಮಾಡ್ತ, ೧೯೭೭, ಕನ್ನಡ ಭಾಷೆ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ವೆಂಕಟಸುಬ್ಬಯ್ಯ ಜಿ, ೧೯೯೮, ಎರವಲು ಪದಕೋಶ, ನವಕರ್ನಾಟಕ ಪ್ರಕಾಶನ, ಬೆಂಗಳೂರು

ಶಂಕರಭಟ್ಟ ಡಿ ಎನ್, ೧೯೯೯, ಕನ್ನಡ ಪದಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು

ಶಂಕರಭಟ್ಟ ಡಿ ಎನ್, ೨೦೦೪, ಕನ್ನಡ ವಾಕ್ಯಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು

ಶಂಕರಭಟ್ಟ ಡಿ ಎನ್, ೧೯೯೩, ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ಶಂಕರಭಟ್ಟ ಡಿ ಎನ್, ೧೯೯೯, ಕನ್ನಡ ಶಬ್ದ ರಚನೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು

ಶಿವಾನಂದ ವಿ, ೧೯೭೮, ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಶಿವಾನಂದ ವಿ, ೧೯೮೧, ಭಾಷಾ ವೈಜ್ಞಾನಿಕ ನೆಲೆಯಲ್ಲಿ ಪದಗಳ ಚರಿತ್ರೆ, ಧ್ವನಿ ಪ್ರತಿಮ ಪ್ರಕಾಶನ, ಗುಲಬರ್ಗಾ

ಶಿವಾನಂದ ವಿ, ೧೯೮೭, ಕನ್ನಡ ಆಕೃತಿಮಾ, ಧ್ವನಿ ಪ್ರತಿಮ ಪ್ರಕಾಶನ, ಗುಲಬರ್ಗಾ

ಶ್ರೀಧರ್ ಎನ್ ಎಸ್, ೧೯೯೩, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ಸಂಗಮೇಶ ಸವದತ್ತಿಮಠ, ೧೯೭೯, ಕನ್ನಡ ಭಾಷಾ ವ್ಯಾಸಂಗ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ

ಸಂಗಮೇಶ ಸವದತ್ತಿಮಠ, ೧೯೯೯, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ

ಸಂಗಮೇಶ ಸವದತ್ತಿಮಠ, ೧೯೯೮, ಕನ್ನಡ ಭಾಷಾ ಪ್ರಭೇದಗಳು, ಪ್ರಸಾರಾಂಗ, ಕನ್ನಡ ವಿವಿ, ಹಂಪಿ

ಸೋಮಶೇಖರಗೌಡ, ೧೯೮೦, ಭಾಷಾ ವಿಜ್ಞಾನ ವಿವಕ್ಷೆ, ಸಹೃದಯ ಪ್ರಕಾಶನ, ಮೈಸೂರು

ಸೋಮಶೇಖರಗೌಡ, ೧೯೮೧, ಇಂದಿನ ಕನ್ನಡ ಭಾಷಾ ಬಳಕೆ, ವೆಂಕಣ್ಣಯ್ಯ, ಪ್ರತಿಷ್ಠಾನ, ಮೈಸೂರು

ಹೂಗಾರ ಬಿ ಪಿ, ೧೯೯೧, ಮಧ್ಯಕಾಲೀನ ಭಾರತದ ಇತಿಹಾಸ, ಜ್ಞಾನಜ್ಯೋತಿ ಪ್ರಕಾಶನ, ಸುರಮರ

ಲೇಖನಗಳು

ಕುಳ್ಳಿ ಜೆ ಎಸ್, ೧೯೭೬, ವಿಜಾಪುರ ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ, ಸಂಪುಟ ೯, ಸಂಚಿಕೆ ೧, ೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕುಶಾಲಪ್ಪಗೌಡ ಕೆ, ೧೯೬೭, ಕನ್ನಡದ ಈಗಿನ ಪ್ರಾದೇಶಿಕ ಪ್ರಭೇದಗಳು, ಸುವರ್ಣ ಸಂಚಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ಮೈಸೂರು

ಕೆಂಪೇಗೌಡ ಕೆ, ೧೯೮೫, ಕನ್ನಡ ಭಾಷೆಯ ಧ್ವನಿಮಾಗಳ ವಿಶ್ಲೇಷಣೆ, ಪ್ರಬುದ್ಧ ಕರ್ನಾಟಕ, ಸಂ.೬೫, ಸಂ. ೧,೨,೩, ಮೈಸೂರು ವಿವಿ, ಮೈಸೂರು

ಕೆಂಪೇಗೌಡ ಕೆ, ೧೯೮೫, ಕನ್ನಡ ಸರ್ವನಾಮಗಳು, ಪ್ರಬುದ್ಧ ಕರ್ನಾಟಕ, ಸಂ.೬೭, ಸಂ. ೩, ಮೈಸೂರು ವಿವಿ, ಮೈಸೂರು

ಗಿರಿಧರ ಪಿ ಪಿ, ೧೯೭೬, ರಾಯಚೂರು ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ, ಸಂ. ೯, ಸಂ. ೧, ೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಭೀಮಸೇನರಾವ್ ಡಿ ಕೆ, ೧೯೬೭, ಗುಲಬರ್ಗ ರಾಯಚೂರು ಕನ್ನಡ, ಸುವರ್ಣ ಸಂಚಯ, ಮೈಸೂರು ವಿವಿ, ಮೈಸೂರು

ಭೋವಿ ಎಂ ಬಿ, ೧೯೭೬, ಬೆಳಗಾವಿ ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ, ಸಂ. ೯, ಸಂ. ೧, ೨, ಕರ್ನಾಟಕ ವಿವಿ, ಧಾರವಾಡ

ಮಲ್ಲಿಕಾರ್ಜುನ ಬಿ, ೧೯೭೬, ಕಲಬುರ್ಗಿ ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ, ಸಂ. ೯, ಸಂ. ೧೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುರಿಗೆಪ್ಪ ಎ, ೧೯೭೬, ಬೀದರ್ ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ, ಸಂ. ೯, ಸಂ. ೧೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವಿಲ್ಯಂ ಮಾಡ್ತ, ೧೯೭೬, ಭಾಷಾ ಪ್ರಭೇದದ ವಿಶ್ಲೇಷಣ ವಿಧಾನ, ಕರ್ನಾಟಕ ಭಾರತಿ, ಸಂ. ೯, ಸಂ. ೧, ೨, ಕರ್ನಾಟಕ ವಿವಿ, ಧಾರವಾಡ

ವಿಲ್ಯಂ ಮಾಡ್ತ, ೧೯೭೬, ಧಾರವಾಡ ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ, ಸಂ. ೯, ಸಂ. ೧, ೨, ಕರ್ನಾಟಕ ವಿವಿ, ಧಾರವಾಡ

ವೀರಭದ್ರಶರ್ಮ ಕೆ ಎಂ ೧೯೭೬, ಬಳ್ಳಾರಿ ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ, ಸಂ. ೯, ಸಂ. ೧, ೨, ಕರ್ನಾಟಕ ವಿವಿ, ಧಾರವಾಡ

ಶಂಕರಭಟ್ ಡಿ ಎನ್, ೧೯೭೨, ಧ್ವನಿ ಪರಿವರ್ತನೆ ಮತ್ತು ವರ್ಣ ಪರಿವರ್ತನೆ, ಪ್ರಬುದ್ಧ ಕರ್ನಾಟಕ, ಮೈಸೂರು ವಿವಿ, ಮೈಸೂರು

ಸಂಗಮೇಶ ಸವದತ್ತಿಮಠ, ೧೯೭೬, ಕನ್ನಡ ಪ್ರಭೇದಗಳ ನಿರ್ಮಾಣಕ್ಕೆ ಕಾರಣಗಳು, ಕರ್ನಾಟಕ ಭಾರತಿ, ಸಂ. ೯, ಸಂ. ೧, ೨, ಕರ್ನಾಟಕ ವಿವಿ, ಧಾರವಾಡ

ಸಂಗಮೇಶ ಸವದತ್ತಿಮಠ, ೧೯೮೮, ಎರಡು ಜನಪದ ಕತೆಗಳ ಜನಪದ ವಿವೇಚನೆ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ. ೬೯, ಸಂ. ೧

ಸಂಗಮೇಶ ಸವದತ್ತಿಮಠ, ೧೯೯೧, ಕಲಬುರ್ಗಿ ಮುಸಲ್ಮಾನರ ಕನ್ನಡ, ಸಂಶೋಧನ, ಚಿ ಮೂ ಅಭಿನಂದನ ಗ್ರಂಥ

ಹಿರೇಮಠ ಆರ್ ಸಿ, ೧೯೭೬, ಭಾಷಾ ಪ್ರಭೇದ, ಕರ್ನಾಟಕ ಭಾರತಿ, ಸಂ. ೯, ಸಂ. ೧, ೨, ಕರ್ನಾಟಕ ವಿವಿ, ಧಾರವಾಡ

BIBLIOGRAPHY

Acharya.A.S., 1967, HALAKKI KANNADA, Deccan College. Post Graduate and Research Institute, Poona

Acharya.A.S, BARKUR KANNADA, Deccan College. Post Graduate and Research Institute, Poona, 1971.

Acharya.A.S, TIPTUR KANNADA, Deccan College.Post Graduate and Research Institute, Poona, 1971.

Andronov.M .S., THE KANNADA LANGUAGE, Nauka Publishing House, Central Department of oriental Literature, Moscow, 1982.

Barikeri.V.H., A DESCRIPTIVE ANALYSIS OF LAMBANI LANGUAGE SPOKEN IN BIJAPUR DISTRICT (Unpublished Ph.d. Thesis).Karnataka University, Dharwad. May, 1982.

Charles. F. Hockett. A COURSE IN MODERN LINGUISTICS.Mohan Primlani, Oxford & IBH Publishing Co.Pvt.Ltd.66 Janpet, New Delhi 1958.

Glesaon. H.A.Jr., AN INTRODUCTION TO DESCRIPTIVE LINGUISTICS. Mohan Primlani, Oxford & IBH Publishing Co.Pvt.Ltd.66 Janpet, New Delhi, 1955.

Hiremath.R.C., Kulli. J.S.(Editors), PROCEEDINGS OF THE THIRD ALL INDIA CONFERENCE LINGUISTICS. Karnataka University, Dharwad.May, 1976.

Hiremath. R.C., THE STRUCTURE OF KANNADA. Prasaranga Karnataka University. Dharwad, 1980

kempe Gowda.K., A DESCRIPTIVE ANALYSIS OF THE IRULA DIALECT (Unpublished Ph. D. Thesis) University of Mysore. 1979.

Kulli.J.S., KESIRAJA'S SABDMANIDARPANA, Karnataka University, Dharwad. May, 1976.

Mahadevan. R., GULBARGA KANNADA (Brahmin Dialect) Deccan College, post Graduate and Research Institute, poona.

Mahajan.V.D., HISTORY OF INDIA S. chand & Co. Pvt. Ltd,. Ram Nagar. New Delhi. 1986.

Maheshwaraiah.M., LINGUISTIC ANALYSIS OF DIWARA KANNADA (Unpublisshed Ph.D. Thesis) Karnataka University, Dharwad

Murgeppa. A., BIDAR -KANNADA : A DESCRIPTIVE ANALYSIS (Unpublished Ph.D. Thesis) Karnataka University, Dharwad

Pasumpon, PROBLEMS IN LEARNING THAMIL, Devi Publication, Thamilnadu, 1993

Sangamesh.D., Savadattimath HARIHARA'S RAGLES A LINGUISTIC ANALYSIS. Prasaranga, Karnataka University, Dharwad. 1988.

Sankaran.C.R., PROCESS OF SPEECH Deccan College. Post Graduate and Research Institute, Poona, 1963.

Sankaran.C.R. and Leon Henri Strong, A CRITICAL EXPERIMENTAL TECHNIOUES, METHODS AND ANALYSIS IN THE STUDY OF STRUCTURE IN SPEECH Deccan College. Post Graduate and Research Institute, Poona, 1965.

Shastri. K.G., THE HAVYAKA DIALECT OF NORTH KANARA. Karnataka University, Dharwad 1971.

SOMASHEKHAR Gowda, KANNADA IN MYSORE CITY-A SURVEY (Unpublished Ph.D. Thesis). Manasgangotri, Mysore, 1984.

Sathan.B.N., GULBARGA DISTRICT GAZETTEER Mysore State Gazetteer, Govt. Ppress. Bangalore. 26 August, 1966.

William Madtha, THE CHRISTIAN KONKANI OF SOUTH KANARA (A Linguistic Analysis) Prasaranga, Karnataka University, Dharwad.1984.